
ಪ್ರಬುದ್ಧ ಕರ್ಣಾಟಕ



೨೮೪

ಪ್ರಸಾರಾಂಗ :: ಮೈಸೂರು ವಿಶ್ವವಿದ್ಯಾನಿಲಯ

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A Century and a Half of Literary Activity in Kannada,' Kannada Studies, Vol. 1, No. 2 (Mysore 1965), p.62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟ ೭೨ ಸಂಚಿಕೆ ೨

೨೮೪

ಶ್ರೀ ಪ್ರಮೋದ ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೦

PRABUDDHA KARNATAKA, Kannada Quarterly of the *University of Mysore*, Volume 72, Number 2, July 1990, Edited by G. H. Nayak and Lakshminarayana Aurora.

ಪ್ರಧಾನ ಸಂಪಾದಕರು
ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು
ಜಿ. ಎಚ್. ನಾಯಕ
ಲಕ್ಷ್ಮೀನಾರಾಯಣ ಅರೋರಾ

ಪ್ರಕಾಶಕರು
ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು
ಬಿ. ಎಸ್. ಸಿದ್ದೇಗೌಡ
ಕಾರ್ಯಭಾರಿ ನಿರ್ದೇಶಕರು
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ಡಾ. ಕೆ. ಕೆಂಪೇಗೌಡ	ಭಾಷಾವಿಜ್ಞಾನ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೨. ಡಾ. ರಹಮತ್ ತರೀಕೆರೆ	ಮೂರನೇ ಕ್ರಾಸ್, ಜೈಲುರಸ್ತೆ, ಶಿವಮೊಗ್ಗ
೩. ಎಚ್.ಎಚ್. ಗಂಗಾಧರಾಚಾರ್	ಡೆಪ್ಯೂಟಿ ಮ್ಯಾನೇಜರ್‌ರವರ ಕಚೇರಿ ಇಂಟರ್ನಲ್ ಟ್ರಾಫಿಕ್, ವಿ.ಐ.ಎಸ್.ಎಲ್. ಭದ್ರಾವತಿ ೫೭೭ ೩೦೧
೪. ಡಾ. ಬಸವರಾಜ ಸಬರದ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ೫೮೫ ೧೦೬
೫. ಎಂ. ಎಸ್. ವೇದಾ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೬. ಡಾ. ಕೆ. ಕೇಶವಶರ್ಮ	ಕನ್ನಡ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಬಿ. ಆರ್. ಪ್ರಾಜೆಕ್ಟ್ ೫೭೭ ೧೧೫
೭. ಡಾ. ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ೫೭೪ ೧೯೯
೮. ಚಂದ್ರಮತಿ ಸೋಂದಾ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೯. ಜಿ. ಜಿ. ಮಂಜುನಾಥನ್	ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬
೧೦. ವೈ. ಸಿ. ಭಾನುಮತಿ	ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬

೧೧.	ಬಿ. ವೀರಭದ್ರಪ್ಪ	C/o ಡಿ. ಆರ್. ಹೊರಕೇರಪ್ಪ, ಬುರುಜನ ಹಟ್ಟಿ, ಚಿತ್ರದುರ್ಗ ೫೭೭ ೫೦೧
೧೨.	ಡಾ. ಎಚ್.ಎಸ್. ಸುಜಾತಾ	ರೀಡರ್, ಡಿ. ಬನುಮಯ್ಯನವರ ಕಾಲೇಜು ಮೈಸೂರು ೫೭೦ ೦೦೧
೧೩.	ಕೆ. ಎಚ್. ಶ್ರೀನಿವಾಸ	ಪಿ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಮುಬಾರಕ್ ಮೊಹಲ್ಲಾ, ಮೊಳಕಾಲ್ಮೂರು ೫೭೭ ೫೩೫
೧೪.	ಡಾ. ಜೆ. ಎಂ. ನಾಗಯ್ಯ	ಸಹಾಯಕ ಗ್ರಂಥಪಾಲ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೫೮೫ ೧೦೬

ಡಾ. ಕೆ. ಕೆಂಪೇಗೌಡ

ಭಾಷಾಪ್ರಯೋಗಶಾಲೆ

ಭಾಷಾಬೋಧನೆ ಮತ್ತು ಭಾಷಾಕಲಿಕೆಯ ಕ್ಷೇತ್ರದಲ್ಲಿ ಯಾಂತ್ರಿಕ ಉಪಕರಣಗಳ ಬಳಕೆ ಬಹು ಮುಖ್ಯ ಪಾತ್ರವಹಿಸುತ್ತದೆ. ಆ ನಿಟ್ಟಿನಲ್ಲಿ ಭಾಷಾಪ್ರಯೋಗಶಾಲೆ ಭಾಷಾ ತರಗತಿಯಷ್ಟೇ ಮಹತ್ವಪೂರ್ಣವಾದ ಸ್ಥಾನವನ್ನು ಪಡೆಯುತ್ತಿದೆ. ಭಾಷಾಬೋಧನೆಯಲ್ಲಿ ಭಾಷಾಪ್ರಯೋಗಶಾಲೆ ಸಹಾಯಕನ ಪಾತ್ರ ವಹಿಸುತ್ತದೆಯೇವಿನಾ ಅದು ಬೋಧಕನ ಪಾತ್ರವನ್ನು ಆಕ್ರಮಿಸಿಕೊಳ್ಳಲಾರದು. ಭಾಷಾಬೋಧನೆಯಲ್ಲಿ ಬೋಧಕನ ಪಾತ್ರ ಹಿರಿಯದಾದದ್ದು ಮತ್ತು ಬಹಳ ಮುಖ್ಯವಾದದ್ದು. ಬೋಧಕನು ತರಗತಿಯಲ್ಲಿ ಮಾಡಬಹುದಾದ ಎಲ್ಲ ಕೆಲಸವನ್ನು ಭಾಷಾಪ್ರಯೋಗಶಾಲೆ ನಿರ್ವಹಿಸಲಾರದು. ಬೋಧಕನು ನಿರ್ವಹಿಸುವ ಡ್ರಿಲ್‌ನಂತಹ ಕೆಲಸವನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ಇದು ನಿರ್ವಹಿಸುತ್ತದೆ ಮತ್ತು ಬೋಧಕನು ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೆಲಸವನ್ನು ಮಾಡುವಂತೆ ಸಹಾಯಮಾಡುತ್ತದೆ. ಬೋಧಕನು ತಯಾರಿಸಿದ ಭಾಷಾ ಸಾಮಗ್ರಿಯನ್ನು ಹೆಚ್ಚು ವ್ಯವಸ್ಥಿತವಾಗಿ ಕಾರ್ಯಗತ ಮಾಡಲು ಭಾಷಾಪ್ರಯೋಗಶಾಲೆಯು ನೆರವಾಗುತ್ತದೆ ಎಂದು ಹೇಳಬಹುದು.

ಭಾಷಾಬೋಧನೆಗೆ ಪ್ರಯೋಗಶಾಲೆಯನ್ನು ಬಳಸುವುದರಿಂದ ಬೋಧಕನ ಅಗತ್ಯ ಇದೆಯೇ ಅಥವಾ ಇಲ್ಲವೇ ಎಂಬುದೊಂದು ಪ್ರಶ್ನೆ. ಪ್ರಯೋಗಶಾಲೆ ಬೋಧಕನ ಎಲ್ಲ ಕೆಲಸವನ್ನು ಮಾಡುವುದಿಲ್ಲ. ಆದಕಾರಣ ಇದು ಬೋಧಕನ ಸ್ಥಾನವನ್ನು ಎಲ್ಲಾ ವೇಳೆಯಲ್ಲಿಯೂ ಆಕ್ರಮಿಸಿಕೊಳ್ಳಲಾರದು. ಬೋಧಕನಿಲ್ಲದೆ ಕೇವಲ ಯಂತ್ರೋಪಕರಣಗಳು ಭಾಷಾಕಲಿಕೆಯಲ್ಲಿ ನಿರೀಕ್ಷಿಸಿದ ಫಲವನ್ನು ಕೊಡಲಾರವು. ಭಾಷಾಬೋಧನೆ ಕೆಲವರಿಗೆ ಬೇಸರದ ಕೆಲಸವಿರಬಹುದು, ಈ ಬೇಸರದ ಕೆಲಸವನ್ನು ಬೋಧಕನಿಂದ ಯಂತ್ರಗಳಿಗೆ ಒಂದು ಪಕ್ಷ ವರ್ಗಾಯಿಸಿದರೆ ಆಗ ಯಾವ ಸಮಸ್ಯೆಯೂ ನಿವಾರಣೆಯಾಗಲಾರದು. ಬೋಧಕನಿಗಿಂತ ಕಡಿಮೆ ತಿಳಿವಳಿಕೆಯುಳ್ಳ ವಿದ್ಯಾರ್ಥಿಗಳ ಜೊತೆಗೆ ಕೆಲಸಮಾಡುವುದು ಬೇಸರವೆಂದು ಕೆಲವರು ಭಾವಿಸಬಹುದು. ಹಾಗೆ ಭಾವಿಸುವುದು ಬೋಧಕನ ವೃತ್ತಿಗೆ ಯೋಗ್ಯವಾದುದಲ್ಲ, ಅಂತಹ ಬೋಧಕ ಉತ್ತಮ ಬೋಧಕನೆನಿಸಿಕೊಳ್ಳಲಾರ. ಭಾಷಾಬೋಧನೆಯನ್ನು ಭಾಷಾಪ್ರಯೋಗಶಾಲೆಗೆ

ಪೂರ್ಣವಾಗಿ ವಹಿಸಿಕೊಟ್ಟರೆ ಆಗ ಬೋಧಕ ಕೇವಲ ಪರೀಕ್ಷಕನಾಗಿ ಉಳಿಯುತ್ತಾನೆ, ಅನೇಕ ಉಪಕರಣಗಳಂತೆ ಅವನು ಒಂದು ಉಪಕರಣವಾಗುತ್ತಾನೆ. ಈ ಎಲ್ಲಾ ಕಾರಣಗಳಿಂದ ಭಾಷಾಪ್ರಯೋಗಶಾಲೆ ಬೋಧಕನ ಒಂದು ಸಹಾಯಕ ಉಪಕರಣವೆಂದು ಭಾವಿಸುವುದು ಹೆಚ್ಚು ಯುಕ್ತವಾದದ್ದು.

ಇಂದು ಜಗತ್ತಿನಾದ್ಯಂತ ವಿವಿಧ ಕಾರಣಗಳಿಂದ ಭಾಷೆಗಳನ್ನು ಹೆಚ್ಚು ಕಲಿಯುವ ಹಾಗೂ ಕಲಿಸುವ ಆಸಕ್ತಿ ಜನರಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ. ಬಗೆ ಬಗೆಯ ಬೋಧನಾ ವಿಧಾನಗಳು ಹೊರಬರುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಬೋಧಕನ ಕೊರತೆ ಹೆಚ್ಚಾಗುತ್ತಿದೆ. ಭಾಷಾಪ್ರಯೋಗಶಾಲೆಗಳನ್ನು ಭಾಷಾಬೋಧನೆಗೆ ಸಮರ್ಪಕವಾಗಿ ಬಳಸಿಕೊಳ್ಳುವ ತರಪೇತಿ ಹೊಂದಿದ ಬೋಧಕರ ಕೊರತೆಯೂ ಕಾಣಿಸಿಕೊಳ್ಳುತ್ತಿದೆ. ಈ ಯಾವ ಕೊರತೆಯನ್ನೂ ಭಾಷಾಪ್ರಯೋಗಶಾಲೆಗಳು ತುಂಬಲಾರವು. ಉತ್ತಮ ತರಪೇತಿ ಪಡೆದ ಬೋಧಕನಿಂದ ಮಾತ್ರ ಭಾಷಾಪ್ರಯೋಗಶಾಲೆಯ ಪೂರ್ಣಪ್ರಯೋಜನ ಪಡೆಯಲು ಸಾಧ್ಯ, ಇಲ್ಲದಿದ್ದಲ್ಲಿ ಅಂತಹ ಪ್ರಯೋಗಶಾಲೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಪ್ರಯೋಗಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಧ. ಅವುಗಳಲ್ಲಿ ಒಂದು ಭಾಷಾಸಂಶೋಧನೆಗೆ ಸಹಾಯಕವಾಗುವ ಪ್ರಯೋಗಶಾಲೆಗಳು, ಮತ್ತೊಂದು ಭಾಷಾಬೋಧನೆಗೆ ಸಹಾಯಕವಾಗುವ ಪ್ರಯೋಗಶಾಲೆಗಳು. ಈ ಎರಡು ಬಗೆಯ ಪ್ರಯೋಗಶಾಲೆಗಳನ್ನು ಜಗತ್ತಿನಾದ್ಯಂತ ಭಾಷಾಧ್ಯಯನ ಮತ್ತು ಭಾಷಾಬೋಧನೆಯ ಕ್ಷೇತ್ರಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ವ್ಯಾಪಕವಾಗಿ ಅಲ್ಲಲ್ಲಿ ಬಳಸುತ್ತಿದ್ದಾರೆ. ಕೆಲವು ಹೆಸರಾಂತ ಸಂಘ ಸಂಸ್ಥೆಗಳು, ಕೆಲವು ಮುಂದುವರಿದ ವಿಶ್ವವಿದ್ಯಾನಿಲಯಗಳು ಭಾಷಾಸಂಶೋಧನೆ ಮುಂತಾದುವುಗಳ ದೃಷ್ಟಿಯಿಂದ ತಮ್ಮದೇ ಆದ ಪ್ರಯೋಗಶಾಲೆಗಳನ್ನು ಸಂಪಾದಿಸಿಕೊಂಡಿವೆ. ಅವನ್ನು ಬಗೆಬಗೆಯಲ್ಲಿ ಭಾಷಾಬೋಧನೆಗೂ ಬಳಸುತ್ತಿವೆ. ಸಾವಿರಾರು ವಿದ್ಯಾರ್ಥಿಗಳು ಇದರ ಪೂರ್ಣ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ಪ್ರಯೋಗಶಾಲೆಗಳಿಗೆ ಬೇಕಾಗುವ ವಿವಿಧ ಯಂತ್ರೋಪಕರಣಗಳನ್ನು ತಯಾರಿಸಿಕೊಡುವ ಅನೇಕ ಸಂಸ್ಥೆಗಳು ಹುಟ್ಟಿಕೊಂಡಿವೆ. ಭಾಷಾಸಂಶೋಧನೆಗೆ ಉಪಯೋಗವಾಗುವ ಪ್ರಯೋಗಶಾಲೆಗಳಲ್ಲಿ ಧ್ವನಿ ಪ್ರಯೋಗಶಾಲೆಯೂ ಒಂದು. ಇದರಲ್ಲಿ ಭಾಷೆಯ ಉಚ್ಚರಿತ ಧ್ವನಿಗಳನ್ನು ಅವುಗಳ ಲಕ್ಷಣವನ್ನು ವಿವೇಚಿಸಲು ಅನುಕೂಲವಾಗುವ ಸಲಕರಣೆಗಳಿದ್ದರೆ, ಭಾಷಾಬೋಧನೆಗೆ ಉಪಯೋಗವಾಗುವ ಪ್ರಯೋಗಶಾಲೆಗಳಲ್ಲಿ ಭಾಷಾಬೋಧನೆಗೆ ಅನುಕೂಲವಾಗುವ ಸಲಕರಣೆಗಳಿರುತ್ತವೆ. ಭಾಷಾಪ್ರಯೋಗಶಾಲೆಗಳಲ್ಲಿ ಸಾಮಾನ್ಯವಾಗಿ ಶ್ರವಣಯಂತ್ರ, ಧ್ವನಿವರ್ಧಕಯಂತ್ರ–ಧ್ವನಿಮುದ್ರಣಯಂತ್ರ, ಕೇಂದ್ರನಿಯಂತ್ರಣ, ನಿಯಂತ್ರಿತ ಸ್ವಿಚ್‌ಗಳು, ಬೂತುಗಳು, ಟೇಪುಗಳು, ಪುನರ್‌ಮುದ್ರಣ ಸೌಕರ್ಯ, ಮುದ್ರಣದ ಸ್ಟುಡಿಯೋಗಳು, ಟೇಪುಗ್ರಂಥಾಲಯ, ಧ್ವನಿ ನಿಯಂತ್ರಣ ವ್ಯವಸ್ಥೆ ಮುಂತಾದ ಸಲಕರಣೆಗಳು ಇವೆ. ಉಚ್ಚರಿತ

ಧ್ವನಿಗಳ ಗುಣಲಕ್ಷಣವನ್ನು ವೈಜ್ಞಾನಿಕವಾಗಿ ವಿವೇಚಿಸಲು ಅನುಕೂಲವಾಗುವ ಪ್ರಯೋಗಶಾಲೆಯಲ್ಲಿ ಕೈಮೋಗ್ರಾಫ್, ಇಂಕ್‌ರಾಯಿಟರ್, ಮಿಂಗೋಗ್ರಾಫ್, ಎಂಡೋಸ್ಕೋಪ್, ಮುಖಮಾಪಕ ಯಂತ್ರ, ಕೃತಕತಾಲು, ಕ್ಷಕಿರಣ, ಲೆರಿಂಗೋಸ್ಕೋಪ್, ಆಸಿಲೋಗ್ರಾಫ್, ಪ್ಯಾಟರ್ನ್ ಪ್ಲೇಬ್ಯಾಕ್, ಪಿಚ್‌ಮೀಟರ್, ಇಂಟೆನ್ಸಿಟಿ ಮೀಟರ್, ಸ್ಪೀಚ್‌ಸ್ಟ್ರೆಚರ್, ಸೌಂಡ್ ಸ್ಪೆಕ್ಟ್ರೋಗ್ರಾಫ್, ಸೋನೋಗ್ರಾಫ್, ವೈಬ್ರಲೈಜರ್, ಕಾರ್ಡಿಯಲೈಜರ್, ಟೇಪ್‌ರೆಕಾರ್ಡರ್, ಆಟೋಫೋನೋಸ್ಕೋಪ್, ಬ್ರೀತಿಂಗ್ ಫ್ಲಾಸ್ಕ್, ಗ್ರಾಫಿಕ್‌ವಿಶನ್ಸ್ ಮುಂತಾದ ಸಲಕರಣೆಗಳಿರುತ್ತವೆ.ಭಾಷೆಯ ಉಚ್ಚರಿತ ಧ್ವನಿಗಳನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ವಿವೇಚಿಸಲು ಅನುಕೂಲವಾಗುವ ಈ ಎಲ್ಲಾ ಸಲಕರಣೆಗಳನ್ನು ಹೊಂದಿರುವ ಕೊಠಡಿಯನ್ನು ಧ್ವನಿ ಪ್ರಯೋಗಶಾಲೆ (Phonetic laboratory) ಎನ್ನುವರು. ಈ ವಿವಿಧ ಯಂತ್ರೋಪಕರಣಗಳನ್ನು ಧ್ವನಿಯ ವೈಜ್ಞಾನಿಕ ಅಧ್ಯಯನ ಕ್ಷೇತ್ರದಲ್ಲಿ ಜಗತ್ತಿನಾದ್ಯಂತ ಬಳಸಲಾಗುತ್ತಿದೆ. ಭಾಷಾ ಪ್ರಯೋಗಶಾಲೆಗಳಲ್ಲಿ ಬಳಸುವ ಯಂತ್ರೋಪಕರಣಗಳಲ್ಲಿಯೂ ನಾನಾ ವೈವಿಧ್ಯಗಳುಂಟು. ಕೆಲವು ಭಾಷಾಪ್ರಯೋಗಶಾಲೆಗಳಲ್ಲಿ ಒಂದೇ ಒಂದು ಧ್ವನಿ ಮುದ್ರಣ ಯಂತ್ರವಿದ್ದು ವಿದ್ಯಾರ್ಥಿ ಇಯರ್‌ಫೋನಿನ ಮೂಲಕ ಕೇಂದ್ರದಿಂದ ಬಿತ್ತರಿಸುವ ಪಾಠವನ್ನು ಕೇಳಬಹುದಾದ ಸೌಲಭ್ಯ ಮಾತ್ರವಿದ್ದರೆ, ಮತ್ತೆ ಕೆಲವು ಭಾಷಾ ಪ್ರಯೋಗಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಪ್ರತ್ಯೇಕ ಧ್ವನಿ ಮುದ್ರಣ ಯಂತ್ರವಿದ್ದು ಪ್ರತ್ಯೇಕ ಪ್ರತ್ಯೇಕ ಬೂತುಗಳಿರುತ್ತವೆ. ಇನ್ನೂ ಕೆಲವು ಭಾಷಾಪ್ರಯೋಗಶಾಲೆಗಳಲ್ಲಿ ಧ್ವನಿ ನಿಯಂತ್ರಿತ ಧ್ವನಿ ಮುದ್ರಣ ಸ್ಟುಡಿಯೋಗಳು ಮತ್ತು ಶ್ರವಣ ಸೌಕರ್ಯಗಳು ಮಾತ್ರ ಇರುತ್ತವೆ. ಪೂನಾದ ಜರ್ಮನ್ ಅಧ್ಯಯನದ ಭಾರತೀಯ ಸಂಸ್ಥೆಯಲ್ಲಿ ಅತ್ಯಾಧುನಿಕ ಎಲೆಕ್ಟ್ರಾನಿಕ್ ಸಲಕರಣೆಗಳನ್ನು ಹೊಂದಿರುವ ಭಾಷಾಪ್ರಯೋಗಶಾಲೆಯೊಂದಿದೆ. ಅದನ್ನು ದ್ವಿತೀಯ ಭಾಷಾ ಬೋಧನೆಗೆ ಹೆಚ್ಚು ಬಳಸಲಾಗುತ್ತಿದೆ. ಹೀಗೆ ಭಾಷಾಬೋಧನೆಗೆ ಸಹಾಯಕವಾಗುವ ಧ್ವನಿ ಮುದ್ರಣ ಯಂತ್ರ ಮುಂತಾದ ಯಂತ್ರೋಪಕರಣವನ್ನು ಹೊಂದಿರುವ ಕೊಠಡಿಯನ್ನು ಭಾಷಾಪ್ರಯೋಗಶಾಲೆ (Language laboratory) ಎನ್ನುವರು. ವಿದ್ಯಾರ್ಥಿಗಳಿಗೆ ದ್ವಿತೀಯ ಭಾಷೆಯನ್ನು ಕಲಿಸಲು ಮತ್ತು ಕಲಿಯಲು ಅನುಕೂಲವಾಗುವ ಹಾಗೂ ಹೆಚ್ಚಿನ ಅಭ್ಯಾಸ ಮಾಡಲು ಸಹಾಯಕವಾಗುವ ವಿವಿಧ ಯಂತ್ರೋಪಕರಣಗಳು ಈ ಭಾಷಾಪ್ರಯೋಗಶಾಲೆಯಲ್ಲಿರುತ್ತವೆ. ಈ ಭಾಷಾಪ್ರಯೋಗಶಾಲೆಗಳನ್ನು ಮುಂದುವರಿದ ದೇಶಗಳಾದ ಅಮೇರಿಕ, ರಷ್ಯ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ದೇಶಗಳು ಭಾಷಾಬೋಧನೆಗೆ ಹೆಚ್ಚು ಬಳಸುತ್ತಿವೆ. ಭಾಷಾಪ್ರಯೋಗಶಾಲೆಯಲ್ಲಿ ಅತ್ಯಗತ್ಯವಾಗಿ ಇರಬೇಕಾದ ಯಂತ್ರೋಪಕರಣಗಳು, ಅವುಗಳನ್ನು ಭಾಷಾಬೋಧನೆಗೆ ಬಳಸುವ ವಿಧಾನ, ಅವುಗಳಿಂದಾಗುವ ಪ್ರಯೋಜನ ಮುಂತಾದುವುಗಳನ್ನು ಕುರಿತು ರಾಬರ್ಟ್‌ಲ್ಯಾಡೊ ಎಂಬುವವನು ತನ್ನ Language Teaching—A Scientific

Approach, 1964 ಎಂಬ ಗ್ರಂಥದಲ್ಲಿ ಹಾಗೂ ಸ್ಟ್ಯಾಕ್ ಎಡ್ವರ್ಡ್, ಎಮ್. ಎಂಬುವವನು ತನ್ನ The Language laboratory and Modern language teaching, 1966 ಎಂಬ ಗ್ರಂಥದಲ್ಲಿ ವಿವರವಾಗಿ ವಿವರಿಸಿ ತೋರಿಸಿಕೊಟ್ಟಿದ್ದಾರೆ. ಈ ಭಾಷಾ ಪ್ರಯೋಗಶಾಲೆಗಳ ಬಗ್ಗೆ ಹೆಚ್ಚು ತಿಳಿಯಲು ಅಪೇಕ್ಷಿಸುವವರು ಈ ಎರಡು ಪ್ರಮುಖ ಗ್ರಂಥಗಳನ್ನು ಗಮನಿಸಿದರೆ ಸಾಕು, ಭಾಷಾ ಪ್ರಯೋಗಶಾಲೆ ಯಿಂದಾಗುವ ಪ್ರಯೋಜನವು ಇವುಗಳಿಂದ ಹೆಚ್ಚು ಸ್ಪಷ್ಟವಾಗುವುದು. ಭಾಷಾ ಪ್ರಯೋಗಶಾಲೆಯನ್ನು ಕುರಿತ ಅನೇಕ ಗ್ರಂಥಗಳು ಮತ್ತು ಅನೇಕ ಲೇಖನಗಳು ಹೊರಬಂದಿವೆ. ಅಂತಹ ಗ್ರಂಥಗಳು ಜಗತ್ತಿನಾದ್ಯಂತ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಈಗ ಭಾಷಾ ಪ್ರಯೋಗಶಾಲೆಗಳನ್ನು ಭಾಷಾ ಸಂಶೋಧನೆ ಮತ್ತು ಭಾಷಾಬೋಧನೆಗೆ ಬೇರೆ ಬೇರೆ ದೇಶಗಳು ವ್ಯಾಪಕವಾಗಿ ಬಳಸುತ್ತಿವೆ.

ಭಾಷಾ ಪ್ರಯೋಗಶಾಲೆಯು ವಿದ್ಯಾರ್ಥಿಗೆ ಅಗತ್ಯವಾಗಿ ಬೇಕಾಗುವ ದ್ವಿತೀಯ ಭಾಷೆಗೆ ಸಂಬಂಧಿಸಿದ ಮಾದರಿಗಳನ್ನು ಒದಗಿಸಿಕೊಡುತ್ತದೆ. ಇದು ಬೋಧಕನ ಉಚ್ಚಾರಣೆಯನ್ನು ತಿದ್ದಲು ಸಹಾಯಮಾಡುತ್ತದೆ. ಅವನ ಅಭ್ಯಾಸದ ಶಕ್ತಿಯು ಹೆಚ್ಚುವಂತೆ ಮಾಡುತ್ತದೆ. ಭಾಷಾಪ್ರಯೋಗಶಾಲೆಯ ಮೂಲಕ ಬೋಧಕನು ಇನ್ನೂ ಅನೇಕ ವ್ಯಕ್ತಿಗಳ ಮಾತುಗಳ ವೈವಿಧ್ಯವನ್ನು ಒದಗಿಸಿಕೊಡಬಹುದಾದ ಸೌಲಭ್ಯವಿದೆ. ವಿದ್ಯಾರ್ಥಿ ತರಗತಿಯ ಹೊರಗೆ ಕೇಳುವುದು, ಮಾತನಾಡುವುದು, ಓದುವುದು, ಬರೆಯುವುದು ಇವುಗಳಿಗೆ ಸಂಬಂಧಿಸಿದ ಹೆಚ್ಚಿನ ಅಭ್ಯಾಸಮಾಡಲು ಈ ಪ್ರಯೋಗಶಾಲೆ ಸಹಾಯಮಾಡುತ್ತದೆ. ಇದರ ಸಹಾಯದಿಂದ ವಿದ್ಯಾರ್ಥಿ ಪ್ರತ್ಯೇಕವಾಗಿ ತನಗೆ ಅಗತ್ಯವಾದ ಅಭ್ಯಾಸಗಳನ್ನು ಅಗತ್ಯವಾದಷ್ಟು ಸಾರಿ ಪುನರುಚ್ಚಾರಮಾಡಿ ಕಲಿಯಬಹುದು. ಭಾಷಾ ಪ್ರಯೋಗಶಾಲೆಯಲ್ಲಿ ವಿದ್ಯಾರ್ಥಿ ತನ್ನ ಧ್ವನಿಯನ್ನು ಮುದ್ರಿಸಿಕೊಂಡು ಅದನ್ನು ಕೇಂದ್ರದಿಂದ ಬಿತ್ತರಿಸುವ ವಸ್ತುಸ್ಥಿತಿಯೊಡನೆ ತುಲನೆಮಾಡಿ ವಿಮರ್ಶೆಮಾಡಿಕೊಳ್ಳಬಹುದಾದ ಸೌಕರ್ಯವಿದೆ. ಪ್ರಯೋಗಶಾಲೆಯಲ್ಲಿ ಉಪಯೋಗಿಸುವ ಪಾಠಸಾಮಗ್ರಿ ಅದು ಪೂರ್ಣಪಾಠವಾಗಿರ ಬಾರದು, ಪೂರ್ಣಪಾಠಗಳು ಬೇಗ ಉಪಯೋಗಕ್ಕೆಬಾರದಂತಾಗುತ್ತವೆ. ವಿದ್ಯಾರ್ಥಿಗೆ ಯಾವ ಕ್ಷೇತ್ರದಲ್ಲಿ ಕಷ್ಟವಾದ ಸಮಸ್ಯೆಗಳು ಉದ್ಭವವಾಗುತ್ತವೆಯೋ ಅಂತಹವು ಗಳಿಗೆ ಸಂಬಂಧಿಸಿದ ಕೆಲವೇ ಕೆಲವು ಆಯ್ದ ಪಾಠಸಾಮಗ್ರಿಗಳನ್ನು ಮಾತ್ರ ತಯಾರಿಸಿಕೊಂಡು ಅಂತಹವುಗಳನ್ನು ಪ್ರಯೋಗಶಾಲೆಯಲ್ಲಿ ಬಳಸುವುದು ಹೆಚ್ಚು ಉಪಯುಕ್ತವಾದದ್ದು.

ಭಾಷಾ ಪ್ರಯೋಗಶಾಲೆಯಲ್ಲಿ ಬಳಸಬಹುದಾದ ಪಾಠಸಾಮಗ್ರಿಯನ್ನು ಬೋಧಕನು ತುಂಬ ಎಚ್ಚರಿಕೆಯಿಂದ ತಯಾರಿಸಿಕೊಳ್ಳಬೇಕಾಗುತ್ತದೆ. ಅವು ತರಗತಿಯಲ್ಲಿ ಬೋಧಿಸುವ ಪಾಠಗಳಿಗೆ ಅನುಕ್ರಮವಾಗಿರಬೇಕು ಮತ್ತು ಸ್ಪಷ್ಟವಾಗಿರ ಬೇಕು. ಇಂತಹ ಪಾಠಗಳ ತಯಾರಿಕೆಯ ಹಿಂದೆ ಯಾವುದಾದರೊಂದು ಉದ್ದೇಶ

ಇರಲೇಬೇಕು. ಇಲ್ಲದಿದ್ದರೆ ಇಂತಹ ಪಾಠಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಪಾಠಗಳ ತಯಾರಿಕೆಗೆ ಭಾಷಾವಿಜ್ಞಾನ ಮತ್ತು ಮನೋವಿಜ್ಞಾನಗಳ ಜ್ಞಾನ ಅತ್ಯಗತ್ಯ. ಬೋಧಕನು ತರಗತಿಯಲ್ಲಿ ಏನೇನು ಮಾಡುವನೋ ಅದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಭ್ಯಾಸಕ್ಕಾಗಿ ಪಾಠಗಳನ್ನು ತಯಾರಿಸಿಕೊಳ್ಳುವುದು ರೂಢಿ. ಉಚ್ಚಾರಣೆ, ವ್ಯಾಕರಣ, ಶಬ್ದಕೋಶ, ವಾಕ್ಯ ಮುಂತಾದವುಗಳಿಗೆ ಸಂಬಂಧಿಸಿದ ಮಾದರಿ ಪಾಠಗಳನ್ನು ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಒಂದೊಂದು ದೃಷ್ಟಿಯಿಂದಲೂ ಗಮನಿಸಿದ ಪಾಠಗಳನ್ನು ಹೆಚ್ಚಿನ ಅಭ್ಯಾಸಕ್ಕಾಗಿ ತಯಾರಿಸಿಕೊಳ್ಳಬಹುದು. ಕೇಳುವುದು ಕೇಳಿದ್ದನ್ನು ಅನುಕರಿಸುವುದು ಅನುಕರಿಸಿ ಜ್ಞಾಪಕ ಹೆಚ್ಚಿಸಿಕೊಳ್ಳುವುದು ಮುಂತಾದುವು ಅಭ್ಯಾಸಕ್ರಿಯೆಗೆ ಸಂಬಂಧಿಸಿದ ವಿಚಾರಗಳು, ಭಾಷಾಪ್ರಯೋಗಶಾಲೆಯಲ್ಲಿ ಬಳಸುವ ಪಾಠಸಾಮಗ್ರಿ ಮುಂದಿನ ಪಠಿಪಾಠಕ್ಕೆ ಅನ್ವಯವಾಗುವಂತಿದ್ದರೆ ಉತ್ತಮ. ಕೇಳಿ ಮಾತಾಡುವ ಮಾತಾಡಿದ್ದನ್ನು ತಾನೇ ತಿದ್ದಿಕೊಳ್ಳುವ ಕೇಳಿ ಓದುವ ಮತ್ತು ಬರೆಯುವ ಅಭ್ಯಾಸಗಳನ್ನು ಭಾಷಾಪ್ರಯೋಗಶಾಲೆಯಲ್ಲಿ ಬಳಸುವುದು ಒಳ್ಳೆಯದು. ಬೋಧಕನ ಪುಸ್ತಕಗಳ ಜೊತೆಗೆ ವಿದ್ಯಾರ್ಥಿಗಳ ಹೆಚ್ಚಿನ ಅಭ್ಯಾಸಕ್ಕಾಗಿ ಸಿದ್ಧಪಡಿಸಿದ ಪಾಠಗಳ ಟೇಪುಗಳನ್ನು ಅವುಗಳ ಪ್ರತಿಯನ್ನು ತಯಾರಿಸಿಕೊಳ್ಳುವುದು ಅಂತಹ ಧ್ವನಿಮುದ್ರಿತ ಟೇಪುಗಳನ್ನು ವಿದ್ಯಾರ್ಥಿಗಳು ಬಳಸಲು ಅನುಕೂಲವಾಗುವಂತೆ ಯಂತ್ರೋಪಕರಣಗಳು ದೊರೆಯುವಂತೆ ಮಾಡುವುದು ಅಲ್ಲದೆ ಬೋಧಕನು ಇವುಗಳ ಜೊತೆಗೆ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾಗುವ ಕೆಲವು ಪೂರಕ ಟೇಪುಗಳನ್ನು ತಯಾರಿಸಿಕೊಡಬೇಕಾಗುತ್ತದೆ. ಇದಕ್ಕೆ ಬೋಧಕನ ಬೌದ್ಧಿಕ ಪಾತ್ರ ಮುಖ್ಯವಾಗಿರುತ್ತದೆ. ಬೋಧನೆಗೆ ಸಂಬಂಧಿಸಿದ ಸಮಸ್ಯೆಗಳನ್ನು, ಅತ್ಯುತ್ತಮವೆನಿಸಿದ ಡ್ರಿಲ್ಲನ್ನು ಆಯ್ಕೆ ಮಾಡಿಕೊಳ್ಳುವುದು, ಟೇಪಿಗೆ ಬೇಕಾದ ಮುದ್ರಣಸಾಮಗ್ರಿಯನ್ನು ಸಿದ್ಧಪಡಿಸಿಕೊಳ್ಳುವುದು, ಧ್ವನಿಮುದ್ರಣ ಮಾಡುವುದು, ಟೇಪುಗಳ ಪ್ರತಿಯನ್ನು ತಯಾರಿಸಿಕೊಳ್ಳುವುದು, ಅವೆಲ್ಲವನ್ನು ಚೆನ್ನಾಗಿ ಪರೀಕ್ಷಿಸುವುದು, ವಿದ್ಯಾರ್ಥಿಗಳು ಅವನ್ನು ಉಪಯೋಗಿಸಿದ ಮೇಲೆ ಅದರ ಫಲಿತಾಂಶವನ್ನು ಗಮನಿಸುವುದು ಮುಂತಾದ ಕೆಲಸ ಕಾರ್ಯಗಳನ್ನು ಬೋಧಕನು ಪ್ರಯೋಗಶಾಲೆಯಲ್ಲಿ ಬಹು ಎಚ್ಚರಿಕೆಯಿಂದ ಜಾಣ್ಮೆಯಿಂದ ನಿರ್ವಹಿಸಬೇಕಾಗುವುದು.

ಯಾವುದಾದರೊಂದು ಸಂಭಾಷಣೆಯನ್ನು ಬಾಯಿಪಾಠಮಾಡಿಸಲು ಯಾವುದಾದರೊಂದು ಧ್ವನಿಯ ವೈದೃಶ್ಯವನ್ನು ಗುರುತಿಸಿಕೊಳ್ಳಲು, ವ್ಯಾಕರಣದ ಮೇಲೆ ಪೂರ್ಣ ಪ್ರಭುತ್ವವನ್ನು ಸಂಪಾದಿಸಿಕೊಳ್ಳಲು, ಶಬ್ದಕೋಶವನ್ನು ವ್ಯಾಪಕವಾಗಿ ಬಳಸಲು, ಓದುಬರಹ ಮುಂತಾದುವುಗಳನ್ನು ತಿದ್ದಿಕೊಳ್ಳಲು, ವಾಕ್ಯರಚನಾಕ್ರಮವನ್ನು ಅರಿತುಕೊಳ್ಳಲು ಹೀಗೆ ಯಾವುದಾದರೊಂದು ಉದ್ದೇಶಕ್ಕಾಗಿ ಡ್ರಿಲ್ಲಿನ ಆಯ್ಕೆ ಅವಶ್ಯವಾಗಿ ಕಂಡುಬರಬಹುದು. ಈ ಕಾರಣದಿಂದ ಬೋಧಕನು ಯಾವುದೇ

ಬಗೆಯ ಡ್ರಿಲ್ಲನ್ನು ತಯಾರಿಸಿಕೊಳ್ಳುವ ಮೊದಲು ಈ ಡ್ರಿಲ್ ಯಾವ ಉದ್ದೇಶಕ್ಕಾಗಿ ಎಂಬುದನ್ನು ಅರಿತಿರಬೇಕಾದುದು ಆವಶ್ಯಕ. ಇಲ್ಲದಿದ್ದರೆ ಅಂತಹ ಡ್ರಿಲ್‌ನಿಂದ ಯಾವ ಪ್ರಯೋಜನವೂ ದೊರೆಯಲಾರದು. ಡ್ರಿಲ್‌ನ ಆಯ್ಕೆಗೆ ಅನೇಕ ಸಮಸ್ಯೆಗಳು ಮೇಲೆ ಹೇಳಿದಂತೆ ಕಾರಣವಾಗುತ್ತವೆ. ಡ್ರಿಲ್ಲನ್ನು ಯಾವುದಾದರೊಂದು ಉದ್ದೇಶದಿಂದ ಆಯ್ಕೆಮಾಡಿಕೊಂಡ ಮೇಲೆ ಭಾಷಾಬೋಧನೆ ಅಥವಾ ಭಾಷಾ ಕಲಿಕೆಯ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಡ್ರಿಲ್‌ನ ಆರಂಭದಲ್ಲಿ ಕೆಲವು ಸೂಚನೆಯನ್ನು ಸೂಚಿಸಬೇಕಾಗುತ್ತದೆ. ಬೋಧಕನು ಈ ಸೂಚನೆಯನ್ನು ಡ್ರಿಲ್‌ನ ಆರಂಭ ಮತ್ತು ಅಂತ್ಯದಲ್ಲಿ ಸೂಚಿಸುವುದು ಉತ್ತಮ, ವಿದ್ಯಾರ್ಥಿ ಅಂತಹ ಸೂಚನೆಗಳನ್ನು ಟೇಪು ಕೇಳುವ ಮೊದಲು ಟೇಪ್ ಕೇಳಿದ ಅನಂತರ ಗಮನಿಸಲು ಹೆಚ್ಚು ಅನುಕೂಲವಾಗುತ್ತದೆ. ಅದರಿಂದ ವಿದ್ಯಾರ್ಥಿಯ ಪ್ರತ್ಯುತ್ತರವನ್ನು ಹೊರಹೊಮ್ಮಿಸಿ ಅವನ ಕಲಿಕೆಯ ಶಕ್ತಿಯು ಹೆಚ್ಚುವಂತೆ ಆಗುತ್ತದೆ.

ಮುದ್ರಣ ಲೇಖನವನ್ನು ಸಿದ್ಧಪಡಿಸುವ ಬೋಧಕನು ಪ್ರತಿಯೊಂದು ಸಾರಿಯೂ ಪ್ರಯೋಗಶಾಲೆಯ ಡ್ರಿಲ್ಲನ್ನು ತರಗತಿಯ ಡ್ರಿಲ್‌ನಂತೆ ಉತ್ತಮಪಡಿಸಲು ಸಾಧ್ಯವಾಗುವುದಿಲ್ಲ. ಆದಕಾರಣ ಬೋಧಕನು ಮುದ್ರಣ ಲೇಖನವನ್ನು ತುಂಬ ಎಚ್ಚರಿಕೆಯಿಂದ ತಯಾರಿಸಬೇಕಾಗುತ್ತದೆ. ಮುದ್ರಣ ಲೇಖನದಲ್ಲಿ ಪ್ರಯೋಗಶಾಲೆಯ ಸಿಬ್ಬಂದಿಗೆ ಕೊಡಬೇಕಾದ ಸೂಚನೆಗಳು, ಧ್ವನಿಮುದ್ರಕನಿಗೆ ಕೊಡಬೇಕಾದ ಸೂಚನೆಗಳು, ಭಾಷೆಯ ವಿದ್ಯಾರ್ಥಿಗಳಿಗೆ ಕೊಡಬೇಕಾದ ಸೂಚನೆಗಳು, ಡ್ರಿಲ್‌ನ ಆರಂಭ ಮತ್ತು ಅಂತ್ಯಸೂಚಕ ಸೂಚನೆಗಳು ಮುಂತಾದುವುಗಳನ್ನು ಟೇಪಿನಲ್ಲಿ ತಪ್ಪದೆ ಮುದ್ರಿಸಬೇಕಾಗುತ್ತದೆ. ಭಾಷಾ ಪ್ರಯೋಗಶಾಲೆಯಲ್ಲಿ ಬಳಸಲು ಸಿದ್ಧಪಡಿಸಿದ ಡ್ರಿಲ್‌ನ ಪಾಠ ಇಷ್ಟೇ ಉದ್ದವಾಗಿರಬೇಕು ಎಂಬ ನಿಯಮವೇನೂ ಇಲ್ಲ. ಇದು ಆಯಾ ಸಮಸ್ಯೆಯ ಸ್ವರೂಪವನ್ನು ಅವಲಂಬಿಸಿರುತ್ತದೆ. ಅದರ ಉದ್ದ ಸಂದರ್ಭಕ್ಕೆ ತಕ್ಕಂತೆ ಹೆಚ್ಚುಕಡಿಮೆಯಾಗಬಹುದು. ಭಾಷಾ ಪ್ರಯೋಗಶಾಲೆಯ ಸಹಾಯದಿಂದ ಕ್ಲಿಷ್ಟವಾದ ಧ್ವನಿ ವ್ಯತ್ಯಾಸವನ್ನು ಬಹು ಪರಿಣಾಮಕಾರಿಯಾಗಿ ಕಲಿಯಬಹುದು. ಯಂತ್ರೋಪಕರಣಗಳು ದೋಷದಿಂದ ಕೂಡಿದಾಗ ಬೋಧಕನ ಧ್ವನಿಮುದ್ರಿಕೆಯು ದೋಷಪೂರಿತವಾಗಬಹುದಾದ ಅಪಾಯವಿದೆ. ಈ ಎಲ್ಲ ಕಾರಣಗಳಿಂದ ಬೋಧಕನು ಮುದ್ರಣ ಕಾರ್ಯವನ್ನು ಆರಂಭಿಸುವ ಮೊದಲು ಯಂತ್ರದ ಎಲ್ಲ ಸಲಕರಣೆಗಳನ್ನು ಪರಿಶೀಲಿಸಿ ಅವು ಸರಿಯಾಗಿ ಕೆಲಸಮಾಡುತ್ತಿವೆಯೆ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾದುದು ಆವಶ್ಯಕ. ಈ ಎಲ್ಲ ಅಂಶಗಳ ಜೊತೆಗೆ ಯಂತ್ರೋಪಕರಣಗಳ ಧ್ವನಿಮುದ್ರಣಕ್ಕೆ ಯಾವ ಬಗೆಯ ತೊಂದರೆಯನ್ನು ತಂದೊಡ್ಡದಂತೆ ಮುಂಜಾಗ್ರತೆಯನ್ನು ವಹಿಸುವುದು ಉತ್ತಮ.

ಮುದ್ರಣ ಲೇಖನದ ಗುಣ ಹೆಚ್ಚಬೇಕಾದರೆ ಅದರಲ್ಲಿ ಬಳಸುವ ಪ್ರತಿಯೊಂದು

ಪದವೂ ಸರಳವಾಗಿದ್ದು ಸುಲಭವಾಗಿ ಮಾತಾಡಲು ಸಾಧ್ಯವಾಗುವಂತೆ ಇರಬೇಕಾ
ದುದು ಅತ್ಯಗತ್ಯ. ಮುದ್ರಣ ಲೇಖನವನ್ನು ಮುದ್ರಿಸುವ ಮೊದಲು ಚೆನ್ನಾಗಿ
ಮನನಮಾಡಿಕೊಳ್ಳಬೇಕು, ಸ್ವಾಭಾವಿಕವಾಗಿ ಮಾತನಾಡಬೇಕು, ಮಾತಾಡು
ವುದರಲ್ಲಿ ಅಸಹಜತೆ ತಲೆದೋರಬಾರದು, ಅದು ಧ್ವನಿಮುದ್ರಣದಲ್ಲಿ ಮುದ್ರಿತವಾಗಿ
ಬಿಡುತ್ತದೆ ಅಂತಹ ಧ್ವನಿಗಳಿಂದ ವಿದ್ಯಾರ್ಥಿಗಳಿಗೆ ಬೇಸರವಾಗಬಹುದು. ಅಂತಹ
ಧ್ವನಿಗಳನ್ನು ಉಚ್ಚಾರಮಾಡುವುದರಿಂದ ಅವರಿಗೆ ಆಯಾಸವಾಗಬಹುದು. ಈ ಎಲ್ಲ
ಕಾರಣಗಳಿಂದ ಪಾಠಗಳನ್ನು ಧ್ವನಿಮುದ್ರಣಮಾಡುವಾಗ ಮುದ್ರಣಕ್ಕೆ ಧ್ವನಿ
ಕೊಡುವಾಗ ತುಂಬ ಎಚ್ಚರಿಕೆ ವಹಿಸಬೇಕಾಗುತ್ತವೆ. ಭಾಷಾಪ್ರಯೋಗಶಾಲೆಯಲ್ಲಿ
ಬಳಸುವ ಮುದ್ರಿತ ಪಾಠದ ಉದ್ದ ಒಂದು ತರಗತಿಯ ಒಂದು ಪೀರಿಯಡ್‌ನ
ಅರ್ಧದಷ್ಟಿದ್ದರೆ ಉತ್ತಮ. ಅದರಿಂದ ವಿದ್ಯಾರ್ಥಿಗಳು ಒಂದು ಪೀರಿಯಡ್‌ನಲ್ಲಿ
ಎರಡು ಅಥವಾ ಮೂರು ಸಾರಿಯಾದರೂ ಅದನ್ನು ಕೇಳಿ ಮನನಮಾಡಲು ಅನುಕೂಲ
ವಾಗುತ್ತದೆ. ಪ್ರಯೋಗಶಾಲೆಯಲ್ಲಿ ಬಳಸುವ ಪಾಠದ ಮುದ್ರಿಕೆಯಲ್ಲಿ ಬೋಧಕನ
ಧ್ವನಿಯ ಜೊತೆಗೆ ಬೇರೆಯವರ ಧ್ವನಿ ಅಗತ್ಯವಿರದಿದ್ದರೂ ಇರುವುದು ಒಳ್ಳೆಯದು.
ಅದರಿಂದ ವಿದ್ಯಾರ್ಥಿಯ ಕಲಿಕೆಯ ಶಕ್ತಿಯೂ ಹೆಚ್ಚುತ್ತದೆ. ಅದರಿಂದ ಅವರಲ್ಲಿ
ಆಸಕ್ತಿಯೂ ಬೆಳೆಯುತ್ತದೆ. ಟೇಪಿನಲ್ಲಿ ಮುದ್ರಿಸಿದ ಮುದ್ರಿಕೆಗಳ ಸೂಚನೆಗಳು
ಮತ್ತು ವಿವರಣೆಗಳು ಅದಷ್ಟು ಉದ್ದವಾಗಿರದೆ ಬಹಳ ಸಂಕ್ಷಿಪ್ತವಾಗಿರುವುದು
ಉತ್ತಮ. ಅವು ಒಂದು ವಾಕ್ಯಕ್ಕಿಂತ ಹೆಚ್ಚಿದ್ದರೆ ಅಂತಹ ವಿವರಣೆಗಳಿಂದ
ತೊಂದರೆಯೇ ಹೆಚ್ಚು. ಮುದ್ರಿಕೆಯಲ್ಲಿ ವಿದ್ಯಾರ್ಥಿಯ ಪ್ರತ್ಯುತ್ತರಕ್ಕಾಗಿ ಕೊಡುವ
ವಿರಾಮವು ತೀರ ಉದ್ದವಾಗಲಿ, ತೀರ ಕಡಿಮೆಯಾಗಲಿ ಇರಬಾರದು. ವಿದ್ಯಾರ್ಥಿ
ಉತ್ತರ ಹೇಳಿ ಮುಂದಿನ ವಾಕ್ಯಕ್ಕೆ ಹೆಚ್ಚು ಕಾಯುವಂತಾದರೆ ವಿದ್ಯಾರ್ಥಿಗೆ ಬೇಸರ
ವಾಗುತ್ತದೆ, ಒಂದುವೇಳೆ ವಿರಾಮದ ಅವಧಿ ಕಡಿಮೆಯಾದರೆ ವಿದ್ಯಾರ್ಥಿ ಉತ್ತರ
ಹೇಳುವುದರೊಳಗೆ ಮುಂದಿನ ವಾಕ್ಯ ಆರಂಭವಾಗಿಬಿಡುತ್ತದೆ. ಈ ಎಲ್ಲಾ ವಿಚಾರ
ಗಳನ್ನು ಗಮನದಲ್ಲಿರಿಸಿಕೊಂಡು ಬೋಧಕನು ಪ್ರತ್ಯುತ್ತರವನ್ನು ಮೌನವಾಗಿ
ಎರಡು ಮೂರು ಸಾರಿ ಪುನರುಚ್ಚರಿಸಿ ಮುಂದಿನ ವಾಕ್ಯಕ್ಕೆ ಹೋಗುವಂತಿದ್ದರೆ ಆಗ
ಅದಕ್ಕೆ ಸರಿಯಾದ ಅವಧಿಯ ವಿರಾಮ ಸೂಚಿಸಿದಂತಾಗುತ್ತದೆ ಬೋಧಕನಿಗೆ
ಸರಿಯಾದ ಉತ್ತರ ಗೊತ್ತಿರುವುದರಿಂದ ಅವನು ಬೇಗ ಹೇಳಿಬಿಡಬಲ್ಲನು. ಅದಕ್ಕೆ
ಕಡಿಮೆ ಅವಧಿಯ ಮೌನವೇ ಸಾಕಾಗುತ್ತದೆ. ಅದು ವಿದ್ಯಾರ್ಥಿಗೆ ಸಾಕಾಗದಿರ
ಬಹುದು. ಮಾತನಾಡುವ ಧ್ವನಿ ಗಾತ್ರವನ್ನು ಧ್ವನಿವರ್ಧಕದ ಮುಂದೆ ಬದಲಾಯಿಸ
ಬಾರದು, ಧ್ವನಿವರ್ಧಕ ಯಂತ್ರದಿಂದ ಬಾಯಿಯ ದೂರವನ್ನು ಹೆಚ್ಚು ವ್ಯತ್ಯಾಸ
ಮಾಡಬಾರದು ಧ್ವನಿವರ್ಧಕದ ಮುಂದೆ ಕಾಗದದ ಯಾವ ಹಾಳೆಯನ್ನು
ತಿರುಗಿಸಬಾರದು, ಅವೆಲ್ಲವೂ ಧ್ವನಿಮುದ್ರಣದಲ್ಲಿ ಮುದ್ರಣವಾಗಿಬಿಡುತ್ತವೆ. ಧ್ವನಿ
ಮುದ್ರಣದ ಸಮಯದಲ್ಲಿ ಸಾಮಾನ್ಯವಾಗಿ ಮೈಕಿಗೆ ಎದುರಾಗಿ ಬಾಯಿಯನ್ನು

ತರಬಾರದು. ಇದರಿಂದ ಉಸಿರಾಡುವುದು ಕೂಡ ಮುದ್ರಣವಾಗಿಬಿಡುತ್ತದೆ. ಬಾಯಿ ಮೈಕಿನ ಪಕ್ಕದಲ್ಲಿ ಒಂದೇ ದೂರದಲ್ಲಿರಬೇಕು. ಮೈಕಿಗೆ ಎದುರಾಗಿ ಕೆಮ್ಮಬಾರದು, ಗಂಟಲನ್ನು ಸರಿಪಡಿಸಿಕೊಳ್ಳಬೇಕಾಗಿ ಬಂದಾಗ ಅದನ್ನು ಬೇರೆ ರೀತಿಯಲ್ಲಿ ಸರಿಪಡಿಸಿಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಧ್ವನಿಮುದ್ರಣ ಕಾರ್ಯವನ್ನು ಮುಂದುವರಿಸುವುದು ಒಳ್ಳೆಯದು. ಧ್ವನಿಮುದ್ರಣ ಕಾರ್ಯ ಮೊದಮೊದಲು ಎಷ್ಟೇ ಕ್ಲಿಷ್ಟವಾಗಿ ತೋರಿಬಂದರೂ ಸ್ವಲ್ಪ ಅಭ್ಯಾಸದ ಅನಂತರ ಎಲ್ಲವೂ ಸರಿಹೋಗುತ್ತದೆ. ಮುದ್ರಿಕೆ ಸ್ವಾಭಾವಿಕವಾಗಿರಬೇಕಾದುದು ಅತ್ಯಗತ್ಯ. ಮುದ್ರಣ ಕಾರ್ಯ ಮುಗಿದ ಮೇಲೆ ಅದನ್ನು ಒಂದುಸಾರಿ ಕೇಳಿ ಸರಿಯಾಗಿದೆಯೋ ಅಥವಾ ಇಲ್ಲವೆ ಎಂಬುದನ್ನು ದೃಢಪಡಿಸಿಕೊಳ್ಳಬೇಕಾದುದು ಅವಶ್ಯಕ. ಡ್ರಿಲ್‌ಗಳನ್ನು ವಿದ್ಯಾರ್ಥಿ ಕೇಳುವ ಮತ್ತು ಕೇಳಿ ಮಾತನಾಡುವ ಜೊತೆಗೆ ಪ್ರಯೋಗಶಾಲೆಯಲ್ಲಿ ಅವನು ಇತರ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ವಿದ್ಯಾರ್ಥಿ ತಾನು ಮಾಡುವ ಮುದ್ರಣದ ಕಾರ್ಯ ಬಹಳ ಕಡಿಮೆ. ಅವನು ಬಹಳ ಹೊತ್ತು ಕೇಳುವ ಮತ್ತು ಅಭ್ಯಾಸಮಾಡುವ ಕೆಲಸದಲ್ಲಿಯೇ ಮಗ್ನನಾಗಿರುತ್ತಾನೆ. ಭಾಷಾ ಪ್ರಯೋಗಶಾಲೆಯಲ್ಲಿ ವಿವಿಧ ಸಲಕರಣೆಗಳಿಂದ ಕೇಳಬಹುದು ಕೇಳಿ ಉತ್ತರ ಪಡೆಯಬಹುದು. ಹೇಳಿದ್ದನ್ನು ಪುನರ್ ಮುದ್ರಿಸಬಹುದು. ವಿದ್ಯಾರ್ಥಿ ಮೌಖಿಕ ಉತ್ತರ ಕೊಡಬೇಕಾಗಿ ಬಂದಾಗ ಇದಕ್ಕೆ ಸಕ್ರಿಯ ಶ್ರವಣಯಂತ್ರದ ಸಹಾಯ ಬೇಕಾಗುತ್ತದೆ. ವಿದ್ಯಾರ್ಥಿ ಟೇಪಿನ ಧ್ವನಿಯನ್ನು ಕೇಳುವುದರ ಜೊತೆಗೆ ತಾನು ಮಾತನಾಡಿದ್ದನ್ನು ಇದರಿಂದ ಕೇಳಬಹುದು. ತಾನು ಹೇಳುವುದನ್ನು ವಿದ್ಯಾರ್ಥಿ ಕೇಳುವುದರಿಂದ ಅವನ ಪ್ರತ್ಯುತ್ತರಗಳನ್ನು ಚೆನ್ನಾಗಿ ತಿದ್ದಿಕೊಳ್ಳಬಹುದು. ಪ್ರಯೋಗಶಾಲೆಯಲ್ಲಿ ಸಕ್ರಿಯಶ್ರವಣಯಂತ್ರ ಬೋಧಕನ ನಿಯಂತ್ರಣದಲ್ಲಿರುತ್ತದೆ. ಆದರಿಂದ ವಿದ್ಯಾರ್ಥಿಯ ಉತ್ತರವನ್ನು ಕೇಳಬಹುದು ಹಾಗೂ ತಿದ್ದಬಹುದು. ಬೋಧಕನು ಕೇಂದ್ರ ನಿಯಂತ್ರಣದಲ್ಲಿ ಕುಳಿತು ವಿದ್ಯಾರ್ಥಿಯ ಪ್ರತ್ಯುತ್ತರವನ್ನು ಮುದ್ರಿಸಿಕೊಳ್ಳಬಹುದು. ವಿದ್ಯಾರ್ಥಿಯು ಪ್ರಯೋಗಶಾಲೆಯಲ್ಲಿ ಸಕ್ರಿಯ ಶ್ರವಣಯಂತ್ರವನ್ನು ಯಾವುದೇ ವಿಧವಾದ ಪರಿಪಾಠಕ್ಕಾದರೂ ಬಳಸಬಹುದು. ವಿದ್ಯಾರ್ಥಿಯ ಬೂತಿನಲ್ಲಿ ಧ್ವನಿಮುದ್ರಣ ಯಂತ್ರ ಪ್ರತ್ಯೇಕವಾಗಿರುತ್ತದೆ. ಅದನ್ನು ಅವನು ತನಗೆ ಬೇಕಾದ ವೇಗದಲ್ಲಿ ಬೇಕಾದಷ್ಟು ಸಾರಿ ಬಳಸಿಕೊಂಡು ಅಭ್ಯಾಸಮಾಡಬಹುದು. ತನಗೆ ಕಷ್ಟವಾದುದನ್ನು ಮೇಲಿಂದ ಮೇಲೆ ಕೇಳಿ ಹಾಗೆಯೇ ಮುದ್ರಿಸಿಕೊಳ್ಳಬಹುದು. ದ್ವಿವಾಹಕ ಧ್ವನಿ ಮುದ್ರಣ ಯಂತ್ರದಿಂದ ತನ್ನ ಮತ್ತು ಕೇಂದ್ರದ ಉತ್ತರಗಳನ್ನು ಒಂದೇ ಸಾರಿ ಕೇಳಿ ಹೋಲಿಸಿಕೊಳ್ಳಬಹುದು. ಇಲ್ಲವೇ ಇದರಿಂದ ಬೋಧಕನು ಎರಡು ಉತ್ತರವನ್ನು ವಿಮರ್ಶಿಸಿ ವಿದ್ಯಾರ್ಥಿಯ ದೋಷವನ್ನು ತಿದ್ದಬಹುದು. ವಿದ್ಯಾರ್ಥಿ ತಾನು ಇನ್ನೂ ಕಲಿಯುತ್ತಿರುವಾಗ, ತನ್ನ ಉತ್ತರ ಇನ್ನೂ ಸಮರ್ಪಕವಾಗಿಲ್ಲದಿರುವಾಗ ಮುದ್ರಣಕಾರ್ಯ ಮಾಡಲು ಹೋಗಬಾರದು. ಸಾಕಷ್ಟು ಅಭ್ಯಾಸ ಹೊಂದಿದಮೇಲೆ ವಿದ್ಯಾರ್ಥಿ ತನ್ನ ಉತ್ತರವನ್ನು ಮುದ್ರಿಸಿಕೊಳ್ಳಬಹುದು.

ಭಾಷಾ ಪ್ರಯೋಗಶಾಲೆಗಳಲ್ಲಿ ಮುಖ್ಯವಾಗಿ ಎರಡು ಬಗೆ. ಒಂದು ಭಾಷಾ ಪ್ರಸಾರ ಪ್ರಯೋಗಶಾಲೆ ಇನ್ನೊಂದು ಗ್ರಂಥಾಲಯ ಪ್ರಯೋಗಶಾಲೆ. ಪ್ರಸಾರ ಪ್ರಯೋಗಶಾಲೆಯಲ್ಲಿ ಪ್ರತಿ ಬೂತಿನಲ್ಲಿಯೂ ಮೈಕ್ರೋಫೋನ್, ಹೆಡ್‌ಫೋನ್, ಧ್ವನಿವರ್ಧಕ ಯಂತ್ರ ಮುಂತಾದುವು ಇದ್ದರೆ, ಗ್ರಂಥಾಲಯ ಪ್ರಯೋಗಶಾಲೆಯಲ್ಲಿ ಪ್ರತಿ ಬೂತಿನಲ್ಲಿಯೂ ಒಂದೊಂದು ಧ್ವನಿಮುದ್ರಣ ಯಂತ್ರವಿರುತ್ತದೆ. ಕೇಂದ್ರದಿಂದ ಒಂದಕ್ಕಿಂತ ಹೆಚ್ಚು ಕಾರ್ಯಕ್ರಮ ಪ್ರಸಾರವಾಗುತ್ತಿದ್ದರೆ ವಿದ್ಯಾರ್ಥಿ ತನಗೆ ಬೇಕಾದ ಪ್ರಸಾರವನ್ನು ಕೇಳಲು ಪ್ರಸಾರ ಪ್ರಯೋಗಶಾಲೆಯಲ್ಲಿ ತಿರುಗುಗುಂಡಿಯನ್ನು ತಿರುಗಿಸಬೇಕಾಗುತ್ತದೆ. ಗ್ರಂಥಾಲಯ ಪ್ರಯೋಗಶಾಲೆಯಲ್ಲಿ ಪ್ರತಿ ಬೂತಿನಲ್ಲಿಯೂ ಒಂದೊಂದು ಧ್ವನಿಮುದ್ರಣ ಯಂತ್ರವಿದ್ದು ವಿದ್ಯಾರ್ಥಿಯು ತನಗೆ ಬೇಕಾದ ಕಾರ್ಯಕ್ರಮವನ್ನು ಆರಿಸಿಕೊಂಡು ಪುನರ್ ಮುದ್ರಿಸಿಕೊಳ್ಳಬಹುದು. ಇದರ ಜೊತೆಗೆ ಗ್ರಂಥಾಲಯ ಪ್ರಯೋಗಶಾಲೆಯಲ್ಲಿ ಮೈಕ್ರೊಫೋನ್, ಹೆಡ್‌ಫೋನ್ ಮತ್ತು ದ್ವಿವಾಹಕ ಧ್ವನಿಮುದ್ರಣಯಂತ್ರ ಮುಂತಾದ ಸಲಕರಣೆಗಳಿರುತ್ತವೆ.

ಯಾಂತ್ರಿಕ ಪ್ರಗತಿ ಕ್ಷಿಪ್ರಗತಿಯಲ್ಲಿ ನಡೆಯುತ್ತಿರುವ ಇಂದಿನ ದಿನಗಳಲ್ಲಿ ಬಹು ಬೇಗನೆ ನಾವು ನಮ್ಮಲ್ಲಿ ಅದ್ಭುತ ಬದಲಾವಣೆ ಏನನ್ನೂ ನಿರೀಕ್ಷಿಸುವಂತಿಲ್ಲ. ಪ್ರಯೋಗ ಶಾಲೆಗಳನ್ನು ಹೊಂದಲು ಅಗತ್ಯವಾಗಿ ಬೇಕಾಗುವ ಸ್ಥಳ ಮತ್ತು ಹಣದ ಕೊರತೆ ಅಡ್ಡಿಯಾಗುತ್ತಿದೆ. ವಿದ್ಯಾರ್ಥಿ ಭಾಷಾ ಪ್ರಯೋಗಶಾಲೆಯನ್ನು ಉಪಯೋಗಿಸುವ ಜ್ಞಾನದ ಅಭಾವ, ಯಂತ್ರೋಪಕರಣಗಳನ್ನು ಸರಿಪಡಿಸುವ ತರಪೇತಿ ಪಡೆದವರ ಕೊರತೆ, ಕೇಂದ್ರ ಪ್ರಸಾರದ ಸಮಸ್ಯೆಗಳನ್ನು ಪರಿಹರಿಸುವ ವಿಧಾನ ಮುಂತಾದುವು ಗಳನ್ನು ನಾವು ಎದುರಿಸುತ್ತಿದ್ದೇವೆ. ಇಷ್ಟಾದರೂ ಡಯಲ್ ಪ್ರಯೋಗಶಾಲೆ, ರೇಡಿಯೋ ಪ್ರಸಾರಕೇಂದ್ರ, ವೈಯಕ್ತಿಕ ಟೇಪುಗಳು ಅವುಗಳ ಬಳಕೆಗೆ ನೆರವಾಗಬಲ್ಲ ಯಂತ್ರಗಳು ಧ್ವನಿಮುದ್ರಣ ಯಂತ್ರಗಳು ಬಗೆಬಗೆಯಲ್ಲಿ ಹೊರಬರುತ್ತಿವೆ. ಇಂತಹ ಪ್ರಯೋಗಶಾಲೆಗಳನ್ನು ಅಂತಹ ಯಂತ್ರೋಪಕರಣಗಳನ್ನು ನಿರ್ವಹಿಸುವುದು ತುಂಬ ಶ್ರಮದಾಯಕವಾದ ಕೆಲಸ. ಡಯಲ್ ಪ್ರಯೋಗಶಾಲೆಯಲ್ಲಿ ಹೆಡ್‌ಫೋನ್, ಮೈಕ್ರೋಫೋನ್, ದೂರವಾಣಿಯ ಡಯಲ್ ಇರುತ್ತವೆ. ಇದರಲ್ಲಿ ಡ್ರಿಲ್ ಸಾಮಗ್ರಿಯನ್ನು ಬೇರೆ ಬೇರೆ ವಾಹಕಗಳಲ್ಲಿ ಕೇಳಬಹುದು. ಇದರಲ್ಲಿ ವಿದ್ಯಾರ್ಥಿ ತನಗೆ ಬೇಕಾದ ಡ್ರಿಲ್‌ನ ಸಂಖ್ಯೆಯನ್ನು ಡಯಲ್‌ಮಾಡಿದರೆ ಸಾಕು ಆಗ ಅವನ ಇಯರ್ ಫೋನಿನಲ್ಲಿ ಪಾಠವು ಕೇಳಿಬರುತ್ತದೆ. ಬೇರೊಂದು ನಂಬರನ್ನು ಡಯಲ್ ಮಾಡಿದಾಗ ಅವನ ಉತ್ತರ ಮುದ್ರಣವಾಗುತ್ತದೆ. ಮತ್ತೊಂದು ನಂಬರನ್ನು ಡಯಲ್ ಮಾಡಿದಾಗ ತಾನು ಅದನ್ನು ಕೇಳಬಹುದು. ಆದರೆ ಇದು ತುಂಬ ದುಬಾರಿ ವೆಚ್ಚದಿಂದ ಕೂಡಿದ್ದು. ಇದನ್ನು ನಿರ್ವಹಿಸಲು ತರಪೇತಿ ಪಡೆದ ತಂತ್ರಜ್ಞರೇ ಬೇಕಾಗುತ್ತದೆ. ರೇಡಿಯೋ ಪ್ರಸಾರಕೇಂದ್ರದಿಂದ ಸ್ಥಳ ಮತ್ತು ವೆಚ್ಚವನ್ನು ಉಳಿಸಬಹುದಾದರೂ ಅದರಿಂದ ಒಂದುಸಾರಿ ಒಂದೇ ಪ್ರಸಾರವನ್ನು ಕೇಳಬಹುದಾದ ಸೌಲಭ್ಯ ಮಾತ್ರವಿರುತ್ತದೆ.

ಮುದ್ರಣಕ್ಕೆ ಇಲ್ಲಿ ಅವಕಾಶವಿಲ್ಲ. ವಿದ್ಯಾರ್ಥಿಯು ಟೇಪುಗಳನ್ನು ಮತ್ತು ವೈಯಕ್ತಿಕ ಧ್ವನಿಮುದ್ರಣ ಯಂತ್ರವನ್ನು ಹೊಂದಿದ್ದಾಗ ಅವನು ಅದನ್ನು ತನ್ನ ಕೋಣೆಯಲ್ಲಿಯೇ ಕುಳಿತು ಅಭ್ಯಾಸಮಾಡಲು ಸಾಧ್ಯ. ಆದರೆ ದ್ವಿವಾಹಕ ಧ್ವನಿಮುದ್ರಣ ಯಂತ್ರಕ್ಕೆ ಅಪಾರ ವೆಚ್ಚವಾಗುತ್ತದೆ. ಈ ಕಾರಣಗಳಿಂದಾಗಿಯೇ ಪ್ರಯೋಗಶಾಲೆಗಳನ್ನು ಅವುಗಳ ಸಲಕರಣೆಗಳನ್ನು ನಮ್ಮ ಎಲ್ಲಾ ಶಾಲಾಕಾಲೇಜುಗಳು ಪಡೆಯಲು ಸಾಧ್ಯವಾಗಿಲ್ಲ ಎಂದು ಹೇಳಬಹುದು.

ಡಾ. ರಹಮತ್ ತರೀಕೆರೆ

ಎ. ಎನ್. ಮೂರ್ತಿರಾವ್ ಅವರ ಲಲಿತ ಪ್ರಬಂಧಗಳು—ಒಂದು ಚಿಂತನೆ*

ಸಾಕ್ರೆಟೀಸನು ದರ್ಶನವನ್ನು ಸ್ವರ್ಗದಿಂದ ಭೂಮಿಗೆ ತಂದು ಜನರ ನಡುವೆ ವಾಸಿಸುವಂತೆ ಮಾಡಿದನೆಂದು ಜನ ಮಾತಾಡುತ್ತಾರೆ. ಆದರೆ ಅದನ್ನು ನಾನು ಬೌದ್ಧಿಕವಲಯದಿಂದ ಟೀಮೇಜುಗಳ ಸುತ್ತ, ಕಾಫೀಮನೆಗಳಲ್ಲಿ ವಾಸಿಸುವಂತೆ ಮಾಡಿದೆನೆಂದು ಜನ ಹೇಳುವಂತಾಗಬೇಕು. ಇದು ಇಂಗ್ಲೀಷಿನ ಹೆಸರಾಂತ ಪ್ರಬಂಧಕಾರ ಜೋಸೆಫ್ ಅಡಿಸನ್ ತನ್ನ ಪ್ರಬಂಧಗಳನ್ನು ಕುರಿತು ಹೇಳಿದ ಮಾತು. ಇದು ಲಲಿತ ಪ್ರಬಂಧಗಳ ಸ್ವರೂಪಕ್ಕೆ ಸಂಬಂಧಿಸಿದ ಮಾತೂ ಹೌದು. ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಸಾಹಿತ್ಯ ನಿರ್ವಹಿಸಬೇಕಾದ ಹೊಣೆಗಾರಿಕೆ ಬಗೆಗೆ ಗಂಭೀರ ಚರ್ಚೆ ಏನೇ ಇರಲಿ, ಸಾಹಿತ್ಯವು ಒಳ್ಳೆಯ ಬದುಕಿಗೆ ಬೇಕಾದ ಆದರ್ಶ–ಮೌಲ್ಯಗಳನ್ನು ಮಾನವ ಮನಸ್ಸಿನಲ್ಲಿ ನೆಲೆಗೊಳಿಸುವ ಕೆಲಸವನ್ನು ತನ್ನ ಮಿತಿಯಲ್ಲಿ ಮಾಡುತ್ತಿರುವುದು, ಮಾನವತೆಗೆ ಅದು ಸಲ್ಲಿಸುತ್ತಿರುವ ಮಹತ್ತರ ಸೇವೆಯೇ ಆಗಿದೆ. ಈ ಸ್ವರೂಪ ಮತ್ತು ಆಶಯಗಳನ್ನು ಕನ್ನಡದ ಲಲಿತಪ್ರಬಂಧಗಳು ಹೇಗೆ ಮೈತುಂಬಿಕೊಂಡಿವೆ ಎಂದು ನೋಡುವಾಗ ಕುವೆಂಪು, ಕಾರಂತ, ಬೇಂದ್ರೆ, ವಿ.ಸೀ., ಪು.ತಿ.ನ., ಗೊರೂರು, ರಾಕು–ಮೊದಲಾದ ಪ್ರತಿಭೆಗಳು ತೊಡಗಿಕೊಂಡಿದ್ದ ಈ ಪ್ರಕಾರದಲ್ಲಿ ಮೂರ್ತಿರಾಯರ ಸಾಧನೆ ತುಂಬ ಎತ್ತರದ್ದೆಂದು ಅನಿಸುತ್ತದೆ. ಅವರ ಶ್ರೇಷ್ಠತೆಯನ್ನು ಕನ್ನಡ ವಿಮರ್ಶೆ ಒಪ್ಪಿಕೊಂಡಿರುವುದು ಸಹಜವಾಗಿದೆ. ಮೂರ್ತಿರಾಯರ ಪ್ರಬಂಧಗಳು ಶ್ರೇಷ್ಠವಾಗಿರಲು ಎರಡು ಕಾರಣಗಳಿವೆ. ಒಂದು ಇಲ್ಲಿ ಪ್ರತಿಪಾದನೆಗೊಳ್ಳುವ ಮನುಷ್ಯಪ್ರೇಮದ ಬದುಕಿನ ಪ್ರೀತಿಯ ನೆಲೆಯಿಂದ ಉದ್ಭವಗೊಂಡ ಜೀವನದರ್ಶನ. ಎರಡು ಕನ್ನಡದ ಅತ್ಯಂತ ಲಾಲಿತ್ಯಮಯವಾದ ಗದ್ಯದ ಅಪೂರ್ವಶೈಲಿ. ಅದರೊಳಗಿನ ರಸಿಕತೆ, ವಿನೋದಪರತೆ. ಆಡಿಸನ್ ಬಯಸಿದ್ದು

---

* ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಏರ್ಪಡಿಸಿದ್ದ ಮೂರ್ತಿರಾಯರ ಸಾಹಿತ್ಯ ಕುರಿತ ವಿಚಾರಸಂಕಿರಣದಲ್ಲಿ ಓದಿದ ಪ್ರಬಂಧ.

ಇದನ್ನೇ. ಆದರೆ ಕನ್ನಡದ ಪ್ರಧಾನ ಸಾಹಿತ್ಯ ಪ್ರಕಾರಗಳ ಚರ್ಚೆಯಲ್ಲಿ ಲಲಿತ ಪ್ರಬಂಧಗಳನ್ನು ವಿಮರ್ಶೆ ಅವಜ್ಞೆ ಮಾಡಿರುವುದು ನಷ್ಟದ ಸಂಗತಿಯಾಗಿದೆ.

ಸಮಕಾಲೀನ ಬದುಕಿನ ಕಾಳಜಿಗಳನ್ನಿಟ್ಟುಕೊಂಡು ಬರೆಯಹೊರಡುವ ಭಾರತೀಯ ಲೇಖಕನಿಗೆ, ಅವನ ತಾತ್ವಿಕ ತಿಳಿವಳಿಕೆ ತುಸು ಎಡವಿದರೂ ಅಮರಿಕೊಳ್ಳುವ ಉಪಾಧಿಗಳು ಅನೇಕ. ಈ ಹಿನ್ನೆಲೆಯಿಂದ ಮೂರ್ತಿರಾಯರ ಪ್ರಬಂಧಗಳ ತಾತ್ವಿಕ ಧ್ವನಿಯು ಏಕೆ ಗೌರವಾನ್ವಿತವೆಂದರೆ, ಅದರೊಳಗೇ ಕ್ರಿಯಾಶೀಲವಾಗಿರುವ—ಸಂಕುಚಿತ ಸಂಪ್ರದಾಯಗಳನ್ನು ನಿರಾಕರಿಸಿ ಬೆಳೆಯುವ—ವೈಚಾರಿಕತೆ ಪುನರುತ್ಥಾನವಾದವೂ ಸುಧಾರಣಾ ಚಳುವಳಿಗಳೂ ಸ್ವಾತಂತ್ರ್ಯ ಹೋರಾಟಗಳೂ ನಿರ್ಮಿಸಿದ್ದ ಮುಬ್ಬಿನಲ್ಲಿ ಶಂಬಾ, ಶ್ರೀರಂಗ, ಕಾರಂತ, ಕುವೆಂಪು ಅವರಂತೆ (ಇಲ್ಲಿ ಗುಣಾತ್ಮಕ ವ್ಯತ್ಯಾಸಗಳನ್ನು ಗಣಿಸದೆ ಹೇಳುತ್ತಿದ್ದೇನೆ) ಮೂರ್ತಿರಾಯರೂ ತಮಗೊಂದು ಆರೋಗ್ಯಕರವಾದ ತಾತ್ವಿಕ ನಿಲುವನ್ನು ರೂಪಿಸಿಕೊಂಡುಬಿಟ್ಟರು. ಹೀಗಾಗಿ ನವೋದಯದ ಸಂದರ್ಭದಲ್ಲಿದ್ದೂ ಅದರ ಅತಿರೇಕಗಳನ್ನು ಪ್ರೀತಿಯಿಂದಲೇ ನವಿರಾಗಿ ವಿಡಂಬಿಸುವ ಮಾನಸಿಕದೂರ ಅವರಲ್ಲಿ ಕಾಣುವಂತಾಗಿದೆ. ನಮ್ಮ ರಾಷ್ಟ್ರೀಯ ಮತ್ತು ಸಾಹಿತ್ಯಿಕ ಸ್ಥಿತಿಗಳಿಗೆ ತಳುಕುಗೊಂಡು ಇಂಗ್ಲಿಷ್ ರೊಮ್ಯಾಂಟಿಕ್ ಪ್ರಭಾವವು ಪ್ರೇರಕ ಶಕ್ತಿಯಾಗಿ ನಿಂತುಕೊಂಡಿದ್ದಾಗ, ಮೂರ್ತಿರಾಯರು ಪಾಶ್ಚಾತ್ಯ ಸೃಜನೇತರ ವೈಚಾರಿಕ ಬರಹಗಳಿಗೆ ಒಲಿದಿದ್ದರು. ಇದು ತುಂಬ ವಿಶಿಷ್ಟಸಂಗತಿ—ಕನ್ನಡದ ಆಗಿನ ಸಂದರ್ಭದಲ್ಲಿ ಸಾಹಿತ್ಯಕ್ಕಿಂತ ನಮ್ಮನ್ನು ಚಿಂತನಶೀಲರನ್ನಾಗಿಸುವ ವಿಚಾರ ಸಾಹಿತ್ಯದ ಅವಶ್ಯಕತೆಯನ್ನು ಅವರು ಉದ್ದಕ್ಕೂ ಪ್ರತಿಪಾದಿಸಿದರು.[1] (ಎಂತಲೇ ಸಾಕ್ರೆಟಿಸ್ ಅವರಿಗೆ ಪ್ರಿಯವಾಗಿರಬಹುದು.) ರಸೆಲ್ ರಸ್ಕಿನ್, ಬಕೆಟ್, ಬರ್ನಾರ್ಡ್, ಹಾಲ್ಡೇನ್, ರ್ಯಾಷೆಸ್‌ಕಾರ್ಸನ್, ಸರ್ ಜೇಮ್ಸ್ ಜೀನ್ಸ್—ಮೊದಲಾದವರು ಅವರನ್ನು ಸೆಳೆದ ಬರೆಹಗಾರರು.[2] ಮೂರ್ತಿರಾಯರ ಪ್ರಬಂಧಗಳಲ್ಲಿನ ಮಾನವತಾವಾದ ಮತ್ತು ವೈಚಾರಿಕತೆಯ ಸತ್ವಕ್ಕೂ ಈ ಹಿನ್ನೆಲೆಗೂ ಅಂತಃಸಂಬಂಧವಿದೆ. 'ದಿವಾನಖಾನೆಯ ಅಂದಚೆಂದ'ದಲ್ಲಿ ಕಂಡುಬರುವ ಜೀವನಮೀಮಾಂಸೆಯಾಗಲೀ, 'ಹರಕೆಗಳ'ಲ್ಲಿನ ಉಪನಿಷಚ್ಚಿಂತನೆಯಾಗಲೀ (ವಿ.ಸೀ. ಅವರ ಕಸ್ಮೈದೇವಾಯ? 'ದಲ್ಲಿ ಇದಿದೆ.) ಈ ಹಿನ್ನೆಲೆಯಿಂದಲೇ ಪರಿಭಾವಿಸಬೇಕು. ಈ ವೈಚಾರಿಕ ನಿಷ್ಠುರತೆಯನ್ನು 'ಗದ್ಯದ ಭಾವಗೀತೆ'ಗಳಾದ ಸ್ವಾಂತ ಪ್ರಧಾನವಾದ, ಲಲಿತಪ್ರಬಂಧಗಳಲ್ಲಿ ಅನುಸಂಧಾನಿಸಿರುವ ಬಗೆ ಅಚ್ಚರಿಯುಂಟು ಮಾಡುತ್ತದೆ. ಕಾರಂತ, ಶ್ರೀರಂಗ, ವಿ ಸೀ.ಯವರಲ್ಲಿ ಕೊರತೆಯೆನಿಸುವ ಭಾವುಕತೆ

೧. 'ಸಂಸ್ಕೃತಿ ಮತ್ತು ಸಾಹಿತ್ಯ' ಪು. ೨೮೧ (ಈ ಉದ್ಧರಣೆಗಳು ಮೂರ್ತಿರಾಯರ 'ಸಮಗ್ರ ಲಲಿತ ಪ್ರಬಂಧಗಳು' ಕ್ರೈಸ್ಟ್ ಕಾಲೇಜು ಕನ್ನಡ ಸಂಘ, ಬೆಂ. ೧೯೮೮ರ ಆವೃತ್ತಿಗೆ ಸಂಬಂಧಿಸಿದವು)

೨. 'ನಾನು ಮತ್ತು ಓದು'. ಪು. ೩೫೧.

ಆರ್ದ್ರತೆಗಳು ಇಲ್ಲಿ ಸಮೃದ್ಧವಾಗಿರುವುದರಿಂದ ಪ್ರಬಂಧಗಳು ಸಹೃದಯಗಳನ್ನು ಸೂರೆಗೊಳ್ಳುತ್ತವೆ. (ನವೋದಯದಲ್ಲಿ ಭಾವುಕತೆ ಮತ್ತು ವೈಚಾರಿಕತೆಗಳು ಒಬ್ಬನೇ ಲೇಖಕನಲ್ಲಿ ವಿಭಿನ್ನ ಮನಃಸ್ಥಿತಿಗಳಂತೆ ಬೇರೆಯಾಗಿ ಬರುತ್ತವೆ.) ಅಂದರೆ ಮೂರ್ತಿರಾಯರು ರೊಮ್ಯಾಂಟಿಕ್ ಪಂಥದ ಅವಾಸ್ತವಿಕತೆ, ಅಬೌದ್ಧಿಕತೆ, ಹುಸಿ ಕಲ್ಪನಾಮಗ್ನತೆ, ದ್ರವೀಕರಣಗಳಂಥ ಮಿತಿಗಳನ್ನು ಸರಿಸಿ, ಅಲ್ಲಿದ್ದ ಮಾನವೀಯತೆ, ಸಹಾನುಭೂತಿ, ಪ್ರೇಮ, ಉದಾತ್ತತೆಗಳಂಥ ಅಂಶಗಳನ್ನು ಎತ್ತಿಕೊಂಡು ತಮ್ಮ ಸೃಜನಶೀಲ ಮನಸ್ಸನ್ನು ಕಟ್ಟಿಕೊಂಡರು. 'ಹಗಲುಗನಸುಗಳು', 'ಹೂವುಗಳ'ಂಥ ಪ್ರಬಂಧಗಳು ಇಂಥ ಮನಸ್ಸಿನಿಂದಲೇ ಬಂದಿವೆ. ಕನ್ನಡದ ಇತರ ಪ್ರಬಂಧಕಾರರೊಂದಿಗೆ ಮೂರ್ತಿರಾಯರನ್ನಿಟ್ಟು ತೌಲನಿಕವಾಗಿ ನೋಡುವ ಮೂಲಕ ಈ ಪೀಠಿಕೆಯನ್ನು ಮುಗಿಸಬಹುದು. ಗೊರೂರರ ಜನಪ್ರಿಯತೆಯು ಅವರ ಹಾಸ್ಯ ನಿರೂಪಣೆಯಿಂದಲೇ ಹೆಚ್ಚಾಗಿ ಬಂದಿದ್ದು, ಜೀವನದೃಷ್ಟಿಯೊಂದು ಸ್ಫುಟಗೊಳ್ಳುವುದಕ್ಕೆ ಅಲ್ಲಿ ಕೆಲವೊಮ್ಮೆ ಒತ್ತು ಬೀಳುವುದಿಲ್ಲ. ಆದರೆ ಬಹಳ ಸಲ ಅದು ಕೇವಲ ಧ್ವನಿಯಾಗಿ ವಿವರಗಳಲ್ಲಿ ಅಡಗಿರುತ್ತದೆ. ಮೂರ್ತಿರಾಯರಲ್ಲಿ ಜೀವನಧೋರಣೆಯು ತುಂಬ ಸ್ವರಭಾರದಲ್ಲಿ ಮೂರ್ತಗೊಳ್ಳುತ್ತದೆ. ವಾಸ್ತವದ ದುಃಸ್ಥಿತಿಯನ್ನು ಚಿತ್ರಿಸುವಾಗ ಕಾರಂತರ ವ್ಯಗ್ರತೆ ಮತ್ತು ವ್ಯಂಗ್ಯದ ತಿವಿತಗಳು 'ಕಾಂತಾಸಂಹಿತ' ಗುಣವನ್ನು ಕಳೆದುಬಿಡುತ್ತವೆ. ಓದುಗನನ್ನು ಅವರು ಒಲಿಸಿಕೊಳ್ಳುವುದಿಲ್ಲ. ಪುತಿನ ಅವರ ಬುದ್ಧಿಗಮ್ಯವಾದ ಜಿಜ್ಞಾಸುತನ (ಕೆಲವೊಮ್ಮೆ ಧರ್ಮಶ್ರದ್ಧೆಗಳು) ಒಂದು ಸಂವಹನಶೀಲಮಿತಿಯುಳ್ಳ ಸಂಕೀರ್ಣತೆಯನ್ನು ನಿರ್ಮಿಸಿಬಿಡುತ್ತದೆ. ಮೂರ್ತಿರಾಯರು ಗೆಳೆಯನೋ ಗೆಳತಿಯೋ ಹೆಗಲಮೇಲೆ ಕೈಹಾಕಿಕೊಂಡು ಪ್ರೀತಿಯಿಂದ ಮಾತಾಡಿಸುತ್ತ ವಿವೇಕ ತುಂಬುವ ಬಗೆಯಲ್ಲಿ ನಮ್ಮನ್ನು ಆಕರ್ಷಿಸಿಬಿಡುತ್ತಾರೆ.

ಲಲಿತ ಪ್ರಬಂಧಗಳ ಜೀವಂತಿಕೆ ಅನುಭವ ಆತ್ಮೀಯತೆ ಮತ್ತು ಹೇಳುವಿಕೆಯಲ್ಲಿನ ಸಲುಗೆತನಗಳಲ್ಲಿದೆ. ನೆನಪು ಮರುಕಳಿಸುವ ಕಡೆ ಪ್ರಬಂಧಕಾರರು ಕವಿಗಳಾಗುತ್ತಾರೆ. 'ಅಕ್ಕಿಹೆಬ್ಬಾಳು'ವಿನ ಸೌಂದರ್ಯ ಲೇಖಕ ಬಾಲ್ಯಕ್ಕೆ ಮರಳುವಲ್ಲಿ ಇದೆ. (ರಾಕು 'ಗಾಳಿಪಟ'ದಲ್ಲಿ, ಗೋರೂರು 'ಹೇಮಾವತಿ-ತೀರದಲ್ಲಿ' ರಿಚರ್ಡ್ ಸ್ಟೀಲನು Recollection of Childhood ನಲ್ಲಿ ಹೀಗೆ ನೆನಪುಗಳನ್ನು ತೆರೆಯುತ್ತಾರೆ) ಎಲ್. ಎಸ್. ಶೇಷಗಿರಿರಾಯರು 'ಮಿನುಗುಮಿಂಚು' ಸಂಗ್ರಹದ ಪ್ರಬಂಧಗಳನ್ನು ಜಗತ್ತಿನ ಶ್ರೇಷ್ಠ ಪ್ರಬಂಧಗಳ ಸಾಲಿನಲ್ಲಿ ನಿಲ್ಲಿಸುತ್ತಾರೆ.[೧] ಆದರೆ ನನಗನಿಸುವಂತೆ ಇಂಥ ಅರ್ಹತೆಯಿರುವುದಾದರೆ, ಅದು 'ಹಗಲುಗನಸುಗಳು' 'ಆಲೆಯುವ ಮನ' ಸಂಗ್ರಹಗಳ ಪ್ರಬಂಧಗಳಿಗೆ ಇದೆ. 'ಮಿನುಗುಮಿಂಚ'ಲ್ಲಿ

೧. ಹೊಸಗನ್ನಡ ಸಾಹಿತ್ಯ (1976) ಪು. ೨೮೨.

ನಮ್ಮನ್ನು ಸಮ್ಮೋಹನಗೊಳಿಸುವ ಮಾಂತ್ರಿಕತೆಯು ಇಳಿಮುಖವಾದಂತೆ ಅವು ವಸ್ತುನಿಷ್ಠ ರಚನೆಗಳಾಗುತ್ತಾ ನಡೆದಿವೆ. 'ನೀಳಕಂಠ' 'ಅಕ್ಕಿಹೆಬ್ಬಾಳು' 'ದಿವಾನಖಾನೆಯ ಅಂದಚೆಂದ' ಗಳಲ್ಲಿ ನಮ್ಮ ಪಕ್ಷಪಾತವೇಕಾಗುತ್ತದೆಯೆಂದರೆ, ಅಲ್ಲಿ ಓದಿನಿಂದ ಬಂದಿರಬಹುದಾದ ಬೌದ್ಧಿಕಹೆಣಿಗೆಗೆ ಬದಲು ಸ್ವಾನುಭವಗಳ ಆಪ್ತತೆಯಿಂದ ನಿಲ್ಲುವ ಜೀವನಚಿತ್ರ ಮತ್ತು ಅದರ ಮೇಲೆ ಬಿಡಿಸಲ್ಪಡುವ ಜೀವಪ್ರೀತಿಯ ತಾತ್ವಿಕಚಿತ್ರ. The Man in Black, A City Night Piece ಗಳಲ್ಲಿ ಗೋಲ್ಡ್ ಸ್ಮಿತ್ ಹೀಗೇ ದಾರ್ಶನಿಕತೆಯನ್ನು ಜೀವಂತ ಅನುಭವಗಳ ನೆಲೆಯಿಂದ ಚಿಮ್ಮಿಸುತ್ತಾನೆ ಸಾಧಾರಣ ಸಂಗತಿಯ ಸರಳ ನಿರೂಪಣೆಯ ಪಾತಳಿಯಿಂದಲೇ ಬದುಕನ್ನು ಕುರಿತ ತನ್ನ ನಿಲುವುಗಳನ್ನು ಮೂರ್ತಿರಾಯರು ಕವಿತೆಯ ರೂಪದಲ್ಲಿ ಪ್ರಕಟಿಸುತ್ತಾರೆ. ಕನ್ನಡ ಗದ್ಯದ ಶಕ್ತಿ ಗಹನವಾದ ಉದ್ದೇಶದಲ್ಲಿ ಇಲ್ಲಿ ತೊಡಗಿಕೊಂಡಿದೆಯೆಂದು ನಮಗನ್ನಿಸುತ್ತದೆ. ಅಂದರೆ ಬದುಕನ್ನು ಕುರಿತ ಈ ಚಿಂತನೆ ಬಿಡಿಯಾಗಿ ನಿಂತ ಹೇಳಿಕೆಯಾಗುವುದಿಲ್ಲ ಬೇಕನ್ನನ ಅಧಿಕಾರವಾಣಿಯ ನಿಷ್ಠುರ ಚಿಂತನೆಯ ಮುಂದೆ ಗೋಲ್ಡ್ ಸ್ಮಿತ್ತನ ನೋಯುವಿಕೆ, ಮರುಕಗಳು (ಉದಾ : The Man in Black ನಲ್ಲಿ) ನಮಗೆ ಹೆಚ್ಚು ಮಾನವೀಯ ಅನಿಸುತ್ತವೆ. ಹೀಗೆ ಅಕ್ಕಿಹೆಬ್ಬಾಳನ್ನು ಗಮನಿಸಬೇಕು. ಭಾವುಕವಾದ ನೆನಪು-ಕನಸುಗಳೊಂದಿಗೆ ಬರುವ ನಿರೂಪಕ, ಅವುಗಳು ವಸ್ತುಸ್ಥಿತಿಯ ಧಗೆಯಲ್ಲಿ ಉರಿದುಬಿಟ್ಟಮೇಲೆ ಸಿನಿಕನಾಗುವುದಿಲ್ಲ. ಅತ್ಯಂತ ವಾಸ್ತವವಾದಿಯಾಗಿ ಸ್ವೀಕರಿಸಿ, ಬದಲಾದ ಪರಿಸರದಲ್ಲಿ ಮನುಷ್ಯತ್ವ ಎಳೆಗಳನ್ನು ಅರಸಿ, ಜೋಡಿಸಿಕೊಂಡು, ಜೀವತಳೆಯುತ್ತಾನೆ. ಪರಿತಾಪವನ್ನು ಹಾದು ಗಟ್ಟಿಗೊಂಡ ಹೊಸಮನಸ್ಸಿನಿಂದ, ಸಹಾನುಭೂತಿಯಿಂದ ಬದುಕನ್ನು ವಿಶ್ಲೇಷಿಸುವ ಪ್ರಬುದ್ಧನಾಗುತ್ತಾನೆ. ಈ ವಿಶ್ಲೇಷಣೆ ಅತ್ಯಂತ ಮಾನವೀಯವಾಗಿದೆ. ಎಂತಲೇ 'ಅಕ್ಕಿಹೆಬ್ಬಾಳು' ಕನ್ನಡದ ಶ್ರೇಷ್ಠಕೃತಿಯಾಗುತ್ತದೆ. ಲೋಕೋತ್ತರವಾದ ಕನಸುಗಳು ಭಗ್ನವಾಗುವುದಕ್ಕೆ ಪರಿತಪಿಸಿದರೆ ಸಾಲದು, ಅದಕ್ಕೆ ವರ್ತಮಾನದ ವಾಸ್ತವದಲ್ಲಿ ಕಾರಣಗಳನ್ನು ಹುಡುಕಿಕೊಳ್ಳಬೇಕು. ಈ ಶೋಧನೆಯಿಲ್ಲದಾಗ ನಿರಾಶೆ, ವ್ಯಂಗ್ಯ, ನೋವುಗಳು ಹುಟ್ಟುತ್ತವೆ. ಅಡಿಗರ ಕಾವ್ಯದಲ್ಲಿ ಅಥವಾ ಸ್ವಾತಂತ್ರ್ಯೋತ್ತರದ ಆದರ್ಶವಾದಿ ಕಾವ್ಯದಲ್ಲಿ ಇದಿದೆ.

ಅತಿಯಾದ ಶಿಸ್ತು ಬದುಕಿನಲ್ಲಿ ಯಾವತ್ತೂ ಸುಖಕೊಡಲಾರದು ಎಂಬ ಆಶಯವನ್ನು 'ದಿವಾನಖಾನೆ....' ಪ್ರಬಂಧದಲ್ಲಿ ಸಾಮಾನ್ಯವಾಗಿ ಗುರುತಿಸಲಾಗಿದೆ. ಆದರೆ ನನಗನಿಸುವಂತೆ ಪ್ರಬಂಧವು ಈ ಸರಳತಾತ್ವಿಕತೆಯನ್ನು ಮೀರಿ ಮನುಷ್ಯ ಅಸ್ತಿತ್ವದ ಭಾಷ್ಯವಾಗುತ್ತದೆ; ಕೈಗಾರಿಕೀಕರಣದ ಫಲವಾದ ವಸ್ತುವ್ಯಾಮೋಹ, ಆಡಂಬರ, ಮನುಷ್ಯನನ್ನು ಅಳೆಯಲು ಹುಸಿಶಿಷ್ಟಾಚಾರದ ನಾಗರಿಕತೆ ರೂಪಿಸಿಕೊಳ್ಳುತ್ತಿರುವ ಮಾನದಂಡಗಳು, ಮಧ್ಯಮವರ್ಗದವರ ಕೀಳರಿಮೆಗಳು, ಅದನ್ನು ಮೀರಲು ಪಡುವ ಪರಿಪಾಡು—ಇವೆಲ್ಲವನ್ನು ಅದು ಒಳಗೇ ತಿರಸ್ಕರಿಸುತ್ತದೆ.

ಇಂಗ್ಲೀಷ್ ರೊಮ್ಯಾಂಟಿಕ್ ಸಂಪ್ರದಾಯವು ತನ್ನ ಹಿಂದಿನ ಯಂತ್ರವಿಜ್ಞಾನದ ಅಮಾನುಷ ಬೆಳವಣಿಗೆಯ ವಿರೋಧಗಳಲ್ಲೇ ಹುಟ್ಟು ಪಡೆಯಿತೆಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಮನುಷ್ಯ ತನ್ನ ಸುಖದ ಹೆಸರಲ್ಲಿ ತಾನೇ ಉಸಿರುಗಟ್ಟಿಸುವ ವ್ಯವಸ್ಥೆಯೊಂದನ್ನು ಕಟ್ಟಿಕೊಳ್ಳುತ್ತಿರುವುದನ್ನು ಮೂರ್ತಿರಾಯರು ಕರುಣೆಯಿಂದ ವಿಶ್ಲೇಷಿಸುತ್ತಾರೆ. 'ಕಾರ್‌ರಿಪೇರಿ' 'ಟೆಲಿಫೋನ್'ಗಳಲ್ಲಿನ ವ್ಯಂಗ್ಯ, ಈ ಕರುಣೆಯಿಂದಲೇ ಹುಟ್ಟಿದ್ದು. ವಸ್ತುವಾದದಂತೆಯೇ ಸಾಂಪ್ರದಾಯಿಕವಾದ ನಿಯಮವಾದಗಳು ತಮ್ಮ ಅತಿಗಳಲ್ಲಿ ಮನುಷ್ಯನ ಮೇಲೆ ನಡೆಸುವ ಆಕ್ರಮಣಗಳನ್ನು ವಿರೋಧಿಸುತ್ತ, ಆಧುನಿಕತೆ ಮತ್ತು ಜಡಸನಾತನತೆಗಳ ಇಕ್ಕಟ್ಟಿನಲ್ಲಿ ಜೀವಂತಿಕೆಯನ್ನು ರಕ್ಷಿಸುವುದು ಇಲ್ಲಿನ ಪ್ರಬಂಧಗಳ ಒಳಧ್ವನಿಯಾಗಿದೆ. ರಸೆಲ್ ತನ್ನ The Conquest of Happiness ನಲ್ಲಿ ಕೂಡ ಇಂಥದೇ ಇಕ್ಕಟ್ಟಿನಲ್ಲಿ ಮನುಷ್ಯನ ಸುಖ-ಶಾಂತಿಗಳ ದಾರಿಗಳನ್ನು ಅರಸುತ್ತಾನೆ. ಚಲನಕಳೆದುಕೊಂಡ ಸಂಪ್ರದಾಯಗಳನ್ನು ವಿರೋಧಿಸಲು ವೈಜ್ಞಾನಿಕತೆಯನ್ನು ಕೈಬೀಸಿಕರೆಯುತ್ತಲೇ ಅದರ ಜತೆ ಬರುತ್ತಿದ್ದ ಯಾಂತ್ರಿಕತೆಯನ್ನು, ಅದರ ಪ್ರಹಾರಗಳನ್ನು ಬೇರ್ಪಡಿಸಿ ತಡೆಯಬೇಕಾದ ಸಂಕೀರ್ಣ ನಿಲುವನ್ನು ಮೂರ್ತಿರಾಯರು ತಳೆಯುತ್ತಾರೆ. ಹಾಗೆಯೇ, ಪರಂಪರೆಯಲ್ಲಿ ಜೀವಪೋಷಕ ಸತ್ವಗಳನ್ನು ಉಡಿತುಂಬಿಸಿಕೊಳ್ಳಲು ಸಂಪ್ರದಾಯಗಳನ್ನು (ಅವು ಸಾಹಿತ್ಯಕ ಸಂಪ್ರದಾಯಗಳೂ ಹೌದು. ಉದಾ 'ಕ್ಲೇಷಾ ಪ್ರವೀಣರ ಸಾಕ್ಷ್ಯ' ದಂಥ ಪ್ರಬಂಧಗಳಲ್ಲಿ) ಎಚ್ಚರಿಕೆಯಿಂದ ಬೇರ್ಪಡಿಸಬೇಕಾಯಿತು. 'ಬೆಂಗಳೂರು'. 'ಗೌರಜ್ಜಿ' ಇದರ ಸಮರ್ಥ ಪ್ರತಿನಿಧಿಗಳಾಗಿವೆ. ವಿವರಿಸುವುದಾದರೆ, ನಾಗರ ಬದುಕಿನ ವಾಣಿಜ್ಯ ಮನೋಧರ್ಮದ ದುಷ್ಪರಿಣಾಮಗಳನ್ನೂ ಆದರೆ ರಾಜಾಶ್ರಯದ ಹಂಗಿಲ್ಲದೆ ಸಂಸ್ಕೃತಿ-ಕಲೆಗಳು ಸ್ವತಂತ್ರವಾಗಿ ಬೆಳೆಯುವ ಪರಿಸರವನ್ನೂ 'ಬೆಂಗಳೂರಿ'ನಲ್ಲೂ, ಅಗಾಧವಾದ ಕಷ್ಟಗಳನ್ನು ನೀಡುವ ಆದರೆ ಪಾಳೇಗಾರಿ ದಬ್ಬಾಳಿಕೆ, ಅಸಮಾನತೆಗಳನ್ನೂ ಇರಿಸಿಕೊಂಡ ಗ್ರಾಮೀಣ ಭಾರತವನ್ನು 'ಗೌರಜ್ಜಿ'ಯಲ್ಲೂ ಸರಳೀಕರಣ ಮಾಡದೆ ಮೂರ್ತಿರಾಯರು ಕಂಡರಿಸುತ್ತಾರೆ ಎನ್ನುವುದು. ಈ ತಾತ್ವಿಕ ವಿವೇಕ ಬಹಳ ದೊಡ್ಡ ಸಾಧನೆಯೆಂದು ನಾನು ಭಾವಿಸುತ್ತೇನೆ. ಯಾಕೆಂದರೆ ಮಣ್ಣಿನ ಬದುಕಿನ ಪ್ರೀತಿಯು ನಾಗರಿಕ ಪರಿವರ್ತನೆಗಳನ್ನು ಅರ್ಥಮಾಡಿಕೊಳ್ಳದೆ ಬಾಲಿಶವಾದ ವಿರೋಧಕಟ್ಟುವ, ಅಥವಾ ಆಧುನಿಕತೆಯ ಗೀಳು ವಿವೇಚನಾಶೂನ್ಯವಾದ ಆಡಂಬರ ಪ್ರೀತಿಯಾಗುವ ಎರಡು ಪ್ರಪಾತಗಳಂಚಿನಲ್ಲಿ ತೂಗುತ್ತಿದ್ದ ಸಂಕ್ರಮಣಕಾಲದಲ್ಲಿ ನವೋದಯವು ಬೆಳೆಯುತ್ತಿತ್ತು. ರೊಮ್ಯಾಂಟಿಕ್ ಸಂಪ್ರದಾಯದ ಅತಿರೇಕಗಳ ಬಗ್ಗೆ ಎಷ್ಟೇ ಅಸಹನೆಯಿದ್ದರೂ ಅದರ ಪರಿಸರ ಪ್ರೇಮದಂಥ ಗುಣಗಳನ್ನು ಇಲ್ಲಿನ ಪ್ರಬಂಧಗಳು ಗುಪ್ತವಾಗಿ ಸ್ವೀಕರಿಸಿದವೆಂತಲೇ 'ಹೂವುಗಳು,' 'ಗಾಡಿಯ ಪ್ರಯಾಣ' ದಂಥ ಮೂರ್ತ ಪ್ರತಿರೂಪಗಳನ್ನು ಕಾಣಬಹುದಾಗಿದೆ ಈ ಕೆಳಗಿನ ಉಲ್ಲೇಖವನ್ನು ಗಮನಿಸಬೇಕು.

> ಹೂವುಗಳ ಪ್ರಪಂಚ ಪರಿಮಳಯುಕ್ತವಾದ ಮಕರಂದಪ್ರಪಂಚ. ನಮಗೆ ಎಷ್ಟು ಹತ್ತಿರವಾದುದಾದರೂ ನಾವು ನವನಾಗರಿಕತೆಯ ನೂರೆಂಟು ಹಂಬಲಗಳಲ್ಲಿ ಅದನ್ನು ಮರೆತು ದೂರಮಾಡಿಕೊಂಡಿದ್ದೇವೆ.. ನಮ್ಮ ಸ್ತ್ರೀಯರು ಇನ್ನೂ ಹೂವು ಮುಡಿಯುವುದನ್ನು ಬಿಡುವಷ್ಟು ನಾಗರಿಕರಾಗದಿರುವುದು ನಮ್ಮ ಭಾಗ್ಯ. (ಪು. 26)

ಲಲಿತ ಪ್ರಬಂಧಗಳು ಲೇಖಕನ ಧೋರಣೆಯನ್ನು ನಿಸ್ಸಂದಿಗ್ಧವಾಗಿ ಕಟೆದು ತೋರುತ್ತವೆ. ಇಲ್ಲಿನ ಪ್ರಬಂಧಗಳ ವೈಚಾರಿಕವಾದ ಜೀವಪರತೆಯಲ್ಲಿ ಒಂದು ಬಗೆಯ ಸಂಶಯವಾದವಿದ್ದಂತಿದೆ. ಸಂಶಯಪರತೆಯು ಪ್ರಬಂಧಶೈಲಿಯ ಒಂದು ಅಂಗವೂ ಹೌದು. ಎಲ್ಲವನ್ನೂ ಒಪ್ಪುವ ಅಥವಾ ಎಲ್ಲವನ್ನೂ ತಿರಸ್ಕರಿಸುವ ಆಸ್ತಿಕ–ನಾಸ್ತಿಕದಂಥ ಬದ್ಧ ಮನೋಭಾವವು ಪ್ರಾಯಃ ಲಲಿತಪ್ರಬಂಧಗಳಿಗೆ ಹೊಂದುವುದು ಕಷ್ಟವೆನಿಸುತ್ತದೆ. ದುಡುಕು–ವ್ಯಗ್ರತೆಗಳಿಲ್ಲದೆ, ಹರಕೆಗಳ ಬಗ್ಗೆ ಸೂಕ್ಷ್ಮವಾಗಿ, ಸಹಾನುಭೂತಿಯಿಂದ ವಿಶ್ಲೇಷಿಸಲು ಮೂರ್ತಿರಾಯರಿಗೆ ಸಾಧ್ಯವಾಗಿರುವುದು ಪೂರ್ವನಿರ್ಧಾರಗಳಿಲ್ಲದ ತೆರೆದ ಮನಸ್ಸಿರುವುದರಿಂದಲೇ. ಹೀಗಾಗಿ ದೇವರುಗಳನ್ನು ವಿಡಂಬಿಸುತ್ತಲೇ, ದೈವನಂಬಿಕೆಯ ಮೂರ್ತ ಆಚರಣೆಗಳಾದ ಹರಕೆಗಳನ್ನು ಸಮರ್ಥಿಸುವುದು ಒಂದೇ ಪ್ರಬಂಧದಲ್ಲಿ ಬಂದಿದೆ. ಪುತಿನರಲ್ಲಿ ದೈವಶರಣ್ಯತೆಯು ಲೇಖಕನ ನಂಬಿಕೆಯಾಗಿ ನಮ್ಮನ್ನು ನಂಬಿಸಹೊರಡುತ್ತದೆ. ಆದರೆ ಇಲ್ಲಿ ಅದು ಲೇಖಕನ ನಂಬಿಕೆಯಲ್ಲದಿದ್ದರೂ ಪಾತ್ರಗಳ ನಂಬಿಕೆಯಾಗಿ, ಆ ನಂಬಿಕೆಗಳು ಅಪೂರ್ವ ಸಹಬಾಳ್ವೆಯ ಮತ್ತು ಕಷ್ಟಸಹಿಷ್ಣುಗುಣಗಳನ್ನು ಬೆಳೆಸಿರುವುದನ್ನು ಶ್ರದ್ಧೆಯಿಂದ ಚಿತ್ರಿಸಲಾಗಿದೆ ('ಗೌರಜ್ಜ', 'ಹರಕೆಗಳು' 'ಅಕ್ಕಿಹೆಬ್ಬಾಳು'). ಕಾರಂತರೂ ಇಂಥ ಪಾತ್ರಗಳನ್ನು ಗೌರವದಿಂದ ಸೃಷ್ಟಿಸಿದ್ದಾರೆ. ಆದರೆ ವೈಯಕ್ತಿಕವಾಗಿ ಕಾರಂತರ ಜೀವನವಾದವು—ಮೂರ್ತಿರಾಯರ ಸಂದೇಹವಾದ ಮತ್ತು ಜೀವನ ಶ್ರದ್ಧೆಗಳ ಸಂಬಂಧಗಳಿಗೆ ಹೋಲಿಸಿದರೆ—ಅಲೌಕಿಕ ಶಕ್ತಿಯ ಕಲ್ಪನೆಗಳ ಧಿಕ್ಕರಿಸಿದ ವಿಜ್ಞಾನ ನಿಷ್ಠುರತೆಯುಳ್ಳದ್ದು. ಇಲ್ಲಿ ಮುಖ್ಯವಾನುದು ಯಾವುದೇ ವಾದಗಳಲ್ಲ. ಅವುಗಳ ಮೂಲಕ ಶೋಧನೆಗೊಳ್ಳುವ ಜೀವನಪ್ರೀತಿಯ ನಿರಂತರತೆ, ದೈವನಂಬುಗೆಯಿಂದ ಅನ್ಯಹಿಂಸೆಮಾಡದೆ ಬದುಕುತ್ತಿರುವ ತಲೆಮಾರಿಗೆ, ನಂಬಿಕೆಗಳನ್ನು ಕಸಿದುಕೊಂಡಾಗ ಅಥವಾ ಅಲ್ಲಾಡಿಸಿದಾಗ ಆಗುವ ಅನಾಥಸ್ಥಿತಿ, ಈ ನಂಬಿಕೆಗಳು ಕೆಲವೊಮ್ಮೆ ನೇತ್ಯಾತ್ಮಕವಾಗಿ ಆಕ್ರಮಣಶೀಲತೆಯನ್ನು ಪಡೆವ ಸಂಭವಗಳು–ಈ ಎಲ್ಲದರ ಐತಿಹಾಸಿಕ ತಿಳುವಳಿಕೆಯಲ್ಲಿ ಡಯಲೆಕ್ಟಿಕಲ್ ಆಗಿ ಚಿಂತಿಸಿ, ದೂರಗಾಮಿಯಾದ ಆರೋಗ್ಯಕರ ಮೌಲ್ಯಸೂಚಿಯನ್ನು ಸಿದ್ಧಪಡಿಸುವುದಾದರೆ ಪ್ರಾಯಃ ಭಾರತದಲ್ಲಿ ಅದು ದೊಡ್ಡ ಸಾಂಸ್ಕೃತಿಕ ಜನಾಬ್ದಾರಿಯಾಗುವುದು. ಆಸ್ತಿಕತೆಯಿಲ್ಲದೆಯೂ ಬದುಕಬಹುದಾದ ಮಾನವೀಕರಣಗೊಂಡ ವೈಚಾರಿಕನೆಲೆಗೆ ಇಡೀಸಮೂಹವನ್ನು ಕೊಂಡೊಯ್ಯುವ ಮಹತ್ವಾಕಾಂಕ್ಷೆ ಕಾರಂತರ 'ಬಾಳ್ವೆಯೇ ಬೆಳಕ'ಲ್ಲಿದೆ. ತೇಜಸ್ವಿಯವರೂ ಧರ್ಮವನ್ನು

ವಿಜ್ಞಾನ ಮತ್ತು ವೈಚಾರಿಕತೆಗಳು ರಿಪ್ಲೇಸ್ ಮಾಡಬೇಕೆಂದು ಇಚ್ಛಿಸುತ್ತಾರೆ. ಜೀವನಶ್ರದ್ಧೆಗಾಗಿ, ಸುಖಕ್ಕಾಗಿ, ಧಾರ್ಮಿಕ ನಂಬುಗೆಗಳನ್ನು ತಳಮಟ್ಟದಿಂದ ವಿಶ್ಲೇಷಿಸದೆ ಅಥವಾ ಅವಿಲ್ಲದ ಸಂದರ್ಭದಲ್ಲಿ ಪರ್ಯಾಯವಾದದ್ದೇನಿರಬೇಕೆಂದು ಯೋಚಿಸದೆ ಒಂದಿಷ್ಟು ಸರಳವಾಗಿಯೇ ಮೂರ್ತಿರಾಯರು ಹರಕೆಗಳನ್ನು ಸಮರ್ಥಿಸುತ್ತಾರೆ. ಇಂಡಿಯಾದಲ್ಲಿ ದೈವ–ಧರ್ಮದ ನಂಬುಗೆಗಳು ದಯನೀಯವಾದ ಸಾಮಾಜಿಕ ಅಧಃಪತನಗಳಿಗೂ ಕಾರಣವಾಗಿರುವುದರಿಂದ, ನಿರಪೇಕ್ಷವಾಗಿ ಸುಖವಾದಕ್ಕೆ ಈ ಸಮರ್ಥನೆಗೆಯ್ಯುವುದರ ಪರಿಣಾಮಗಳನ್ನು ಯೋಚಿಸುವಂತಾಗುತ್ತದೆ. 'ಹರಕೆ'ಗಳಲ್ಲಿನ ಸಂದೇಹವಾದದಲ್ಲಿ ಅಥವಾ ಜೀವನವಾದದಲ್ಲಿ ಈ ಸೂಕ್ಷ್ಮತೆಗಳಿದ್ದಂತಿಲ್ಲ.

ಹೀಗಿದ್ದೂ ಇಲ್ಲಿನ ಪ್ರಬಂಧಗಳ ಒಟ್ಟು ಮನೋಧರ್ಮವು ವೈಚಾರಿಕಮಾನವತೆಯೆಂಬುದು ತುಂಬ ಅಪೂರ್ವ ಸಂಗತಿಯಾಗಿದೆ. ಸಂಪ್ರದಾಯಗಳ ಮುರಿಯುವಿಕೆಯನ್ನು ಚಿತ್ರಿಸುವಾಗಿನ ಪ್ರಬಂಧದ ಒಳಸಂತೋಷಗಳನ್ನು ಈ ಕಾರಣಕ್ಕೇ ಗುರುತಿಸಬೇಕು (ಪು. ೭೫ 'ಹೋಟೆಲುಗಳು') ಅಥವಾ ವ್ಯಂಗ್ಯದಲ್ಲಿಯೇ ಅವನ್ನು ತಿರಸ್ಕರಿಸುವ ಧ್ವನಿಪೂರ್ಣಶೈಲಿಯನ್ನು ಗಮನಿಸಬೇಕು. ಗೌಂಜ್ಜಿ ಮಾವನ ವರ್ಣನೆ ಹೀಗಿದೆ:

> ನರಸಯ್ಯನವರ ಮಾತೆಂದರೆ ಊರಿನಲ್ಲಿ ಸಿಂಹಾಜ್ಞೆ ; ಅವರ ಅಪ್ಪಣೆಯಿಲ್ಲದೆ ಕಾಲುವೆಯ ಏರಿಯ ಮೇಲೆ ದನಬಿಡುವುದು, ಹುಲ್ಲು ಕೊಯ್ಯುವುದು ಅಂದರೇನು? ಅವರು ಮೆಂಬರಾದ ಮೇಲೆ ಊರಿನ ಎಲ್ಲಾ ಹಕ್ಕೂ ಅವರಿಗೇ ಸೇರಿಹೋಯಿತೆಂದು ಆ ಹಳ್ಳಿಯವರು ಭಾವಿಸಿದರೋ ಏನೋ. (ಪು. ೩).

ಇದೊಂದು ಪ್ರಾಸಂಗಿಕವಾಗಿ ಎಸೆದ ಮಾತೆಂದು ನಾನು ಭಾವಿಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿನ ವ್ಯಕ್ತಿಗೌರವ, ಸಮಾನತೆ, ಸ್ವಾತಂತ್ರ್ಯಗಳ ಅರಿವಿರುವ ಮತ್ತು ಭೂಮಾಲಿಕ ದರ್ಪಗಳನ್ನು ವಿರೋಧಿಸುವ ಸಮಾಜವಾದಿ ಮನಸ್ಸೊಂದು ಈ ವ್ಯಂಗ್ಯದ ಹಿಂದೆ ಮಿಡಿಯುತ್ತಿದೆ. ಶ್ರೀ, ಡಿವಿಜಿ, ಮಾಸ್ತಿಯವರು ತಮ್ಮೆಲ್ಲ ಹಿರಿಮೆಗಳೊಂದಿಗೆಯೂ ರಾಜನಿಷ್ಠೆಯೊಳಗಿನ ಅಪ್ರಜಾಪ್ರಭುತ್ವೀಯ ಸಂಗತಿಗಳನ್ನು ಜತೆಯಲ್ಲೇ ಮನಗಾಣದೆಹೋದ ಹೊತ್ತಿನಲ್ಲಿ ಮೂರ್ತಿರಾಯರು ರಾಜಪ್ರಭುತ್ವ ಮತ್ತು ದಾಸ್ಯಕುರಿತು ಸ್ವೋಪಜ್ಞವಾಗಿ ಯೋಚಿಸಿದ್ದರು ('ಬೆಂಗಳೂರು' ಪು. ೩೫೦) ಎಂತಲೇ ಮೂರ್ತಿರಾಯರ ವೈಚಾರಿಕತೆಯನ್ನು 'ಮಾನವೀಕರಣ'ಗೊಂಡಿದ್ದು ಎಂದು ಹೇಳಿದ್ದು.

ಇಂಗ್ಲಿಷಿನ ಅತಿಶ್ರೇಷ್ಠ ಪ್ರಬಂಧಗಳೆನ್ನಲಾದವುಗಳೊಂದಿಗೆ ಈ ಪ್ರಬಂಧಗಳು ನಿಲ್ಲಬಲ್ಲವು ಎಂದು ನಮಗನಿಸುವಾಗಲೂ ಗೋಲ್ಡ್‌ಸ್ಮಿತನು ತೋರುವ ಸಮಕಾಲೀನ

ನಾನ ಅನುಭವ ಮತ್ತು ಕಾಳಜಿಗಳು ಇಲ್ಲಿ ಕಡಿಮೆಯೇಕಿವೆ? ಸಮಷ್ಟಿಯ ಸಂಕಟಗಳನ್ನು ಪರಿಭಾವಿಸುವಲ್ಲಿ ಉತ್ಕಟವಾದ ಸಹಾನುಭೂತಿ-ಚಿಂತನೆಗಳು ನಮ್ಮ ಸಂದರ್ಭದಲ್ಲಿ ಯಾಕೆ ಕ್ಷೀಣವಾಗಿವೆ? ನಮ್ಮ ಸಾಮಾಜಿಕ ವ್ಯವಸ್ಥೆಯು ಮತ್ತೊಂದು ಜನವರ್ಗದ ಅನುಭವ-ನೋವುಗಳಿಗೆ ದನಿಯಾಗಲು ಅಡ್ಡಿಯಾಗುತ್ತದೆಯೆ? ಎಂಬ ಪ್ರಶ್ನೆಗಳು ಹುಟ್ಟುತ್ತವೆ. 'ದಲಿತ'ರ ಕೊಳೆಗೇರಿ ವರ್ಣನೆ ಮಾಡುವ ಪುತಿನ ('ಬಿಸಿಲಿನಲ್ಲಿ ಬೀಳುದಿಂಗಳ ನೆನಪು'—ಉಚಲು ಮರದ ಕೆಳಗೆ) ಆ ಸ್ಥಿತಿಯ ಮೂಲ ಕಾರಣಗಳನ್ನು ಒಂದೇ ಕ್ಷಣವೂ ನೆನೆಯದಿರುವುದು ಸೋಜಿಗವೆನಿಸುತ್ತದೆ. ಆದರೆ ಗೋಲ್ಡ್‌ಸ್ಮಿತ್ ತನ್ನ ನಾಡಿನ ಅನಾಥರ ದರಿದ್ರರ ಬಗೆಗೆ ಬರೆಯುವಾಗ ಒಟ್ಟು ದೇಶದ ಮನೋಧರ್ಮದ ವಿಷಯವನ್ನು ಪರಿಶೀಲಿಸುತ್ತಿರುತ್ತಾನೆ. ಅವನ National Prejudices ಪ್ರಬಂಧ ಗಮನಿಸಬೇಕು. ವ್ಯಕ್ತಿಮಟ್ಟದಲ್ಲೇ ಯೋಚಿಸುವುದು ನಮ್ಮ ಲೇಖಕರ ದೌರ್ಬಲ್ಯವಾಗುತ್ತದೆಯೆ? ಗೊರೂರರ ಪ್ರಬಂಧಗಳ ಸಾಚಾ ಆದ ಗ್ರಾಮೀಣಾನುಭವ ಕೂಡ ಸಾಮಾಜಿಕವಾದ ಒಳನೋಟಗಳನ್ನು ಯಾಕೆ ಕೊಡುವುದಿಲ್ಲ? 'ಬೆಸ್ತರ ಕರಿಯ'ನ ವ್ಯಕ್ತಿತ್ವ ವೈಭವೀಕರಣವು ಹೀಗಾಗಿ ಯಥಾಸ್ಥಿತಿ ಪೋಷಕವೆನಿಸಿಬಿಡುತ್ತದೆ. ಆದರೆ ಕಾರಂತರು ಗ್ರಾಮೀಣ ಸಮಾಜವು ಮನುಷ್ಯ ಸಂಬಂಧಗಳನ್ನು ನಾಶಗೊಳಿಸುವ-ಬದಲಾವಣೆಯ-ಹಾದಿಯಲ್ಲಿರುವುದನ್ನು ವಸ್ತುನಿಷ್ಠವಾಗಿ ಚಿತ್ರಿಸುತ್ತಾ ಪ್ರಕಟಿಸುವ ವಿಷಾದವು (ಹಳ್ಳಿಯ ಹತ್ತು ಸಮಸ್ತರು) ತುಂಬ ರಚನಾತ್ಮಕವೆನಿಸುತ್ತದೆ. ಮೂರ್ತಿರಾಯರ ಪ್ರಬಂಧಗಳ ಜಗತ್ತು ಶಿಷ್ಟವೂ, ನಾಗರವೂ, ಮಧ್ಯಮವರ್ಗದ್ದೂ ಆದುದು; ಕಾರಂತ, ಗೊರೂರು, ಕುವೆಂಪು ಇವರ ಅನುಭವ ಜಗತ್ತು ಜನಪದದಲ್ಲಿ ಬೇರುಬಿಟ್ಟು ತಾನೇ ಒಂದು ಶಕ್ತಿಯಾಗಿದೆ. ಹೀಗಾಗಿ ಇಲ್ಲಿ ಬೆಸ್ತರಕರಿಯ, ಕಾಲುಸಾಬಿ, ಪಾಟಾಳಿಮುಮ್ಮಯ್ಯರಂಥ ಸಮುದಾಯದಲ್ಲಿ ಚಲಾವಣೆಗೊಳ್ಳುವ ವ್ಯಕ್ತಿತ್ವಗಳು ಇಲ್ಲವಾಗಿವೆ. ಆದರೆ ವಿದ್ವತ್‌ಲೋಕದ ಸೀಮಿತನೆಲೆಯಲ್ಲಿ ಅರ್ಥವಂತಿಕೆಯನ್ನು ಪ್ರಕಟಿಸುವ ಇಲ್ಲಿನ ಸ್ಮೃತಿಚಿತ್ರಗಳಾದರೂ, ಬದುಕಿನ ಪ್ರೀತಿತತ್ತ್ವವನ್ನು ಅನಂತ ರೂಪಗಳಲ್ಲಿ ವ್ಯಕ್ತಮಾಡುವ ಕಾರಣಕ್ಕಾಗಿಯೇ ಬಂದಿವೆ (ಶ್ರೀ ಟಿ.ಎಸ್. ವಿ., ಎಂ.ಆರ್. ಶ್ರೀ.)

ಮಾನವನ ಅಳಲಿಗೆ ದಿವ್ಯೌಷಧ ಸಹಮಾನವರ ಪ್ರೀತಿ, ಸಹಾನು
ಭೂತಿ...ಯಾವನೊಬ್ಬನ ಜೀವನವೂ ಅವನದು ಮಾತ್ರವಲ್ಲ.
ಇನ್ನೊಬ್ಬರ ನೆರವಿಲ್ಲದೆಯೆ ಬದುಕುತ್ತೇವೆ ಎನ್ನುವುದು ಅಸಾಧ್ಯ.
ಸಾಧ್ಯವಾದರೂ ಹಾಗೆ ಬದುಕಿದ್ದರಿಂದ ನಮ್ಮ ಬದುಕು ಬರಡಾಗುತ್ತದೆ.
('ನೀಳಕಂಠ' ಪು ೩೧೬-೩೧೭).

ಒಟ್ಟಾರೆಯಾಗಿ ಇಲ್ಲಿನ ಪ್ರಬಂಧಗಳು ಜೀವನಪ್ರೇಮದ ಒಂದೇ ರಾಗವನ್ನು ಹಾಡುವ ಬಗೆಬಗೆಯ ದನಿಗಳೆಂದೂ, 'ನೀಳಕಂಠ'ವು ಇದನ್ನು ತಾರಸ್ವರದಲ್ಲಿ ನುಡಿಸುತ್ತದೆ ಎಂದೂ ಮನವರಿಕೆಯಾಗುತ್ತದೆ. 'ಕಾಮನ್ ರೂಮಿನ', 'ಕೆನ್ಸಿಂಗ್ಟನ್ ಪಾರ್ಕಿ'ನ

ಪಾತ್ರಗಳು ಬದುಕಿನ ಶ್ರೀಮಂತಿಕೆಯ, ಉಲ್ಲಾಸದ, ವಿಭಿನ್ನ ಮುಖಗಳಂತಿವೆ. 'ಹೂವು'ಗಳಿಂದ 'ದೆವ್ವ'ಗಳವರೆಗೆ ಎಲ್ಲವೂ ಜೀವನಕೇಂದ್ರಿತವಾದ ವಿಚಾರಗಳಿಂದ ತುಂಬಿವೆ. ಆದರೆ ಸ್ಮೃತಿ ಚಿತ್ರಗಳ ಬಗೆಗೆ ಒಂದು ಮಾತು ದ್ವಂದ್ವಗಳು, ಸಣ್ಣತನಗಳು ಮೊದಲಾದ ಮಿತಿಗಳೊಂದಿಗೆಯೇ ವ್ಯಕ್ತಿಯೊಂದರ ಉದಾತ್ತತೆ, ಹಿರಿತನಗಳ ಚಿತ್ರವು ಬಂದರೆ, ನಮಗೆ ಹೆಚ್ಚು ಮಾನುಷಸಹಜವೆಂದು ಅನಿಸುತ್ತದೆ. ವಿಶ್ವೇಶ್ವರಯ್ಯನವರನ್ನು ಕುರಿತ ಇಲ್ಲಿನ ಚಿತ್ರವು ಆರಾಧಕ ಮನೋಧರ್ಮದಿಂದ ಕೂಡಿದ್ದು, ಏಕಮುಖವಾಗಿದೆ. ನಾಡನ್ನು ಸಮೃದ್ಧಿ ಮಾಡಿದವರಾದರೂ ಮಿಲ್ಲರ್ ಆಯೋಗ ಸಂಬಂಧವಾಗಿ ವಿಶ್ವೇಶ್ವರಯ್ಯನವರು ತಳೆದ ಸಂಕುಚಿತ ನಿಲವು ಇತಿಹಾಸದ ದಾಖಲೆಯಾಗಿದೆ. ಅದು ಇಲ್ಲಿಲ್ಲ. ಪಾಶ್ಚಾತ್ಯೀಕರಣದ ಬಗೆಗೆ ವಿಶ್ವೇಶ್ವರಯ್ಯನವರ ಮೇಲಿನ ಆಪಾದನೆಯನ್ನು, ಅವರು ಆಚರಿಸುತ್ತಿದ್ದ ಮತೀಯ ಆಚರಣೆಗಳಂಥ ನಿದರ್ಶನಗಳ ಮೂಲಕ ಅವನ್ನು 'ಭಾರತೀಯ ಸಂಸ್ಕೃತಿ' ಎಂಬರ್ಥದಲ್ಲಿ ಮೂರ್ತಿ ರಾಯರು ಯಾಕೆ ಸಮರ್ಥಿಸಿದರೋ ತಿಳಿಯದು.

ಲಲಿತೆಯ ಪಾತ್ರವು (ಪ್ರಬಂಧಗಳ ಸ್ವರೂಪಕ್ಕೆ ಸಾಂಕೇತಿಕವಾದ ವಿಶೇಷಣವೂ ಆಗಿದ್ದು,) ಅಡಿಸನ್ನಿನ ಡಿಕವರ್ಲಿ ಅಥವಾ ಗೋಲ್ಡ್ ಸ್ಮಿತನ ಬೋಟಬ್ಸರಂತೆ ಲೇಖಕನ ಆಲೋಚನೆಗೆ ನೆಪವಾಗುವ ಪಾತ್ರವೇನಲ್ಲ. ಅದೊಂದು ಸ್ವಭಾವದ ಸಂಕೇತ ಎನ್ನಬಹುದು. 'ಕುರುಡ' ಪ್ರಬಂಧದಲ್ಲಿ ನಿಜವಾದ ಸಹಾನುಭೂತಿಯ ಅಂದರೆ ಮನುಷ್ಯನ ನೋವುಗಳಲ್ಲಿ ಒದಗುವ ಕ್ರಿಯಾತ್ಮಕ ಮನುಷ್ಯ ಸಹಾಯದ ಹೊಸ ಪಾಠವೊಂದನ್ನು ಆಕೆ ಕಲಿಸುತ್ತಾಳೆ. ತಾಂತ್ರಿಕವಾಗಿ ಪ್ರಬಂಧಗಳ ಆತ್ಮೀಯ ಗುಣವನ್ನು ಹೆಚ್ಚಿಸಿರುವ ಲಲಿತೆಯ ಪಾತ್ರವು, ತಾತ್ವಿಕವಾಗಿ ಆದರ್ಶಪ್ರೇಮದ, ಜಗತ್ತಿನ ಚೆಲುವನ್ನು ಹೆಚ್ಚಿಸುವ, ಮನೋಧರ್ಮವಾಗಿದೆ. ದಾಂಪತ್ಯದ ಹಾಸ್ಯ, ಸರಸ, ಸಿಟ್ಟು, ಕೊಂಕುಗಳಲ್ಲಿನ ಅನಂತರೂಪದ ಪ್ರೀತಿಯಿಂದ ಈ ಪ್ರಬಂಧಗಳಿಗೆ ಪ್ರೇಮಕಾವ್ಯದ ಸ್ವರೂಪ ಬಂದುಬಿಟ್ಟಿದೆ. ಇದು 'ಮೈಸೂರು ಮಲ್ಲಿಗೆ'ಯ ಸುಕುಮಾರ ಜಗತ್ತಿಗೆ ಸಂವಾದಿಯಾದುದು. ಧ್ವನಿಪೂರ್ಣವಾದ ಇಲ್ಲಿನ ಶೃಂಗಾರಾಭಿವ್ಯಕ್ತಿಯು, ಪ್ರೇಮ–ಕಾಮದ ಹೇವರಿಕೆ–ಚಪ್ಪರಿಸುವಿಕೆಗಳಿಲ್ಲದೆ ಹೇಗೆ ಮಾಸದ ಚಿರಂತನತೆಯನ್ನು ಪಡೆಯುತ್ತದೆಯೆಂಬುದನ್ನು ನೋಡಬೇಕು :

> "ಇವನ್ನೇಕೆ ತೆಗೆದೆ ? ಎಲ್ಲಾ ಅರಿಸಿನಕುಂಕುಮ ಆಗಿಹೋಯಿತಲ್ಲ ! ನಿನ್ನ ಪುಸ್ತಕ ಇಡಬಾರದಿತ್ತೆ ?" ಎಂದು ಕೇಳಿದ್ದಕ್ಕೆ, ಲಲಿತೆ ನನ್ನ ಪಾಲಿನ ಕೊಬ್ಬರಿ ಸಕ್ಕರೆಯನ್ನು ಸ್ವಲ್ಪಸ್ವಲ್ಪನಾಗಿ ಬಾಯಿಗೆ ಹಾಕಿಕೊಳ್ಳುತ್ತಾ "ನನ್ನ ಪುಸ್ತಕ ಕೊಳೆಯಾಗಿ ಹೋಗುತ್ತೆ ಅಂತ ಅದನ್ನೇ ಇಟ್ಟೆ" ಎಂದಳು. ಸತ್ಯಸಂಧೆ ನನ್ನ ಲಲಿತೆ. ನನಗೆ ಏನೂ ಹೇಳುವುದಕ್ಕೂ ತೋರಲಿಲ್ಲ. ಅಷ್ಟುಹೊತ್ತಿಗೆ ಕೊಬ್ಬರಿ ಸಕ್ಕರೆಯೆಲ್ಲಾ

ಅದೃಶ್ಯವಾಗಿ ಲಲಿತೆಯು ಕುಟಿಯ ಮೇಲೆ ಸ್ವಲ್ಪಮಾತ್ರ ಕಾಣುತ್ತಿತ್ತು.
ನನಗೆ ಚರಪು ಸಿಕ್ಕಿದ್ದು ಅಷ್ಟೇ. ('ಲಲಿತೆಯ ವಿದ್ಯಾಭ್ಯಾಸ' ಪು. ೪೮.)

ಈ ಶೈಲಿಯ ಆತ್ಮೀಯತೆಯೂ ತುಂಬ ಅಪರೂಪದ್ದಾಗಿದೆ ಇದನ್ನು ಚಾರ್ಲ್ಸ್ ಲ್ಯಾಂಬನ ಆತ್ಮೀಯತೆಗೆ ಹೋಲಿಸುವುದು[೪]—ಇಲ್ಲಿ ನಿರ್ಮಾಣವಾಗುವ ಭಾವಗೀತಾತ್ಮಕ ಆವರಣದ ದೃಷ್ಟಿಯಿಂದಲೂ—ಉಚಿತವಾಗಿದೆ. ಯಾಕೆಂದರೆ ಸಮಾಜದ ಅರೆಕೊರೆಗಳನ್ನು ಸೇರ್ಪಡಿಸುವ ಆಶಯದ ರೀಚರ್ಡ್‌ಸ್ಟೀಲ್‌ಗೆ ಹೋಲಿಸಿದರೆ ಲ್ಯಾಂಬ್ ತನ್ನ ಒಳಗನ್ನು ತೋಡಿಕೊಳ್ಳುವ ಮಾಧ್ಯಮವಾಗಿ ಕೂಡ ಪ್ರಬಂಧವನ್ನು ಬಳಸಿದ. ಮೂರ್ತಿರಾಯರ 'ಅಕ್ಕಿಹೆಬ್ಬಾಳು' ವಿನಂಥ ಪ್ರಬಂಧಗಳಲ್ಲೂ ಇದೇ ಉದ್ದೇಶವಿದೆ. ಲ್ಯಾಂಬನ Dream's Childrenನಲ್ಲಿ ಮಕ್ಕಳು ಕನಸನ್ನು ಒಡೆಯುವಂತೆಯೇ ಅಕ್ಕಿಹೆಬ್ಬಾಳಿನ ನಿರೂಪಕನೂ ಸ್ವಪ್ನವನ್ನೊಡೆದು ಬರುತ್ತಾನೆ ಈ ಪ್ರಬಂಧದ ಪ್ರೇರಣೆಗಳು ಸ್ಟೀಲನ Recollections of Childhood ನಲ್ಲಿವೆಯೇ? (ಎರಡೂಕಡೆ ತಂದೆಯ ಸಾವಿನ ಘಟನೆಯಿಂದ ನಿರೂಪಕರು ಬಾಲ್ಯಕ್ಕೆ ಮರಳುತ್ತಾರೆ) ಇದ್ದರೂ 'ಅಕ್ಕಿಹೆಬ್ಬಾಳು' ಪೂರ್ಣಸ್ವಂತಿಕೆಯಿರುವ ಕನ್ನಡದ ಶ್ರೇಷ್ಠ ಪ್ರಬಂಧವಾಗಿದೆ.

ಇಲ್ಲಿನ ಹಾಸ್ಯದ ನವಿರು (ಪ್ರಭುಶಂಕರ ಅವರಲ್ಲಿ ಅನಂತರ ಇದನ್ನು ಕಾಣುತ್ತೇವೆ) ಗೊರೂರರಂತೆ ಸ್ಫೋಟಕವಲ್ಲ. ತುಂಬಾ ಸೂಕ್ಷ್ಮವಾದದ್ದು. ವಿವರಗಳಲ್ಲಿ ಹುದುಗಿಸುವ ಈ ಬಗೆಯ ಹಾಸ್ಯದ ಅಭಿಜಾತ ಶೈಲಿಯೆನ್ನಬಹುದಾದುದು. ಅಡಗಿಕೊಂಡೇ ಅನುಭವಕ್ಕೆ ಬರುವ ಇದು ಆಪ್ಯಾಯಮಾನವಾದದ್ದು. (ಕಾಲಾಂತರ ಸ್ಥಾಯಿಸಿಟ್ಟಿಗೆ ಕೆಲವೊಮ್ಮೆ ದಕ್ಕದ ನಿರ್ಲಿಪ್ತತೆ–ವಸ್ತುಪರಿಶೀಲನೆಗೆ ನಿರ್ಮಾಣಗೊಳ್ಳುವ ಸೃಜನಶೀಲ ಅಂತರ–ಇಲ್ಲಿ ಸಾಧ್ಯವಾಗಿದೆ.) ಚಿಂತನೆಯ ಒಲವಿರದ ಹರಟೆಯ ಮಿತಿಗಳೂ ಇಲ್ಲಿಲ್ಲ. ಆದರೆ ಬುದ್ಧಿಗಮ್ಯವಾದ, ಸ್ವಕೀಯ ಅಂಶಗಳಿಲ್ಲದ ಪ್ರಬಂಧಗಳು ('ತೆರೆದ ಮನ') ಲಾಲಿತ್ಯವಿಲ್ಲದೆ–ಜೀಕನ್ನನ ಪ್ರಬಂಧಗಳಂತೆ–ತರ್ಕಶುಷ್ಕವಾಗಿವೆ. ಅನುಭವದ ಬುತ್ತಿಯನ್ನು ಬಿಚ್ಚದ ಕಡೆ, 'ನಾನು' ಭಾಗವಹಿಸದ ಕಡೆಯೆಲ್ಲ ಹೀಗಾಗಿದೆ. ಸಾಹಿತ್ಯ ವಿಮರ್ಶೆಯಂಥ ಪ್ರಬಂಧಗಳಲ್ಲಿ ಮೂರ್ತಿರಾಯರ ವಿಮರ್ಶನ ಸ್ಮೋಪಜ್ಞತೆ (ಪು. ೨೯೮, ೩೨೮, ೩೪೦) ಯಿದೆ, ಆದರೆ ಇವು ಲಲಿತಪ್ರಬಂಧಗಳ ಮರ್ಯಾದೆಯೊಳಗೆ (ಕಲಾತ್ಮಕ ನಿರೂಪಣೆಯಿದ್ದರೂ) ಬರುವುದಿಲ್ಲ. 'ಅಹಂ'ನ ಸರ್ವನಾಮಗಳಿಂದಲೇ ಬೆಳೆಯುವ (ಇದು ಓದುಗನಲ್ಲಿ ನಿಕಟತೆಯುಂಟುಮಾಡುವ ತಂತ್ರವೂ ಹೌದು) ಪ್ರಬಂಧಗಳು. ಅಕೃತಕ ವಿನಮ್ರತೆ, ಕೊಂಕು, ಆತ್ಮಚಿತ್ರಣ, ತನ್ನ ಮಿತಿಗಳನ್ನು ನಿರ್ಭಿಡೆಯಿಂದ ಹೇಳಿಕೊಳ್ಳುವಿಕೆ, ಅಪಾರ ಓದು–ತಿಳಿವಳಿಕೆ, ಹಾಸ್ಯ–ತಾತ್ತ್ವಿಕ ಗಾಂಭೀರ್ಯ–ಈ ಎಲ್ಲವನ್ನು ಕಣಕದಂತೆ ಮಿದಿದು ಹುಟ್ಟುವ ಕಾರಣದಿಂದ ವಿಚಿತ್ರ ಆಕರ್ಷಣೆಯನ್ನು ಪಡೆಯುತ್ತವೆ. ಈ ಪ್ರಕಾರದ ಸುಮಾರು ಒಂದು

[೪] ವರದರಾಜ ಹುಯಿಲಗೋಳ: ಲಲಿತ ಪ್ರಬಂಧಗಳು (೧೯೬೧) ಪು. ೨೭.

ಶತಮಾನದ ಚರಿತ್ರೆಯಲ್ಲೂ* ಮೂರ್ತಿರಾಯರ ಸಾಧನೆಯನ್ನು ಹಿಂದಿಕ್ಕುವ ಪ್ರಯತ್ನಗಳೇ ಇಲ್ಲದಂತಾಗಿದೆ.

ಇಂಥ ಸಮೃದ್ಧ ಪರಂಪರೆಯಿದ್ದೂ ಈ ಪ್ರಕಾರ ಕನ್ನಡದಲ್ಲೇಕೆ ಬತ್ತಿಹೋಗುತ್ತಿದೆ? ಇಂಗ್ಲಿಷ್ ಸಾಹಿತ್ಯದ ದೋಹದದಿಂದಲೇ ಚಿಗುರಿದ ಭಾವಗೀತೆ, ಸಣ್ಣಕತೆ, ಕಾದಂಬರಿಗಳಿಗಿಲ್ಲದ ಯಾವ ತೊಡಕು ಈ ಕುಡಿಯ ಬೆಳವಣಿಗೆಗೆ ಅಡ್ಡಿನಿಂತಿದೆ? ಸಾಹಿತ್ಯ ಅಕಾದೆಮಿ ಪ್ರಕಟಿಸುತ್ತಿರುವ ವಾರ್ಷಿಕ ಸಂಕಲನಗಳನ್ನು ಕಂಡಾಗ ಲಲಿತಪ್ರಬಂಧಗಳು ಎಂಥ ಬರಗಾಲದ ಇಕ್ಕಟ್ಟಿನಲ್ಲಿವೆಯೆನಿಸುತ್ತದೆ. ಇಷ್ಟು ನಿಜ. ಕತೆ-ಕಾದಂಬರಿಗಳ ಪ್ರಾಮುಖ್ಯ, ಜನಪ್ರಿಯತೆಯನ್ನೆಂದೂ ಲಲಿತಪ್ರಬಂಧಗಳು ಅನುಭವಿಸಲಿಲ್ಲ. ಕತೆಕಾದಂಬರಿಗಳಂತೆ ನಮ್ಮ ಸಾಮಾಜಿಕವಾಸ್ತವದ ಸಂಘರ್ಷಮಯ ಬದುಕನ್ನು ಧಾರಣಮಾಡಿಕೊಳ್ಳುವ ಶಕ್ತಿಯನ್ನೂ ಇವು ಪ್ರದರ್ಶಿಸಲಿಲ್ಲ. ಪ್ರಾಯಃ ಇದು ಕಷ್ಟವೂ ಹೌದು ಭಾವಗೀತೆಯಂತೆ 'ಸ್ವ' ಅಂಶನಿವೇದನೆಗೆ ಆದ್ಯತೆಯಿರುವ ಇಲ್ಲಿ ವ್ಯಕ್ತಿನಿಷ್ಠ ವರ್ತುಲವೊಂದು ಸುತ್ತಿಕೊಳ್ಳುವುದರಿಂದ ಸಾಮಾಜಿಕ ಅನುಭವಗಳ ಲೇಖಕರಿಗೆ ಇದು ಆಕರ್ಷಕವಾಗಲಾರದು. ಅನುಭವದಷ್ಟೇ ಇಲ್ಲಿಗೆ ಅಪಾರ ಓದು ಚಿಂತನೆಗಳೂ ಮುಖ್ಯ. ಈಗ ಹೊಸಲೇಖಕರು ಈ ಸಿದ್ಧತೆಯಿಂದ ಬರುವ ನಿರೀಕ್ಷೆಯನ್ನೂ ಮಾಡಲಾಗದು. ಕವಿಯ ಭಾವುಕತೆ, ಹಾಸ್ಯಗಾರನ ವಿನೋದ, ತತ್ವಜ್ಞಾನಿಯ ಆಳ ಎಲ್ಲವನ್ನು ಇಟ್ಟುಕೊಂಡವರಿಗೇ ಆಹ್ವಾನಿಸುವಂತಿರುವ ಪ್ರಬಂಧಗಳಿಗೆ ಹೊಸ ಪ್ರತಿಭೆಗಳು ತೊಡಗಿಕೊಳ್ಳಲಿಲ್ಲ. ತೊಡಗಿಕೊಂಡರೆ ಬರೀ ಹರಟೆಗಾರರೇ – ವಾಣಿಜ್ಯ ಪತ್ರಿಕೆಗಳಿಗೆ ಬರೆಯುವವರು. ನವೋದಯದ ಸಂದರ್ಭದಲ್ಲೇ ಕನ್ನಡದ ಅತ್ಯುತ್ತಮ ಪ್ರಬಂಧಗಳು ಹುಟ್ಟಿರುವುದನ್ನು ಗಮನಿಸಿದರೆ, ನವೋದಯದ ಎಷ್ಟೋ ಆರ್ದ್ರಗುಣಗಳನ್ನು ನಿರಸನಗೊಳಿಸಿದ ನವ್ಯಚಳುವಳಿ (ಭಾವಗೀತೆ ಆಗ ಕೀಳರಿಮೆಪಟ್ಟಿತಲ್ಲ.) ಆ ವಾತಾವರಣವನ್ನು ಅಧೈರ್ಯಗೊಳಿಸಿತು. ಪ್ರತಿಭಟನೆಯ ಸತ್ವಕ್ಕೆ ಚಾಲನೆಕೊಟ್ಟಿರುವ ಬಂಡಾಯ ಸಂದರ್ಭವೂ ಲಲಿತ ಪ್ರಬಂಧಗಳ 'ಆರಾಮ' ಸ್ಥಿತಿಯನ್ನು ಹೊಂದಿಲ್ಲ. ಇದೇನು ದುಃಖದ ಸಂಗತಿಯಾಗಬೇಕಿಲ್ಲ. ಲಲಿತ ಪ್ರಬಂಧಗಳಲ್ಲಿ ನಮ್ಮನ್ನು ವೇದನೆಗೊಳಪಡಿಸುವ ಅಂಶಗಳೇ ಕಮ್ಮಿ. ಯಾಕೆಂದರೆ ವರ್ತಮಾನದ ವೈಷಮ್ಯಗಳನ್ನು ಹಿಡಿಯುವ ಶಕ್ತಿ ಅದಕ್ಕೆ ಕಡಮೆ. ಆದರೆ ಅದು ನಮ್ಮನ್ನು ಆನಂದಪಡಿಸುತ್ತಲೇ ವಿಚಾರಶೀಲರನ್ನಾಗಿಮಾಡಬಲ್ಲದು. ಮೂರ್ತಿರಾಯರ ಪ್ರಬಂಧಗಳು ಈಗಲೂ ನಮಗೆ ಮಹತ್ವವೆನಿಸುವುದಾದರೆ ಅದು ಈ ಗುಣದಿಂದಲೇ. ಆದರೆ ಸತ್ವಯುತ ಕೃತಿಯು ಪರಂಪರೆಯ ಪುನರ್ಮೌಲ್ಯಮಾಪನಕ್ಕೆ ಪ್ರೇರಿಸುವ (ಎಲಿಯಟ್‌ನ ಮಾತು) ಅವಕಾಶ ಈ ಪ್ರಬಂಧಗಳೆದುರು ಇನ್ನೂ ಬಂದಿಲ್ಲ.

* ಗೋವಿಂದಪೈಗಳ ಪ್ರಕಾರ ೧೯೦೦ ರಲ್ಲಿ ಪ್ರಕಟವಾದ ಮುದ್ದಣನ 'ಜೋಗುಳ' ಮೊದಲ ಪ್ರಬಂಧ, ಕನ್ನಡದ ಮೊರೆ, ಪು. iii.

ಎಚ್. ಎಚ್. ಗಂಗಾಧರಾಚಾರ್

ಬಿಕ್ಕು

ವಾಸ್ತವತೆಯ ನಿಷ್ಠುರತೆಗೆ ಜೀವ ಬೆಚ್ಚುತ್ತಿದೆ
ಕ್ರಮೇಣ ಭಾವನೆಗಳು ಬತ್ತಿ ಹೋಗುತ್ತಿವೆ.
ಇದು ನಿಸರ್ಗನಿಯಮವೋ ಸ್ವಯಂಕೃತಾಪರಾಧವೋ ಬಗೆಹರಿಯದೆ
ತಲೆ ಗೊಂದಲಪುರವಾಗಿದೆ.
ಕ್ಷುಲ್ಲಕಗಳಿಗೆಲ್ಲ ಬೆಲೆಕೊಡುತ್ತ ಬಂದದ್ದರಿಂದ
ಶೂನ್ಯ ಒಂದಲ್ಲದೆ ಮತ್ತೇನೂ ಉಳಿಯುವುದಿಲ್ಲವೆಂಬ ತಿಳಿವು
ಕ್ರಮೇಣ ಮೂಡಿ ಮೇಲೇಳುತ್ತಿದೆ.
'ನಾನು...ನನ್ನದು' ಎಂಬ ಮೋಹಸಮುದ್ರದಲ್ಲಿ ಮುಳುಗಿದ ಮನಸ್ಸು
ಮೇಲೇಳಲು ಶತಪ್ರಯತ್ನ ಮಾಡುತ್ತಿದೆ ; ಆದರೂ ಸೋಲುತ್ತಿದೆ.
ಆಸೆಗಳೋ ಸವರಿದಂತೆಲ್ಲ ಮತ್ತೆ ಮತ್ತೆ ಚಿಗುರುವ ಕಳ್ಳಿಗಿಡಗಳು,
ಏಕೋ ಮೈ ಕಾವೇರುತ್ತಿಲ್ಲ :
ರಕ್ತದೊಳಗಿಂದ ಕ್ರಾಂತಿ ಹೊರಹೊಮ್ಮುತ್ತಿಲ್ಲ.
ಈ ಕಷ್ಟಗಳು ಸಾಗರದ ಅಲೆಗಳ ಹಾಗೆ
ಬದುಕಿರುವವರೆಗೂ ಬೆಂಬತ್ತುವ ಭೂತಗಳು.
ಆದರೂ 'ಸತ್ತವರಿಗಾಗಿ ಅತ್ತು ಫಲವೇನು' ಎಂದು
ಬದುಕಿರುವ ಭಾಗ್ಯಕ್ಕಾಗಿ ಸಂಭ್ರಮಿಸಬೇಕಾಗಿದೆ.
ಯಾವ ಕರ್ಮಯೋಗಿ ಬಂದು ಮನಮಂದಿರದಲ್ಲಿ ನೆಲೆಸುವನೋ?
ತುಕ್ಕು ಹಿಡಿದ ಬದುಕಿಗೊಂದು ದಿಕ್ಕು ತೋರಿಸುವನೋ?
ಕತ್ತಲೆಯ ತೆರೆ ನಿರಂತರ ಸರಿಸುತ್ತ ಬಂದರೂ
ಬೆಳಕು ಹೆಚ್ಚುಕಾಲ ನಿಲ್ಲುತ್ತಿಲ್ಲ.
ಬೀಸುವ ಬಿರುಗಾಳಿಗೆ ಹಾರಿಹೋಗುವ ತರಗೆಲೆಗಳ ಹಾಗೆ
ಗುರಿಗಳೆಲ್ಲ ದಿಕ್ಕಾಪಾಲಾಗಿ ಚದರಿವೆ.
ಸಮಸ್ಯೆಗಳೋ ಬಿಡಿಸಿದಂತೆಲ್ಲ ನೇಯ್ದುಕೊಳ್ಳುವ ಜೇಡನ ಬಲೆಗಳು
ನರನರಗಳೆಲ್ಲ ಬಿಗಿದು. ಉದ್ವೇಗಗೊಂಡು ಒದರಾಡಿದರೂ
ಯಥಾಸ್ಥಿತಿ ಬದಲಾಗುತ್ತಿಲ್ಲ ; ಬಸಿರಲ್ಲಿ ಹೊಸ ಚಿಗುರು ಮೂಡುತ್ತಿಲ್ಲ.
ಮುದಿಚರ್ಮದೊಳಗೆ 'ಹರೆಯ' ತುಂಬುವ ನಿರಂತರ ಪ್ರಯತ್ನಕ್ಕೆ
ಫಲ ದೊರೆಯುತ್ತಿಲ್ಲ.
ಆಯುಸ್ಸು ಕ್ಷೀಣಿಸುತ್ತಿದೆ ; ಕಾಲ ಕೊಲ್ಲುತ್ತದೆ–ನಿಜ.
ಅದಕ್ಕಾಗಿ ಆತಂಕವಿಲ್ಲ : ಭಯ ಕ್ರೋಧಗಳಿಲ್ಲ
ಆದರೆ ಸಾಧನೆ ಶೂನ್ಯವಾಗುವುದನ್ನು ಕಂಡಾಗ ಮಾತ್ರ
ಬಿಕ್ಕುವ ಮನಸ್ಸನ್ನು ಸಾಂತ್ವನಗೊಳಿಸುವ ಶಬ್ದಗಳಿಲ್ಲ.
ನೊಗಕ್ಕೆ ಹೆಗಲುಕೊಟ್ಟು ಎಳೆಯುವುದಷ್ಟೇ ಕರ್ಮವೆಂದುಕೊಂಡಿದ್ದ ಕವಿರ್ಗೆ
ನೊಗದ ಮೇಲೇಕೆ ಆಸೆ ಹುಟ್ಟಿತೋ?
ಪಾಶಗಳು ಬಿಗಿದು ಜೀವ ಅಲ್ಲಾಡುತ್ತಿರಲು ಮೊನೆಯಿಡುವುದಾರಿಗೆ ?
ಬಯಲೆಲ್ಲ ಬಂದೀಖಾನೆಯಾಗಿರುವಾಗ
ಓಡುವುದೆಲ್ಲಿಗೆ?

ಡಾ. ಬಸವರಾಜ ಸಬರದ

ಮಹಿಳೆಯರ ಕಾವ್ಯದಲ್ಲಿ ಲೈಂಗಿಕ ಸ್ವಾತಂತ್ರ್ಯ

ಕನ್ನಡ ಕಾವ್ಯವನ್ನು ಮಹಿಳೆಯರ ಕಾವ್ಯ–ಪುರುಷರ ಕಾವ್ಯ ಎಂದು ವಿಭಜಿಸುವ ಅಗತ್ಯವಿಲ್ಲ. ಆದರೆ ಶತಮಾನಗಳಿಂದ ಅಕ್ಷರ ಜಗತ್ತಿನಿಂದ ವಂಚಿತಳಾಗಿದ್ದ ಮಹಿಳೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೇಗೆ ಸಂವೇದಿಸುತ್ತಾಳೆಂಬುದು ತುಂಬಾ ಕುತೂಹಲಕಾರಿ ಸಂಗತಿಯಾಗುತ್ತದೆ. ಕನ್ನಡ ಕಾವ್ಯದಲ್ಲಿ ಇತ್ತೀಚೆಗೆ ಮಹಿಳೆಯರು ಹೆಚ್ಚು ಹೆಚ್ಚು ತಮ್ಮನ್ನು ಗುರುತಿಸಿಕೊಳ್ಳತೊಡಗಿದಾಗ, ಕನ್ನಡ ಕಾವ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಹೊಸ ಮಗ್ಗಲುಗಳು ಈಗ ಕಾಣಿಸತೊಡಗಿವೆ. ಹೀಗೆ ಬರೆಯುತ್ತಿರುವ ಅನೇಕ ಮಹಿಳೆಯರ ಕಾವ್ಯದಲ್ಲಿ ತುಂಬಾ ವೈವಿಧ್ಯಮಯವಾಗಿ ಕಾಣಿಸಿಕೊಂಡಿರುವ ಲೈಂಗಿಕ ಸ್ವಾತಂತ್ರ್ಯದ ಬಗೆಗಿನ ಚರ್ಚೆ ಇಲ್ಲಿಯ ಪ್ರಮುಖ ಉದ್ದೇಶವಾಗಿದೆ

ಲೈಂಗಿಕ ಸ್ವಾತಂತ್ರ್ಯಕ್ಕೆ ವೇದಕಾಲದಿಂದಲೂ ಮಹತ್ವವಿರುವುದು ಕಂಡು ಬರುತ್ತದೆ. ಮಾತೃಪ್ರಧಾನ ವ್ಯವಸ್ಥೆಯಿದ್ದಾಗ ಮಹಿಳೆಯರಿಗೆ ಹೆಚ್ಚಿನ ಲೈಂಗಿಕ ಸ್ವಾತಂತ್ರ್ಯ ಸಿಕ್ಕಿದ್ದರೆ, ಪಿತೃಪ್ರಧಾನ ವ್ಯವಸ್ಥೆಯಲ್ಲಿ ಆ ಸ್ವಾತಂತ್ರ್ಯ ಪುರುಷರಿಗೆ ಹೆಚ್ಚಾಗಿ ದೊರಕಿದೆ. ಧರ್ಮ–ಅರ್ಥ–ಮೋಕ್ಷಗಳ ಜತೆಗೆ 'ಕಾಮ' ಪುರುಷಾರ್ಥದಲ್ಲಿ ಸೇರಿದೆ. ಮದುವೆಯ ಸಂದರ್ಭದಲ್ಲಿ ಮಾಡುವ ಪ್ರತಿಜ್ಞೆಯಲ್ಲಿ 'ಧರ್ಮೇಚ, ಅರ್ಥೇಚ, ಕಾಮೇಚ' ಎಂದು ಮಂತ್ರ ಹೇಳುತ್ತ ಧರ್ಮ–ಅರ್ಥದಲ್ಲಿ ಸರಿಪಾಲು ಕೊಡುವುದರ ಜತೆಗೆ ಕಾಮದಲ್ಲೂ ಸರಿಪಾಲು ಕೊಡುತ್ತೇನೆ ಎಂದು ಪುರುಷರಿಂದ ಮಾಡಿಸುವ ಪ್ರತಿಜ್ಞೆ ಲೈಂಗಿಕ ಸ್ವಾತಂತ್ರ್ಯದ ಮಹತ್ವವನ್ನು ಹೇಳುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಲೈಂಗಿಕ ಸ್ವಾತಂತ್ರ್ಯಕ್ಕೆ ಮಹತ್ವವಿದೆಯೇ ಹೊರತು ಲೈಂಗಿಕ ಸ್ವೇಚ್ಛಾಚಾರಕ್ಕಲ್ಲ. ಆದರೆ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ವಂಚಿತಳಾಗಿದ್ದಾಳೆ. ಇದುವರೆಗಿನ ಕನ್ನಡ ಶಿಷ್ಟ ಕಾವ್ಯದಲ್ಲಿ ಮಹಿಳೆ ಈ ಬಗೆಗೆ ಮನಬಿಚ್ಚಿ ಮಾತನಾಡಿಲ್ಲ. ಹಾಗೆ ಅಭಿವ್ಯಕ್ತಿಸುವ ಅವಕಾಶಗಳೇ ಆಕೆಗೆ ಕಡಿಮೆ. ನೇಮಿಚಂಪ್ರನ 'ಲೀಲಾವತಿ' ಕಾವ್ಯದ ಹಾಗೆ, ರತ್ನಾಕರವರ್ಣಿಯ 'ಭರತೇಶ ವೈಭವ'ದಂತೆ. ಮಹಿಳೆ ಶಿಷ್ಟ ಕಾವ್ಯದಲ್ಲಿ ಎಲ್ಲಿಯೂ ಲೈಂಗಿಕ ವರ್ಣನೆಗೆ ಕೈಹಾಕಿಲ್ಲ. ಅಕ್ಕಮಹಾದೇವಿ ವಚನಗಳಲ್ಲಿ ಅಲ್ಲಲ್ಲಿ ಲೈಂಗಿಕ ಪ್ರತಿಮೆಗಳು ಬರುತ್ತವೆಯಾದರೂ

ಲೈಂಗಿಕ ಸ್ವಾತಂತ್ರ್ಯದ ಅಭಿವ್ಯಕ್ತಿ ಅಲ್ಲಿಲ್ಲ. ಅದು ಮೂಲಭೂತವಾಗಿ ಭಕ್ತಿಸಾಹಿತ್ಯವಾದ್ದರಿಂದ ಅಲ್ಲಿಯ ವಸ್ತುವಿನ ವಿಶ್ಲೇಷಣೆಯೇ ತುಂಬಾ ಭಿನ್ನವಾಗಿ ಕಾಣುತ್ತದೆ. ಹೀಗಾಗಿ ಕನ್ನಡದ ಶಿಷ್ಟ ಕಾವ್ಯದಲ್ಲಿ ಲೈಂಗಿಕ ಸ್ವಾತಂತ್ರ್ಯದ ಬಗೆಗೆ ಮಹಿಳೆಯರು ಮನಬಿಚ್ಚಿ ಮಾತನಾಡಿದ್ದು ಹೊಸಗನ್ನಡ ಕಾವ್ಯದ ಇತ್ತೀಚಿನ ಸಂದರ್ಭಗಳಲ್ಲಿ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಆದರೆ ಜನಪದ ಕಾವ್ಯದಲ್ಲಿ ಮಾತ್ರ ಮಹಿಳೆ ಲೈಂಗಿಕ ಸ್ವಾತಂತ್ರ್ಯದ ಬಗೆಗೆ ಮನಬಿಚ್ಚಿ ಮಾತನಾಡಿದ್ದಾಳೆ.

ಜನಪದ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಲೈಂಗಿಕ ಸ್ವಾತಂತ್ರ್ಯದ ಅವಕಾಶ ಸ್ವಲ್ಪವಾದರೂ ಇರುವುದರಿಂದ ಅದು ಅವರ ಹಾಡುಗಳಲ್ಲಿ ತ್ರಿಪದಿಗಳಲ್ಲಿ ಅಭಿವ್ಯಕ್ತಗೊಂಡಿದೆ. ಆದರೆ ಶಿಷ್ಟ ಸಂಸ್ಕೃತಿಯಲ್ಲಿ ಅದಕ್ಕೆ ಅವಕಾಶವೇ ಇಲ್ಲದಿರುವುದರಿಂದ ಹಳಗನ್ನಡ–ನಡುಗನ್ನಡ ಕಾವ್ಯದಲ್ಲಿ ಅಂತಹ ಅಭಿವ್ಯಕ್ತಿ ಮಹಿಳೆಯರಿಂದ ಬರುವುದು ಅಸಾಧ್ಯವಾಗಿದೆ. ಜನಪದ ಸಂಸ್ಕೃತಿಯಲ್ಲಿ ಮಹಿಳೆಗೆ ದುಡಿಯುವ ಹಕ್ಕಿನ ಜತೆಗೆ ಲೈಂಗಿಕ ಸ್ವಾತಂತ್ರ್ಯದ ಅನುಕೂಲತೆಯೂ ಇದೆ. ಅಲ್ಲಿ ಆಕೆ ವಿಧವೆಯಾದರೆ ಮತ್ತೊಬ್ಬನನ್ನು ಮರುಮದುವೆಯಾಗಬಹುದು. ಇಂತಹ 'ಉಡುಕಿ' ಪದ್ಧತಿಗಳು ಜನಪದರ ಬದುಕಿನಲ್ಲಿ ಹೇರಳವಾಗಿ ನಡೆದಿವೆ.

"ಗೆಣೆಯ ಸತ್ತ ಸುದ್ದಿ ಹೊಳಿಯ ಆಚೀಲೆ ಕೇಳಿ
ಹೊತ್ತಂತ ಕೊಡ ಒಗದಾಳ ಆ ಬಾಲಿ ತೊಟ್ಟಂಥ
ಕುಬಸ ಹರದಾಳ ॥"

ಈ ತ್ರಿಪದಿಯಲ್ಲಿ ಬರುವ 'ಕುಬಸ ಹರಿಯುವದು' 'ಕೊಡ ಒಡೆಯುವುದು' ಗೆಣೆಯ ಸತ್ತನೆಂದು ತಿಳಿಯುವ ಸಂಕೇತಗಳಾಗಿವೆ. "ಚಿನ್ನದ ಕೊಡವಲ್ಲ ರನ್ನದ ಕೊಡವಲ್ಲ ಮಣ್ಣಿನ ಕೊಡಕ್ಯಾಕಿಷ್ಟು ಅಳತೀಯೆ ?"

"ಅತ್ತೆ ಕಾಣದ್ದಾಗೆ ಮಾವ ನೋಡದ್ದಾಗೆ
ಒಪ್ಪದಲಿ ನಾನು ಬಳಸಿದಂಥ । ಹರವಿ
ನುಚ್ಚಾಯ್ತು ನೀರ ಹೊಳೆಯಾಗೆ ॥"

ಎಂದು ಆಕೆ ಸಂಕೇತಪೂರ್ಣವಾಗಿ ಉತ್ತರ ಕೊಡುತ್ತಾಳೆ. ಅತ್ತೆ–ಮಾವ ನೋಡದ ಹಾಗೆ, ಅವರಿಗೆ ತಿಳಿಯದ ರೀತಿಯಲ್ಲಿ ಇಲ್ಲಿಯ ಮಹಿಳೆ ಬೇರೊಬ್ಬ ಗೆಣೆಯನೊಂದಿಗೆ ಲೈಂಗಿಕ ಸುಖಪಡೆದ ಅನುಭವ ವ್ಯಕ್ತವಾಗಿದೆ. ಜನಪದ ಮಹಿಳೆಗೂ ಈ ಬಗೆಗೆ ಪೂರ್ಣ ಸ್ವಾತಂತ್ರ್ಯವಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಂತಹ ಪಾರತಂತ್ರ್ಯದ ಸಂದರ್ಭದಲ್ಲಿಯೂ ಆಕೆ ತನ್ನ ಸಹಜಬಯಕೆಗಳಿಗೆ ದಾರಿಮಾಡಿ ಕೊಡುವುದು. ಅನೇಕ ಬಿಕ್ಕಟ್ಟುಗಳ ನಡುವೆಯೇ ಬದುಕಿನ ಸುಖ–ದುಃಖಗಳನ್ನರಸುವುದು ತುಂಬಾ ಮಹತ್ವದ ಸಂಗತಿಯಾಗುತ್ತದೆ.

"ಗೆಣೆಯಾಬರತಾನಂತ ಹೊರಗ ಮಲಗಿರತೀನಿ
ಕರು ಹೋಗ್ಯಾದಂತ ಬಂದ್ಹೋಗೊ । ಓ ಗೆಣೆಯಾ
ಕರುವೀನ ಸೇಡು ತೆಗೆದ್ಹೋಗೊ ॥"

"ಹಿತ್ತಲ ಜಿಗಿಬ್ಯಾಡ ಕೈಮುಂಡಿ ಮುರದಾವ
ಸುತ್ತಾದ ಬಾರೊ ಸುಭೆದಾರ। ನನ್ನೊರತು
ಮತ್ತಾರು ಇಲ್ಲ ಮನೆಯಾಗ॥"

ಈ ಮುಂತಾದ ತ್ರಿಪದಿಗಳು ಜನಪದ ಮಹಿಳೆಯರ ಲೈಂಗಿಕ ಸ್ವಾತಂತ್ರ್ಯ ವನ್ನು ನಿಚ್ಚಳವಾಗಿ ಪ್ರಕಟಿಸುತ್ತವೆ ಭಯದ ವಾತಾವರಣದಲ್ಲೂ ಬದುಕಿಗಾಗಿ ಹುಡುಕಾಡುವ ಇಲ್ಲಿಯ ಕ್ರಿಯೆ ತುಂಬಾ ಮುಖ್ಯವಾದದ್ದೆನಿಸುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಕನ್ನಡ ಕಾವ್ಯದಲ್ಲಿ ಅನೇಕ ಹೊಸ ಬೆಳವಣಿಗೆಗಳು ನಡೆದಿವೆ. ಪ್ರಜಾಪ್ರಭುತ್ವದ ಅವಕಾಶಗಳಿಂದ, ಇಂಗ್ಲೀಷ ಸಾಹಿತ್ಯದ ಪ್ರಭಾವದಿಂದ ಕನ್ನಡದ ಲೇಖಕಿಯರೂ ಬೆಳೆಯತೊಡಗಿದ್ದಾರೆ. ವಿಭಿನ್ನ ಸಂಸ್ಕೃತಿ ಗಳ ಹಿನ್ನೆಲೆಯಲ್ಲಿ ಅವರು ತಮ್ಮ ಸಂಸ್ಕೃತಿಯ ಒಳನೋಟಗಳನ್ನು ಕಂಡುಕೊಳ್ಳ ತೊಡಗಿದ್ದಾರೆ. ವಿದ್ಯಾವಂತರಾದ ಅನೇಕ ಮಹಿಳೆಯರು ಸಮಾನ ಬದುಕನ್ನು ಕೇಳ ತೊಡಗಿದ್ದಾರ. ಡಿ. ಎಚ್. ಲಾರೆನ್ಸ್, ಫ್ರಾಯ್ಡ್ ಈ ಮುಂತಾದವರನ್ನು ಅಭ್ಯಸಿಸಿದ ನಂತರ ಹೊಸಗನ್ನಡದ ಕವಯಿತ್ರಿಯರು ಹೊಸದನಿ ತೆಗೆದಿದ್ದಾರೆ. ಲೈಂಗಿಕ ಸ್ವಾತಂತ್ರ್ಯ, ವಿವಾಹವಿಲ್ಲದ ಹೆರಿಗೆ, ವೇಶ್ಯಾ ಸಮಸ್ಯೆ, ಗರ್ಭ ತೆಗೆಸಿಕೊಳ್ಳುವ ಸ್ವಾತಂತ್ರ್ಯ—ಈ ಮುಂತಾದ ವಿಷಯಗಳನ್ನು ಇಂದಿನ ಕವಯಿತ್ರಿಯರು ತಮ್ಮ ಕವಿತೆಗಳಲ್ಲಿ ಅಭಿವ್ಯಕ್ತಿಸವಾಗ ತೆಗೆದುಕೊಳ್ಳುವ ನಿರ್ಣಯಗಳು, ಅಲ್ಲಿಯ ಕಲಾತ್ಮಕತೆ, ಕುತೂಹಲ ಇವೆಲ್ಲಾ ತುಂಬ ಮುಖ್ಯವಾಗುತ್ತವೆ.

ಲೈಂಗಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ನವ್ಯಕವಿಗಳ ಕೊಡುಗೆ ಗಮನ ಸೆಳೆಯುವಂತಹದ್ದಾಗಿದೆ. ನವೋದಯದವರ ಶೃಂಗಾರ, ನವ್ಯದವರ ಲೈಂಗಿಕ ಸ್ವಾತಂತ್ರ್ಯದಂತಹ ವಿಷಯಗಳನ್ನು ಅಭಿವ್ಯಕ್ತಿಸುವ ಸಂದರ್ಭದಲ್ಲಿ ಅನೇಕ ಕವಯಿತ್ರಿಯರ ಕವಿತೆಗಳು ವಾಚ್ಯಾರ್ಥವನ್ನು ಮೀರಿ ಬೆಳೆಯುವುದೇ ಇಲ್ಲ. ಇಂತಹ ಅವಕಾಶ ಮಹಿಳೆಯರಿಗೆ ದೊರೆತ ಮೊದಲ ಅನುಭವವಾಗಿರುವುದರಿಂದ ಅನೇಕ ಮಿತಿಗಳ ನಡುವೆಯೂ ಇಂದಿನ ಕವಯಿತ್ರಿಯರ ಬೆಳವಣಿಗೆಯನ್ನು ಗುರುತಿಸುವುದು ಅನಿವಾರ್ಯವಾಗಿದೆ.

ಪಂಜಾಬಿ ಕವಯಿತ್ರಿ ಅಮೃತಾ ಪ್ರೀತಮ್ ಮತ್ತು ಮಲೆಯಾಳಿ-ಇಂಗ್ಲಿಷ್ ಕವಯಿತ್ರಿ ಮಾಧವಿ ಕುಟ್ಟಿಯವರ ಕಾವ್ಯದಲ್ಲಿ ಲೈಂಗಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ದಂತೆ ಅನೇಕ ಒಳನೋಟಗಳಿವೆ. ಅಂತಹ ಸೂಕ್ಷ್ಮದೃಷ್ಟಿ ಕನ್ನಡ ಕವಯಿತ್ರಿಯರಲ್ಲಿ ಅಷ್ಟಾಗಿ ಕಾಣುವುದಿಲ್ಲವಾದರೂ ಇವರಿಗೆ ದೊರೆತ ಅವಕಾಶದಲ್ಲಿ ತಮ್ಮ ಮಿತಿ ಗಳೊಂದಿಗೇ ಇವರು ಬೆಳೆದುಬರುತ್ತಿರುವ ಇತ್ತೀಚಿನ ಬೆಳವಣಿಗೆಯನ್ನು ಗಮನಿಸಿದರೆ, ಮುಂದಿನ ದಶಕದಲ್ಲಿ ಮಹಿಳೆಯರ ಕೃತಿಗಳಲ್ಲಿ ಅನೇಕ ಹೊಸ ಹೆಜ್ಜೆಗಳನ್ನು ಗುರುತಿಸ ಬಹುದಾಗಿದೆ.

ನವ್ಯಕಾವ್ಯದ ಪ್ರಭಾವಕ್ಕೊಳಗಾಗಿ ಬರೆಯುತ್ತಿರುವ ಚ. ಸರ್ವಮಂಗಳಾ, ಪ್ರತಿಭಾ ನಂದಕುಮಾರ, ಸ. ಉಷಾ, ಭಾಗ್ಯಲಕ್ಷ್ಮಿ ಈ ಮುಂತಾದವರ ಕವಿತೆಗಳಲ್ಲಿ ಲೈಂಗಿಕ ಸ್ವಾತಂತ್ರ್ಯದ ಪರಿಕಲ್ಪನೆ ತುಂಬಾ ಸಾಂಕೇತಿಕವಾಗಿ ಮೂಡಿಬಂದಿದೆ.

ಬಸವನಿಗೆ ಕೋಡಿದ್ದರೇನು
ಕಮಲ ಬೆಳೆಯುತ್ತ ಅರಳುವುದಿಲ್ಲವೆ ?
ಅರಳಿದ ಕಮಲದ ಮುಂದೆ
ಕೋಡಿನ ಬಿಗುಮಾನ ಜಿನುಗಿ ಸೋರುವುದಿಲ್ಲವೆ ?
ಬಸವನ ಗಂಡಸ್ತನಕ್ಕೆ ಮುದ್ರೆ ಒತ್ತಿ
ಚಲಾವಣೆಗೆ ತರೋಳು ಕಮಲ ಅಲ್ಲವೆ ?

—(ಚ. ಸರ್ವಮಂಗಳಾ 'ಅವನು ಬಸವ' "ಸಂಕ್ರಮಣ")

ಚ. ಸರ್ವಮಂಗಳಾ ಅವರ ಈ ಕವಿತೆಯಲ್ಲಿ ಸಂಕೀರ್ಣತೆ ಇದೆ. ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ' ಕಾವ್ಯದಲ್ಲಿ ಬರುವ ಹೆಣ್ಣಿನ ಹಿರಿಮೆಯ–ಪ್ರಸ್ತಾಪದ ಜತೆಗೆ, ಹೆಣ್ಣಿನ ಲೈಂಗಿಕ ಶಕ್ತಿಯ ಮಹತ್ವದ ಕೊಡುಗೆಯೂ ಇಲ್ಲಿ ಉಲ್ಲೇಖವಾಗಿದೆ. ಹೊನ್ನಮ್ಮನ ಕಾವ್ಯದಲ್ಲಿ-ಹೆಣ್ಣಿನ ಮೇಲ್ನೋಟದ ಹಿರಿಮೆ ಕಂಡುಬಂದರೆ, ಇಲ್ಲಿ ಸರ್ವಮಂಗಳಾ ಹೆಣ್ಣಿನ ಅಗಾಧ ಶಕ್ತಿಯನ್ನು ಪರಿಚಯಿಸುತ್ತಾ ಅನೇಕ ಒಳನೋಟಗಳನ್ನು ಬಿಡಿಸಿ ತೋರಿಸುತ್ತಾರೆ. ಮುದ್ರೆ ಒತ್ತಿ ಚಲಾವಣೆಗೆ ತರುವ ಕ್ರಿಯೆಯ ಮಹತ್ವ ಇಲ್ಲಿ ಸಾಬೀತಾಗಿದೆ. ಇದು ಹೆಣ್ಣಿನ ಲೈಂಗಿಕ ಹಿರಿಮೆಯ ಸಂಕೇತವಾಗಿ ಬಂದಿದೆ. ಕೋಡು, ಬಿಗುಮಾನ, ಅರಳುವುದು, ಜಿನುಗುವುದು, ಈ ಮುಂತಾದ ಪದಗಳು ಅನೇಕ ಅರ್ಥಗಳನ್ನು ಹೊರಡಿಸುತ್ತ ತುಂಬಾ ಸಾಂಕೇತಿಕವಾಗಿ ಬಳಕೆಯಾಗಿವೆ.

"ಮತ್ತವನ ಮೈಗಂಧದ
ಮತ್ತಿನಲಿ ಮೈಮರೆತಾಗ
ಬೇಕೆ ಒಗ್ಗರಣೆಯ
ಕಟು ವಾಸನೆಯ ಭೂತ

ಪಂಚಭೂತಗಳ ಸುಳಿಯಲ್ಲಿ
ಪಂಚೇಂದ್ರಿಯಗಳು ಸಿಕ್ಕಿ
ಹಂಚಿ ಹಾಳಾಗುವ ಮುನ್ನ
ಕೊಂಚ ಸವಿಯುವ ಆಟ"

—(ಪ್ರತಿಭಾ ನಂದಕುಮಾರ 'ಪಂಚಭೂತಗಳು' "ನಾವು ಹುಡುಗಿಯರೇ ಹೀಗೆ")

ಇಲ್ಲಿಯ ನಾಯಕಿ ಪಂಚಭೂತಗಳಿಗೆ ಬೇಸತ್ತು ಪಂಚೇಂದ್ರಿಯಗಳು ಹಾಳಾಗುವ ಮುನ್ನ ಅವುಗಳನ್ನು ಸವಿಯಬೇಕೆಂದು ಹಾತೊರೆಯುತ್ತಿದ್ದಾಳೆ. ಪ್ರತಿಭಾ ಅವರು ಈ ಕವಿತೆಯಲ್ಲಿ ಲೈಂಗಿಕ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸುಂದರವಾಗಿ ವಿಶ್ಲೇಷಿಸಿದ್ದಾರೆ.

ಏಕಾಂತದಲ್ಲಿ ಇಲ್ಲಿಯ ನಾಯಕಿ ತನ್ನ ಪ್ರಿಯಕರನೊಂದಿಗೆ ಲೈಂಗಿಕ ಸುಖ ಪಡೆಯುವಾಗ ಊರೆಲ್ಲ ಗುಲ್ಲೆದ್ದು ಆಡಿಕೊಳ್ಳುವ ನಾಲಗೆ ಒಂದನೆಯ ಭೂತವಾದರೆ-ರಸ್ತೆಯಲಿ ತಿರುಗುವಾಗ ಮುತ್ತಿ ಕೆಣಕುವ ಕಣ್ಣುಗಳು ಎರಡನೆಯ ಭೂತವಾಗಿವೆ. ಹೂಬಿಟ್ಟ ಮರದಡಿ ಕುಳಿತು ಪಿಸುಮಾತನಾಡುವಾಗ ಕಿವಿ ತೆರೆದು ಕೇಳುವ ಹದ್ದುಗಳು ಮೂರನೇ ಭೂತವಾದರೆ ಮುತ್ತಿನುಡುಗೆಯ ಕೊಟ್ಟಾಗ ಮುಟ್ಟುವ ಕೈಗಳು ನಾಲ್ಕನೇ ಭೂತವಾಗಿವೆ. ಪ್ರಿಯಕರನ ಮೈಗಂಧದ ಮತ್ತಿನಲಿ ಮರೆತಾಗ ಟೀಕಿಸುವಂತವು ಗಳೆಲ್ಲ ಐದನೆಯ ಭೂತವಾಗಿವೆ. ಹೀಗೆ ಈ ಪಂಚಭೂತಗಳ ಸುಳಿಯಲ್ಲಿ ಪಂಚೇಂದ್ರಿಯಗಳು ಸಿಕ್ಕಿ ಹಾಳಾಗುವದನ್ನು ಸಹಿಸದ ಇಲ್ಲಿಯ ನಾಯಕಿ ಆ ಇಂದ್ರಿಯಗಳ ಸುಖವನ್ನು ಸವಿಯಲು ಹಾತೊರೆಯುತ್ತಾಳೆ.

ಹೊಸಗನ್ನಡ ಕಾವ್ಯದಲ್ಲಿ ಮೊದಲಬಾರಿಗೆ ಮಹಿಳೆಯ ನೋವು-ನಿರಾಶೆ-ಒಳ ತೋಟಗಳನ್ನು ನಿರ್ಭಿಡೆಯಿಂದ ಮುಕ್ತ ಶೈಲಿಯಲ್ಲಿ ಹೇಳಿದವರಲ್ಲಿ ಚ. ಸರ್ವಮಂಗಳ, ಪ್ರತಿಭಾ, ಸ. ಉಷಾ ತುಂಬ ಮುಖ್ಯರಾಗುತ್ತಾರೆ.

> "ನನಗಿಲ್ಲ ಇರಲಿಲ್ಲ
> ಈ ನೆಲದ ಯೋನಿಯ ಸೀಳಿ
> ಬೇರಿಳಿಸುವ ತಾಕತ್ತು" ('ಅಂತರಂಗ')

ಎಂದು ಸ. ಉಷಾ ತಮ್ಮ 'ತೊಗಲು ಬೊಂಬೆಯ ಆತ್ಮಕಥೆ'ಯ ಸಂಕಲನದಲ್ಲಿ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರೂ, ಅವರ ಇತರ ಕವಿತೆಗಳಲ್ಲಿ ಆ ಅಸಹಾಯಕತೆ ಸ್ಫೋಟಗೊಂಡು, ಸಮಾಜ ವ್ಯವಸ್ಥೆಗೆ ಅನೇಕ ಸವಾಲುಗಳನ್ನೊಡ್ಡಿದೆ.

> "ಕೃಷ್ಣ ಸಂತಾನವೇ
> ಕಾಣಲಿಲ್ಲ ನಿಮಗೆ
> ಮೊಲೆ ತೊಡೆಗಳ ಹೊರತಾಗಿ
> ಇಲ್ಲೊಂದು ನಸುಗೆಂಪು ಆಸೆಗಳ ಹೊತ್ತ
> ಹೃದಯ ಉಂಟೆಂದು ....
> ಹೋಗಯ್ಯ ಹೋಗು
> ಎಲ್ಲಿಗೆ ಹೋಗುತ್ತೀ ನನಗೆ ಗೊತ್ತಿಲ್ಲವೇ
> ನನ್ನೆದೆಗೆ ಬೇರಿಳಿದ ಕಾಲು ನಿನ್ನದು"
>
> —(ಸ. ಉಷಾ 'ಈ ನೆಲದಹಾಡು' 1983 "ಕವಿತೆಗಳು"-ಸಾಹಿತ್ಯ ಅಕಾಡೆಮಿ)

ಪುರುಷರ ಲೈಂಗಿಕ ಸ್ವೇಚ್ಛಾಚಾರವನ್ನು-ಪ್ರತಿಭಟಿಸುವ ಈ ಕವಿತೆಯಲ್ಲಿ ಮಹಿಳೆಯರ ಲೈಂಗಿಕ-ಸ್ವಾತಂತ್ರ್ಯದ ಅಗತ್ಯವನ್ನು ಒತ್ತಿಹೇಳಲಾಗಿದೆ. 'ನನ್ನೆದೆಗೆ ಬೇರಿಳಿದ ಕಾಲು ನಿನ್ನದು' ಎಂಬಂತಹ ನುಡಿ ಮತ್ತೆ ಮತ್ತೆ ಧ್ವನಿಸುತ್ತಾ ಮಹಿಳೆಯ ಲೈಂಗಿಕತೆಯ ಗೌರವದ ಕುರುಹಾಗಿ ಬಂದಿದೆ.

ಅನೇಕ ಪ್ರತಿಮೆಗಳ ಮೂಲಕ ಸ. ಉಷಾ ತಮ್ಮ ಕವಿತೆಗಳಲ್ಲಿ ಹೆಣ್ಣಿನ ಮೂಕ ಶೋಕದ ಮಾದರಿಗಳನ್ನು ಕೊಟ್ಟಿದ್ದಾರೆ. ಅವರ 'ಅಮ್ಮನಿಗೆ' ಕವಿತೆ ತುಂಬಾ

ಸ್ಪಷ್ಟತೆಯಿಂದೊಡಗೂಡಿದೆ. ಹದಿನೇಳರ ಹರೆಯ ಬಂದಕೂಡಲೇ ಹುಡುಗಿಯರ ಮುಖಕ್ಕೆ ಸೆರಗುಹೊದಿಸಿ ಒಳಗೆ ಕೂಡಿಸುವ ಅಮ್ಮಂದಿರನ್ನು ಕಂಡು ಇಲ್ಲಿ ಕವಯಿತ್ರಿ ಪ್ರತಿಭಟಿಸಿದ್ದಾರೆ. ಶತಮಾನಗಳಿಂದ ಊದಿದ ಈ ಪುಂಗಿಯನ್ನು ಊದದೇ ಇರಲು ಅಮ್ಮನಿಗೆ ಹೇಳುವ ಈ ಕವಿತೆಯ ನಾಯಕಿ ಹೆಡೆಯಾಡಿಸುತ್ತಿದ್ದಾಳೆ. 'ದಾರಿಬಿಡು' ಎಂದು ಹಾತೊರೆಯುತ್ತಿದ್ದಾಳೆ. ಅಮ್ಮ ಹಾಕಿದ ಅಣೆಕಟ್ಟುಗಳನ್ನು ಹರಿದೊಗೆದು ಭೋರ್ಗರೆವ ನದಿಯಾಗುತ್ತಾಳೆ.

"ನಾನು ಕುರಿಮರಿಯಲ್ಲ ಗೆಳೆಯ, ನರಿಯೂ ಅಲ್ಲ" ಎಂದು ಪ್ರಾರಂಭವಾಗುವ ಎಸ್. ವಿ. ಭಾಗ್ಯಲಕ್ಷ್ಮಿಯವರ 'ಕಾಡಿನಲ್ಲಿ' ಕವಿತೆ ಸಮಾನತೆಯನ್ನು ಸಾರುತ್ತದೆ.

ಲಾಲಿಹಾಡುವ ತುಟಿಯಾಗಿ
ತುಟಿಯ ತುಂಬುವ ಮುತ್ತಾಗಿ
ಇನ್ನೂ ಏನೆಲ್ಲ ಆಗಬಲ್ಲ............
ಬೇಡವೆಂದು ಮುಖ ತಿರುಗಿಸಿದರೆ
ಝಾಡಿಸಿ ಹೋಗಬಲ್ಲ ಸಿಂಹಿಣಿ ನಾನು

—(ಎಸ್. ವಿ. ಭಾಗ್ಯಲಕ್ಷ್ಮಿ 'ಕಾಡಿನಲ್ಲಿ' "ದಶವಾರ್ಷಿಕ ಕವಿತೆಗಳು" ಸಾಹಿತ್ಯ ಅಕಾಡೆಮಿ)

ಲೈಂಗಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ತಮ್ಮ ಕಾವ್ಯದಲ್ಲಿ ಸ್ಪಷ್ಟ ನಿಲವುಗಳನ್ನು ತೆಗೆದುಕೊಂಡವರೆಂದರೆ ಇತ್ತೀಚಿನ ಕವಯಿತ್ರಿಯರಲ್ಲಿ ಎಚ್. ಎಸ್. ಮುಕ್ತಾಯಕ್ಕ, ಸುಕನ್ಯಾ ಮಾರುತಿ, ಶಶಿಕಲಾ ವಸ್ತ್ರದ, ಹೇಮಾ ಪಟ್ಟಣಶೆಟ್ಟಿ ಇವರು ಗಮನ ಸೆಳೆಯುತ್ತಾರೆ. ಲೈಂಗಿಕ ವಿಷಯಗಳಿಗೆ ಸಂಬಂಧಿಸಿದಂತೆ ಗರಿಕೆದರಿದಂತೆ ತಮ್ಮ ಕವಿತೆಗಳಲ್ಲಿ ಮಾತನಾಡುವ ಮುಕ್ತಾಯಕ್ಕ ಅವರ ಬರವಣಿಗೆಯಲ್ಲಿ ವಾಚ್ಯಾರ್ಥವೇ ಪ್ರಧಾನವಾದರೂ, ಕವಯಿತ್ರಿಯ ಮುಕ್ತ ಮನಸ್ಸಿನ ನಿಚ್ಚಳ ಅಭಿವ್ಯಕ್ತಿ ಗಮನ ಸೆಳೆಯುತ್ತದೆ.

ನಿಮ್ಮ ಕಾಮಾಗ್ನಿ ಕುಂಡಕೆ
ನಮ್ಮ ಶೀಲವನು ಬಲಿಗೊಟ್ಟು
ನಿಮ್ಮ ಮಾನಾಪಮಾನವನು
ಕಾಪಾಡಲು ನಿಮ್ಮಿಂದಲೇ
ಪತಿವ್ರತೆಯರ ಪಟ್ಟಕ್ಕೇರಿ
ಪ್ರಾತಃಕಾಲದ ಸ್ಮರಣೆಯಲಿ
ಇಂದಿಗೂ ಉಳಿದು ನರಳುತ್ತಿರುವವರು
ನಾವು.
ನಾವು ಪತಿವ್ರತೆಯರಲ್ಲ"

—(ಎಚ್. ಎಸ್. ಮುಕ್ತಾಯಕ್ಕ 'ನಾವು ಪತಿವ್ರತೆಯರಲ್ಲ' "ನಾನು ಮತ್ತು ಅವನು")

ಶತಮಾನಗಳಿಂದ ಪತಿವ್ರತೆಯ ಪಟ್ಟಕ್ಕಾಗಿ ಪರಿತಪಿಸುತ್ತಿರುವ ಮಹಿಳೆಯರ ವಿಚಾರದ ದಿಕ್ಕನ್ನೇ ಬದಲಿಸುವ ಕವಯಿತ್ರಿ ಇಲ್ಲಿ ಬದುಕಿನ ಅನಿವಾರ್ಯ ಸತ್ಯಗಳನ್ನು

ಪ್ರಕಟಿಸಿದ್ದಾರೆ. ಇಂತಹ ಪಟ್ಟಗಳನ್ನು ತಿರಸ್ಕರಿಸುವುದರ ಮೂಲಕ ಮುಕ್ತಾಯಕ್ಕ ತಮ್ಮ ಮುಕ್ತ ಬರವಣಿಗೆಯಲ್ಲಿ ಲೈಂಗಿಕ ಸ್ವಾತಂತ್ರ್ಯದ ಮಹತ್ವವನ್ನು ಹೇಳಿದ್ದಾರೆ.

"ಈಗ ನಾನು
ದಾಳಿ ಮಾಡುತ್ತೇನೆ.
ಆ ನಿನ್ನ ನೀಳಮೂಗು
ನಗುವ ತುಟಿ
ಮಿಂಚುವ ಕಣ್ಣು
ಗಂಡೆದೆಗಳೆಲ್ಲಾ
ನನ್ನವೇ ...."

—(ಸುಕನ್ಯಾಮಾರುತಿ : 'ನಾನೆಚ್ಚತ್ತಾಗ' "ನಾನು, ನನ್ನವರು")

ಮೇಲಿನ ಎರಡು ಕವಿತೆಯ ಭಾಗಗಳಲ್ಲಿ ಸುಕನ್ಯಾ ಲೈಂಗಿಕತೆಯ ಬಗೆಗೆ ಮುಕ್ತವಾಗಿ ಮಾತನಾಡಿದ್ದಾರೆ. ಕನಸಿನಲ್ಲಿ, ಎಚ್ಚರವಾಗುವ ಮೊದಲು ಗಂಡಿನ ಮೇಲೆ ದಾಳಿ ಮಾಡುವ ಇಲ್ಲಿಯ ನಾಯಕಿ ಎಚ್ಚತ್ತಾಗಲೂ ಬೇಸರಪಡುವುದಿಲ್ಲ. ನಿದ್ರಾಭಂಗವಾದದ್ದಕ್ಕಿಂತಲೂ ತಾನು ಮೆಚ್ಚಿದ ಗಂಡು ತನ್ನ ಬಂದಿಯಾದನಲ್ಲಾ ಎಂಬ ಸಮಾಧಾನ ಇಲ್ಲಿ ವ್ಯಕ್ತವಾಗಿದೆ. ಗಂಡಿನ ಮೂಗು, ತುಟಿ, ತೋಳು, ಎದೆಗಳನ್ನು ಕುರಿತು ಬಹಳ ಮುಕ್ತಮನಸ್ಸಿನಿಂದ ವಿಶ್ಲೇಷಿಸಿದ ವರ್ಣನೆ ಇಲ್ಲಿದೆ. ಎರಡನೆಯ ಕವಿತೆಯಲ್ಲಿ ಬಯಕೆ ಗರಿಗೆದರಿರುವುದನ್ನು ಕಾಣಬಹುದಾಗಿದೆ. ಇಲ್ಲಿಯ ನಾಯಕಿ ಎಷ್ಟೋ ಪ್ರೇಮಗಳನ್ನು ನಿರಾಕರಿಸಿ ತಾನು ಒಲಿದವನಲ್ಲಿ ತನ್ನ ಬಯಕೆಯನ್ನು ವ್ಯಕ್ತಪಡಿಸುತ್ತಾಳೆ. ತಡಮಾಡಿದರೆ ನಾನು ದೂರ ನಡೆದಿರುತ್ತೇನೆ ಎಂದು ಹೇಳುವಲ್ಲಿ ಲೈಂಗಿಕ ತೀವ್ರತೆ ಇದೆ. ಇಂತಹ ಅನೇಕ ಸಹಜ ಬಯಕೆಗಳನ್ನು ಇವರ ಕವಿತೆಗಳು ಹೊತ್ತು ನಿಂತಿವೆ.

"ಹುಡುಕುತಿಹೆ
ಗಂಡು ಸಿಗಬಹುದು, ಗಂಡು
ಸಿಗಬಹುದು ಗಂಡನೊಳಗಿನ ಗಂಡು
ಹುಡುಗ ಬೇಕೆನಗೆ
ಹುಡುಕಬೇಕೆನಗೆ"

—(ಹೇಮಾ–'ಗಂಡನೊಳಗಿನ ಗಂಡು ಹುಡುಗ' "ವಿರಹೋತ್ಸವ")

"ನಿಮ್ಮ ದಾರಿಗೆ ದೀಪ ಹಚ್ಚಲು ಬಲ್ಲೆ
ನಿಮ್ಮ ಕತ್ತಲೆ ಸಹಜ ನೀಗಬಲ್ಲೆ
ಬರುವಿರಾ ನನ್ನೊಡನೆ ನನ್ನ ಹಾಗೆ
ಬರುವಿರಾ ನನ್ನೊಡನೆ ನನ್ನ ಹಾಗೆ ?"

—(ಹೇಮಾ ಪಟ್ಟಣಶೆಟ್ಟಿ—ಆಹ್ವಾನ "ಹೊಸಹಾಡು")

ಈ ಎರಡು ಕವಿತೆಗಳಲ್ಲಿ ಹೇಮಾಪಟ್ಟಣಶೆಟ್ಟಿ ಹೊಸ ಬದುಕಿನ ಹುಡುಕಾಟದಲ್ಲಿದ್ದಾರೆ. ಗಂಡನೊಳಗಿನ ಗಂಡು ಹುಡುಕುವ ಕ್ರಿಯೆ ಇಲ್ಲಿ ತುಂಬಾ ಸಾಂಕೇತಿಕವಾಗಿ ಬಳಕೆಯಾಗಿದೆ. 'ನನ್ನೊಡನೆ ನನ್ನ ಹಾಗೆ' ಎನ್ನುವಲ್ಲಿ ತನ್ನತನದ ಹೊಸ ಬದುಕಿನ ತೀವ್ರತೆಯಿದೆ. ಕವಯಿತ್ರಿಯ ಈ ಆಹ್ವಾನ ಲೈಂಗಿಕ ಸ್ವಾತಂತ್ರ್ಯವನ್ನೊಳಗೊಂಡ ಬದುಕಿನ ಎಲ್ಲಾ ಸ್ವಾತಂತ್ರ್ಯಗಳ ವಿಶ್ಲೇಷಣೆ ಕೂಡಾ ಆಗಿದೆ. "ದೇಹ ಬಯಸಿದಾಗ, ಸಾಧ್ಯವಾದಾಗ, ಸಾಧ್ಯವಾಡಿಕೊಂಡು ಅದರ ಹಸಿವನ್ನು ಇಂಗಿಸಬೇಕು" ("ಬಿಡಿದವರು" ಆರ್. ಜಿ. ಹಳ್ಳಿ, ನಾಗರಾಜ. ಪುಟ : 90) ಎಂದು ಒಂದು ಕಡೆ ಸ್ಪಷ್ಟವಾಗಿ ಗೆರೆಕೊರೆದಂತೆ ಹೇಳಿದ ಹೇಮಾಪಟ್ಟಣಶೆಟ್ಟಿ ಬದುಕನ್ನು ಚಾಲೆಂಜ್ ಆಗಿ ತೆಗೆದುಕೊಂಡವರು. ಅವರ ಈ ಹೇಳಿಕೆ ಕೆಲವುಡಿವಂತರಿಗೆ ಸರಿಯೆನಿಸದೇ ಇರಬಹುದು. ಆದರೆ ಹೇಮಾ ಒಬ್ಬ ಮಹಿಳೆಯಾಗಿ ಸಾಹಿತ್ಯ ಮಾಧ್ಯಮದ ಮೂಲಕ ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ಕೊಡುವುದು ಸಾಂಸ್ಕೃತಿಕ ಕ್ಷೇತ್ರದಲ್ಲಿ ತುಂಬಾ ಮಹತ್ವದ ಸಂಗತಿಯಾಗುತ್ತದೆ. ಶತಮಾನಗಳಿಂದ ದನಿಕಳೆದುಕೊಂಡು ಎಲ್ಲ ಸುಖ–ಸವಲತ್ತುಗಳಿಂದ ವಂಚಿತಳಾದ ಮಹಿಳೆ, ಇಂದು ಅಕ್ಷರ ಜಗತ್ತಿನಲ್ಲಿ ತನ್ನ ಮೂಲಭೂತ ಸಮಸ್ಯೆಗಳನ್ನು ಮುಂದಿಟ್ಟು ಮಾತನಾಡುವುದು ಬಹಳ ಮುಖ್ಯವಾದ ವಿಷಯವಾಗುತ್ತದೆ.

ತಾವು ಕಂಡುಂಡ ಬದುಕನ್ನು, ತಮ್ಮ ಸುತ್ತಮುತ್ತಲಿನ ಜನಜೀವನವನ್ನು ಈ ಲೇಖಕಿಯರು ಧೈರ್ಯವಾಗಿ ಹೇಳತೊಡಗಿದಾಗ ಕಾವ್ಯದಂತಹ ವಿಶಿಷ್ಟ ಮಾಧ್ಯಮದಲ್ಲಿ ಅದು ವಾಚ್ಯವಾಗಿ ನಿಲ್ಲಬಹುದು, ಮಡಿವಂತರಿಗೆ ಅಸಹ್ಯವೆನಿಸಬಹುದು. ಆದರೆ ಒಬ್ಬ ಮಹಿಳೆ ಇಂದಿಗೂ ಕೂಡ ಅಸಮಾನತೆಯಿಂದ ಕೂಡಿರುವ ವ್ಯವಸ್ಥೆಯೊಂದರಲ್ಲಿ ನಿಂತುಕೊಂಡು ತನ್ನೆದೆಯ ತೀವ್ರ ತುಡಿತಗಳಿಗೆ ಅಕ್ಷರದ ರೂಪಕೊಡುವುದು ತುಂಬಾ ಅಗತ್ಯವಾದ ಕಾರ್ಯವಾಗಿದೆ.

"ಮೌನದಸ್ತ್ರಗಳೆಸೆದು, ಮಾತಿನರಸಿಗೆ ಸೋತು
ಬಾ ಸ್ಪಂದನಾಶ್ವವನೇರಿ
ಎದೆಗೊತ್ತಿ ತಾ ಮಾತು ಸುಗಂಧಿ
ಮಾತಿನಂಬಾರಿಯನೇರಿ
ಮೌನಕಂದರ ಹಾರಿ ಬಾ
ಬಳಿ ಸೇರು ನಿನ್ನ ಮುತ್ತಿಕೊಳ್ಳುವೆ"

—(ಮಾಲತಿ ಪಟ್ಟಣಶೆಟ್ಟಿ–'ಮಾತು' "ಸೃಜನವೇದಿ" ಏಪ್ರಿಲ್ ೧೯೮೫)

ನೋವಿನ ರಾಮಾಯಣ ಬರೆದುಕೊಳ್ಳಲು ಸಿದ್ಧಳಾದ ಕವಯಿತ್ರಿ ಮಾಲತಿ ಪಟ್ಟಣಶೆಟ್ಟಿ ಈ ಕವಿತೆಯಲ್ಲಿ ಮೌನದ ಕಂದರ ಹಾರಿಬರಲು ಆಹ್ವಾನ ನೀಡಿದ್ದಾರೆ. ಹಾಗೆ ಆಹ್ವಾನಿಸಿದವನನ್ನು ಮುತ್ತಿಕೊಳ್ಳಲು ಸಿದ್ಧಳಾದ ಇಲ್ಲಿನ ನಾಯಕಿ ಅದೇ 'ಸಹ–ಗಮನ' ಕವಿತೆಯಲ್ಲಿ ಪತಿಯ ಸಹಗಮನವನ್ನೇ ಮಾಡುವ ಹೊಸ ಹೆಜ್ಜೆಯಿಡುತ್ತಾಳೆ.

"ಎಷ್ಟೆಷ್ಟು ಸಲ ನಗುತ
ಮುತ್ತನಿಕ್ಕಿದ ಪತಿ
ಒಳಗೆ ಹಾವಾಗಿ ಕನಸು
ಕಣ್ಣಕಚ್ಚಿದ್ದು
ಎಷ್ಟೆಷ್ಟುಸಲ ನನ್ನ ಮನೆ
ಹೊಕ್ಕ ಸವತಿಯರು ಹಾಡೆ
ಹಗಲಲ್ಲಿ ಕೊಳ್ಳಿ ಹೊಡೆದದ್ದು?"

—(ಮಾಲತಿ ಪಟ್ಟಣಶೆಟ್ಟಿ 'ಸಹಗಮನ': "ತಂದೆ ಬದುಕಗುಲಾಬಿ")

ಎಂದು ಪರಿತಪಿಸುವ ನಾಯಕಿ ಕೊನೆಗೆ ಅದಕ್ಕಾಗಿಯೇ ಪತಿಸಹಗಮನವನ್ನು ನಡೆಸಲು ಸಿದ್ಧಳಾಗುವುದು ಕೊನೆಯ ಹಂತದ ನಿರ್ಣಯವಾಗಿದೆ. ಸತಿಸಹಗಮನಕ್ಕೆ ಬದಲಾಗಿ ಪತಿಸಹಗಮನವೇ ಬದುಕಿನ ಉತ್ತರವಾಗಲಾರದು. ಆದರೂ ಇಲ್ಲಿಯ ನಾಯಕಿಯ ನೋವು ಸ್ಫೋಟಗೊಳ್ಳುವ ಬಗೆ ಅತ್ಯಂತ ಮಾರ್ಮಿಕವಾದುದು. ಹೇಮಾ ಪಟ್ಟಣಶೆಟ್ಟಿ ಮತ್ತು ಮಾಲತಿ ಪಟ್ಟಣಶೆಟ್ಟಿಯವರ ಇಂತಹ ಕವಿತೆಗಳನ್ನು ಓದಿದಾಗ, ಬದುಕಿನ ನೋವು, ನಿರಾಶೆ, ಹತಾಶೆ, ವಿರಹಭಾವನೆ ನೆನಪಾಗುತ್ತವೆ. ಆದರೆ ಮುಂದಿನ ಅನೇಕ ಕವಿತೆಗಳಲ್ಲಿ ಮಾಲತಿ ಈ ದುಃಖ–ನೋವುಗಳನ್ನು ಕಾವ್ಯವಾಗಿಸಿದ್ದಾರೆ. ಮುತ್ತನಿಕ್ಕಲು ಹಾತೊರೆಯುತ್ತಿದ್ದ ಇಲ್ಲಿನ ನಾಯಕಿಯ ಮನಸ್ಸು, ಪತಿ ಹಾವಾಗಿ ಕನಸಿನ–ಕಣ್ಣ ಕಚ್ಚಿದಾಗ, ಪತಿಸಹಗಮನವನ್ನೇ ಮಾಡಲು ಸಿದ್ಧಳಾಗುವುದು ಆತ್ಮಗೌರವದ ಸ್ಪಷ್ಟ ನಿರೂಪಣೆಯಾಗುತ್ತದೆ. ಲೈಂಗಿಕ ಸ್ವಾತಂತ್ರ್ಯಕ್ಕಿಂತ ಆತ್ಮಗೌರವ ಮುಖ್ಯ, ಪ್ರೀತಿಯ ನೀತಿ ಸಂಹಿತೆ–ಮುಖ್ಯ ಎಂದು ಮಾಲತಿಯವರ ಕವಿತೆಗಳು ಹೇಳಿದರೆ, ಲೈಂಗಿಕ ಸ್ವಾತಂತ್ರ್ಯದ ಮಹತ್ವವನ್ನೆ ತಿಳಿಸುತ್ತಲೇ ತನ್ನದೇ ದಾರಿಗಳನ್ನು ಕಂಡುಕೊಳ್ಳುವ ಆಶಯ ಹೇಮಾ ಅವರ ಕವಿತೆಗಳಲ್ಲಿದೆ.

ಪ್ರಿಯಮಾವುತನ
ಅಂಕುಶದ ತುದಿತಾಗಿ ಕುಂಭಸ್ಥಳಕೆ
ನಿರಂಕುಶ ತೇಲಿದಳು ಸರಸಿಯಲಿ
ಸಾವಿರ ಪಟ್ಟಾಗಿ ಪಟ್ಟದರಸಿ ರಾಸಲೀಲೆಯಲಿ

"ಚಾವಟಿಯ ಏಟು ಏಟಿನ
ಪುಂಗಿಗೆ ಹಾವಾಗಿ ಹೊರಳುತ್ತಾ
ಮುಡಿಬಿಚ್ಚಿ ಹೆಡೆಯಾಗಿ ಅರಳಿದವಳು
'ತುರುತುರನೆ ತೂರಿದಳು ದಾಂಪತ್ಯ ಮೌಲ್ಯವನು'
ಎಂದು ಅತ್ತ
ಸಂಸ್ಕೃತಿಯ ಗುತ್ತಿಗೆದಾರರನು ಧಿಕ್ಕರಿಸಿ
ನಕ್ಕಳಿವಳು ತುಟಿಯ
ಅಂಚಿನಲ್ಲಿ ಚೂಪಾಗಿ"

—(ಶಶಿಕಲಾ ವಸ್ತ್ರದ: 'ಮದ್ದಾನೆ ಮತ್ತು ಮಾವುತ': ಸೃಜನವೇದಿ ಏಪ್ರಿಲ್ ೧೯೮೫)

ಯಶೋಧರ ಅರಸನ ಪಟ್ಟದರಸಿ ಅಮೃತಮತಿ, ಮದ್ದಾನೆಯ ಮಾವುತನೊಂದಿಗೆ ಲೈಂಗಿಕ ಸುಖಪಡೆಯುವ ವಿಷಯವನ್ನು ಈ ಕವಿತೆಯಲ್ಲಿ ಕವಯಿತ್ರಿ ಶಶಿಕಲಾ ವಸ್ತ್ರದ ಸಮರ್ಥಿಸಿದ್ದಾರೆ. ಸಂಸ್ಕೃತಿಯ ಗುತ್ತಿಗೆದಾರರನ್ನು ಧಿಕ್ಕರಿಸಿ ನಗುವ ಕ್ರಿಯೆ ಇಲ್ಲಿ ನಡೆದಿದೆ. ಲೈಂಗಿಕ ಪ್ರತಿಮೆಗಳನ್ನು ತುಂಬಾ ಸೊಗಸಾಗಿ ಕಟ್ಟಿಕೊಡುವ ಈ ಕವಯತ್ರಿ ಇಲ್ಲಿ ತೆಗೆದುಕೊಂಡಿರುವ ನಿರ್ಣಯ ತುಂಬಾ ಅರ್ಥಪೂರ್ಣವಾಗಿದೆ. ಸಾಮಾನ್ಯವಾಗಿ ಕವಯಿತ್ರಿ ಅಮೃತಮತಿಯ ಪರವಾಗಿ ಮಾತನಾಡುವುದು ತುಂಬಾ ಮುಖ್ಯವಾಗುತ್ತದೆ. ನನ್ನ 'ರೆಕ್ಕೆಮೂಡಿದಾಗ' ನಾಟಕದಲ್ಲಿಯೂ ಕೂಡ ಇದೇ ಆಶಯ ಬೆಳವಣಿಗೆಯಾಗಿದೆ. ಜನ್ನಕವಿ ಜೈನಧರ್ಮದ ಸಿದ್ಧಾಂತಗಳನ್ನು ಹೇಳುವ ಅವಸರದಲ್ಲಿ ಅಮೃತಮತಿಯನ್ನು ಉದ್ದೇಶಪೂರ್ವಕವಾಗಿ ಖಳನಾಯಕಿಯ ಹಾಗೆ ಚಿತ್ರಿಸಿದ್ದಾನೆ. ಆದರೆ ಲೈಂಗಿಕ-ಸ್ವಾತಂತ್ರ್ಯ ಬಯಸಿದ ಅಮೃತಮತಿ, ನಪುಂಸಕ ಅರಸನಾದ ಯಶೋಧರನನ್ನು ತೊರೆದು ಮದ್ದಾನೆಯ ಮಾವುತನನ್ನು ಕೂಡಿದ್ದು ಶತಮಾನಗಳ ಹಿಂದೆಯೇ ಒಬ್ಬ ಮಹಿಳೆ ತನ್ನ ಸಹಜ ಆಸೆಗಳಿಗೆ ಗೌರವ ಕೊಟ್ಟದ್ದು ಲೈಂಗಿಕ ಸ್ವಾತಂತ್ರ್ಯಕ್ಕೆ ನೀಡಿದ ಮಹತ್ವವಾಗುತ್ತದೆ. ಈ ಅಂಶವನ್ನು ಚೆನ್ನಾಗಿ ಅರ್ಥೈಸಿಕೊಂಡಿರುವ ಶಶಿಕಲಾ ಅವರು ಇಲ್ಲಿ ಅಮೃತಮತಿ ಮುಡಿಬಿಚ್ಚಿ ಹೆಡೆಯಾಗಿ ಅರಳುವ ಕ್ರಿಯೆಯನ್ನು ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ. ಯಶೋಧರ ರಾಜನ ಎಲ್ಲ ವೈಭವ-ವಿಜೃಂಭಣೆಗಳನ್ನು ಎಡಗೈಲಿ ಸರಿಸಿ, ಮಾವುತನ ಮೈಯ ಪರಿಮಳಕ್ಕೆ ಮತ್ತೇರಿದ ಮದ್ದಾನೆಯಂತಾಗುವ ಅಮೃತಮತಿ ಈ ಕವಿತೆಯಲ್ಲಿ ಜೀವನ ಪ್ರೀತಿಯ ಅದಮ್ಯ ಚೇತನವಾಗಿ ಚಿತ್ರಿತಳಾಗಿದ್ದಾಳೆ.

ಗಂಡಿನ ಲೈಂಗಿಕ ಸ್ವೇಚ್ಛೆಯನ್ನು ವಿರೋಧಿಸುವುದೂ ಕೂಡ ಮಹಿಳೆಯರಿಗೆ ಇಂದು ಅನಿವಾರ್ಯವಾಗಿದೆ. ಬಿ ಟಿ. ಲಲಿತಾನಾಯಕ, ಸವಿತಾ ನಾಗಭೂಷಣ, ವಿಜಯಶ್ರೀ ಸಬರದ, ಕಮಲಾಹೆಮ್ಮಿಗೆ—ಈ ಮುಂತಾದವರ ಕವಿತೆಗಳಲ್ಲಿ ಈ ಅಂಶ ಸ್ಪಷ್ಟವಾಗಿ ನಿರೂಪಿತವಾಗಿದೆ.

"ನಾ ಕಟ್ಟಿರುವ
ಬೇಲಿಯನು ಮುರಿದು
ಚಂದ ಕಂಡ ಸೀರೆ ಬ್ಲೌಜು ಬ್ರಾ
ಗಳಲಿ ಹೊಕ್ಕು ಕಾವೇರಿ
ಉಬ್ಬು ತಗ್ಗುಗಳ ನೆಕ್ಕಿ ಕಣ್ಣಿಂದ
ಮಕರಂದ ಹೀರಿ ಸುಖಿಸಿ
ಹಸನ್ಮುಖಿಸುವ ನಿನ್ನ ಡೊಂಕುಬಾಲದ
ಲೋಲತೆಗೆ ನಾನೂ
ಉತ್ತರಿಸಬೇಕಾದೀತು...
ನೀ ಕಟ್ಟಿರುವ ಬೇಲಿಯನು
ಮುರಿದೊಗೆದು :

(ಬಿ.ಟಿ. ಲಲಿತಾನಾಯಕ : 'ಆಕೆಯ ಎರಡು ಮಾತು'
"ಮುಂದೇನೆ ಸಖಿ ಮುಂದೇನೆ")

" ರಕ್ತ–ಮಾಂಸ–ಮೂಳೆವಿರಚಿತ
ನನ್ನೆದೆಯ ಮೇಲೆ ಮಲಗಿದ್ದ
ಯಾರು ಕರೆದರೊ ಗೊತ್ತಿಲ್ಲ
ಯಾಕೆ ಕರೆದರೊ ಗೊತ್ತಿಲ್ಲ
ಪ್ರೀತಿಯನ್ನು ಒದ್ದು ಹೊರಟುಹೋದ "

—(ಸವಿತಾ ನಾಗಭೂಷಣ : 'ಬಿಡಿ ನನ್ನ ಪಾಡಿಗೆ–ನನ್ನನ್ನು ': " ನಾ ಬರುತ್ತೇನೆ ಕೇಳು ")

" ಆದರೆ ರಾಯಾ !
ಆ ಮುಗ್ಧ ಹೂವಿನ
ಪಕಳೆ ಕಿತ್ತು
ಹೊಸಕಿ ಹಾಕುವ ಮುನ್ನ
ಹೂತು ಹೋದ ನಿನ್ನ
ಮಾತಿನ ಗುಹೆಯಲ್ಲಿ
ಹೊಕ್ಕುನೋಡು !
ಮಾಸ್ತಿ ಕಲ್ಲುಗಳ ಲೆಕ್ಕ
ಕೊಟ್ಟು ಹೋಗು !"

—(ವಿಜಯಶ್ರೀ ಸಬರದ : ' ದೂರವಾದವನು ' ಶೂದ್ರ ನವೆಂಬರ್ ೧೯೮೮)

" ಮನವೆಂಬ ನವರಂಗದಲಿ ಕುಣಿದು ಹೋದಿರಿ
ನೆಲದ ನೆನಹೇಗೆ ನಿಮಗೆ ?
ಹೂದಂಡೆಗಳನೆಡಹಿ ಪರಿಮಳವ ಹೀರಿದಿರಿ
ಕೆಂಧೂಳಿ ನೆನಹೆ ನಿಮಗೆ ?
ಸುತ್ತ ಜನದಳಗೊಳಲು ಅರಳದಿರಿ ಕಮಲದೊಲು
ಕೆಸರ ಹಂಗೇಕೆ ನಿಮಗೆ "

(ಕಮಲಾ ಹೆಮ್ಮಿಗೆ ; ಮನವೆಂಬ "ನೀನೇ ನನ್ನ ಆಕಾಶ")

ಈ ಕವಿತೆಗಳಲ್ಲಿ ಗಂಡಿನ ಲೈಂಗಿಕ ಸ್ವೇಚ್ಛಾಚಾರದ ಬಗೆಗೆ ಪ್ರತಿಭಟನೆಯ ದನಿ ಇದೆ. ಈ ದನಿ ಪರೋಕ್ಷವಾಗಿ ಲೈಂಗಿಕ ಸ್ವಾತಂತ್ರ್ಯದ ಮಹತ್ವವನ್ನು ಹೇಳುತ್ತದೆ. ನಿನ್ನ ಡೊಂಕು ಬಾಲದ ಲೋಲತೆಗೆ ನಾನೂ ಉತ್ತರಿಸಬೇಕಾದೀತು ಎನ್ನುವ ನುಡಿಯಲ್ಲಿ ಎಚ್ಚರದ ಜತೆಗೆ ಬೇಲಿಯನ್ನು ಮುರಿದೊಗೆದು ಬರುವ ಸ್ವಾತಂತ್ರ್ಯದ ಆಶಯವೂ ಅಡಕವಾಗಿದೆ. ಲಲಿತಾನಾಯಕ ಇದನ್ನು ತುಂಬಾ ವಾಚ್ಯವಾಗಿಯೇ ಹೇಳಿದರೂ ಕೂಡ ವಸ್ತುವಿನ ಆಶಯದ ದೃಷ್ಟಿಯಿಂದ ಇದು ಗಮನ ಸೆಳೆಯುತ್ತದೆ. ಸವಿತಾ ನಾಗಭೂಷಣ ಅವರ ಕವಿತೆಯ ನಾಯಕಿ ಪ್ರೀತಿಯನ್ನು ಒದ್ದು ಹೊರಟುಹೋದವನ ನೆನಪನ್ನು ಉಸಿರಾಡಿಸುತ್ತಾಳೆ. ಅದಕ್ಕಾಗಿಯೇ ತನ್ನಪಾಡಿಗೆ ತನ್ನನ್ನು ಬಿಡಲು

ಕೇಳಿಕೊಳ್ಳುತ್ತಾಳೆ. ಈ ಬೇಡಿಕೆಯಲ್ಲಿ ಅವನನಗಲಿದ ನೋವು ಇದೆ. ಆದರೆ ಎಲ್ಲಿಯೂ ರೊಚ್ಚಾಗಿ–ಆವೇಶವಾಗಿ ಅರ್ಭಟಿಸುವುದಿಲ್ಲ. "ಬಿಡಿ ನನ್ನಪಾಡಿಗೆ ನನ್ನನ್ನು" ಎನ್ನುವ ನುಡಿಗಳಲ್ಲಿಯೇ ಅದು ಅರ್ಥಪೂರ್ಣ ಧ್ವನಿಸಾಧ್ಯತೆಯನ್ನು ತೊಟ್ಟುಕೊಳ್ಳುತ್ತದೆ. ಹಾಗೆಯೇ ವಿಜಯಶ್ರೀಯವರ ''ಮಾಸ್ತಿಕಲ್ಲುಗಳ ಲೆಕ್ಕ ಕೊಟ್ಟು ಹೋಗು'' ಎಂಬಂತಹ ನುಡಿ ತುಂಬಾ ತೀವ್ರವಾದ ಪರಿಣಾಮವನ್ನುಂಟು ಮಾಡುತ್ತದೆ. ಕಮಲಾಹಮ್ರಿಗೆ ಅನೇಕ ಪ್ರಶ್ನೆಗಳ ಮೂಲಕ ನಾಯಕಿಯ ತೊಳಲಾಟವನ್ನು ನಾಯಕನ ಸ್ವಾರ್ಥವನ್ನು ಸ್ಪಷ್ಟಪಡಿಸಿದ್ದಾರೆ.

ಗಂಡಿನ ಸ್ವೇಚ್ಛಾಚಾರವನ್ನು ಇದೇ ರೀತಿ ಪ್ರತಿಭಟಿಸಿ ಬಂಡೆದ್ದವರಲ್ಲಿ ಸುಧಾಶರ್ಮ, ವಿಜಯಾ ಸುಬ್ಬರಾಜ್, ಮಾತಂಗಿ, ನಿವೇದಿತಾ ಇವರ ಕವಿತೆಗಳು ತುಂಬಾ ವಾಚ್ಯವೆನಿಸಿದರೂ ಕೂಡ ಗಮನ ಸೆಳೆಯುತ್ತವೆ.

"ನಿನ್ನ ನಿಸ್ಪಂದದ ತುಟಿಗಳ ಹೀಗೆ
ರಕ್ತಕಾರುವ ನನ್ನ ತುಟಿಗಳಿಗೆ ಒಡ್ಡಬೇಡ.
ಬೋಳು ತಲೆಯ ಓಡಿನ ಸುತ್ತ ಹೇಗೆ
ಆಡಿಸಲಿ ನನ್ನ ಚಿಗುರು ಬೆರಳುಗಳನ್ನು
ಮಸುಕು ಕಣ್ಣಿನ ಬಾವಿಗೆ ಹೋಗಿ
ನಿನ್ನ ಪ್ರತಿಬಿಂಬ ಹುಡುಕುವುದಿಲ್ಲ
ನಿನ್ನ ಅತಂತ್ರ ತೆಕ್ಕೆಯಲ್ಲಿ ನಾನು ಹೀಗೆ
ಸೋರಿ ಹೋಗುವುದಕ್ಕೆ ಬಿಡುವುದಿಲ್ಲ"

—(ಸುಧಾ ಶರ್ಮ 'ಬದುಕಿಗೆ': ಯುವಕಾವ್ಯ ೨ ಕರ್ನಾಟಕ ಸಾಹಿತ್ಯ ಅಕಾಡೆಮಿ)

"ನಮಗೆ ನೋಡು ಕೃಷ್ಣನೂ ಇಲ್ಲ
ಕರ್ಣನೂ ಇಲ್ಲ
ಆದರೆ ತೊಡೆ ತಟ್ಟಿಕರೆದ
ದುರ್ಯೋಧನರಿದ್ದಾರೆ.
ಮುಡಿಗೆ ಕೈ ಹಾಕುವ ದುಶ್ಯಾಸನರಿದ್ದಾರೆ
ರಾತ್ರಿಕೂಟಕೆ ಕರೆವ ಕೀಚಕರಿದ್ದಾರೆ"

—(ಮಾತಂಗಿ: 'ದ್ರೌಪದಿ': "ಕವನ ಸೌರಭ")

"ದಿನಕೊಬ್ಬರಿಬ್ಬರಾದರೂ
ದುಶ್ಯಾಸನರ ಕೈಯೊಳಗೆ
ವಿವಸ್ತ್ರಳಾಗುವ ನನಗೆ
ಕೂಗಿ ಕರೆದರೂ
ಚೀರಿ ಮಿಡಿದರೂ
ಕಿವುಡಾದ ಕೃಷ್ಣ
ಕೊಡಲಿಲ್ಲ ಒಮ್ಮೆಯೂ

ಅಕ್ಷಯದ ವಸ್ತ್ರದಾನ
ತಡೆದಿಲ್ಲ ಗಳಿಗೆಯೂ
ಸೋರಿ ಹೋಗುವ ಮಾನ

—(ವಿಜಯಾ ಸುಬ್ಬರಾಜ್ ' ಮೋಕೇಸಿನ ಮಹಿಳೆಯ ಸ್ವಗತ ' "ಕವನ ಸೌರಭ")

" ಅಹುದು ನೀನೇ
ನನ್ನ ದೇಹ ಹಾಸಿಗೆ ಮಾಡಿ
ಬೆಳಗಾಗ ಮುರುಟಿಸಿ ಹೋದದ್ದು
ಹಂಗಿಲ್ಲದೇ ಉಂಡು ಎಂಜಲ ಬಿಟ್ಟು
ಬಿಸಿಲುಗುದುರೆಯನೇರಿ ಹಾರಿದ್ದು
ಆಗಲೇ ತಿಳಿದದ್ದು
ನೀನು ಚರಿತ್ರೆಗೆ ಮಸಿ ಬಳಿಯುವಾತ ಎಂದು "

—(ನಿವೇದಿತಾ ಅಂಕೋಲಾ : ' ಇತಿಹಾಸ ' : ಸೃಜನವೇದಿ ಏಪ್ರಿಲ್ ೧೯೮೫)

ಸುಧಾ ಶರ್ಮ ಅವರ ಕವಿತೆಯಲ್ಲಿ ಸ್ವತಂತ್ರ ಬದುಕಿನ ಹಂಬಲವಿದೆ. ಅಂತೆಯೇ ಅವರು ಅತಂತ್ರ ತೆಕ್ಕೆಯಲ್ಲಿ ಸೋರಿಹೋಗಲು ಇಚ್ಛಿಸುವುದಿಲ್ಲ. ಮಾತಂಗಿ ಮತ್ತು ವಿಜಯಾ ಸುಬ್ಬರಾಜ್ ಇವರ ಕವಿತೆಗಳಲ್ಲಿ ಮಹಾಭಾರತದ ' ದ್ರೌಪದಿ ' ಇವತ್ತಿನ ಮಹಿಳೆಯರ ಬದುಕಿಗೆ ಹಿನ್ನೆಲೆಯಾಗಿ ಬಂದಿದ್ದಾಳೆ. ದ್ರೌಪದಿಗೂ ಇಂದಿನ ಮಹಿಳೆಗೂ ಹೋಲಿಕೆಯನ್ನು ಕಲ್ಪಿಸಿರುವ ಈ ಕವಿತೆಗಳಲ್ಲಿ ಅಂದಿನ ಕೃಷ್ಣ–ಕರ್ಣರಂತೆ ಯಾರೂ ಇಲ್ಲ. ಕೇವಲ ದುರ್ಯೋಧನ–ದುಶ್ಶಾಸನರಿದ್ದಾರೆಂದು ಹೇಳುವ ತವಕವಿದೆ. ' ಕಿವುಡಾದ ಕೃಷ್ಣ ' ಎನ್ನುವ ವಿಜಯಾ ಅವರ ಈ ನುಡಿಯಲ್ಲಿ ಧ್ವನಿಯಿದೆ. ' ಕೊಡಲಿಲ್ಲ ಒಮ್ಮೆಯೂ ಅಕ್ಷಯದ ವಸ್ತ್ರದಾನ ' ಎನ್ನುವ ಮಾತಿನಲ್ಲಿ ಅಸಹಾಯಕತೆಯ ತುಡಿತವಿದೆ. ನಿವೇದಿತಾ ಅಂಕೋಲಾ ಅತಿವಾಚ್ಯವಾಗಿ ಮಾತನಾಡಿದರೂ, ಈ ಕವಿತೆಯ ಹಿಂದಿರುವ ಶೋಷಿತ ಮಹಿಳೆಯ ಮನಸ್ಸಿನ ಚಿತ್ರಣ ಮತ್ತೆ ಮತ್ತೆ ಕನಿಕರವನ್ನುಂಟುಮಾಡುತ್ತದೆ. ಹೀಗೆ ಅನೇಕ ಕವಯಿತ್ರಿಯರು ಪುರುಷರ ಲೈಂಗಿಕ ಸ್ವೇಚ್ಛಾಚಾರವನ್ನು ತಿರಸ್ಕರಿಸುವುದರ ಮೂಲಕ ಲೈಂಗಿಕ ಸ್ವಾತಂತ್ರ್ಯವನ್ನು ಪರೋಕ್ಷವಾಗಿ ಹೇಳಿದ್ದಾರೆ.

" ಅಂದು ಸೂರ್ಯ
ಪಡುಮನೆಗೆ ಹೋದ
ಆಕಾಶ ಕಪ್ಪೇರಿ ಸತ್ತಿತು
ಆಕೆ ಒಳ ಬಂದು
ತಣ್ಣೀರು ತಲೆ
ಮಿಂದಳು "

—(ವೈದೇಹಿ : ಲಂಕೇಶ ಪತ್ರಿಕೆ : ದಿ/೧೪–೫–೮೯)

" ಮತ್ತೊಬ್ಬರೆದುರು
ನಾಚಿಕೆಗೆ
ಈಡಾಗಿಸುವ ಹುಡುಗ
ಕೋಣೆಯೊಳಗೆ
ನನ್ನಿಂದ ಏನು
ಅಪೇಕ್ಷಿಸುತ್ತೀ
ಎನ್ನುವದ ಹೇಳಿಬಿಡಲೆ"

—(ಗುಡಿಬಂಡೆ ಪೂರ್ಣಿಮಾ ' ಹೇಳಿಬಿಡಲೆ ' " ಬೇರು ")

" ಭೋಗಜೀವನದ
ಬೋಗುಣಿಯ ತುಂಬ
ಬಯಕೆಯ ಪಾಯಸ ಕುದಿಯುತ್ತಿದೆ
ಮುಚ್ಚದಿರಿ ತ್ಯಾಗಯೋಗದ ಮುಚ್ಚಳಿಕೆಯು "

—(ಮಲ್ಲಿಕಾ ಘಂಟಿ : ' ಸುಳಿಯದಿರಿ ತ್ಯಾಗಗಳೆ ' :
" ತುಳಿಯದಿರಿ ನನ್ನ")

ಶತಮಾನಗಳುರುಳಿ ಉರುಳಿದರೂ
ಹೆಣ್ಣು ಹೆಣ್ಣಾಗಿ ಗಂಡನ್ನು ತಾನಾಗಿ
ಪ್ರೀತಿಸಿ ಪ್ರೀತಿಯ ಪಡೆದಿರುವುದು ಎಲ್ಲಿ ಹೇಳು ಅಂಬೆ ?
ಹಾಗೊಮ್ಮೆ ಹಾಡಿದರವಳು ಎದೆಯೊಲವ
ಹಚ್ಚುವರೆ ! ಹಣೆಪಟ್ಟಿ "ದಂಡುರುಂಬೆ"

—(ಅನಸೂಯಾದೇವಿ : ' ಅಂಬೆಗೊಂದು ಪತ್ರ ' :
೧೯೮೬ ಕವಿತೆಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ)

ಮೊದಲಿನೆರಡು ಕವಿತೆಗಳಲ್ಲಿ ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಮುಕ್ತ ಆಲೋಚನೆಯಿದೆ. ವೈದೇಹಿ ತುಂಬ ಕಾವ್ಯಾತ್ಮಕವಾಗಿ ತಮ್ಮ ಭಾವನೆಗಳನ್ನು ಕವಿತೆಗಳಲ್ಲಿ ಹಿಡಿದಿಡುತ್ತಾರೆ. ಆದರೆ ಗುಡಿಬಂಡೆ ಪೂರ್ಣಿಮಾ ತುಂಬಾ ವಾಚ್ಯವಾಗಿ ಹೇಳಿಬಿಡುತ್ತಾರೆ. ಅಷ್ಟೆಲ್ಲಾ ವಾಚ್ಯಾರ್ಥದ ನಡುವೆಯೂ ಅವರ ಕವಿತೆ ಗಮನ ಸೆಳೆಯಲು ಕಾರಣ, ಹೆಣ್ಣೊಬ್ಬಳು ಈ ದೇಶದ ಸಂಸ್ಕೃತಿಯಲ್ಲಿ ತನಗನಿಸಿದ್ದನ್ನು ಮುಕ್ತವಾಗಿ ಮಾತನಾಡಬಲ್ಲಳು ಎಂಬುದು. ಇಲ್ಲಿ ಲೈಂಗಿಕ ವಸ್ತು ಕಾವ್ಯದ ಒಲವಿನ ಅಭಿವ್ಯಕ್ತಿಯಾಗಿ ಮೂಡಿಬಂದಿದೆ.

ಹೆಣ್ಣನ್ನು ದೇವತೆಯೆಂದು ಹೊಗಳಿ ತ್ಯಾಗದ ಪಟ್ಟ ಕಟ್ಟಿರುವ ಸಂಸ್ಕೃತಿಯ ವ್ಯವಸ್ಥೆಯಲ್ಲಿ ಮಲ್ಲಿಕಾ ಘಂಟಿ ಅಂತಹ ತ್ಯಾಗಗಳಿಗೆ ತನ್ನಲ್ಲಿ ಸ್ಥಾನವಿಲ್ಲವೆಂದು ತಿಳಿಸುತ್ತಾಳೆ. ಭೋಗಜೀವನ, ಬಯಕೆಯ ಪಾಯಸ ಇವೆಲ್ಲಾ ನುಡಿಗಳು. ಮಹಿಳಾ ಸ್ವಾತಂತ್ರ್ಯದ ಆಶಯಗಳೊಂದಿಗೆ, ಲೈಂಗಿಕ ಸಾತಂತ್ರ್ಯದ ಮಹತ್ವವನ್ನೂ ಹೇಳುತ್ತವೆ.

'ತ್ಯಾಗ ಯೋಗದ ಮುಚ್ಚಳಿಕೆಯು ಮುಚ್ಚದಿರಿ' ಎನ್ನುವಂತಹ ನುಡಿ ಇಂದಿನ ಅನಿವಾರ್ಯ ಸತ್ಯವಾಗಿದೆ. ಅಂಬೆಯನ್ನು ಪ್ರಶ್ನಿಸುವುದರ ಮೂಲಕ ಲೈಂಗಿಕ ಸ್ವಾತಂತ್ರ್ಯದ ಪ್ರಾಮುಖ್ಯತೆಯನ್ನು ಹೇಳುವ ಅನಸೂಯಾದೇವಿ ಅನೇಕ ಮೂಲಭೂತ ಸವಾಲುಗಳನ್ನೊಡ್ಡಿದ್ದಾರೆ. ಅಂಬೆಯನ್ನು ಮದುವೆಯಾಗಿ ಅವಳಿಗೆ ತಾನು ಪತಿಯೆನಿಸಲೊಲ್ಲದ ಭೀಷ್ಮ ತನ್ನ ಪ್ರತಿಜ್ಞೆಗೆ ಮಹತ್ವಕೊಟ್ಟು, ಹೆಣ್ಣು ಹೃದಯದ ಹೂವುಭಾವಗಳಿಗೆ ಕೊರಡಾಗುವುದನ್ನು ಕಂಡು ಕವಯಿತ್ರಿ ಪ್ರಶ್ನಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಹೆಣ್ಣು ಹೆಣ್ಣಾಗಿ ಗಂಡನ್ನು ತಾನೇ ಪ್ರೀತಿಸಿ ತನ್ನಿಚ್ಛೆಯಂತೆ ಸುಖ ಪಟ್ಟಿದ್ದು ಎಲ್ಲಿ? ಎಂದು ಕೇಳುವ ಈ ಕವಯಿತ್ರಿಯ ನುಡಿಯಲ್ಲಿ ಸತ್ಯಾಂಶವಿದೆ. ಹಾಗೊಮ್ಮೆ ಆಕೆ ತನ್ನ ಸಹಜ ಬಯಕೆಗಳನ್ನು ಬಿಚ್ಚತೊಡಗಿದರೆ ಆಕೆಗೆ ಅನೇಕ ಬಿರುದುಗಳನ್ನು ನೀಡಿ ಅಪಹಾಸ್ಯದಿಂದ ನೋಡುವ ಸಮಾಜದ ಅರಿವೂ ಅದರಲ್ಲಿದೆ. ಈ ವಿಚಾರವನ್ನು ಅನಸೂಯಾದೇವಿ ತುಂಬಾ ಸ್ಪಷ್ಟವಾಗಿ ತಿಳಿಸಿದ್ದಾರೆ.

ಕನ್ನಡದಲ್ಲಿ ಮುಕ್ತವಾಗಿ ಮಾತನಾಡುವ ಬರೆಯುವ ವಾತಾವರಣ ಇಂದು ಸೃಷ್ಟಿಯಾಗತೊಡಗಿದೆ. ಅನೇಕ ಮಹಿಳೆಯರು ಇಂದು ಧೈರ್ಯದಿಂದ ಸಮಾಜ ವ್ಯವಸ್ಥೆಯನ್ನು ಎದುರಿಸುತ್ತಿದ್ದಾರೆ. ಅನೇಕ ಅರ್ಥಪೂರ್ಣ ಸವಾಲುಗಳ ಮೂಲಕ ತಮ್ಮ ಮೂಲಭೂತ ಹಕ್ಕುಗಳನ್ನು ಕೇಳುತ್ತಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಅನೇಕ ಮಹಿಳೆಯರ ಬರವಣಿಗೆ ಕಾವ್ಯವಾಗುವುದೇ ಇಲ್ಲ. ಅದು ಭಾಷಣದ ರೂಪದಲ್ಲಿ, ವರದಿಯ ರೂಪದಲ್ಲಿ ನಿಂತುಬಿಡುತ್ತದೆ. ಈ ಮಿತಿಯನ್ನು ಮೀರಿ ಬೆಳೆದರೆ, ಕನ್ನಡ ಕವಯಿತ್ರಿಯರು ಜ್ವಲಂತ ಸಮಸ್ಯೆಗಳನ್ನು ನಿರೂಪಿಸುವಾಗಲೂ ಕೂಡ ಕಲಾತ್ಮಕ ಗುಣವನ್ನು ಉಳಿಸಿಕೊಳ್ಳಬಲ್ಲರು. ಕಲಾತ್ಮಕ ಗುಣವನ್ನುಳಿಸಿಕೊಂಡೇ ವಸ್ತುನಿಷ್ಠವಾಗಿ, ವೈಚಾರಿಕವಾಗಿ ಬರೆಯುವ ಚ. ಸರ್ವಮಂಗಳಾ, ಪ್ರತಿಭಾ ನಂದ ಕುಮಾರ, ಸವಿತಾ ನಾಗಭೂಷಣ, ಕಮಲಾ ಹೆಮ್ಮಿಗೆ, ವೈದೇಹಿ, ಸ. ಉಷಾ, ಮಾಲತಿ ಪಟ್ಟಣಶೆಟ್ಟಿ ಗಮನಸೆಳೆಯುತ್ತಾರೆ. ಪುರುಷಾರ್ಥಗಳಲ್ಲಿ ಒಂದಾದ 'ಕಾಮ' ಮತ್ತು ಅದಕ್ಕೆ ಸಂಬಂಧಿಸಿದ ಲೈಂಗಿಕತೆಯ ಬಗೆಗೆ ಇಂದು ಹೆಚ್ಚು ವೈಜ್ಞಾನಿಕವಾಗಿ ವಸ್ತುನಿಷ್ಠವಾಗಿ ಅಧ್ಯಯನವಾಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕನ್ನಡ ಮಹಿಳೆಯರ ಕಾವ್ಯದಲ್ಲಿಯೂ ಅನೇಕ ಹೊಸ ಹೆಜ್ಜೆಯ ಗುರುತುಗಳಿವೆ.

ಎಂ. ಎಸ್. ವೇದಾ

ಚಿತ್ರೆಯ ಪ್ರಶ್ನೆ

ಕನ್ಯೆ ಕೂರಲಿಲ್ಲ ಅಂತಃಪುರದ ಒಳಗೇ
ಕಾಡುಮೇಡುಗಳಲಿದು ಕಾಡುಮೃಗಗಳ ಬೇಟೆಯಾಡಿದ್ದೇ
ಹೆಚ್ಚು. ಕಂಡಿದ್ದಳೇನು ? ತಾನೇ ಮತ್ತೊಬ್ಬನು ಹೂಡುವ
ಪ್ರೇಮದ ಹೆಸರಿನ ಆಟಕ್ಕೆ ದಾಳವಾಗುತ್ತೇನೆಂದು

ಅಪ್ಪನೇನೋ ಗಂಡಿಲ್ಲದೆ ಗಂಡು ಮಕ್ಕಳಂತೇ ಸಾಕಿದ್ದ
ಹಾಗೆಂದು ಅವಳ ಹೆಣ್ತನವ ಅಳಿಸಲಿಕ್ಕಾಗಿತ್ತೆ ?
ಹೆಚ್ಚೆಂದರೆ ಬಚ್ಚಿಟ್ಟಿರಬಹುದು. ಬಿಚ್ಚಿಟ್ಟ ಬಯಕೆಯೊಡನೆ
ಬಚ್ಚಿಟ್ಟ ಹೆಣ್ತನವೂ ಉರಿದು ಅವ್ವಾ ಅಪ್ಪಾ ತನ್ನತನ
ಲೋಕರೂಢಿ ಸಂಪ್ರದಾಯಗಳೆಲ್ಲಾ ಹಿಂದೆ ಸರಿದವು
ಮಧ್ಯಮ ಪಾಂಡವನ ಆಗಮನದೊಂದಿಗೆ !

ಕಲ್ಯಾಣ ಪರಂಪರೆಗಳಿಗೆ ಯಾತ್ರೆಯ ನೆಪವೊಡ್ಡಿ ಬಂದವನ ಹರಯ
(ಹೇಳಿ ಕೇಳಿ ಕೃಷ್ಣನ ಗೆಳೆಯ) ಕಾಯಲು ಸಾಧ್ಯವೇ ಹೋಮ
ಹವನ ಸಪ್ತಪದಿ ಮಂತ್ರಗಳನ್ನ ಪ್ರೇಮದ ತಂತ್ರವೊಂದೇ ಸಾಕಲ್ಲ
ಚಿತ್ರೆ ಹೆಣ್ಣಾಗಿ ಅರಳಿಯೇಬಿಟ್ಟಳು ಮುಂದೆ ನಡೆದ ಪಾರ್ಥ ಕಲ್ಯಾಣಾರ್ಥ

ತಾಳುವ ತಾಳ್ಮೆಯಿಲ್ಲದೆ ತಾಳಿಯಿಲ್ಲದೆ ತಾಯಿಯಾದವರಿಗೇನು ಕೊರತೆ
ಭಾರತದಲ್ಲಿ. ಒಡಲು ಎದೆ ಉರಿದು ಬಿರಿದರೂ ಹೆರವರ ಬಾಯಿಗೆ
ಪಕ್ಕಾಗಿದ್ದೂ ನಿಶ್ಚಿಂತೆಯಾಗಿ ತನ್ನೆಲ್ಲಾ ದುಗುಡಗಳ ತೂರಿ ಬಿಟ್ಟಳು
ಮಗನ ತಾಯಿಯಾಗಿ. ಒಳಿತು ಕೆಡಕು ಪ್ರೀತಿ ದ್ವೇಷ ಕಾಡು ನಾಡು
ಸಂತಸ ಸಂಕಟ ಯುದ್ಧ ಯಾತ್ರೆ ಎಲ್ಲಿಯಾದರೂ ನೆನಪಾಯಿತೇ
ಅವನಿಗೆ ಇವಳದು. ಬುಡಕ್ಕೇ ಬೆಂಕಿ ತಗುಲಿದಾಗ ತಟ್ಟನೆ ಎಚ್ಚೆತ್ತ

ತನ್ನಿಂದ ಬೆಳೆದ ಮಗನನ್ನೆ ತನ್ನವನಲ್ಲ ಎಂದಷ್ಟಕ್ಕೆ ಮುಚ್ಚೀತೆ
ಅವನ ತೂತು ? ಸರ್ವಸ್ವವನ್ನೂ ಸಮರ್ಪಿಸಿ ಶಬರಿಯಾಗಿ ಕೂತ ಚಿತ್ರೆ
ಯನ್ನೆ ವಿಚಿತ್ರವಾಗಿ ನೋಡಿ " ಯಾವ ಚಿತ್ರಾಂಗದೆ ? ಯಾವ ಮಣಿಪುರ ?"
ವಾಸ್ತವತೆಯನ್ನ ಉದ್ಗಾರಗಳಲ್ಲಿ ಮುಚ್ಚಿ ಉದ್ಧಾರವಾಗುತ್ತೇನೆಂದು
'ಜಾರಿಣಿ' ಎಂದ

ಕೆಲವೇ ದಿನ ಕೆಲವೇ ಕ್ಷಣ ಹೆಣ್ತನ ಕಂಡ ಚಿತ್ರೆಯ ಮಗ
ಪಾರ್ಥನ ಉದ್ಗಾರಕ್ಕೆ ಸರಿಯಾಗಿ ಉತ್ತರ ಕೊಟ್ಟ ವೇಳೆಗೆ
ಚಿತ್ರೆ ಪ್ರಶ್ನೆಯೊಂದರ ಮುಂದೆ ಪರದೇಶಿಯಂತೆ ಕೂತಿದ್ದಳು
ಉಳಿದದ್ದು ಪಾರ್ಥನ ಬದುಕೋ ಅಥವಾ ...... ?

ಡಾ. ಕೆ. ಕೇಶವಶರ್ಮ

ಭಾವಕಿಯ ಬದಲಾದ ರೂಪವ....

(ಸರ್ವೋದಯ ವಿಮರ್ಶೆಯಲ್ಲಿ ಸಾಹಿತ್ಯಸೃಷ್ಟಿಯ ಬಗೆಗಿನ ನಿಲುವುಗಳು)

ಕನ್ನಡದ ಆಧುನಿಕ ಕಾಲಘಟ್ಟ ಪ್ರಾರಂಭವಾದುದೇ ವಸಾಹತು ಕಾಲಘಟ್ಟದಲ್ಲಿ. ಈ ಕಾಲಘಟ್ಟವನ್ನು ಕುರಿತು ಡಾ. ಬಿ. ದಾಮೋದರ ರಾವ್ ಅವರು ಹೀಗೆ ಹೇಳುತ್ತಾರೆ.

"೧೮೫೭ರ ದಂಗೆ ಅಡಗಿ ಭಾರತದ ಆಡಳಿತವನ್ನು ನೇರವಾಗಿ ಅಥವಾ ಪರ್ಯಾಯವಾಗಿ ಬ್ರಿಟಿಷರು ವಹಿಸಿಕೊಂಡಾಗಲೇ ಇಂಗ್ಲಿಷರ ಯಶಸ್ಸಿನ ಮಾದರಿ ಜನರ ಮುಂದೆ ಇತ್ತು. ಆಗಿನ ಬೆಳವಣಿಗೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದವರಲ್ಲಿ ಕಾರ್ಲ್ ಮಾರ್ಕ್ಸ್ ಒಬ್ಬ. ಪೌರ್ವಾತ್ಯ ಸಮಾಜವನ್ನು ನಿರ್ನಾಮ ಮಾಡುವ ಮತ್ತು ಏಶಿಯಾದಲ್ಲಿ ಪಾಶ್ಚಾತ್ಯ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲು ಹಾಕುವ ಮಹತ್ತರ ಕಾರ್ಯಗಳನ್ನು ಇಂಗ್ಲೆಂಡ್ ನೆರವೇರಿಸುತ್ತದೆ ಎಂದು ಅವನು ಹೇಳಿದ" (ವಿವೇಕ ರೈ ಬಿ. ಎ. (ಸಂ) ೧೯೮೭, ಪು. ೮೨). ಅವರದೇ ಇನ್ನೊಂದು ಮಾತು, "ಮಾರ್ಕ್ಸ್‌ನ ಹೇಳಿಕೆಯಂತೆ ಈವರೆಗೆ ಏಶಿಯಾಟಿಕ್ ಸಮಾಜ ನಿರ್ನಾಮವಾಗಿಲ್ಲ. ಆದರೆ ಹೊಸ ಶಿಕ್ಷಣ ಮತ್ತು ಔದ್ಯಮೀಕರಣಗಳ ಮೂಲಕ ನಮ್ಮ ಬದುಕು ತಿರುವಿಕೊಂಡಿರುವುದು ನಿಜ. ಈ ತಿರುವಿಗೆ ಪಾಶ್ಚಾತ್ಯ ಶಿಕ್ಷಣವು ಒಂದು ಮುಖ್ಯ ಕಾರಣವಾದ ದೃಷ್ಟಿಯಿಂದಲೂ ೧೮೫೭ ಮಹತ್ವದ ವರ್ಷ. ಏಕೆಂದರೆ ಆ ವರ್ಷ ಕಲ್ಕತ್ತ, ಮುಂಬೈ, ಮದ್ರಾಸು ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದು ದೇಶೀಯ ಶಿಕ್ಷಣ ಕ್ರಮವು ನಿರ್ಣಾಯಕವಾಗಿ ಸೋಲನ್ನು ಒಪ್ಪುವಂತಾಯಿತು. ಐಹಿಕದ ಒತ್ತು, ವೈಯಕ್ತಿಕ ವಿಚಾರ ಸರಣಿ, ಸಣ್ಣ ವಿವರಗಳನ್ನು ಉಪೇಕ್ಷಿಸದ ವಿಶಿಷ್ಟ ವಾಸ್ತವಿಕ ನಿರೂಪಣೆ, ಶಿಕ್ಷಿತ ಮಧ್ಯಮ ವರ್ಗ ಇವು ಪಾಶ್ಚಾತ್ಯ ಶಿಕ್ಷಣದ ಫಲವಾಗಿ ಬಂದವು (ಅದೇ. ಪುಟ ೮೨–೮೩)[೧]. ಈ ಹೊಸ ಅವಸ್ಥೆಯ ಪರಿಣಾಮವಾಗಿ ಹುಟ್ಟಿಕೊಂಡ ತೀವ್ರತೆಯು ಕನ್ನಡದಲ್ಲಿ ವಿದ್ಯುತ್ಸಂಚಾರವನ್ನು ಒದಗಿಸಿತು. ಹೊಸಗನ್ನಡದ ಕಾಲಘಟ್ಟದಲ್ಲಿ ದೊರಕಿದ ಅವಸ್ಥೆಗಳು ಹೀಗಿವೆ :

(೧) ಕನ್ನಡದ ವಿದ್ಯಾವಂತ ಜನತೆಗೆ ದಕ್ಕಿದ ಇಂಗ್ಲಿಷ್ ಸಾಹಿತ್ಯದ ಪರಿಚಯ, ವಾಸ್ತವವಾಗಿ ಈ ರೀತಿಯ ಪರಿಚಯವು ಹೊಸ ಶಿಕ್ಷಣದ ನೀತಿಯ ಫಲವಾಗಿ ರೂಪಿತವಾದ್ದರಿಂದ—ಸಹಜವಾಗಿ ಕಲಿಕೆಯ ಕ್ರಮದಲ್ಲಿಯೇ ಹೊಸತೊಂದು ದೃಷ್ಟಿಕೋನವು ಸಂಪ್ರಾಪ್ತವಾಯಿತು. ಆಳರಸರಾಗಿದ್ದ ಬ್ರಿಟೀಷರು ಆಸಕ್ತಿ ವಹಿಸಿದ್ದ ಶಿಕ್ಷಣ ಕ್ರಮದ ಬದಲಾವಣೆಯ ನಮೂನೆಗಳು ಅವರ ಸ್ವಾರ್ಥದ ಕೂಸಾಗಿದ್ದರೂ, ಹಳೆಯ ಶೈಕ್ಷಣಿಕ ಪದ್ಧತಿಯೊಂದು (ಮಠಕೇಂದ್ರಿತ ಶಿಕ್ಷಣ) ಮಾಯವಾಗಲು ತೊಡಗಿತ್ತು. ಆ ತನಕದ ಶಿಕ್ಷಣ ಕ್ರಮದಲ್ಲಿದ್ದ "ಬಾಯಿಪಾಠ"ದ ನಮೂನೆ ಹೋದುದೇ ವಸಾಹತುವಿನ ಪರಿಣಾಮ. ಈ "ಬಾಯಿಪಾಠದ" ಪರಂಪರೆಯ ಬದಲಿಗೆ ತುಂಬಿಕೊಂಡದ್ದು "ಓದು". ಈ "ಘನಪಾಠಿ"ಗಳ ಬದಲಿಗೆ ಬಂದು ಓದುಗರು ಇಂಗ್ಲಿಷನ್ನು, ಕನ್ನಡವನ್ನು ಓದಲು ತೊಡಗಿದರು. "ಅರಿವು" ಅನ್ನುವ ಪರಿಕಲ್ಪನೆಯೇ ಮಗುಚಿದ್ದರ ಪರಿಣಾಮದಿಂದ ಹಳೆಯ ಆಕೃತಿಗಳು, ಕಲಿಕೆಯ ಕ್ರಮಗಳು ಬಿದ್ದುಹೋದವು. ಒಂದು ಹೊಸ ಉತ್ಪಾದನಾ ಕ್ರಮದೊಂದಿಗೆ ತೀರಾ ಸಹಜವಾಗಿ ಬೆಳೆಯುವ ಪರಿಶ್ರಮವಿದು.

(೨) ಎರಡನೆಯ ಅವಸ್ಥೆಯೆಂದರೆ, ಎರಡು ಜಗತ್ತುಗಳೊಂದಿಗೆ ಸಾಮರಸ್ಯ ಏರ್ಪಟ್ಟುದು. "ನಮ್ಮಲ್ಲಿಯ ಶಿಕ್ಷಣ ಕ್ರಮ ವಸಾಹತುಶಾಹಿ, ದೇಸಿ ಸಾಂಸ್ಕೃತಿಕ ಮಾದರಿಗಳ ಕಲಬೆರಕೆಯಿಂದ ರೂಪುಗೊಂಡಿದೆ" (ನಾಗರಾಜ, ಆ.ಶ. ೧೯೮೩, ಪು. ೩೬)[೨].

ಈ ಎರಡು ಅವಸ್ಥೆಗಳ ಪರಿಣಾಮದಿಂದ ಕನ್ನಡದಲ್ಲಿ ಹೊಸತೊಂದು ಸಂವೇದನೆಯು ಸಂಜನಿತವಾಯಿತು. ಯಾವುದೇ ಕಾಲಘಟ್ಟದಲ್ಲಿ ಹೊಸ ಸಂವೇದನೆಯು ಹುಟ್ಟಿಕೊಂಡಾಗ ಸಾಹಿತ್ಯದ ಬಗೆಗೆ ಇರುವ ನಂಬಿಕೆಗಳು, ಅದರ ಬಗೆಗಿನ ಆಸಕ್ತಿಯೂ ಬದಲಾಗುತ್ತದೆ.

ಆಧುನಿಕ ಕಾಲದ ಸಾಹಿತ್ಯ ಪ್ರಕಾರಗಳಲ್ಲಿ ವಿಮರ್ಶೆಯೂ ಒಂದು. ಈ ಕಾಲದಲ್ಲಿ ವಿಮರ್ಶೆಯ ಪ್ರಕಾರವು ಹುಟ್ಟಿಕೊಂಡದ್ದೇ ಹೊಸ ಸಂವೇದನೆಯ ಫಲವಾಗಿ. ಪಾಶ್ಚಾತ್ಯ ಸಾಹಿತ್ಯದಲ್ಲಿ ವಿಮರ್ಶೆಗೆ ವಿಶಿಷ್ಟತೆಯಿದೆ, ಪರಂಪರೆಯಿದೆ. ಆದರೆ ಕನ್ನಡದಲ್ಲಿ ವಿಮರ್ಶೆಗೆ ಈ ರೀತಿಯ ಪರಂಪರೆಯಿಲ್ಲ. "ಕನ್ನಡದಲ್ಲಿ ಸೃಜನಶೀಲ ಸಾಹಿತ್ಯಕ್ಕೆ ಒಂದು ಅವಿಚ್ಛಿನ್ನ ಪರಂಪರೆಯಿದೆ. ಆದರೆ ಸಾಹಿತ್ಯ ವಿಮರ್ಶೆಗೆ ಅಂಥ ಪರಂಪರೆಯಿಲ್ಲ. ನವೋದಯ ಯುಗವೆಂದರೆ ಪ್ರಾಮುಖ್ಯವಾಗಿ ಪ್ರೋತ್ಸಾಹ ಯುಗವಾದ್ದರಿಂದ ಆಗ ನಿಜವಾದ ಸಾಹಿತ್ಯ ವಿಮರ್ಶೆಗೆ ಅವಕಾಶವಿರಲಿಲ್ಲ" ಎನ್ನುವ ಅಭಿಪ್ರಾಯವೂ ಬಂದಿದೆ.[೩] ಈ ದೃಷ್ಟಿಯಿಂದ, ಕನ್ನಡಕ್ಕೆ ವಿಶೇಷವಾಗಿ ಆಮದಾದ ಪ್ರಕಾರಗಳಲ್ಲಿ ವಿಮರ್ಶೆಯ ಪ್ರಕಾರವೂ ಒಂದು. ಇಲ್ಲಿ ಗ್ರಹಿಸಬೇಕಾದ ಮುಖ್ಯವಾದ ಸಂಗತಿಯೆಂದರೆ—ಗದ್ಯಕ್ಕೂ ವಿಮರ್ಶೆಯ ಪ್ರಕಾರಗಳಿಗೂ ಸಂಬಂಧವಿರುವುದು. ಎರಡನೆಯದಾಗಿ, ಈ ಕಾಲಘಟ್ಟದಲ್ಲಿಯೇ ಸಾಹಿತ್ಯದ ಅರ್ಥವಿಸ್ತರಣೆಗೂ, ಜನರಿಗೂ ಮಧ್ಯೆ ಸಂಬಂಧ ಕಲ್ಪಿತವಾಗಬೇಕಾದರೆ 'ವಿಮರ್ಶೆಯ' ಪ್ರಕಾರವೂ ಬೇಕೆಂಬ ನಂಬಿಕೆ

ಬಂದಿರುವುದು. ಬಹುಶಃ ಕೊಂಡಿಯ ಕೆಲಸವನ್ನು ವಿಮರ್ಶೆ ರೂಢಿಸಿಕೊಂಡ ಕಾಲವಿದು. ಇದಕ್ಕೆ ಕಾರಣ: ಇಲೈಟಿಸ್ಟ್ ಜನವರ್ಗ ಬೆಳೆದಿರುವುದು. ಆಧುನಿಕ ಕಾಲಘಟ್ಟದಲ್ಲಿ ಒಟ್ಟು ಉತ್ಪಾದನಾ ಸಂಬಂಧದ ಬದಲಾವಣೆಯ ಪರಿಣಾಮವೇ ಈ ಇಲೈಟಿಸ್ಟ್ ವರ್ಗವಾಗಿರುವುದರಿಂದ—ಸಾಮಾನ್ಯರಿಗಿಂತ ಬೇರೆಯಾಗಿ ಸಾಹಿತ್ಯವನ್ನು ಅರ್ಥವಿಸಿಕೊಳ್ಳುವ ನೆಲೆಯ ಶೋಧನೆಯೂ ಈ ಇಲೈಟಿಸ್ಟ್ ವರ್ಗಕ್ಕೆ ಮುಖ್ಯವಾಯಿತು. ಇದರ ಹಿಂದಿರುವ ಡಯಲೆಕ್ಟಿಕ್ಸ್ ಕೂಡ ತುಂಬಾ ವಿಚಿತ್ರವಾದುದು. ಸದ್ಯ ಈ ಬದಲಾದ ಹಿನ್ನೆಲೆಯ ಜೊತೆಯಲ್ಲಿ ಸಾಹಿತ್ಯ ಸ್ವರೂಪದ ಬಗೆಗೆ ಬದಲಾದ ಚಿಂತನೆಯನ್ನು ಚರ್ಚಿಸುವುದು ಇಲ್ಲಿಯ ಉದ್ದೇಶ.

ಆಧುನಿಕ ಕಾಲಘಟ್ಟದ ಮೊದಲ ಹೊತ್ತಿನ ವಿಮರ್ಶಕರಿಗೆ ಕೆಲವು ಮುಖ್ಯ ಸಮಸ್ಯೆಗಳು ಕಾಡಿವೆ :

೧. ಸಾಹಿತ್ಯ ಸೃಷ್ಟಿಯಾಗುವ ನೆಲೆಯನ್ನು ನಿರ್ದಿಷ್ಟ ಹಂತದಲ್ಲಿ ನಿಲ್ಲಿಸಿ ಚರ್ಚಿಸುವುದು.
೨. ಸಾಹಿತ್ಯದ ಸ್ವರೂಪವನ್ನು ನಿರ್ಣಯಿಸಲು ಬೇಕಾದ ಪರಿಕಲ್ಪನೆಗಳನ್ನು ಮರುಶೋಧಿಸುವುದು.
೩. ಸಾಹಿತ್ಯ ಸ್ವರೂಪಕ್ಕೆ ಎರವಾಗಬಹುದಾದ ಸಂಸ್ಕೃತಿಯ ಬಗೆಗೆ ಚರ್ಚಿಸುವುದು.
೪. ಸಾಹಿತ್ಯಕ್ಕೂ ಓದುಗನಿಗೂ ಇರಬಹುದಾದ ಸಂಬಂಧ ಹೇಗೆ ಸಾಹಿತ್ಯ ಸ್ವರೂಪವನ್ನು ನಿಯಂತ್ರಿಸುತ್ತದೆ ?
೫. ಸಾಹಿತ್ಯ ಸ್ವರೂಪದ ಬಗೆಗೆ ಆಶ್ರಯಿಸಬಹುದಾದ ಇನ್ನಿತರ ಸಂಗತಿಗಳು ಮುಖ್ಯವಾಗಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳು ಸಾಹಿತ್ಯ ಸ್ವರೂಪವೊಂದರಲ್ಲಿ ಪ್ರವರ್ತಿಸುವ ನೆಲೆಗಳು.

ಸಾಹಿತ್ಯ ಸೃಷ್ಟಿಯಾಗುವ ನೆಲೆಯನ್ನು ನವೋದಯ ವಿಮರ್ಶಕರು ತುಂಬ ಗಂಭೀರವಾಗಿ ಸ್ವೀಕರಿಸಿದ್ದಾರೆ. ಈ ದೃಷ್ಟಿಯಿಂದ ನವೋದಯ ವಿಮರ್ಶಕರು ಗಣಿಸಿದ ಮುಖ್ಯ ನೆಲೆಗಳು ಹೀಗಿವೆ:

ಕೆರೂರು ವಾಸುದೇವಾಚಾರ್ಯರು ಹೇಳುತ್ತಾರೆ: 'ಶಬ್ದಜ್ಞಾನ ವ್ಯಾಕರಣ ತರ್ಕಗಳಿಂದಲೇ ಸಾಲದು(ಅವೂಯುಕ್ತವಾಗಿ ಬೇಕೇ ಬೇಕೆಂಬುದನ್ನು ಅಲ್ಲಗಳೆಯುತ್ತಿಲ್ಲ). ಲೇಖಕರು ಸೃಷ್ಟಿ ಸೌಂದರ್ಯವನ್ನು ಚೆನ್ನಾಗಿ ನಿರೀಕ್ಷಿಸಿದವರಾಗಿರಬೇಕು. ಸದ್‌ಗ್ರಂಥಗಳ ಮುಖಾಂತರವಾಗಿ ಜ್ಞಾನಿಗಳ ಅನುಭವಾಮೃತವನ್ನು ಯಥೇಚ್ಛವಾಗಿ ಸೇವಿಸಿದವರಾಗಿರಬೇಕು. ಆಂದರೆಯೇ ಅವರ ಭಾಷೆಯಲ್ಲಿ ತೇಜಸ್ಸು, ಸೌಂದರ್ಯ, ಜ್ಞಾನ (ಆಚಾರ್ಯರ ಸಾಹಿತ್ಯದ ಗಮ್ಯವಾದ ಬೆಲೆಗಳು) ಮುಂತಾದವುಗಳು ಕಂಡು ಬರುವುವು. (ಕುರ್ತಕೋಟಿ ಕೆ. ಡಿ., ೧೯೬೪, ಪು. ೨೩೭).

ಕೆರೂರು ವಾಸುದೇವಾಚಾರ್ಯರ ಪ್ರಕಾರ, ಸಾಹಿತ್ಯಸೃಷ್ಟಿಯ ಹಿನ್ನೆಲೆಯಲ್ಲಿ ಬರಹಗಾರನ ಗ್ರಹಿಕೆ ಪ್ರಧಾನವಾಗುತ್ತದೆ. ಒಳ್ಳೆಯ ಸಾಹಿತ್ಯವೊಂದು ಲೇಖಕರು ಗ್ರಹಿಸುವ ಸೌಂದರ್ಯ ಮತ್ತು ಅಭ್ಯಾಸದಿಂದ ಸಂಜನಿತವಾಗುತ್ತದೆ. ನವೋದಯ ಕಾಲದ ಹೆಚ್ಚಿನ ವಿಮರ್ಶಕರು "ಸೌಂದರ್ಯ" ಎನ್ನುವುದನ್ನು ವಿಶಿಷ್ಟವಾಗಿ ಗ್ರಹಿಸಿದ್ದಾರೆ ಕೂಡ.[೪] ಈ ವಿಮರ್ಶಕರಿಗೆ ಸೌಂದರ್ಯವು ಕಾವ್ಯಕ್ಕೆ ಶೋಭೆ ಕೊಡುತ್ತದೆ. ಉಳಿದದ್ದು ಮಲಿನವಾಗುತ್ತದೆ. ಕೆರೂರರ ಪ್ರಕಾರ, ಸಾಹಿತ್ಯಸೃಷ್ಟಿಗೆ ಮೂಲಭೂತ ಎರಕಗಳು ಎರಡು : (೧) ಸೃಷ್ಟಿ ಸೌಂದರ್ಯದ ನಿರೀಕ್ಷಣೆ (೨) ಜ್ಞಾನಿಗಳ ಅನುಭವಾಮೃತದ ಸೇವನೆ.

ಒಂದನೆಯದು ಕೃತಿಗಾರನ ಗ್ರಹಿಕೆಯನ್ನು ಸೂಚಿಸಿದರೆ, ಎರಡನೆಯದು ಅಭ್ಯಾಸವನ್ನು (Practice) ಸೂಚಿಸುತ್ತದೆ. ಭಾರತೀಯ ಆಲಂಕಾರಿಕರ ಪ್ರಕಾರ, ಸೌಂದರ್ಯವೆನ್ನುವುದು ಮಹತ್ವಪೂರ್ಣದ್ದರ ಚಿತ್ರಣ. ಮಲಿನವಾದುದು, ಕ್ಷುದ್ರವಾದುದು ಸೌಂದರ್ಯವಾಗಲಾರದು. ಇವನ್ನೇ ಪುನರ್ವಿಧಿಸುವ ವಿಶಿಷ್ಟ ಪ್ರಯತ್ನವೊಂದು ಕೆರೂರರ ಮಾತಿಗಿದೆ. ಅದೇ ರೀತಿಯಲ್ಲಿ ಜ್ಞಾನದ ಬಗೆಗಿನ ಮಾತು ಕೂಡ. ಸಾಂಪ್ರದಾಯಿಕವಾಗಿ ಗ್ರಹಿಸಲಾಗಿರುವಂತೆ—ಜ್ಞಾನವೆನ್ನುವುದು ವಿಜ್ಞಾನವಾಣಿಯಲ್ಲ ವಸಾಹತುಪೂರ್ವದ ಕನ್ನಡದಲ್ಲಿ ಗ್ರಹಿಸಲಾಗಿರುವಂತೆ ಜ್ಞಾನವೆನ್ನುವುದು ಸತತ ಓದಿನಿಂದ ಸಂಪ್ರಾಪ್ತವಾಗುತ್ತದೆ. ಈ ಓದು ತಾತ್ವಿಕವಾಗಿ—ಶಾಸ್ತ್ರಮುಖಿಯಾಗಿರುವಂಥದ್ದು. ಸಮಾಜವೊಂದು ಪಲ್ಲಟಗೊಳ್ಳುತ್ತಿದೆಯೆಂದು ಅನ್ನಿಸಿದಾಗ ಈ ರೀತಿಯ ವಾದಗಳು ಹುಟ್ಟಿಕೊಳ್ಳುತ್ತವೆ.

ಕಾವ್ಯಸೃಷ್ಟಿಯಾಗುವ ಇನ್ನಿತರ ಹಿನ್ನೆಲೆಗಳನ್ನು ಬೇರೆ ಬೇರೆ ವಿಮರ್ಶಕರು ಬೇರೆ ಬೇರೆ ರೀತಿಯಲ್ಲಿ ನಿರೂಪಿಸುತ್ತಾರೆ :

"ಕವಿಗೆ ತನ್ನ ಸ್ವಂತ ಸುಖ, ದುಃಖ, ಕಲ್ಪನೆ ಜೀವನದ ಅಭಿಜ್ಞತೆಗಳ ಮೂಲಕ ಮಾನವಜಾತಿಗೆ ಸಾಮಾನ್ಯವಾದ ಚಿರಂತನ ಹೃದಯಾವೇಗವನ್ನು ಜೀವನದ ಮಾರ್ಮಿಕ ವಿಷಯಗಳನ್ನು ವ್ಯಕ್ತಪಡಿಸುವ ಶಕ್ತಿಯು ಇರುತ್ತದೆ" (ವೆಂಕಣ್ಣಯ್ಯ ಟಿ. ಎಸ್. ೧೯೬೩ ಪು. ೧).[೬] ಕಾವ್ಯವು ಮೂಲದಲ್ಲಿ ಬುದ್ಧಿಯ ಕರ್ಮವಲ್ಲ. ಬುದ್ಧಿಯನ್ನೂ ನಿರ್ಣಯಿಸಿ ನಡೆಸುವ 'ದರ್ಶನ'ದ ಕರ್ಮ ಎಂದರೆ, ಕೃತಿಯಲ್ಲಿ ಅಭಿವ್ಯಕ್ತವಾಗುವ "ದರ್ಶನದ ಪೂರ್ಣಜ್ಞಾನ ಕವಿಗೆ ಬುದ್ಧಿಪೂರ್ವಕವಾಗಿರಬಹುದು ಅಥವಾ ಇರದಿರಬಹುದು" (ಕುವೆಂಪು ೧೯೬೯ ಪು. ೧೨೭)[೭]. ಮಾಸ್ತಿಯವರ ಪ್ರಕಾರ, "ಸಂಸ್ಕಾರ"ವು ಕಾವ್ಯಕ್ಕೆ ಮೂಲನೆಲೆಯಾಗುತ್ತದೆ. (ಮಾಸ್ತಿ. ೧೯೫೪ ಪು. ೨೧)[೮]. ಆದರೆ, ಮಾಸ್ತಿಯವರು ಸಂಸ್ಕಾರ ವಿಶೇಷದ ಜೊತೆಗೆ, ಬುದ್ಧಿಯ ಚಟುವಟಿಕೆಯ ಕಡೆಗೆ ಗಮನಹರಿಸುತ್ತಾರೆ. ಬುದ್ಧಿ ಚಟುವಟಿಕೆಗೆ ಕಾರಣವಾಗುವುದು ಜನಾಂಗ ಎಂದು ಭಾವಿಸುವ ಮಾಸ್ತಿ ಚರಿತ್ರೆಯನ್ನು ನಿರ್ದಿಷ್ಟ ಅರ್ಥದಲ್ಲಿ ಗ್ರಹಿಸುತ್ತಾರೆ. ಚರಿತ್ರೆಯನ್ನು ಜನಾಂಗದ ''ಬಾಹ್ಯ ಚರಿತ್ರೆ''ಯೆಂದು ಭಾವಿಸುವ ಮಾಸ್ತಿ

ಯವರು ಚರಿತ್ರೆಯನ್ನು ಒಡಕು ಅರ್ಥದ ಮೂಲಕ ಗ್ರಹಿಸುತ್ತಾರೆ.[೯] ಇಲ್ಲಿ ಲಕ್ಷಿಸಬೇಕಾದ ಅಂಶವೆಂದರೆ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಚರಿತ್ರೆಗೆ ವಿಶೇಷ ಸ್ಥಾನವೇನೂ ಕಲ್ಪಿತವಾಗಿಲ್ಲ. ಚರಿತ್ರೆಗೂ—ಕಾವ್ಯಕ್ಕೂ ಸಂಬಂಧವಿಲ್ಲವೆಂಬ ತಿಳುವಳಿಕೆಯೇ ಭಾರತೀಯ ಕಾವ್ಯಮೀಮಾಂಸೆಯ ಉದ್ದಗಲಕ್ಕೂ ಬಂದುದರಿಂದ, 'ಕಾವ್ಯಮೀಮಾಂಸೆ' ಪ್ರತ್ಯೇಕ ಜಗತ್ತಿನ ಪ್ರತೀಕವಾಯಿತು. ಮಾಸ್ತಿಯವರು ಪ್ರಭೇದಗೊಳಿಸುವ ಬಾಹ್ಯಚರಿತ್ರೆ, ಅಂತರಚರಿತ್ರೆಯನ್ನುವುದು ಒಂದು ಸರಳವಾದ ನ್ಯಾಯ.

ಪು. ತಿ. ನರಸಿಂಹಾಚಾರ್ ಅವರು ಕಾವ್ಯದ ಉತ್ಪತ್ತಿಗೆ ಎರಡು ಗುಣಗಳನ್ನು ಕಂಡುಕೊಳ್ಳುತ್ತಾರೆ : ಭವನಿಮಜ್ಜನ ಚಾತುರ್ಯ ಮತ್ತು ಲಘಿಮಾ ಕೌಶಲ.[೧೧] ಪು. ತಿ. ನರಸಿಂಹಾಚಾರ್ ಅವರು ಪ್ರತಿಪಾದಿಸುವ ವಿಚಾರಗಳು ಮುಖ್ಯವಾಗಿ ಫಿಲಾಸಫಿಕಲ್ ಆಗಿರುವಂಥದ್ದು. "ಒಂದು ಚೇತನದಲ್ಲಿ ಭವದ ಧರ್ಮಾರ್ಥಕಾಮ ಸಂಬದ್ಧವಾದ ಆಕರ್ಷಣೆಗೂ ಮುಕ್ತಿಯ ವಿಕರ್ಷಣೆಗೂ ಉಂಟಾಗುವ ಘರ್ಷಣೆಯಿಂದ ಕಾವ್ಯ ಹುಟ್ಟುತ್ತದೆ, ಕಲೆ ಉದಿಸುತ್ತದೆ" (ನರಸಿಂಹಾಚಾರ್ ಪು.ತಿ. ೧೯೮೦ ಪು. ೧). ಇದನ್ನೇ ಸಾಮಾನ್ಯವಾದ ಅರ್ಥಕ್ಕೆ ಇಳಿಸಿದರೆ, ಲೌಕಿಕ ಮತ್ತು ಆಗಮಿಕದ ಘರ್ಷಣೆಯಿಂದ ಕಾವ್ಯ ಹುಟ್ಟುತ್ತದೆಯೆಂದು ಹೇಳಿದ ಹಾಗಾಯಿತು.[೧೨] ಪ್ರಾಚೀನ ಕನ್ನಡ ಕಾವ್ಯಗಳು ಹುಟ್ಟಿರುವುದು ಈ ರೀತಿಯ ತಾತ್ವಿಕ ನೆಲೆಗಟ್ಟಿನಿಂದ. ಭಾರತೀಯ ಸಮಾಜದ ಬದಲಾವಣೆಯ ಹಂತದಲ್ಲಿ ರೂಪುಗೊಂಡ ಈ ನಿರೂಪ ವಾಸ್ತವವಾಗಿ ಶೋಧನೆಯ ಹಂತವನ್ನು ತಲುಪದಿದ್ದರೂ ಕೂಡ, ಬದಲಾವಣೆಯ ಹಿನ್ನೆಲೆಯಲ್ಲಿ ಈ ಬೀಜವೊಂದು ಕಾಣಸಿಗುತ್ತದೆ ಎನ್ನುವುದೇ ಮುಖ್ಯ ಅಂಶ. ಭಾರತೀಯ ಸಮಗ್ರ ಸಂಸ್ಕೃತಿಯಲ್ಲಿ ಇದು ಇದ್ದುದೆ. ಲೌಕಿಕದ ಆಸಕ್ತಿಯಿಂದ ಪಾರಲೌಕಿಕದ ಕಡೆ ತುಡಿಯುವ ಮಹಾನ್ ಯತ್ನ ಕಾವ್ಯದ ಹಿಂದಿನ ಮುಖ್ಯ ಆಸಕ್ತಿಯೂ ಕೂಡಾ ಆಗಿದೆ.

ಬೇಂದ್ರೆ ಕಾವ್ಯಸೃಷ್ಟಿಯನ್ನು ಸಾತ್ವಿಕ ಅರ್ಥದ ಹಿನ್ನೆಲೆಯಲ್ಲಿ ಗ್ರಹಿಸುವುದರಿಂದ ಸಹಜವಾಗಿಯೇ ಅದು ತಾಮಸ, ರಾಜಸ ಕಳೆಯನ್ನು ದೂರವಿಡುತ್ತದೆ.[೧೩] ಸಾಮಾಜಿಕ ಮನಃಸ್ಥಿತಿಯ ಗಾಢ ಎಚ್ಚರವಿರುವ ಬೇಂದ್ರೆಯವರು ಸಾಹಿತ್ಯ ಸೃಷ್ಟಿಯನ್ನು ದೈನಿಕ ಕ್ಷುದ್ರತೆಯನ್ನು ಮೀರಿ ಬೆಳೆಯುವಂಥದ್ದು, ಬುದ್ಧಿಯೋಗ ಮತ್ತು ಭಾವಯೋಗದಿಂದ ಕಾವ್ಯಸೃಷ್ಟಿಯಾಗುತ್ತದೆಯೆಂದು ನಂಬುತ್ತಾರೆ. (ಬೇಂದ್ರೆ : ೧೯೭೪ ಪು. ೩೫) ಬುದ್ಧಿಯ ಮತ್ತು ಭಾವದ ಸಾಮರಸ್ಯವೊಂದು ಕಾವ್ಯ ಕಟ್ಟುವುದಕ್ಕೆ ಸಹಾಯ ಮಾಡುತ್ತದೆ ಎಂದು ನಂಬುವ ಬೇಂದ್ರೆಯ ನಿಲುವು ವಿಶಿಷ್ಟವಾದುದು. ಬುದ್ಧಿಯನ್ನು ಗ್ರಹಿಸುವ ವಿಧಾನಕ್ಷೇತ್ರವೆಂದು ತಿಳಿದುಕೊಂಡರೆ, ಭಾವನೆಗಳು ಅದನ್ನು ಅಭಿವ್ಯಕ್ತಿಸುವ ಮಾಧ್ಯಮವೆಂದು ತಿಳಿದುಕೊಳ್ಳಬಹುದು. "ಕಾವ್ಯಸೃಷ್ಟಿಯ ಈ ಹಂತದಲ್ಲಿ ಬೇಂದ್ರೆಯವರು 'ಪ್ರತಿಭೆ'ಯನ್ನು ಕುರಿತು

ಏನನ್ನೂ ಹೇಳದಿರುವುದು ಗಮನಾರ್ಹವಾಗಿದೆ. ಬೇರೆ ಒಂದು ಪ್ರಸಂಗದಲ್ಲಿ ಕಾವ್ಯ ಕಲೆಯೊಳಗೆ ಪ್ರಾತಿಭ ಪ್ರತೀತಿ " (ಬೇಂದ್ರೆ, ದ.ರಾ : ೧೯೭೪ ; ೩೧೩) ಇರುವುದನ್ನು ಗುರುತಿಸಿರುವುದುಂಟು (ನಾರಾಯಣ; ಕೆ. ವಿ. ೧೯೮೪ ಪು. ೭)[೧೪]. ಹೊಸ ಭಾವನೆಗಳಿಗೆ ಅನುಗುಣವಾದ ಹೊಸ ಶಬ್ದದ ಸೃಷ್ಟಿಯಾಗಬೇಕೆಂದು ಮಂಜೇಶ್ವರ ಗೋವಿಂದ ಪೈಯವರು ವಾದಿಸುತ್ತಾರೆ.[೧೫] ಗೋವಿಂದ ಪೈಯವರೂ ಭಾವನೆಯನ್ನೇ ಕಾವ್ಯ ಸೃಷ್ಟಿಗೆ ಮೂಲವೆಂದು ಗಣಿಸುತ್ತಾರಾದರೂ ಬದಲಾದ ಭಾರತೀಯ ಸನ್ನಿವೇಶವೊಂದು ಅವರಿಗೆ ಮೂಲದ್ರವ್ಯವಾಗಿದೆ.

ಅನುಭವ ಮತ್ತು ಭಾವದ ಕಡೆಗೆ ಒತ್ತನ್ನು ಕೊಟ್ಟ ಮತ್ತೊಬ್ಬ ವಿಮರ್ಶಕರೆಂದರೆ ತೀ. ನಂ. ಶ್ರೀ. ಯವರು. ಕವಿಯಲ್ಲಿ ಆವೇಶವನ್ನು ಹುಟ್ಟಿಸಲಾರದ, ಕವನಕ್ಕೆ ವಿಷಯವಾಗಲಾರದ ವಸ್ತು ಲೋಕದಲ್ಲಿ ಇಲ್ಲ. ಆತನು ಒಂದೊಂದು ಕಾಲದಲ್ಲಿ ಒಂದೊಂದು ಭಾವಕ್ಕೆ ಅಧೀನವಾಗುತ್ತಾನೆ. ಆತನ ಜೀವನದ ಮೂಲರೇಖೆಗಳೇ ವಿಶೇಷವಾಗಿ ಕವನಗಳಲ್ಲಿ ಪ್ರತಿಬಿಂಬಿಸಿದರೂ ಬೇರೆಯ ಕಲ್ಪನೆಗಳು ಆತನನ್ನು ಆಗಾಗ ನುಡಿಸದೇ ಇರುವುದಿಲ್ಲ. (ಶ್ರೀಕಂಠಯ್ಯ, ತೀ.ನಂ. ೧೯೭೪ ಪು. ೪೫).[೧೬] ಶ್ರೀಕಂಠಯ್ಯನವರು ' ಕಲ್ಪನೆ 'ಯೆಂದಿರುವುದು ಜೀವನದ ಮೂಲರೇಖೆಗಳಿಗೆ ಸಂಬಂಧಿಸಿಯೇ. ಈ ಅರ್ಥದಲ್ಲಿ, ಒಬ್ಬ ಕವಿಯು ಸೃಷ್ಟಿಸುವ ಅನೇಕ ಸಂಗತಿಗಳು ಆ ಬರಹಗಾರನ ಜೀವನ ಕ್ರಮವನ್ನು ಅವಲಂಬಿಸಿವೆ. ಸಮಾಜ ಚೈತನ್ಯದ ನಡುವೆ ಬದುಕುವ ಬರಹಗಾರನ ಮನಸ್ಥಿತಿಯನ್ನೇ ಒಂದು ಕೃತಿಯು ಒಟ್ಟರ್ಥದಲ್ಲಿ ಸೂಚಿಸುತ್ತಿರುತ್ತದೆಯೆಂಬ ತೀ.ನಂ.ಶ್ರೀ.ಯವರ ತಿಳುವಳಿಕೆಯು ಮಹತ್ವಪೂರ್ಣವಾದ ಅಂಶವನ್ನು ಹೊಂದಿದೆ.

ಆಧುನಿಕ ಕನ್ನಡದ ಮೂಲ ಸಂಗತಿಗಳನ್ನು ಸೂಚಿಸುವ ಡಿ.ವಿ.ಜಿ.ಯವರು ಗ್ರಂಥ ನಿರ್ಮಿತಿಗೆ ಅವಶ್ಯವಾದ ಮೂಲ ಕರಣಗಳನ್ನು ಕುರಿತು ಹೀಗೆ ಹೇಳುತ್ತಾರೆ. (ಡಿ ವಿ.ಜಿ. ೧೯೭೫. ಪು. ೫).[೧೭]

೧. ಪ್ರತಿಭೆ
೨. ಲೋಕ ಪರಿಜ್ಞಾನ
೩. ಶಾಸ್ತ್ರವ್ಯುತ್ಪತ್ತಿ
೪. ಪೂರ್ವ ಕವಿ ಸಂಪ್ರದಾಯ ವ್ಯಾಸಂಗ
೫. ರಚನಾಭ್ಯಾಸ

ಡಿ.ವಿ.ಜಿ.ಯವರದು ಈ ದೃಷ್ಟಿಯಿಂದ ತೀರಾ ಸಾಂಪ್ರದಾಯಿಕ ಮನಸ್ಸು. ಹಳೆಯ ಕೆಲವು ನಿಲುವುಗಳನ್ನು ಬಿಡದ ಡಿ.ವಿ.ಜಿ. ಮತ್ತೆ ಪಂಪ ಯುಗಕ್ಕೆ ಮರಳುತ್ತಾರೆ. ಪಂಪನ ಪ್ರಕಾರ ' ಪ್ರತಿಭೆ, ಸತತ ಅಭ್ಯಾಸ, ವಿದ್ವಾಂಸರ ಸೇವೆ ' ಕಾವ್ಯಕ್ಕೆ ಕಾರಣವಾಗುತ್ತದೆ.

ಪಂಪನ ಮಾತಿನ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಂಡರೆ ಡಿ.ವಿ.ಜಿ.ಯವರು ಕಾಲದ ದೃಷ್ಟಿಯಿಂದ ತುಂಬಾ ದೂರ ಬಂದಿಲ್ಲವೆಂದು ಅನಿಸುತ್ತದೆ. ಭಾರತೀಯ ಕಾವ್ಯ ಮೀಮಾಂಸೆಯ ಕೆಲವು ಸಿದ್ಧಾಂತಗಳನ್ನೇ ಹೊಸ ಶೀಶೆಗಳಲ್ಲಿ ತುಂಬುವ ಡಿ.ವಿ.ಜಿ.ಯವರ ಮನೋಧರ್ಮ ಒಂದು ದೃಷ್ಟಿಯಿಂದ ಸಾಂಪ್ರದಾಯಿಕ ಸ್ಥಗಿತತೆಯಿಂದ ಕೂಡಿರುವಂಥದ್ದು.

ಕವಿಯನ್ನು ರೇಡಿಯೋ ಯಂತ್ರಕ್ಕೆ ಹೋಲಿಸುವ ಡಿ.ಎಲ್.ಎನ್. (ನರಸಿಂಹಾಚಾರ್ ಡಿ.ಎಲ್. ೧೯೭೧. ಪು. ೬೭೪)[೧೮] ಸಾಹಿತ್ಯ ಸೃಷ್ಟಿಯ ಹಿನ್ನೆಲೆಯಲ್ಲಿ "ಕವಿಗಳ ಜೀವನ ಚರಿತ್ರೆ, ಅವರ ಮನಸ್ಸಿನ ಮೇಲೆ ಆಗಿರುವ ನಾನಾ ಪ್ರಭಾವಗಳ ಮಹಿಮೆ, ಅವರ ವಿದ್ಯಾಭ್ಯಾಸ, ಅವರ ಕೃತಿಗಳಿಗೆ ಪ್ರೇರಕವಾದ ಸಂದರ್ಭಗಳ ಪರಿಚಯ, ಅವರ ಧರ್ಮಾನುರಾಗ, ಅವರ ರಾಜಕೀಯ ಪಕ್ಷ, ಪ್ರತಿಪಕ್ಷಗಳ ಪರಿಜ್ಞಾನ, ಅವರ ಕಾಲದ ಸಮಾಜದ ಪರಿಸ್ಥಿತಿ ಇವೇ ಮೊದಲಾದ ಅಂಶಗಳ ವಿವರಣೆ ಹೇರಳವಾಗಿರಬೇಕು." ಎನ್ನುತ್ತಾರೆ (ಅದೇ. ಪು. ೯೯೪).[೧೯] ಕವಿಯನ್ನು ರೇಡಿಯೋ ಯಂತ್ರಕ್ಕೆ ಹೋಲಿಸುವಲ್ಲಿಯೇ ಡಿ.ಎಲ್.ಎನ್. ಸೃಷ್ಟಿಕಾರ್ಯವನ್ನು ಗುರುತಿಸುವ ಕ್ರಮ ವ್ಯಕ್ತವಾಗುತ್ತವೆ. ಸಾಹಿತ್ಯವನ್ನು ಪ್ರತ್ಯೇಕವಾದ, ಸ್ವಾಯತ್ತ ಜಗತ್ತೆಂದು ಗಣಿಸದ ಡಿ.ಎಲ್.ಎನ್. ಸಾಹಿತ್ಯದ ಕ್ರಿಯೆಯನ್ನು ನಿರಚನಗೊಳಿಸುತ್ತಾರೆ. ಉಳಿದ ಕೆಲವು ವಿಮರ್ಶಕರು ಸಾಹಿತ್ಯ ಸೃಷ್ಟಿಯ ಬಗೆಗೆ ವ್ಯಕ್ತಪಡಿಸುವ ಕೆಲವು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೀಗೆ ಹೇಳಬಹುದು :

೧. ಬಾಹ್ಯ ಜೀವನದಿಂದ ಗ್ರಹಿಸಿದುದನ್ನು ಕವಿಯು ತನ್ನ ಕಲ್ಪಕತೆಯೆಂಬ ಜಾದೂಗಾರನ ಕೋಲಿನಿಂದ ಪರಿವರ್ತನೆಗೊಳಿಸುತ್ತಾನೆ. (ಮಾಳವಾಡ, ಸ. ಸ. ೧೯೮೩. ಪು. ೪೪).[೨೦]

೨. ಕವಿಗೆ ಸ್ವಭಾವಸಿದ್ಧವಾದ ಒಂದು ಬಗೆಯ ಆವೇಶವು ಹುಟ್ಟಿ ಪದಾರ್ಥಗಳ ವಿಷಯವಾಗಿ ಅವನ ಮನಸ್ಸಿಗೆ ಬಂದ ಕಲ್ಪನೆಗಳು, ವಿಶೇಷ ಪ್ರಯತ್ನವಿಲ್ಲದೆಯೇ, ತಮಗೆ ತಾವೇ ಶಬ್ದರೂಪವಾಗಿ ಹೊರಬೀಳುತ್ತವೆ. (ಕರ್ಪೂರ ಶ್ರೀನಿವಾಸರಾವ್ ೧೯೭೧. ಪು. ೭೮).[೨೧]

೩. ಕಾವ್ಯಸೃಷ್ಟಿಗೆ ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸಗಳು ಅಗತ್ಯವೆಂದು ಕೆ. ಗೋಪಾಲಕೃಷ್ಣರಾಯರು ನಂಬುತ್ತಾರೆ. (ಗೋಪಾಲಕೃಷ್ಣರಾವ್ ಕೆ. ೧೯೭೩. ಪು. ೩೯).[೨೨]

೪. ಅನುಕರಣವೇ ಕಲೆಗಳ ಮೂಲಭೂತ ತತ್ವವೆಂದು ಹೇಳುವುದುಂಟು. (ಅನಂತಕೃಷ್ಣಶರ್ಮ, ರಾಳ್ಳಪಳ್ಳಿ ೧೯೭೧. ಪು. ೭)[೨೩]

೫. ಕಾವ್ಯಪ್ರಪಂಚವು ಕವಿ ಬಗೆದ ಒಂದು ಆದರ್ಶ ಪ್ರಪಂಚದ ಅನುಕರಣೆ. (ಸೀತಾರಾಮಯ್ಯ, ಎಂ.ವಿ. ೧೯೮೫. ಪು. ೬).[೨೪]

೬. ಸಾಹಿತ್ಯವೂ ಮಾನಸಿಕ ಸಂಸ್ಕೃತಿಯ ಫಲವೆನ್ನುತ್ತಾರೆ ಉಗ್ರಾಣ ಮಂಗೇಶರಾಯರು (ಲೀಲಾಭಟ್ ವಿ. (ಸಂ) ೧೯೮೭. ಪು. ೫೮).[೨೫]

ಸಾಮಾನ್ಯವಾಗಿ ಹೆಚ್ಚಿನ ವಿಮರ್ಶಕರು ಸಾಹಿತ್ಯ ಸೃಷ್ಟಿಯ ಹಿನ್ನೆಲೆಯಲ್ಲಿ ಗ್ರಹಿಸುವುದು ಅನುಭವ, ಪ್ರತಿಭೆ, ಅನುಕರಣೆ ಮತ್ತು ಸಂಸ್ಕೃತಿ.

೧:೩ ನವೋದಯ ಕಾಲದ ಕನ್ನಡ ವಿಮರ್ಶಕರು ಸಾಹಿತ್ಯ ಸೃಷ್ಟಿಯ ಬಗೆಗೆ ತಳೆದ ಸ್ಥೂಲವಾದ ನಿಲುವಿದು. ಒಂದು ಸೈದ್ಧಾಂತಿಕ ನಿಲುವಿನ ಮೂಲಕ ವಿವರಿಸುವುದಾದರೆ ಹೊಸ ಯುಗಕ್ಕೆ ಅನುಸಾರವಾಗಿ ಕಾವ್ಯಸೃಷ್ಟಿಯ ಬಗೆಗಿನ ನಿಲುವು ಕೂಡಾ ಬದಲಾಗುತ್ತದೆ.

೧ ಒಂದು ಕಲೆಯ ಸೌಂದರ್ಯದ ಸ್ವರೂಪ, ಅದರ ಬೆಳವಣಿಗೆಯು ಆಯಾ ಸಮಾಜದಲ್ಲಿ ಕಲಾವಿದನ ಸ್ಥಾನದ ಹಿನ್ನೆಲೆಯಲ್ಲಿ ಅನುವರ್ತಿತವಾಗುತ್ತದೆ.

೨. ಯಾವುದೇ ಸಮಾಜದಲ್ಲಿ ಕಲೆಗಿರುವ ಸ್ಥಾನ.

೩. ಪ್ರಜ್ಞೆಗೂ ತಾತ್ವಿಕತೆಗೂ ಸಂಬಂಧ.

೪. ಕೃತಿಯಲ್ಲಿ ಚಿತ್ರಗೊಳ್ಳುವ ವಾಸ್ತವ ಮತ್ತು ಅದರ ವಿಶಿಷ್ಟತೆ.

ಈ ಅಂಶಗಳನ್ನು ಒಳಗೊಂಡಂತೆ ಒಂದು ಸಾಹಿತ್ಯದ ಸೃಷ್ಟಿಯ ಬಗೆಗಿನ ನಿಲವು ವ್ಯಕ್ತವಾಗುತ್ತದೆ.

ಆಧುನಿಕ ಕಾಲಘಟ್ಟ ವಿಶಿಷ್ಟವಾದುದು. ಈ ಕಾಲಘಟ್ಟವನ್ನೇ ವಸಾಹತು ಕಾಲವೆಂದು ಇತಿಹಾಸಕಾರರು ಗುರುತಿಸುತ್ತಾರೆ. ಈ ಕಾಲಘಟ್ಟದಲ್ಲಿ ವಿಚಿತ್ರವಾದ ಸನ್ನಿವೇಶವೊಂದಿದೆ: ಈ ಸನ್ನಿವೇಶದಲ್ಲಿ ವಿದೇಶೀಯ ಚಿಂತನೆಗೂ ಭಾರತೀಯ ಚಿಂತನೆಗೂ ಅಂತಹ ವ್ಯತ್ಯಾಸವೇನೂ ಇಲ್ಲ. ಎರಡನ್ನೂ ಜೊತೆ ಸೇರಿಸುವ ವಿಶಿಷ್ಟ ಪ್ರಯತ್ನ ಈ ಸನ್ನಿವೇಶದ ಕಸಿ. ಬಹುಶಃ ಅಂತರಾಳದಲ್ಲಿ ವಿದೇಶೀಯ ಚಿಂತನೆಯ ವಿರುದ್ಧ ಪ್ರತಿಭಟಿಸುವ ಸುಪ್ತ ಯತ್ನವೊಂದಿದ್ದರೂ ಮೇಲುನೋಟದಲ್ಲಿ ಎಲ್ಲವೂ ಒಂದಾಗಿಯೇ ಕಾಣಿಸುತ್ತದೆ.[೨೬] ಹೊಸದಾಗಿ ವಿದ್ಯಾಭ್ಯಾಸವನ್ನು ಪಡೆದುಕೊಂಡ ಆಧುನಿಕರಿಗೆ ಐ. ಎ. ರಿಚರ್ಡ್ಸಗೂ ಭಟ್ಟತೌತನಿಗೂ ಅಂತಹ ವ್ಯತ್ಯಾಸವಿಲ್ಲದ ಸ್ಥಿತಿಯದು.

ಬದಲಾದ ಸನ್ನಿವೇಶವೊಂದು ಕನ್ನಡ ವಿಮರ್ಶೆಯ[೨೭] ಉಗಮಕ್ಕೆ ಕಾರಣವಾದಂತೆ ಕಾವ್ಯಸೃಷ್ಟಿಯ ಬಗೆಗೆ ಪರಿಕಲ್ಪನೆಗಳೂ ಬದಲಾದುವು.

ವಸಾಹತು ದೇಶಕ್ಕೆ ಈಗ ಮೂರು ಅವಸ್ಥೆ ಸಂಪ್ರಾಪ್ತವಾಗಿದೆ :

೧. ವಸಾಹತು ಕಾಲಘಟ್ಟದ ಅನಿವಾರ್ಯ ಆಲೋಚನಾ ಕ್ರಮದ ಅವಸ್ಥೆ.

೨. ಎರಡನೆಯ ವಸಾಹತು ಕಾಲದ ಅನಂತರದಲ್ಲಿ ಅದರಿಂದ ಪ್ರೇರಣೆಯನ್ನು ಪಡೆದುಕೊಂಡ ಅವಸ್ಥೆ. ಇದು ಬಿಡುಗಡೆ ಹೊಂದಿದ ನೆಲೆಯನ್ನು ಸೂಚಿಸುತ್ತದೆ.

೩. ಮೂರನೆಯ ಅವಸ್ಥೆಯೆಂದರೆ, ಈ ಎಲ್ಲದರಿಂದ ಬಿಡುಗಡೆ ಹೊಂದುವ ತೀವ್ರಯತ್ನ. ಈ ಕಾಲದ ಮುಖ್ಯ ಸಂಗತಿಯೆಂದರೆ, ತನ್ನದೇ ಸಾಂಸ್ಥಿಕ ಸಾಂಸ್ಕೃತಿಕ

ಅಂಶಗಳನ್ನು ಒಳಗೊಂಡು ಹೊಸ ವಿಸ್ತೃತತೆಯನ್ನು ಬೆಳೆಸುವುದು. ಈ ಆಲೋಚನಾ ಕ್ರಮವೊಂದು ಇದೀಗ ರೂಪುಗೊಳ್ಳುತ್ತಿದೆ. ಕನ್ನಡದ ನವೋದಯ ವಿಮರ್ಶೆಯ ಒಟ್ಟು ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಮುಖ್ಯ ಅಂಶವೆಂದರೆ ಈ ಮೊದಲು ಸೂಚಿಸಿದ ಮೊದಲನೆಯ ಅವಸ್ಥೆ. ಈ ಅವಸ್ಥೆಯಲ್ಲಿ ಅನಿವಾರ್ಯತೆ ಎಂಬೊಂದು ಸಂಗತಿಯಿದೆ. ಹೊಸದೊಂದು ವಿದ್ಯಾಭ್ಯಾಸ ಕ್ರಮಕ್ಕೆ ಮಧ್ಯಮ ವರ್ಗವೊಂದು ತೆರೆದುಕೊಂಡುದು. ಆಂಗ್ಲ ಶಿಕ್ಷಣಕ್ರಮ ಮತ್ತು ಭಾರತೀಯ ಆಲೋಚನಾ ಕ್ರಮದ ಸಮ್ಮಿಶ್ರ ರೂಪವಿದು. ಇದರ ಪರಿಣಾಮವೆಂದರೆ—ಮಿಶ್ರರೂಪಿಯಾದ ತಾತ್ವಿಕತೆಯನ್ನು ಈ ಕಾಲಘಟ್ಟ ರೂಪಿಸಿತು. ಇದರ ಮುಂದಿದ್ದ ಮುಖ್ಯ ಪ್ರಶ್ನೆಯೆಂದರೆ, ಭಾರತೀಯತೆಯನ್ನು ರೂಢಿಸಿಕೊಳ್ಳುವುದು ಹೇಗೆ? ಈ ಪ್ರಶ್ನೆಯು ಕೇವಲ ಕಲಾವಿದರಿಗೆ ಬಂದ ಪ್ರಶ್ನೆಯಲ್ಲ. ಒಟ್ಟು ಕಾಲದ ಹಿನ್ನೆಲೆಯಿಂದ ಗಮನಿಸಿದರೆ—ನಮ್ಮಲ್ಲಿಯ ರಾಷ್ಟ್ರೀಯ ನಾಯಕರಿಗೂ ಇದೊಂದು ತೊಡಕಿನ ಪ್ರಶ್ನೆಯೇ ಆಗಿತ್ತು. ಗಾಂಧಿಯ ವೈಚಾರಿಕ ನಿಲುವಿಗೂ—ರಾಜಾರಾಂ ಮೋಹನ್‌ರಾಯ್ ಅವರ ವೈಚಾರಿಕ ನಿಲುವಿಗೂ ಇರುವ ವ್ಯತ್ಯಾಸ ಸಂದರ್ಭದಿಂದಲೇ[೨೮] ಸಂಜನಿತವಾಗಿರುವಂಥದ್ದು.

ಹೊಸದಾಗಿ ಎಚ್ಚರಗೊಂಡ ಮಧ್ಯಮವರ್ಗದ ಸಂದರ್ಭವೆಂದರೆ—ಬರಹಗಾರನು ಕೃತಿಯನ್ನು ಅನುಸಂಧಾನದ ಮೂಲಕ ಗ್ರಹಿಸದೆ, ಕಾವ್ಯದ ಓದನ್ನು ವಿಸ್ತರಿಸುವುದಷ್ಟೇ ಮುಖ್ಯ ಉದ್ದೇಶವಾಯಿತು. ಕೃತಿಯ ಅನಂತರ ವಿಮರ್ಶಕ ಬಂದು ಓದುಗರಿಗೆ ತಿಳಿಯಹೇಳುವ ಕೆಲಸವನ್ನು ಕೈಗೊಂಡದ್ದು: ಕೃತಿ ಜಗತ್ತಿನ ಅರ್ಥ ವಿಸ್ತರಣೆಗಾಗಿ. ವಸಾಹತು ಅನುಭವಕ್ಕೆ ನೇರವಾಗಿ ಒಪ್ಪಿಕೊಂಡ ಕೆಲ ವಿಮರ್ಶಕರು ಸಾಹಿತ್ಯ ವಿಮರ್ಶೆಯ ಪರಿಭಾಷೆಯನ್ನು ವಿವರಿಸುವುದಕ್ಕೆ ಆಂಗ್ಲ ಸಾಹಿತ್ಯದ ಮಾದರಿಯನ್ನು ಆಯ್ಕೆ ಮಾಡಿದರೆ, ವಸಾಹತು ಅನುಭವವನ್ನು ಸುಪ್ತವಾಗಿ ದ್ವೇಷಿಸಿದ ವಿಮರ್ಶಕರು ವಿಮರ್ಶೆಯ ವಿವರಣೆಗೆ ಭಾರತೀಯ ತತ್ವಜ್ಞಾನದ ಪರಿಭಾಷೆಯನ್ನು ಆಶ್ರಯಿಸಿದರು. ಪ್ರಮುಖವಾಗಿ ವಿಮರ್ಶೆಯ ಇನ್ನೊಂದು ಮುಖವೇ ತತ್ವಜ್ಞಾನ ಆಗಿರುವುದರಿಂದ ಇದು ಸಹಜ ಕೂಡ.[೨೯] ಈ ದೃಷ್ಟಿಯಿಂದ ಎರಡು ಬಗೆಯ ವಿಮರ್ಶಕರು ನವೋದಯ ಕಾಲಘಟ್ಟದಲ್ಲಿಯೇ ದೊರೆಯುತ್ತಾರೆ.

ಸಾಹಿತ್ಯ ವಿಮರ್ಶೆಯ ಪರಿಭಾಷೆಯನ್ನು ವಿವರಿಸುವುದಕ್ಕೆ ಮತ್ತು ವಿಸ್ತರಿಸುವುದಕ್ಕೆ ಆಂಗ್ಲ ಸಾಹಿತ್ಯದ ಮಾದರಿಯನ್ನು ಆಯ್ಕೆ ಮಾಡಿಕೊಳ್ಳುವವರಲ್ಲಿ 'ತೌಲನಿಕ' ಎನ್ನಬಹುದಾದ ಅಂಶವೊಂದು ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ, ಕಾವ್ಯಸೃಷ್ಟಿಯ ಬಗೆಗೆ ಕೆಲವಿಮರ್ಶಕರು ಎತ್ತುವ ಅಭಿಪ್ರಾಯಗಳು ಕೇವಲ ಭಾರತೀಯ ಮನೋಧರ್ಮದಿಂದ ಕೂಡಿರುವಂಥದಲ್ಲ. ಕುವೆಂಪು ಅವರ ವಿಮರ್ಶೆ ಇದಕ್ಕೆ ಒಳ್ಳೆಯ ಉದಾಹರಣೆ.[೩೦] 'ಪ್ರತಿಭೆ' ಮುಂತಾದ ಸಂಗತಿಗಳನ್ನು ನಿರೂಪಿಸು

ವಾಗ ಹೆಚ್ಚಾಗಿ ಪಾಶ್ಚಾತ್ಯ ಕಾವ್ಯಮೀಮಾಂಸೆಯ ತಿಳುವಳಿಕೆಯನ್ನು ಆಶ್ರಯಿಸುತ್ತಾರೆ. ಇನ್ನೊಂದು ವರ್ಗದ ವಿಮರ್ಶಕರಿಗೆ ದೇಶಿಯ ಪರಿಕರಗಳೇ ಮುಖ್ಯವಾಗುತ್ತದೆ. ಕಾವ್ಯ ಸೃಷ್ಟಿಯಾಗುವ ನೆಲೆಯನ್ನು ಶೋಧಿಸುವಾಗ ಈ ವರ್ಗದ ವಿಮರ್ಶಕರು ಭಾರತೀಯ ತತ್ವಜ್ಞಾನವನ್ನು ಆಶ್ರಯಿಸುತ್ತಾರೆ. ಬೇಂದ್ರೆ, ಕೆರೂರರಂತಹ ವಿಮರ್ಶಕರ ನಿಲುವು ಈ ಬಗೆಯದು. "ಬೇಂದ್ರೆಯವರಂತೂ ಪ್ರಾಚೀನ ಕಾವ್ಯಗಳ ಮೌಲ್ಯಮಾಪನ ಮತ್ತು ವ್ಯಾಖ್ಯಾನದ ಕಾರ್ಯದಲ್ಲಿ ಹೆಚ್ಚು 'ದೇಶೀಯ'ವೂ ಅಂತರದೃಷ್ಟಿಯುಕ್ತವೂ ಆದ ಮಾರ್ಗವನ್ನು ಹಿಡಿದಿದ್ದಾರೆ. ಭಾರತೀಯ ದಾರ್ಶನಿಕರ ನಿಲುವುಗಳು ಬಿ.ಎಂ.ಶ್ರೀ.ಯವರ ಮೇಲೆ ಕಡಿಮೆ ಪ್ರಭಾವ ಬೀರಿದುದನ್ನು ಅರಿತ ಬೇಂದ್ರೆಯವರು ತಮ್ಮ ಬರವಣಿಗೆಯಲ್ಲಿ ಅವುಗಳನ್ನು ರೂಢಿಸಿಕೊಂಡರು" (ರಾಘವೇಂದ್ರ ರಾವ್ ಎಚ್.ಎಸ್. ೧೯೮೯, ಪು. ೧೦೧). ಈ ವರ್ಗದ ವಿಮರ್ಶಕರು ಭಾರತೀಯ ತತ್ವಜ್ಞಾನವನ್ನು ಆಶ್ರಯಿಸಿದ್ದು, ವಸಾಹತುವಿನ ಒತ್ತಡದಿಂದ ಬಿಡುಗಡೆಗೊಳ್ಳಲು. ಹೀಗಾಗಿ ಈ ವಿಮರ್ಶೆಯ ನೆಲೆಗಟ್ಟಿನಿಂದ ಸೂಚಿತವಾಗುವ ಕಾವ್ಯಸೃಷ್ಟಿಯ ಬಗೆಗಿನ ನಂಬಿಕೆ ಪರೋಕ್ಷವಾಗಿಯಾದರೂ ಭಾರತೀಯ ಸಂಸ್ಕೃತಿಯ ಪಳೆಯುಳಿಕೆಗಳೇ ಆಗಿವೆ. ಈ ರೀತಿಯ ವಿಮರ್ಶಕರ ಗ್ರಹಿಕೆಯ ಹಿನ್ನೆಲೆಯಲ್ಲಿ ಹಳೆಯ ಪದಗಳಿಗೆ ಹೊಸತೊಂದು ಅರ್ಥವನ್ನು ಕೊಡುವ ಸಾಧ್ಯತೆ ಕೂಡ ಇದೆ. ಜ್ಞಾನವನ್ನು ಹೊಸ ಚೌಕಟ್ಟಿನ ಮೂಲಕ ವಿಸ್ತರಿಸುವ ಮಹಾನ್ ಪ್ರಯತ್ನವಿದು.

ಈ ಎರಡು ವರ್ಗದ ವಿಮರ್ಶಕರು ಸಾಹಿತ್ಯಸೃಷ್ಟಿಯ ಬಗೆಗೆ ಹೇಳುವ ಅಭಿಪ್ರಾಯಗಳಲ್ಲಿ ಭಿನ್ನತೆಯಿದೆ:

ಮೊದಲ ವರ್ಗದ ವಿಮರ್ಶಕರು ಸಾಹಿತ್ಯಸೃಷ್ಟಿಯನ್ನು ಗ್ರಹಿಸುವುದು ಈ ಹಿನ್ನೆಲೆಯಲ್ಲಿ—

೧ ಸಾಹಿತ್ಯಸೃಷ್ಟಿಯು ವ್ಯಕ್ತಿಯೊಬ್ಬನ 'ದರ್ಶನ' ಮತ್ತು 'ಪ್ರತಿಭೆ'ಯ ಸಾಮರ್ಥ್ಯದಿಂದಲೇ ರೂಪುಗೊಳ್ಳುತ್ತದೆ. ಬುದ್ಧಿಯನ್ನು ವಿಜೃಂಭಿಸುವ ಸಾಹಿತ್ಯ ಸೃಷ್ಟಿಯು ಮುಖ್ಯವಾಗಿ ತನ್ನಷ್ಟಕ್ಕೆ ಸ್ವಾಯತ್ತವಾದುದು. ಒಂದು ದೃಷ್ಟಿಯಿಂದ ವ್ಯಕ್ತಿಯನ್ನು ಸಾಮಾಜಿಕ ಸಂರಚನೆಯಿಂದ ದೂರವಿಡುವ ಯತ್ನ. ಸಂವೇದನೆ ರೂಪವೇ ವ್ಯಕ್ತಿಗೆ ವಿಶಿಷ್ಟವೆಂದು ಒಪ್ಪಿಕೊಂಡರೂ ಅದಕ್ಕಿರುವ ಸಾಮಾಜಿಕ ಆಯಾಮವನ್ನು ಗ್ರಹಿಸದ ಈ ಬಗೆಯ ವಿಮರ್ಶಕರ ಮುಖ್ಯ ತೊಂದರೆಯೆಂದರೆ, ಸೈದ್ಧಾಂತಿಕ ಮತ್ತು ಚಾರಿತ್ರಿಕ ಗ್ರಹಿಕೆಯ ತಿಳುವಳಿಕೆ ಕಡಿಮೆಯಿರುವುದು. ಈ ರೀತಿಯ ವಿಮರ್ಶಕರು ಪರಿಭಾಷೆಯನ್ನು ವಿವರಿಸಲು ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನು ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಸೃಷ್ಟಿಕಾರ್ಯವು ಕೇವಲ ವೈಯಕ್ತಿಕವಾದುದೆನ್ನುವ ಗ್ರಹಿಕೆಯೇ ಈ ಬಗೆಯ ವಿಮರ್ಶಕರಿಗೆ ಪ್ರಮುಖವಾಗುತ್ತದೆ.

ಎರಡನೆಯ ವರ್ಗದ ವಿಮರ್ಶಕರು ಕಾವ್ಯಸೃಷ್ಟಿಗೆ ದೇಶೀಯ ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳುತ್ತಾರೆ. ಉದಾಹರಣೆಗೆ ಬೇಂದ್ರೆಯವರು 'ಯೋಗ'ದ ಬಗೆಗೆ

ಮಾತನಾಡುವುದು. ಈ ಬಗೆಯ ವಿಮರ್ಶಕರು ಕೆಲವು ಮುಖ್ಯ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಾರೆ :

೧. ಸಂಸ್ಕಾರ
೨. ಪ್ರತಿಭೆ
೩. ಓದುಗ
೪. ಚರಿತ್ರೆ

ಈ ಅಂಶಗಳು ಸಾಹಿತ್ಯಸೃಷ್ಟಿಯ ಮೇಲೆ ಪ್ರಭಾವ ಬೀರುತ್ತವೆ ಎಂದು ಈ ವಿಮರ್ಶಕರು ನಂಬುತ್ತಾರೆ. ಸಂಸ್ಕಾರವೆನ್ನುವುದನ್ನು ನಿರಚನಗೊಳಿಸಿದರೆ ಸಂಸ್ಕೃತಿಯೆನ್ನುವ ಧ್ವನಿಯು ಸೂಚಿತವಾಗುತ್ತದೆ. 'ಪ್ರತಿಭೆ'ಯನ್ನು ಪ್ರತ್ಯೇಕವೆಂದು ನಂಬದ ಈ ವಿಮರ್ಶಕರು ಅದಕ್ಕೆ ಸಂಸ್ಕಾರ, ಚರಿತ್ರೆಯು ಪೂರಕವಾಗಿದೆ ಎಂದು ನಂಬುತ್ತಾರೆ. ತೀರಾ ಮಹತ್ವದ ಸಂಗತಿಯೆಂದರೆ—ಈ ವಿಮರ್ಶಕರು ಭಾರತೀಯ ತತ್ವಜ್ಞಾನದ—ಸೌಂದರ್ಯಶಾಸ್ತ್ರದ ಪರಿಭಾಷೆಯನ್ನು ತಮ್ಮ ಕಾಲದ ಹಿನ್ನೆಲೆಯಿಂದ ಗಮನಕ್ಕೆ ತೆಗೆದುಕೊಂಡಿರುವುದು. ಕಾಲವನ್ನು ಮೀರುವ ಪ್ರಯತ್ನ ಈ ದೃಷ್ಟಿಕೋನಕ್ಕಿದೆ. ದೇಶೀಯ ಬೇರುಗಳನ್ನು ಅರಸುವ ಈ ಪ್ರಯತ್ನ ಹೊಸ ಹಾದಿಯನ್ನು ತೆರೆದು ತೋರಿಸಿದೆ. ಪು.ತಿ.ನ. ಅವರು ಈ ನಿಟ್ಟಿನಲ್ಲಿ ತೀರಾ ಭಾರತೀಯ ಎನ್ನುವ ಅರ್ಥಕ್ರಮವೊಂದನ್ನು ಕಂಡುಕೊಂಡವರು. ಹಾಗಾಗಿಯೇ ಅವರು ಬಳಸುವ ಪರಿಭಾಷೆಯೂ ವಿಶಿಷ್ಟವಾದುದೇ ಆಗಿದೆ. ಭಾರತೀಯತೆಯ ಮುಖ್ಯಧಾರೆಯ ಹಿನ್ನೆಲೆಯಲ್ಲಿಯೇ ಕಾವ್ಯಸೃಷ್ಟಿಯ ಕುರಿತಂತೆ ಈ ವಿಮರ್ಶಕರು ತಮ್ಮ ವಾದಗಳನ್ನು ಮಂಡಿಸುತ್ತಾರೆ. ಸೃಷ್ಟಿಕ್ರಮವನ್ನು ಚಾತುರ್ಯವೆಂದು ಗಣಿಸುವಲ್ಲಿನ ತಾತ್ವಿಕತೆಯು ಮುಖ್ಯಧಾರೆಯಲ್ಲಿಯೇ ಹುಟ್ಟಿಕೊಂಡಿದ್ದರೂ, ಭಾರತೀಯ ಆಲೋಚನಾ ಕ್ರಮದಲ್ಲಿ ಇದೂ ಒಂದು ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಒಟ್ಟಾಗಿ ಕಾವ್ಯಸೃಷ್ಟಿಯ ಬಗೆಗೆ ವ್ಯಕ್ತವಾಗುವ ಈ ಅಭಿಪ್ರಾಯಗಳು ಹೊಸತೊಂದು ಸಾಹಿತ್ಯ ಸಿದ್ಧಾಂತವನ್ನು ರೂಪಿಸಲು ಅನುಕೂಲ ಕಲ್ಪಿಸುವಂಥವು. ಸೂತ್ರರೂಪವಾಗಿ ಹೇಳಬೇಕೆಂದರೆ :

೧. ಈ ಕಾಲದಲ್ಲಿ ವಿಮರ್ಶಕರು ಸಾಹಿತ್ಯ ಸೃಷ್ಟಿಯನ್ನು 'ಪ್ರತಿಭೆ' ಮತ್ತು ಸಂಸ್ಕೃತಿಯ ಅರ್ಥವಿಕಾಸದಲ್ಲಿ ಕಂಡುಕೊಳ್ಳುತ್ತಾರೆ. ಬದಲಾದ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಈ ತಾತ್ವಿಕತೆಯು ಕಲಾವಿದನಿಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಡುತ್ತದೆ. ಕಲಾವಿದನಿಗೆ ಉನ್ನತ ಸ್ಥಾನವು ಕಲ್ಪಿತವಾಗಿರುವುದು ವಿಶಿಷ್ಟವಾದ ಸಾಮಾಜಿಕ ಸಂದರ್ಭದ ಪ್ರತೀಕ. ಈ ಸಾಮಾಜಿಕ ಸನ್ನಿವೇಶವೇ ಕಾವ್ಯ, ಕವಿ ಮುಂತಾದ ಸಂಗತಿಗಳನ್ನು ಮಹತ್ವವೆಂದು ಗಣಿಸುತ್ತದೆ.

ಕಲೆಗಿರುವ ಮುಖ್ಯ ಸ್ಥಾನವು ಈ ಮೂಲಕ ಸಾಧಿತವಾಗುತ್ತದೆ. ನವೋದಯ

ವಿಮರ್ಶಕರು ಪರಿಕಲ್ಪಿಸುವ ನೆಲೆಯು ವ್ಯಕ್ತಿ ವಿಶಿಷ್ಟತೆಯನ್ನು ಸೂಚಿಸುತ್ತದೆ. ನವೋದಯ ವಿಮರ್ಶಕರಿಗೆ ಮುಖ್ಯವಾಗುವ ಸೃಷ್ಟಿಯು ಕಾಲದ ಚೌಕಟ್ಟಿನಿಂದ ಪ್ರೇರಿತವಾದುದು. ಈಗಾಗಲೇ ಸೂಚಿಸಲಾಗಿರುವ ವಸಾಹತು ಸಂದರ್ಭದ ಸಂಕೀರ್ಣತೆಯು ಮೂಲಭಾಷೆಯ ಜೊತೆಯಲ್ಲಿ ಸೃಷ್ಟಿಪ್ರಕ್ರಿಯೆ ಒಂದೋ ಭಾರತೀಯ ಆಲಂಕಾರಿಕರ ನೆಲೆಗೆ ಮರಳುವುದು ಇಲ್ಲವೇ ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಕಡೆಗೆ ತುಡಿಯುವುದು ಅನಿವಾರ್ಯವಾಗಿತ್ತು.

ಗ್ರಂಥಋಣ ಮತ್ತು ಅಡಿಟಿಪ್ಪಣಿಗಳು

೧. ವಿವೇಕ ರೈ, ಬಿ.ಎ. (ಸಂ.) ೧೯೮೭ ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು. ಈ ಕೃತಿಯಲ್ಲಿ "ಕನ್ನಡ ಕಾದಂಬರಿಯ ಉಗಮದ ಸಾಂಸ್ಕೃತಿಕ ಹಿನ್ನೆಲೆ"ಯ ಕುರಿತು ಬಿ. ದಾಮೋದರರಾವ್ ಈ ರೀತಿಯ ಚರ್ಚೆ ನಡೆಸಿದ್ದಾರೆ. ಈ ಚರ್ಚೆಯ ಕೇಂದ್ರಬಿಂದು ಕಾದಂಬರಿಯ ಉಗಮದ ಕುರಿತಂತೆ ಇದೆಯಾದರೂ ಹೊಸಗನ್ನಡದ ಹಿನ್ನೆಲೆಯ ಕುರಿತ ಸ್ಪಷ್ಟ ಮಾಹಿತಿಯನ್ನು ಈ ಚರ್ಚೆ ಒದಗಿಸಿಕೊಡುತ್ತದೆ.

೨. ನಾಗರಾಜ, ಡಿ. ಆರ್. ೧೯೮೩ ಅಮೃತ ಮತ್ತು ಗರುಡ, ಪುಸ್ತಕ ಚಂದನ, ೨೭೮/೮, ೨೦ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು-೪೦.

೩. ಡಾ. ಶಾಂತಿನಾಥ ಕೆ. ದೇಸಾಯಿ ಅವರು ಈ ರೀತಿಯ ಅಭಿಪ್ರಾಯವನ್ನು ಪ್ರಾಸ್ತಾವಿಕವಾಗಿ ವ್ಯಕ್ತಪಡಿಸಿದ್ದಾರೆ. ವಿವರಗಳಿಗೆ ನೋಡಿ: ಸಾಕ್ಷಿ (ಸಂಚಿಕೆ: ೩೯) ಜುಲೈ ೧೯೭೮ ಸಂ: ಗೋಪಾಲಕೃಷ್ಣ ಅಡಿಗ, ಎಂ.ಜಿ.ಕೆ. ನೆನಪಿನ ಸಂಚಿಕೆ. ("ಎಂ.ಜಿ.ಕೆ.–ಒಬ್ಬ ನಿಷ್ಠಾವಂತ ವಿಮರ್ಶಕ" ಪು. ೫).

೪. ಕುರ್ತಕೋಟಿ, ಕೆ. ಡಿ. (ಸಂ.) ೧೯೬೪ ವಾಸುದೇವ ಪ್ರಶಸ್ತಿ, ವಾಸುದೇವ ವಿನೋದಿನಿ ನಾಟ್ಯಸಭೆ, ಬಾಗಿಲುಕೋಟೆ, ಲೇಖನ: ಆಚಾರ್ಯರ ಸಾಹಿತ್ಯ ವಿಚಾರಗಳು—ವಿಶೇಷ.

೫. ಕಾವ್ಯದಲ್ಲಿ ಸೌಂದರ್ಯವೆಂದರೇನು ಎನ್ನುವ ಪ್ರಶ್ನೆಗೆ 'ಅಲಂಕಾರ' ಎಂಬ ಮೊದಲ ಉತ್ತರದಿಂದ ಆರಂಭವಾಗಿ 'ರಸ' ಎಂಬ ಕಡೆಯ ಉತ್ತರದಲ್ಲಿ ಈ ಚರ್ಚೆ ತನ್ನ ನಿಲುಗಡೆಯನ್ನು ಕಂಡುಕೊಂಡಿದೆ. ವಿವರಗಳಿಗೆ ನೋಡಿ: ಶಿವರುದ್ರಪ್ಪ ಜಿ. ಎಸ್. ೧೯೮೭ ಸೌಂದರ್ಯ ಸಮೀಕ್ಷೆ, ಶಾರದಾ ಪ್ರಕಾಶನ, ಗಾಂಧಿನಗರ, ಬೆಂಗಳೂರು-೯, ಪು. ೧೬೦.

೬. ವೆಂಕಣ್ಣಯ್ಯ, ಟಿ. ಎಸ್. ೧೯೮೩, ಪ್ರಾಚೀನ ಸಾಹಿತ್ಯ, ವಿಶ್ವಕನ್ನಡ ಸಮ್ಮೇಳನ, ೧೪೧೩ ಎ, ನೃಪತುಂಗ ರಸ್ತೆ, ಬೆಂಗಳೂರು-೨.

೭. ಕುವೆಂಪು, ೧೯೭೨. ಸಾಹಿತ್ಯ ಪ್ರಚಾರ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು-೨.

೮. ವೆಂಕಟೇಶ್ ಅಯ್ಯಂಗಾರ್, ಮಾಸ್ತಿ ೧೯೫೪ ಮಾಸ್ತಿಯವರ ಪುಸ್ತಕಗಳು (ವಿಮರ್ಶೆ) ಜೀವನ ಕಾರ್ಯಾಲಯ, ಬೆಂಗಳೂರು-೧೯.

೯. ಮಾಸ್ತಿಯವರಿಗೆ ಚರಿತ್ರೆಯ ಪರಿಕಲ್ಪನೆಯೆಂದರೆ ಅರಸು ಮನೆತನದ ವೈಭವವಾಗಿ ಕಾಣಿಸುತ್ತದೆ. ನೇರವಾಗಿ ಮಾಸ್ತಿಯವರು ಇದನ್ನು ಸ್ಪಷ್ಟಪಡಿಸದೇ ಇದ್ದರೂ ಅವರ ಬರಹಗಳಲ್ಲಿ ಈ ಒಂದು ಧ್ವನಿ ಸೂಚ್ಯವಾಗಿ ವ್ಯಕ್ತವಾಗುತ್ತದೆ. (ವಿವರಗಳಿಗೆ ನೋಡಿ: ವೆಂಕಟೇಶ ಅಯ್ಯಂಗಾರ್, ಮಾಸ್ತಿ ೧೯೪೫ **ಮಾಸ್ತಿಯವರ ಪುಸ್ತಕಗಳು** (ಉಪನ್ಯಾಸ, ಭಾಷಣ–೧) ಜೀವನ ಕಾರ್ಯಾಲಯ, ಬೆಂಗಳೂರು, ಪು ೭–೮.

೧೦. ಪು ತಿ.ನ. ಅವರು ಈ ಎರಡು ಪದಗಳನ್ನು ವಿವರಿಸುವುದು ಹೀಗೆ: "ಭವದ ತೀವ್ರ ಸಂವೇದನಾ ರೂಪವಾದ ಪ್ರಜ್ಞೆ—ಇದನ್ನು ಬೇಕಾದರೆ ಭವನಿಮಜ್ಜನ ಚಾತುರ್ಯ ಎಂದು ಕರೆಯಬಹುದು ಮತ್ತು ನಿಮಗ್ನತೆಯಿಂದ ಪಾರಾಗಿ ಬೇರೆಯಾಗಿ ನಿಲ್ಲುವ ಲಘಿಮಾ ಕೌಶಲ. ಈ ಎರಡು ಗುಣಗಳು ಕವಿಗಿದ್ದ ಹೊರತು ಕಾವ್ಯ ಸಿದ್ಧಿಸಲಾರದು. (ನರಸಿಂಹಾಚಾರ್, ಪು.ತಿ. ೧೯೮೦. **ಕಾವ್ಯಕುತೂಹಲ**, ಡಿ.ವಿ.ಕೆ. ಮೂರ್ತಿ, ಮೈಸೂರು–೪, ಪು. ೧).

೧೧. ಅದೇ ಪು. ೧.

೧೨. ಪು.ತಿ.ನ. ಅವರ ಕಾವ್ಯಮೀಮಾಂಸೆಯ ಕುರಿತು ಶ್ರೀಧರ, ಬಿ. ಎಚ್. ಅವರು ಚರ್ಚಿಸುತ್ತಾ, "ಭರತಮುನಿಯ ಕಾಲದಿಂದ ಭಾರತವು ರಸ ಮನಃಶಾಸ್ತ್ರದ (Aesthetic Psychology) ಆಳವಾದ ಅಭ್ಯಾಸವನ್ನು ಮಾಡಿ, ಆನಂದವರ್ಧನ, ಅಭಿನವಗುಪ್ತರ ಮೂಲಕ ಜಗನ್ನಾಥ ಪಂಡಿತನವರೆಗೆ ರಮಣೀಯತೆಯ, ಸೌಂದರ್ಯದ, ಚಾರುತ್ವದ, ಚಮತ್ಕಾರದ, ರಸದ, ಭಾವದ ವಿಮರ್ಶೆಯನ್ನು ಮಾಡುತ್ತ ಬಂದು, ಕೊನೆಯದಾಗಿ ರಸ ಧ್ವನಿಯ ಪ್ರಾಮುಖ್ಯವನ್ನು (ಕಾವ್ಯಾಧಿ ಕಲಾವಚ್ಛೇದ ತತ್ವವನ್ನು ಎತ್ತಿಹಿಡಿದುದನ್ನು ಪು.ತಿ.ನ.ರು ವಿವರಪೂರ್ವಕವಾಗಿ ಸಮರ್ಥಿಸಿರುವುದು ಶ್ಲಾಘನೀಯ" ಎನ್ನುತ್ತಾರೆ. (ಜವರೇಗೌಡ, ದೇ. (ಪು. ಸಂ.) ೧೯೮೧ **ಯದುಗಿರಿ** (ಪು.ತಿ.ನ. ಅಭಿನಂದನ ಗ್ರಂಥ) ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು–೪. ಲೇಖನ: ಪು.ತಿ.ನ. ಅವರ ಕಾವ್ಯಮೀಮಾಂಸೆ—ಬಿ. ಎಚ್. ಶ್ರೀಧರ ಪು. ೪೪–೫೦).

೧೩. ರಾಜಸ ಗುಣಗಳು ತಾಮಸ ಗುಣಗಳು ಹೊತ್ತಿಸುವ ಬೆಂಕಿಯನ್ನು ಸತ್ವದ ಬೆಳಕನ್ನಾಗಿ ಮಾಡಿಕೊಳ್ಳುವುದು ಕಾವ್ಯವಿಧಾನ—(ವಾಮನ ಬೇಂದ್ರೆ (ಸಂ.)) ಬೇಂದ್ರೆ, ದ.ರಾ. ೧೯೭೪ **ಸಾಹಿತ್ಯದ ವಿರಾಟ ಸ್ವರೂಪ**, ಸಮಾಜ ಪುಸ್ತಕಾಲಯ, ಧಾರವಾಡ–೧, (ಪು. ೮೦) ಗುಣವನ್ನು ಭಾರತೀಯ ತತ್ವಜ್ಞಾನ ಒಂದರ್ಥದಲ್ಲಿ ಬಳಸಿದ್ದರೆ, ಕಾವ್ಯಮೀಮಾಂಸೆ ಬೇರೊಂದು ಅರ್ಥದಲ್ಲಿ ಗ್ರಹಿಸುತ್ತದೆ. (ವಿವರಗಳಿಗೆ ನೋಡಿ: ಶಿವರುದ್ರಪ್ಪ ಜಿ. ಎಸ್., ನಾರಾಯಣ ಕೆ. ವಿ. (ಸಂ.) ೧೯೮೦ **ಕಾವ್ಯಾರ್ಥ ಪದಕೋಶ**, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಪು. ೧೦೭–೧೧೮).

೧೪. ನಾರಾಯಣ, ಕೆ. ವಿ. ೧೯೮೪ **ಸಾಹಿತ್ಯ ತತ್ವ: ಬೇಂದ್ರೆ ದೃಷ್ಟಿ**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು–೨೯.

೧೫. ವಿವರಗಳಿಗೆ ನೋಡಿ: ರಾಮದೇವ ಶೆಣೈ, ಆರ್. (ಸಂ.) ೧೯೬೪ **ದೀವಿಗೆ**, ರಾಷ್ಟ್ರಕವಿ ಗೋವಿಂದ ಪೈ: ಸ್ಮಾರಕ ಗ್ರಂಥ, ಭಂಡಾರ್‌ಕರ್ಸ್ ಕಾಲೇಜು, ಕುಂದಾಪುರ, ದ.ಕ.

೧೬. ಶ್ರೀಕಂಠಯ್ಯ, ತೀ.ನಂ. ೧೯೭೪ **ಸಮಾಲೋಕನ**, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು–೪, ಪು. ೪೫.

೧೭. ಡಿ.ವಿ.ಜಿ. ೧೯೭೫, **ಕಾವ್ಯಸ್ವಾರಸ್ಯ**, ಕಾವ್ಯಾಲಯ, ಮೈಸೂರು–೯.

೧೮. ನರಸಿಂಹಾಚಾರ್, ಡಿ. ಎಲ್. ೧೯೭೧ **ಪೀಠಿಕೆಗಳು ಮತ್ತು ಲೇಖನಗಳು**, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು–೪, ಪು. ೬೭೪.

೧೯. ಅದೇ

೨೦. ಮಾಳವಾಡ, ಸ. ಸ. ೧೯೮೩ ಸಾಹಿತ್ಯ ಸಮಾಲೋಚನೆ, ವಿಶ್ವಕನ್ನಡ ಸಮ್ಮೇಳನ, ೧೪–೩೨, ನೃಪತುಂಗ ರಸ್ತೆ, ಬೆಂಗಳೂರು–೨.

೨೧. ಕರ್ಪೂರ ಶ್ರೀನಿವಾಸರಾವ್, ೧೯೭೧ ಸಾಹಿತ್ಯಶಾಸ್ತ್ರ, ಕ.ಸಾ.ಪ., ಬೆಂಗಳೂರು–೧೮.

೨೨. ಗೋಪಾಲಕೃಷ್ಣರಾವ್, ಕೆ. ೧೯೭೩ ಆಧುನಿಕ ಗದ್ಯ ಸಾಹಿತ್ಯ, ಕ.ಸಾ.ಪ., ಬೆಂಗಳೂರು.

೨೩. ಅನಂತಕೃಷ್ಣಶರ್ಮ, ರಾಳ್ಳಪಳ್ಳಿ ೧೯೭೧ ಸಾಹಿತ್ಯ ಮತ್ತು ಜೀವನಕಲೆ, ಕಾವ್ಯಾಲಯ ಪ್ರಕಾಶಕರು, ಮೈಸೂರು.

೨೪. ಸೀತಾರಾಮಯ್ಯ, ಎಂ. ವಿ. ೧೯೮೫, ಸಾಹಿತ್ಯ ಮತ್ತು ಚಿತ್ರಕಲೆ, ರಾಘವ ಪ್ರಕಾಶನ, ಬೆಂಗಳೂರು–೧೯.

೨೫. ಲೀಲಾಭಟ್, ಬಿ. (ಸಂ.) ೧೯೮೭ ಉಗ್ರಾಣ, ಕರ್ನಾಟಕ ಸಂಘ, ಪುತ್ತೂರು, ದ.ಕ.

೨೬. ಈಚೆಗೆ ಕೆ. ವಿ. ನಾರಾಯಣ ಅವರ ವಿಮರ್ಶೆಯ ಪ್ರಯತ್ನ ಈ ದೃಷ್ಟಿಯಿಂದ ತುಂಬಾ ಮೌಲಿಕವಾದುದು. ಬಹುಶಃ ವಸಾಹತುಶಾಹಿ ಜಗತ್ತಿನಲ್ಲಿ ನಡೆಯುವ ವಿಶಿಷ್ಟ ಎಚ್ಚರದ ಪ್ರತೀಕವಿದು. ಮೇಲುನೋಟಕ್ಕೆ ಕೆ. ವಿ. ನಾರಾಯಣ ಅವರು ನೂರು ವರ್ಷ ಹಿಂದಕ್ಕೆ ಸರಿಯುತ್ತಿದ್ದಾರೆಂದು ಅನಿಸುತ್ತದೆಯಾದರೂ ವಾಸ್ತವವಾಗಿ ಹಾಗಲ್ಲ. ಮೂರನೆಯ ಜಗತ್ತು ಈಗ ಆಯ್ಕೆಯ ಸ್ಥಿತಿಯಲ್ಲಿದೆ. ಆಯ್ಕೆ ಇಷ್ಟೆ: ಒಂದು, ಮತ್ತೆ ಹಳೆಯ ಸೈದ್ಧಾಂತಿಕ ಹಿನ್ನೆಲೆಯ ಜೊತೆಯಲ್ಲಿಯೇ ವಿಚಾರಗಳನ್ನು, ಚಿಂತನೆಗಳನ್ನು ಪುನರ್‌ರೂಪಿಸುವುದು. ರಾಜಕಾರಣದಲ್ಲಿ ಗಾಂಧಿಯ ಪ್ರಯತ್ನ ಈ ನಮೂನೆಗೆ ಒಂದು ಒಳ್ಳೆಯ ಉದಾಹರಣೆ. ಎರಡನೆಯದು, ಈಗಾಗಲೇ ಸಂಕ್ರಮಣಗೊಂಡ ಒಟ್ಟು ಸ್ಥಿತಿಯ ಹಿನ್ನೆಲೆಯಲ್ಲಿ ಹೊಸತೊಂದು ಆಲೋಚನಾ ಕ್ರಮಗಳನ್ನು ರೂಪಿಸುವುದು. ಇದಕ್ಕೆ ಅಗಾಧ ಪ್ರಯತ್ನ ಬೇಕಾಗಿದೆ. ಹಾಲಿ ಸ್ಥಿತಿಯಲ್ಲಿ ಅರ್ಧ ಕಲೋನಿಯಲ್ ಮನಸ್ಸಿನ ಜೊತೆಗೆ ಹೊಸ ಅನುಸಂಧಾನ ನಡೆಸಲು ಹೊಸ ಪರಿಭಾಷೆಗಳೇ ಬೇಕಾಗಿದೆ.

೨೭. ಜಿ. ಎಸ್. ಶಿವರುದ್ರಪ್ಪ ಅವರು ಈ ಕುರಿತಂತೆ ವಿವರವಾಗಿ ಚರ್ಚಿಸಿದ್ದಾರೆ. (ವಿವರಗಳಿಗೆ ನೋಡಿ : ಶಿವರುದ್ರಪ್ಪ ಜಿ. ಎಸ್. ೧೯೮೩ ಕಾವ್ಯಾರ್ಥ ಚಿಂತನ, ಶಾರದಾ ಪ್ರಕಾಶನ, ಬೆಂಗಳೂರು–೫೩. ಪು. ೨೩೬–೨೫೦).

೨೮. "ಸಂದರ್ಭ" ಎನ್ನುವುದನ್ನು ಹೀಗೆ ವ್ಯಾಖ್ಯಾನಿಸಬಹುದು. ಆಲೋಚನೆಯು ತನ್ನಷ್ಟಕ್ಕೇ ತಾನು ಉದ್ಭವಿಸುವಂತಹುದಲ್ಲ. ಆಲೋಚನೆಗೆ ಕಾರಣವಾಗುವ ಮುಖ್ಯ ಸಂಗತಿಯೆಂದರೆ— ಒಬ್ಬ ವ್ಯಕ್ತಿಯು ಬದುಕುವ ಸಾಮಾಜಿಕ ಸ್ಥಿತಿ, ಅದನ್ನು ನಿಯಂತ್ರಿಸುವ ರಾಜಕೀಯ, ಆರ್ಥಿಕ ಸಂಗತಿಗಳು ಆತನ ಆಲೋಚನಾ ಕ್ರಮವನ್ನು ನಿಯಂತ್ರಿಸುತ್ತವೆ. ಹಾಗಾಗಿ ಸಂದರ್ಭವನ್ನು ಹೊರತುಪಡಿಸಿದರೆ ಒಂದು ಆಲೋಚನಾ ಕ್ರಮವನ್ನು ಸರಿಯಾಗಿ ವ್ಯಾಖ್ಯಾನಿಸುವಂತಿಲ್ಲ.

೨೯. ಪಾಶ್ಚಾತ್ಯ ವಿಮರ್ಶಾ ಪದ್ಧತಿಯಲ್ಲಿ ತತ್ವಜ್ಞಾನಕ್ಕೂ ವಿಮರ್ಶೆಗೂ ಹತ್ತಿರದ ಸಂಬಂಧವಿದೆ. ತತ್ವಜ್ಞಾನವನ್ನು ಆಶ್ರಯಿಸಿಕೊಂಡೇ ಪಾಶ್ಚಾತ್ಯ ವಿಮರ್ಶೆ ಬೆಳೆದರೆ, ಭಾರತೀಯ ಪದ್ಧತಿಯ ಪ್ರಕಾರ, ವಿಮರ್ಶೆಗೂ ತತ್ವಜ್ಞಾನಕ್ಕೂ ನಿಕಟ ಸಂಬಂಧವಿಲ್ಲ. ಇದೊಂದು ಕುತೂಹಲಕಾರಿಯಾದ ಅಂಶ.

೩೦. ಕನ್ನಡದಲ್ಲಿ ತೌಲನಿಕ ಕಾವ್ಯಮೀಮಾಂಸೆಯ ಪ್ರಾರಂಭದ ಘಟಕವೇ ಕುವೆಂಪುರವರ ವಿಮರ್ಶೆ. ಈ ವಿಮರ್ಶೆಯ ಒಟ್ಟಂದವೇ ಪಶ್ಚಿಮದ ಜೊತೆಗೆ ಪೌರ್ವಾತ್ಯ ಸೌಂದರ್ಯಮೀಮಾಂಸೆಯು ಸ್ಪರ್ಧಿಸುವಂತಿದೆ. ಮೂಲತಃ ಕುವೆಂಪು ಎರಡನ್ನೂ ಕಲಬೆರಕೆ ಮಾಡುತ್ತಾರೇನೋ ? ಯಾಕೆಂದರೆ, ವಿಮರ್ಶೆಯ ಜೊತೆಗಿನ ಸಂದರ್ಭವನ್ನು ಕುವೆಂಪು ಗಂಭೀರವಾಗಿ ತೆಗೆದುಕೊಂಡಂತಿಲ್ಲ.

ಡಾ. ಪುರುಷೋತ್ತಮ ಬಿಳಿಮಲೆ

ಮಿತ್ಯನಾರಾಯಣ ಕತೆ—ಒಂದು ವಿಶ್ಲೇಷಣೆ

ದಿವಂಗತ ನಂದೊಳ್ಗೆ ಅಮುಣಂಜೆಗುತ್ತು ಶೀನಪ್ಪ ಹೆಗ್ಗಡೆಯವರು (೧೮೯೦ ೧೯೬೬) ಬರೆದ ತುಳು 'ಮಿತ್ಯನಾರಾಯಣ ಕತೆ'ಯ ಸ್ಥೂಲರೂಪ ಇಂತಿದೆ :

"ಪೊಳಲಿ ಪರಿಸರಕ್ಕೆ ತೆಂಕುದಿಕ್ಕಿನ ಮಾಯಿಪ್ಪಾಡಿಯಿಂದ ಆಚಾರಿಯೊಬ್ಬನು ಬಂದು ನೆಲೆಸುತ್ತಾನೆ, ಸಂಕ್ರಯ ಎಂದು ಅವನ ಹೆಸರು. ಆತ ಬಹಳ ತಮಾಷೆಗಾರ, ತಾಳಮದ್ದಳೆಯ ಹುಚ್ಚು. ಪೊಳಲಿಯಲ್ಲಿ ವಾಸವಾಗಿರುವ ವೆಂಕಟ್ರಮಣ ಭಟ್ಟನ ಎರಡನೇ ಮಗನಾದ ನಾರಾಯಣ ಭಟ್ಟನಿಗೂ ಆಚಾರಿಗೂ ಗೆಳೆತನ ಏರ್ಪಡುತ್ತದೆ. ಒಮ್ಮೆ ಪುತ್ತಿಗೆಯ ಕಾರ್ಯರಮಂಜದ ಅರಮನೆಯಲ್ಲಿ ನಡೆವ ಜಾತ್ರೆಗೆ ಇವರಿಬ್ಬರೂ ಹೋಗುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಕಾಯರಮಂಜದ ಜೈನ ಅರಸನಾದ ಚನ್ನರಾಯ ಚೌಟನ ಸೋದರ ಸೊಸೆಯಾದ ಸಿರಿದೇವಿಯು ನಾರಾಯಣ ಭಟ್ಟನ ಕಣ್ಣಿಗೆ ಬೀಳುತ್ತಾಳೆ. ಅಪೂರ್ವ ರೂಪಸಿಯಾದ ಆಕೆಯ ಚೆಲುವಿಗೆ ಮನಸೋತ ಭಟ್ಟನು ಮೂರ್ಛೆ ಬಿದ್ದವನಂತೆ ನಟಿಸಿ, ಆಕೆಯ ಬಗೆಗೆ ವಿವರಗಳನ್ನು ಸಂಗ್ರಹಿಸುತ್ತಾನೆ : ಆದರೆ ಬಡತನ–ಜಾತಿವ್ಯತ್ಯಾಸಗಳ ಕಾರಣದಿಂದ ಆಕೆಯನ್ನು ಮದುವೆಯಾಗಲಾರದೆ ಭಟ್ಟ ಕೊರಗುತ್ತಾನೆ. ಅನ್ನ–ನೀರು ಬಿಟ್ಟು ರೋಗಿಯಾಗಿ ಹಾಸುಗೆ ಹಿಡಿಯುತ್ತಾನೆ. ಅವನ ಮನೆಯವರು ಅವನ ರೋಗ ನಿವಾರಣೆಗೆ ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ. ಆ ಸಂದರ್ಭದಲ್ಲಿ ಸಂಕ್ರಯಾಚಾರಿಯು ತನ್ನ ಕೌಶಲದಿಂದ ಸಿರಿಯ ಅಂತಃಪುರಕ್ಕೆ ಹಾರಿಹೋಗಲು ಸಾಧ್ಯವಾಗುವಂಥ ಒಂದು ಮರದ ಗಿಡುಗನನ್ನು ನಾರಾಯಣ ಭಟ್ಟನಿಗೆ ಮಾಡಿಕೊಡುತ್ತಾನೆ. ಭಟ್ಟ ಸಿರಿಯನ್ನು ಕದ್ದು ಕೂಡುವುದಲ್ಲದೆ 'ಪೂರ್ವಜನ್ಮದಲ್ಲಿ ತಾನು ಕೃಷ್ಣನಾಗಿದ್ದೆನೆಂತಲೂ, ಸಿರಿಯೇ ರಾಧೆಯಾಗಿದ್ದಳೆಂದೂ' ಹೇಳಿ ಆಕೆಯನ್ನು ನಂಬಿಸುತ್ತಾನೆ. ಸಿರಿಯು ಗರ್ಭವತಿಯಾದಾಗ ವಿಷಯ ಊರೆಲ್ಲ ಹಬ್ಬುತ್ತದೆ. ಸಿರಿಯ ಸೋದರಮಾವನಾದ ಚನ್ನರಾಯ ಚೌಟನೂ 'ನಾರಾಯಣ ದೇವರಿಂದಲೇ ತನ್ನ ಸೊಸೆ ಗರ್ಭಿಣಿಯಾದಳೆಂದು' ನಂಬುತ್ತಾನೆ. ಅದಕ್ಕಾಗಿ ಹೆಮ್ಮೆ ಪಡುತ್ತಾನೆ, ಗರ್ವಪಡುತ್ತಾನೆ. ಆ ಗರ್ವವನ್ನು ತನ್ನ ಜಾತಿಗೆ ಅನ್ವಯಿಸಿಕೊಂಡು, ಆಡಳಿತದಲ್ಲಿ ಎಲ್ಲೆಡೆಯೂ ಜೈನರನ್ನು ತುಂಬಿಸಿ, ಸ್ವಜನಪಕ್ಷಪಾತ

ವನ್ನು ಮೆರೆಯುತ್ತಾನೆ. ಫಲವಾಗಿ ಆಡಳಿತದಲ್ಲಿ ಅವ್ಯವಹಾರ, ಲಾಭಬಡಕುತನ ಹೆಚ್ಚಿ ಜನರು ಕಂಗಾಲಾಗುತ್ತಾರೆ. ಅವರು ಅರಸನಿಗೆ ದೂರು ಕೊಡುತ್ತಾರೆ. ಚನ್ನರಾಯನು ಅಹಂಕಾರವನ್ನೇ ಮೆರೆಯುತ್ತಾನೆ. ಬೇರೆ ವಿಧಿಯಿಲ್ಲದ ಜನರು ನಂದಾವರದ ಬಂಗ ಅರಸನಿಗೆ ದೂರುಕೊಟ್ಟು ನ್ಯಾಯ ಬೇಡುತ್ತಾರೆ. ಬಂಗ ಅರಸನು ಕಾರ್ಕಳದ ಅರಸನೊಂದಿಗೆ ಸೇರಿಕೊಂಡು, ಚೌಟ ಅರಸನ ಮೇಲೆ ಯುದ್ಧ ಸಾರುತ್ತಾನೆ. ಅಹಂಕಾರದಿಂದ ಬೀಗುತ್ತಿದ್ದ ಚೌಟರಸನು ಕಂಗಾಲಾಗುತ್ತಾನೆ. ತನ್ನ ಸೊಸೆಯ ಗಂಡ ನಾರಾಯಣ ದೇವರೆಂದು ನಂಬಿದ ಆತ ಈಗ ಅವನ ಮರೆಹೋಗುತ್ತಾನೆ. ‘ ಕದನದಲ್ಲಿ ಹೇಗಾದರೂ ಮಾಡಿ ಗೆಲ್ಲಿಸಿ ಮಾನ ಉಳಿಸಬೇಕೆಂದು ’ ಪ್ರಾರ್ಥಿಸುತ್ತಾನೆ. ಜೊತೆಗೆ ಸಿರಿಯೂ ಗಂಡನ ಪಾದ ಹಿಡಿದು ತಂದೆಯನ್ನು ಉಳಿಸಿಕೊಡಬೇಕೆಂದು ಬೇಡುತ್ತಾಳೆ. ತನ್ನನ್ನು ದೇವರೆಂದು ಘೋಷಿಸಿಕೊಂಡಿದ್ದ ಭಟ್ಟ ಈಗ ಇಕ್ಕಟ್ಟಿಗೆ ಬೀಳುತ್ತಾನೆ. ಹಿಂದೆ ತನಗೆ ಸಹಾಯಕನಾಗಿದ್ದ ಸಂಕ್ರಯಾಚಾರಿಯ ಸಹಾಯ ಯಾಚಿಸುತ್ತಾನೆ. ಆಚಾರಿ ಭಟ್ಟನಿಂದ ಸಾಕಷ್ಟು ಹಣ ವಸೂಲಿಮಾಡಿ ಕೊನೆಗೆ ‘ ನೀವು ಮರದ ಗಿಡುಗನ ಮೇಲೆ ಕುಳಿತು ಮಿತ್ಯನಾರಾಯಣ ದೇವರಾಗಬೇಕು, ನಿಮಗೊಂದು ಮರದ ಚಕ್ರವನ್ನು ಮಾಡಿಕೊಡುತ್ತೇನೆ. ಮತ್ತೆ ಪೂಜೆಯ ಶಂಖವನ್ನು ಹಿಡಿದುಕೊಳ್ಳಿರಿ, ಸೇನೆಯ ಮೇಲಿಂದ ಆಕಾಶದಲ್ಲಿ ಹಾರಿ, ಶಂಖವನ್ನು ಊದಿರಿ, ಚಕ್ರವನ್ನು ತಿರುಗಿಸಿರಿ, ಜನರು ಹೆದರಿ ಓಡುತ್ತಾರೆ. ಆದರೆ ಜನರಿಗೆ ಸಿಗುವಂತೆ ಕೆಳಗಿನಲ್ಲಿ ಹಾರಬೇಡಿ.... ಇದರಲ್ಲಿ ನೀವು ಗೆಲ್ಲುವಿರಿ ’ ಎನ್ನುತ್ತಾನೆ. ಭಟ್ಟ ಇದಕ್ಕೆ ಒಪ್ಪಿದ್ದಲ್ಲದೆ ‘ ಯುದ್ಧದಲ್ಲಿ ಸತ್ತರೆ ನಾರಾಯಣ ದೇವರು ಸತ್ತರೆಂದಾಗುವುದೇ ವಿನಾ ನನಗೇನೂ ಆಗದು ’ ಎಂದು ತೃಪ್ತಿಯನ್ನು ಪಟ್ಟುಕೊಳ್ಳುತ್ತಾನೆ. ಭಟ್ಟನ ಈ ನಿರ್ಧಾರದಿಂದಾಗಿ ಕ್ಷೀರಸಾಗರದಲ್ಲಿದ್ದ ನೈಜ ನಾರಾಯಣ ದೇವರಿಗೆ ಕಸಿವಿಸಿ ಉಂಟಾಗುತ್ತದೆ. ಈ ಭಟ್ಟ ಯುದ್ಧದಲ್ಲಿ ಸಾಯುತ್ತಾನೆ ಇಲ್ಲವೇ ನೋವು ಮಾಡಿಕೊಂಡು ಊರುಬಿಟ್ಟು ಓಡಿಹೋಗುತ್ತಾನೆ. ಆತ ಏನುಮಾಡಿದರೂ ಸೋಲು ತನ್ನದಾಗುತ್ತದೆ. ಹೇಗೆಂದರೆ ಜನರೆಲ್ಲರೂ ‘ ನಾರಾಯಣ ದೇವರು ನಮ್ಮೊಡನೆ ಯುದ್ಧಕ್ಕೆ ಬಂದು ಸತ್ತೇಹೋದರು, ಇಲ್ಲವೇ ಓಡಿಹೋದರು ’ ಎಂದು ಭಾವಿಸುತ್ತಾರೆ. ಹೀಗೆ ತರ್ಕಿಸಿದ ನೈಜ ನಾರಾಯಣ ದೇವರು ತನ್ನ ದೈವಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲೋಸುಗ ಚೌಟರಸನಿಗೆ ಯುದ್ಧದಲ್ಲಿ ಗೆಲುವು ತಂದೀಯಲು ನಿರ್ಧರಿಸಿ, ಸುದರ್ಶನಕ್ಕೆ ಅಪ್ಪಣೆಕೊಡುತ್ತಾರೆ. ಸುದರ್ಶನವು ಭಟ್ಟನ ಮರದ ಚಕ್ರದಲ್ಲಿ ಆವಾಹಿತವಾಗಿ, ವಿರೋಧಿಗಳನ್ನು ಸೋಲಿಸಿ, ಭಟ್ಟನನ್ನು ಗೆಲ್ಲಿಸುತ್ತದೆ. ಜೊತೆಗೆ ಭಟ್ಟನ ಕುಯುಕ್ತಿಗೆ ಪಾಠ ಕಲಿಸಬೇಕೆಂದು ನಿರ್ಧರಿಸಿ, ಅವನ ಮರದ ಗರುಡನ ರೆಕ್ಕೆಯನ್ನು ಸುಟ್ಟು ಬಿಡುತ್ತದೆ. ಫಲವಾಗಿ ಯುದ್ಧದ ಕೊನೆಯಲ್ಲಿ ಮಿತ್ಯನಾರಾಯಣನು ಗಾಯಮಾಡಿಕೊಂಡು ಯುದ್ಧ ಭೂಮಿಯಲ್ಲಿ ಬೀಳುತ್ತಾನೆ. ನಿಜ ತಿಳಿಯದ ಜನರು ಮಿತ್ಯನಾರಾಯಣನಿಂದಲೇ ಅರಸನಿಗೆ ಗೆಲುವಾಯಿತೆಂದು ನಂಬಿ ಭಟ್ಟನನ್ನು ಗೌರವಿಸುತ್ತಾರೆ. ಭಟ್ಟನೂ ಈಗ ಸತ್ಯ

ಹೇಳುವ ಸ್ಥಿತಿಯಲ್ಲಿ ಇಲ್ಲ. ಹೇಳಿದರೂ ಜನರು ಅವನನ್ನು ನಂಬುತ್ತಿರಲಿಲ್ಲ. 'ತನ್ನ ಗರುಡ ಕೋಪದಿಂದ ತನ್ನನ್ನು ಬಿಟ್ಟುಹೋಯಿತು' ಎಂದು ಇನ್ನೊಂದು ಸುಳ್ಳು ಹೇಳಿದ ಮಿತ್ಯನಾರಾಯಣನು ಮುಂದೆ ಕಾಯರಮಂಜದ ಅರಸನಾಗುತ್ತಾನೆ. ಆದರೆ ತನ್ನದೇ ಆದ ಸುಳ್ಳುಗಳ ಮಧ್ಯೆ ಸಿಲುಕಿಹೋದ ಆತ ಕಡುಬಡವನಿಗಿಂತ ಹೆಚ್ಚಿನ ದುರವಸ್ಥೆಯನ್ನು ಅನುಭವಿಸುತ್ತಾನೆ. 'ಅರಸನ ಅಳಿಯನಾದರೇನು? ಊರಿನ ರಾಜನಾದರೇನು? ಸ್ವತಃ ದೇವರೇ ಆದರೇನು? ಅವನ ಈಗಣ ಅರಸುತನಕ್ಕಿಂತ ಮೊದಲಿನ ಬಡತನವೇ ನೂರುಪಾಲು ಒಳ್ಳೆಯದು ಎಂದು ಆತನಿಗೇ ತೋರಿತು' ಎಂಬ ನಿರೂಪಕನ ಮಾತಿನೊಂದಿಗೆ ಕತೆ ಮುಗಿಯುತ್ತದೆ.

ಶೀನಪ್ಪ ಹೆಗ್ಗಡೆಯವರು ಇದನ್ನು 'ಕತೆ' ಎಂದೇ ಕರೆದಿದ್ದಾರೆ. ಕೃತಿಯ ಶೀರ್ಷಿಕೆಯಲ್ಲಿ ಮಾತ್ರವಲ್ಲ, ಒಳಗಿನ ಅಧ್ಯಾಯಗಳಲ್ಲಿಯೂ ಅವರು 'ಕತೆ' ಎಂದಿದ್ದಾರೆಯೇ ವಿನಾ ಕಾದಂಬರಿ ಎಂದು ಕರೆದಿಲ್ಲ. ಈ ಕೃತಿಗೆ ಮುನ್ನುಡಿ ಬರೆದ ಬಡಕಬಯಲು ಪರಮೇಶ್ವರಯ್ಯನವರು ಕೂಡಾ 'ಇದೊಂದು ಹೊಸಕತೆ' ಎಂದಿದ್ದಾರೆ. ಆದರೆ ಈಚಿನ ವಿಮರ್ಶಕರು ಇದನ್ನು 'ಕಾದಂಬರಿ' ಎಂದು ಕರೆಯುವ ಅತ್ಯುತ್ಸಾಹ ತೋರಿದ್ದಾರೆ. ಕೃತಿಯ ಈಚಿನ ಮುದ್ರಣದಲ್ಲಿ 'ತುಳುವಿನ ಪ್ರಕಟಿತ ಮೊದಲ ಕಾದಂಬರಿ ಮಿತ್ಯನಾರಾಯಣ ಕತೆ' ಎಂದು ಹೇಳಲಾಗಿದೆ (೧೯೮೯). ಈ ಕೃತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರುವ ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರು "ಶ್ರೀ ಹೆಗ್ಗಡೆಯವರ ತುಳು ಕೃತಿಗಳಲ್ಲಿ ತುಂಬ ಪ್ರಸಿದ್ಧವಾದುದೆಂದರೆ ಮಿತ್ಯ ನಾರಾಯಣ ಕತೆ ಎಂಬ ಕಾದಂಬರಿ. ಇದು ತುಳು ಭಾಷೆಯಲ್ಲಿ ಪ್ರಕಟವಾದ ಮೊದಲ ಕಾದಂಬರಿ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ" (೧೯೮೯) ಎಂದಿದ್ದಾರೆ. ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರವನ್ನು ನಾವು ಈಗ ನಿರ್ವಚಿಸಿಕೊಂಡಿರುವ ರೀತಿಯಲ್ಲಿ ನೋಡಿದಾಗ 'ಮಿತ್ಯನಾರಾಯಣ ಕತೆ'ಯನ್ನು 'ಕಾದಂಬರಿ' ಎನ್ನಲಾಗದು. ಸ್ವಲ್ಪ ಉದಾರವಾದಿಯಾಗಿಯಾದರೂ ಕರೆಯಬೇಕೆಂದರೆ, ಆಗ 'ಕಾದಂಬರಿ' ಎಂಬ ಪದವನ್ನು ನಾವು ಬಹಳ ಸಡಿಲವಾದ ಅತಿವ್ಯಾಪ್ತಿಯ ನಿರ್ವಚನೆಗೆ ಒಳಪಡಿಸ ಬೇಕಾಗುತ್ತದೆ. ಅಲ್ಲದೆ ಮುಂದೆ ತುಳುವಿನಲ್ಲಿ 'ಸತಿಕಮಲೆ'ಯನ್ನು ಬಿಟ್ಟರೆ ಉಳಿದಂತೆ ಕಾದಂಬರಿ ಎಂಬ ಪ್ರಕಾರವೇ ಬೆಳೆದುಬಾರದ್ದರಿಂದ ಇಂಥ ಪ್ರಯೋಗಗಳ ಮಹತ್ತ್ವವನ್ನು ಚಾರಿತ್ರಿಕವಾಗಿ ಗುರುತಿಸಿಕೊಳ್ಳಲಾಗುವುದಿಲ್ಲ. ಕಾದಂಬರಿಯಲ್ಲಿ ಸಹಜವಾಗಿ ನಡೆದುಹೋಗುವ ಪಾತ್ರಗಳ ವರ್ತನೆಯ ಹಿಂದಿನ ಕಾರ್ಯಕಾರಣಗಳ ವಿಶ್ಲೇಷಣೆ ಮತ್ತು ಆ ಮೂಲಕ ಪ್ರಕಟವಾಗುವ ಒಂದು ತಾತ್ತ್ವಿಕತೆ—ಇದು ಈ ಕೃತಿಯಲ್ಲಿ ನಡೆದಿಲ್ಲ. ಆದರ ಬದಲು ನಿರೂಪಣಾ ಪ್ರಜ್ಞೆ ಮತ್ತು ಕತೆಯ ಪರಿಕರಗಳ ನಡುವೆ ಒಂದು ಬಗೆಯ ಅಖಂಡ ಸಂಬಂಧ ಏರ್ಪಟ್ಟಿದೆ, ತನ್ಮಯತೆ ಸಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ಹೆಗ್ಗಡೆಯವರು ಇದನ್ನು 'ಕತೆ' ಎಂದೇ ಕರೆದದ್ದು ಹೆಚ್ಚು ಅರ್ಥ ಪೂರ್ಣವೆಂದೆನಿಸುತ್ತದೆ. ಡಾ. ವಿವೇಕ ರೈ ಅವರು ಇದನ್ನು 'ನೀಳ್ಗತೆ' ಎಂದು

ಕರೆದಷ್ಟು ಅದಕ್ಕೆ ಪೂರಕವಿಚಾರ. ಕನ್ನಡದಲ್ಲಿ ಈ ವಿಧದ ಸಾಹಿತ್ಯ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡಿತ್ತು. ಯಾದವನ 'ಕಲಾವತೀ ಪರಿಣಯ' (೧೮೧೫), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' (೧೮೩೧), ಗುಬ್ಬಿಯ ಮುರಿಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ' (೧೮೯೬) ಕೃತಿಗಳು ಈ ಪ್ರಕಾರಕ್ಕೆ ಸೇರುತ್ತವೆ. ಕಥನ ಗದ್ಯ ಮತ್ತು ಕಲ್ಪನಾ ಬಾಹುಳ್ಯ—ಇವುಗಳ ಪ್ರಧಾನ ಜೀವಾಳ. 'ಕಥಾಕಲ್ಪಿತ ವೃತ್ತಾಂತಃ' ಮತ್ತು 'ಕಥಾಯಾಂ ಸರಸಂ ವಸ್ತು' ಎಂಬಂಥ ಕತೆಯ ಸಾಂಪ್ರದಾಯಿಕ ನಿರ್ವಚನೆಗಳು ಮಿತ್ಯನಾರಾಯಣ ಕತೆಗೆ ಸರಿಯಾಗಿ ಅನ್ವಯವಾಗುತ್ತವೆ. ಇಲ್ಲಿ 'ಕತೆ' ಎಂದರೆ ಸಾಹಿತ್ಯದ ಆಧುನಿಕ ಪ್ರಕಾರವಾದ 'ಸಣ್ಣಕತೆ' ಅಲ್ಲ, ಗುಣಾಢ್ಯನ 'ಬೃಹತ್ಕಥೆಗೆ' ಹತ್ತಿರವಾದದ್ದು. ಇಲ್ಲಿ 'ಸತ್ಯದ ಮೇಲೆ ಕಲ್ಪಿತವಾದ ಮಿಥ್ಯಕ್ಕೇ ಹೆಚ್ಚು ಬೆಲೆ' (ಕೃಷ್ಣಶಾಸ್ತ್ರೀ ಎ. ಆರ್. ೧೯೮೩ : xiv). ಇದಕ್ಕೆ ಉಚಿತವಾದ ಮಾದರಿಗಳು ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ. ಆ ಕತೆಗಳಿಗಿಂತ ಹೆಗ್ಗಡೆಯವರ ಕೃತಿ ಭಿನ್ನವಾಗುವುದು ತನ್ನೊಳಗಿನ ಅಪಾರವಾದ ವ್ಯಂಗ್ಯ ಮತ್ತು ವಿಡಂಬನೆಗಳಿಂದ ಮಾತ್ರ.

ಹೆಗ್ಗಡೆಯವರ ಈ ಕೃತಿಯ 'ಆಕೃತಿ'ಯು ನಮ್ಮ ಪ್ರಾಚೀನ ಭಾರತೀಯ ಸಾಹಿತ್ಯ ಪರಂಪರೆಗೆ ಹತ್ತಿರವಾಗುವುದು ಆಕಸ್ಮಿಕವೇನೂ ಅಲ್ಲ. 'ಮಿತ್ಯನಾರಾಯಣ ಕತೆ'ಯು ಕೂಡಾ 'ಸುಳ್ಳಿನ ತತ್ಕಾಲೀನ ಗೆಲುವನ್ನು ಪರಿಶೀಲಿಸುವುದರೊಂದಿಗೆ, ಅಂತಿಮವಾಗಿ ಅದು ಮಾನವನನ್ನು ಅಧಃಪತನಕ್ಕೆ ತಳ್ಳುತ್ತದೆ' ಎಂಬ ಹಳೆಯ ಸತ್ಯವನ್ನೇ ಪ್ರಕಟಿಸುತ್ತದೆ. ಕತೆಯ ಕೊನೆಯಲ್ಲಿ ನಿರೂಪಕ ಹೇಳುವ ಮಾತುಗಳು ಇಂತಿವೆ :

"ಆದರೆ ಮಾಡಿದ್ದನ್ನು ಉಣ್ಣಲೇಬೇಕು ನೋಡಿ, ಸುಳ್ಳು ಮೋಸದಿಂದ ಎಷ್ಟೊಂದು ದೊಡ್ಡಸ್ತಿಕೆ ಬಂದರೂ, ಅರಸುತನವೇ ಸಿಕ್ಕಿದರೂ ದೇವರು ಅದರ ಫಲವನ್ನು ಅವನಿಗೆ ಕೊಡುತ್ತಾರೆ. ಈ ಬ್ರಾಹ್ಮಣನಿಗೆ ಈಗ ಅರಸುತನ ಸಿಕ್ಕಿದರೂ ದೇವರು ಇವರಿಗೆ ಏಕೆ? ಕಾಳಿತಲ್ಲಿಂದ ಏಳಲಿಕ್ಕೆ ಕೈಯಲ್ಲಿ ಹಿಡಿದು ಎತ್ತಬೇಕು. ಭಟ್ಟರು ಮಾಡಿದ್ದನ್ನು ತಿಂದರು. ಯಾರಾದರೂ ಸುಳ್ಳು ಟಕ್ಕ ಮೋಸದಿಂದ ಒಂದು ಗಳಿಗೆ ದೊಡ್ಡವನೆಂದು ತೋರಿದರೂ ಅವರಿಗೆ ಆಗುವ ಗತಿನೋಡಿ. ಅರಸನ ಅಳಿಯನಾದರೇನು? ಊರಿಗೇ ಒಡೆಯನಾದರೇನು? ದೇವರೇ ಆದರೂ ಏನಾಯಿತು? ಇವನ ಈಗಣ ಅರಸುತನಕ್ಕಿಂತ ಮೊದಲಿನ ಬಡತನ ನೂರುಪಾಲಿಗೂ ಒಳ್ಳೆಯದೆಂದು ಅವನಿಗೆ ಕಂಡುಬಂದಿದೆ" (ಪು. ೧೧೫). ತಪ್ಪು ಮಾಡಿದವ ಅದರ ಫಲವನ್ನು ಉಂಡುಬಿಡುತ್ತಾನೆ ಎಂಬ ಭಾವವೇ ಇಡೀ ಕತೆಯ ಆಕೃತಿಯನ್ನು ನಿಯಂತ್ರಿಸಿದೆ ಮತ್ತು ಪರಂಪರಾಗತ ಕಥನ ಸಾಹಿತ್ಯಕ್ಕೆ ಅದನ್ನು ಜೋಡಿಸಿದೆ.

ಮೇಲ್ನೋಟಕ್ಕೆ ನಮಗೆ ಹೀಗೆ ಅನ್ನಿಸುವುದಿಲ್ಲ. ಅದಕ್ಕೂ ಬಲವಾದ

ಕಾರಣಗಳೇ ಇವೆ. ಬ್ರಾಹ್ಮಣ ಜಾತಿಗೆ ಸೇರಿದ ನಾರಾಯಣ ಭಟ್ಟನು ಜೈನರ ಜಾತಿಗೆ ಸೇರಿದ ಸಿರಿಯನ್ನು ಕೂಡುತ್ತಾನೆ. ಹೀಗೆ ಏರ್ಪಡುವ ಲೈಂಗಿಕ ಸಂಬಂಧದ ಆಳದಲ್ಲಿ ವರ್ಗ ಕಲ್ಪನೆಯೂ ಬೆಸೆದುಕೊಂಡಿದೆ. ಭಟ್ಟ ಬಡವನಾದರೆ ಸಿರಿ ಅರಸುಕನ್ಯೆ. ಅವರಿಬ್ಬರ ಲೈಂಗಿಕ ಸಂಬಂಧ ಕೃತಿಯ ಸಂದರ್ಭದಲ್ಲಿ ಪುರೋಗಾಮಿಯಾಗಿ ಚಿತ್ರಿಸಲ್ಪಟ್ಟಿಲ್ಲ, ಬದಲು ಅದು ತುಳುನಾಡಿನ ಅರಸುಮನೆತನದ ನೈತಿಕ ಅಧಃಪತನವನ್ನೂ, ಬ್ರಾಹ್ಮಣರ ಕುಟಿಲಕಾರಸ್ಥಾನವನ್ನೂ ಸಂಕೇತಿಸುತ್ತದೆ. ಅಂದರೆ ಇಲ್ಲಿನ ಲೈಂಗಿಕ ಸಂಬಂಧಕ್ಕೆ ಆ ಕಾಲದ ಸಾಮಾಜಿಕ ಜೀವನವನ್ನು ಕಾಲಸ್ಥಿತಿಗೆ ಅನುಗುಣವಾಗಿ ಪುರೋಗಾಮಿಯಾಗಿಸುವ ಇಲ್ಲವೇ ನೈತಿಕ ಪುನರುತ್ಥಾನಗೊಳಿಸುವ ಕ್ರಿಯಾಶೀಲತೆ ಇಲ್ಲ. ಏರ್ಪಟ್ಟ ಸಂಬಂಧವು ಭಟ್ಟನ ಮಿಥ್ಯೆಯ ಪರಿಣಾಮ ಎಂದು ಎಚ್ಚರಿಸುವ ಲೇಖಕರು, ಆ ಮೂಲಕ ಸಮಾಜ ಜೀವನದ ಬಗ್ಗೆ ಮೂಲಭೂತವಾಗಿ ಭಿನ್ನವಾದ ಮತ್ತು ಪ್ರಖರ ವೈಚಾರಿಕ ನಿಲುವನ್ನು ಪ್ರತಿಪಾದಿಸುವ ಅವಕಾಶದಿಂದ ಕತೆಯನ್ನು ಪಾರುಮಾಡಿಸಿಬಿಟ್ಟಿದ್ದಾರೆ. ನಿರೂಪಕ ಹೇಳುವ ಮಾತುಗಳು :

"ನೋಡಿ, ನಾರಾಯಣ ಭಟ್ಟ ಸುಳ್ಳು ಹೇಳಿಯೇ ಅರಸನ ಸೊಸೆಯೊಂದಿಗೆ ಒಂದಾದ. ಈ ಕಾಲದಲ್ಲಿ ಸುಳ್ಳಿನ ಮಹಿಮೆಯೇ ದೊಡ್ಡದು. ಮಾನ, ಮರ್ಯಾದೆ, ದೊಡ್ಡಸ್ತಿಕೆ, ಕೊನೆಗೆ ಅರಸುತನ ಕೂಡಾ ಸುಳ್ಳಿಗಲ್ಲದೆ, ಸತ್ಯಕ್ಕೆ ದಾರಿಯೇ ಇಲ್ಲ. ಆದರೆ ಸುಳ್ಳಿನ ಸುಖ ಮುಳ್ಳಿನ ಹಾಸಿಗೆ ಎಂದೂ ಹೇಳುತ್ತಾರೆ. ಅದೂ ಸುಳ್ಳು. ಸುಳ್ಳು ಹೇಳುವವರು ನಾರಾಯಣ ಭಟ್ಟನಿಂದ ಕಲಿಯಬೇಕು ಎಂಬುದನ್ನು ಯಾರೂ ಮರೆಯಬೇಡಿ" (ಪು. ೭೫). ನಿರೂಪಕನ ಮಾತುಗಳಲ್ಲಿ ಹುದುಗಿರುವ ವ್ಯಂಗ್ಯವು ಭಟ್ಟನ ಸಾಹಸವನ್ನು ತಲಸ್ಪರ್ಶಿಯಾಗಿ ನಿರಾಕರಿಸಿಬಿಡುತ್ತದೆ.

ಹೀಗೆ ಕೃತಿಗಾರನ ಒಲವು ಪರಂಪರೆಯತ್ತಲೇ ವಾಲಿಕೊಂಡಿರುವುದರಿಂದ, ಕೃತಿಯ ಇನ್ನೊಂದು ಮೈಯಲ್ಲಿ ಅದಕ್ಕೆ ಸಂಬಂಧಿಸಿದ ವಿವರಗಳು ಹೇರಳವಾಗಿ ಬರುತ್ತವೆ. ಎರಡನೇ ತಿಂಗಳಿನ ಕತೆಯನ್ನು ಪೊಳಲಿಯ ಸ್ಥಳಪುರಾಣವೇ ಇಡಿಯಾಗಿ ಆಕ್ರಮಿಸಿಕೊಂಡಿದೆ. ಐತಿಹ್ಯಗಳೂ, ನಂಬುಗೆಗಳೂ, ಆಚಾರ–ವಿಚಾರಗಳೂ ದೀರ್ಘವಾಗಿ ಕಾಣಿಸಿಕೊಂಡಿವೆ. ಅಳಿಯಕಟ್ಟಿನ ವರ್ಣನೆಯೂ ಬಂದಿದೆ. ಪೊಳಲಿ ಪರಿಸರದಲ್ಲಿ ನೆಲೆನಿಂತ ವಿವಿಧ ಜನಾಂಗಗಳ ಬಗೆಗೂ ಅತ್ಯುತ್ಸಾಹದ ವಿವರಣೆ ಬಂದಿದೆ. ಅದೇ ರೀತಿ ಪುತ್ತಿಗೆಯ ಕಾರ್ಯರಮಂಜದ ಅರಮನೆಯ ಪ್ರಸ್ತಾಪವೂ ತುಂಬ ದೀರ್ಘವಾಗಿ ಬರುತ್ತದೆ. ಮಹಾನವಮಿ, ಸಂಕ್ರಮಣ, ಹುಣ್ಣಿಮೆ, ಅಮಾವಾಸ್ಯೆ, ಶಿವರಾತ್ರಿ, ಸುಗ್ಗಿಗಳಲ್ಲಿ ನಡೆವ ದೇವರ ಉತ್ಸವಗಳನ್ನೂ ಕೃತಿ ವಿಸ್ತಾರವಾಗಿ ಒಳಗೊಂಡಿದೆ. ಮಧ್ಯೆ ಮಧ್ಯೆ ಶಾಸನಗಳ ಉಲ್ಲೇಖವನ್ನು ತಂದು, ಕೃತಿ ವಿವರಣೆಗಳಿಗೆ ಒಂದು ಅಧಿಕೃತತೆಯನ್ನು ಸಾರಲಾಗಿದೆ. ಅನೇಕ ಜನಪದ ಆಚರಣೆಗಳ ಬಗೆಗೆಯೂ ಕೃತಿಯಲ್ಲಿ ಆಸಕ್ತಿ ವಹಿಸಲಾಗಿದೆ. ಭಟ್ಟನಿಗೆ ಹಿಡಿದ ಮನೋರೋಗದ ನಿವಾರಣೆಗಾಗಿ

ಮಾಡುವ ಮಾಟ-ಮಂತ್ರಗಳ ವಿವರಣೆ ಇವುಗಳೆಲ್ಲಲ್ಲ ತುಂಬ ರಂಜಕವಾದುದು. ಕನ್ನಬರ್ಮ್ಯಯ ಎಂಬವನು ಭಟ್ಟನ ರೋಗ ಕುರಿತು ನೀಡುವ ವಿವರ ಇಂತಿದೆ :

"ಇದ್ ಒರು ಆಪತ್ತ್ ಬಿಸಯುಲ್ ಇರ್ಕ್ಕ್. ಒರು ಮನುಷ್ಯ ಮಾರ್‌ಕ್ಕ್ ಆಪತ್ತ್ ಉಂಡಾಯಿ, ಕೊಂಚ ಕಟಿನತರ ಇರ್ಕ್ಕ್. ಒರು ರಕ್ತವರ್ನಂಡೆ ದೈವತ್ತ್ ಹೇತ್ ಉಂಡಾಯಿ. ಪಿನ್ನ್ ಅವರ್ಕ್ಕ್ ಸರಿಯಾಯಿ ನಿವೃತ್ತಿ ಆಯಿಲ್ಲೆಂಗ್ ಚಿತ್ತಭ್ರಮೆ ಉಂಡಾವು. ಬುದ್ಧಿ ಸ್ವಾಸ್ತ್ಯಮಿಲ್ಲೆ. ಜೀವಸ್ರವನ್ ಪೋಲು ಉಂಡಾಯಿ ದಿನದಿನಂ ಆದಿಕಮಾಂವು. ಈ ಆಪತ್ತಿಂಡೆ ಆಶ್ ಕೊಂಚದಿನ ಮುಂಬೆ ಪಟೂರ ಕೂಟ ಸ್ತಾನರ್ ಪೋಯಿರ್ಕ್ಕ್. ಅವುಡೆ ಒರಿ ಸ್ತ್ರೀಪ್ರೇತಂಡೆ ಸೋಂಕು ಆಯಿಟ್ಟುಂಡು. ಪ್ರೇತಂಡೆ ಕೂಟಕಾರಿಯಾಯಿ ಪೆರಿಯ ಗುಳಿಗನ ದೃಷ್ಟಿ ಉಂಡು ಈ ಆಶ್‌ಗ್ ಭಯ ಜಾಸ್ತಿ ಉಂಡು. ಅದರ್ಕ್ಕ್ ಅಸುರಕ್ರಿಯತ್ತಿಲ್ ಬಲಿ ಆಶೋನ್. ಬಲಿ ಸರಿಯಾಯೆಂಗಿಲ್ ಕ್ಷೇಮ ಉಂಡಾವು" (ಪು. ೫೮–೫೯). ಕೃತಿಯ ತುಂಬ ಬಂದಿರುವ ಇಂಥ ಅನೇಕ ವಿವರಗಳಿಗೂ ಕತೆಯ ಓಟಕ್ಕೂ ಸಂಬಂಧ ಇದ್ದಂತೆ ಮೇಲ್ನೋಟಕ್ಕೆ ಭಾಸವಾಗುವುದಿಲ್ಲ. ಆದರೆ ಆಳದಲ್ಲಿ ಇವೆಲ್ಲವೂ ಕೃತಿಕಾರನ ತಾತ್ವಿಕತೆಗೆ ಸಂಬಂಧಿಸಿದೆ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಮೇಲುನೋಟಕ್ಕೆ ಅಸ್ತವ್ಯಸ್ತ ಚದುರಿ ಹೋದಂತೆ ಕಾಣುವ ಘಟನೆಗಳೂ ಕೂಡಾ ಆಕೃತಿಯ ಮುಖ್ಯ ತಾತ್ವಿಕತೆಯನ್ನು ಬಿಟ್ಟು ಸಾಗಿಲ್ಲ.

ಹೀಗೆ ಕೃತಿಕಾರನ ಆಶಯ ಪರಂಪರೆಯತ್ತ ಜಾರಿಕೊಂಡರೂ ಕೃತಿ ಪರೋಕ್ಷವಾಗಿ ಸಮಾಜವೊಂದರ ಸ್ಥಿತ್ಯಂತರವನ್ನು ಸೂಚಿಸುತ್ತದೆ. ಪುಟ ೧೩ರಲ್ಲಿ ಬರುವ ಒಂದು ಮಾತು ಇಂತಿದೆ : "ಇತ್ತೆ ಜೊಲ್ಲು ಮೋನೆದಾಕ್ಲೆ ಊಳಿಗದಾಕ್ಲಾದ್ ಅಕ್ಲೆ ಕಾಲೊಗು ತಕ್ಕ ನಲಿಪುವೆರ್" (ಕನ್ನಡ ಅನುವಾದ : ಈಗ ಬಿಳಿಮುಖದವರ ಊಳಿಗದವರಾಗಿ ಅವರ ಕಾಲಕ್ಕೆ ತಕ್ಕಂತೆ ಕುಣಿಯುತ್ತಾರೆ). ಈ ಮಾತು ವಸಾಹತೀಕರಣಕ್ಕೊಳಪಟ್ಟ ನಾಡಿನ ದುರಂತ ಸ್ಥಿತಿಯನ್ನು ದಾಖಲಿಸುವುದರ ಜೊತೆಗೇನೇ ಹಾಗಾಗುವುದಕ್ಕೂ ಪೂರ್ವದ ಕಲ್ಪಿತ ಸುವರ್ಣಯುಗವೊಂದರ ಬಗ್ಗೆ ಉದಾತ್ತವಾದ ಆಶಾವಾದವನ್ನು ಪ್ರಕಟಿಸುತ್ತದೆ. ಈ ಕಾರಣಕ್ಕೇನೇ ಇಲ್ಲಿ ಭಟ್ಟ ಕಥಾನಾಯಕನಾಗುತ್ತಾನೆ, ಅರಸುಕನ್ಯೆ ಕಥಾನಾಯಕಿಯಾಗುತ್ತಾಳೆ. ಇವರಿಬ್ಬರೂ ತಲುಪಿದ ಸ್ಥಿತಿಯ ವರ್ಣನೆಯೇ 'ಪೂರ್ವದಲ್ಲಿ ಹಾಗಿರಲಿಲ್ಲ' ಎಂಬುದನ್ನು ಧ್ವನಿಸುತ್ತದೆ. ಇದು ಪರಿವರ್ತನೆಯನ್ನು ದಾಖಲಿಸುವ ವಿಷಯವೂ ಆಗಿಬಿಡುತ್ತದೆ. ಈ ಅರ್ಥದಲ್ಲಿ ಮಿತ್ಯನಾರಾಯಣ ಕತೆಯು ಊಳಿಗಮಾನ್ಯ ವ್ಯವಸ್ಥೆಯ ಶಿಥಿಲೀಕರಣವನ್ನು, ಅದಕ್ಕೆ ಪ್ರತಿಕ್ರಿಯಿಸುವ ಸಾಂಪ್ರದಾಯಿಕ ಮನಸ್ಸನ್ನೂ ಜತೆಜತೆಯಾಗಿಯೇ ದಾಖಲಿಸುತ್ತದೆ.

ಕಥೆಯ ನಿರೂಪಣೆಯಲ್ಲಿ ಕಂಡುಬರುವ ಅಪೂರ್ವವಾದ ಲವಲವಿಕೆ, ಹಾಸ್ಯ, ವ್ಯಂಗ್ಯ ಮತ್ತು ವಿಡಂಬನೆಗಳು ಈ ಕೃತಿಗೆ ಒಂದು ವಿಶಿಷ್ಟವಾದ ಸ್ಥಾನವನ್ನು ಒದಗಿಸಿ

ಕೊಡುತ್ತವೆ. ನಾನು ಮೇಲೆ ಹೇಳಿದ ಅಂಶಗಳಿಗೆ ಬದ್ಧವಾಗಿಯೇ ಇದು ಕ್ರಿಯಾ ಶೀಲವಾಗುತ್ತದೆ. ಈ ವ್ಯಂಗ್ಯ-ವಿಡಂಬನೆಗಳು ಕೃತಿಕಾರನ ತಾತ್ತ್ವಿಕ ಕಳಕಳಿಗೆ ವಿರುದ್ಧವಾದ ದಿಕ್ಕಿನಲ್ಲಿ ಚಲಿಸುವಂಥ ಅಥವಾ ಅದಕ್ಕೆ ಸಮ್ಮತವಾಗದ ರೀತಿಯಲ್ಲಿ ಇರುವಂಥ ಮೌಲ್ಯಗಳನ್ನು ಪ್ರತಿನಿಧಿಸುವ ವ್ಯಕ್ತಿ-ಸಂಗತಿಗಳನ್ನು ಕುರಿತು ಅಸಹನೆ ಯನ್ನು ಸೂಚಿಸುವಂಥದ್ದಾಗಿದೆ. ಅಂದರೆ ಕತೆಯು ಪ್ರತಿಪಾದಿಸುವ ಸಾಂಪ್ರದಾಯಿಕ ಮೌಲ್ಯಗಳಿಗೆ ವಿಡಂಬನೆಯು ಪರೋಕ್ಷ ಘೋಷಣೆಯನ್ನು ನೀಡುತ್ತದೆ. ನಾರಾಯಣ ಭಟ್ಟನು, ಕತೆಯಲ್ಲಿ ವಿಡಂಬನೆಗೆ ಒಳಗಾಗಿದ್ದಾನೆ ಎಂದರೆ, ಆತನು ಜೈನರ ಹುಡುಗಿ ಯೊಡನೆ ಏರ್ಪಡಿಸಿಕೊಂಡ ಲೈಂಗಿಕ ಸಂಬಂಧದ ಬಗೆಗೆ ಕೃತಿಕಾರನಿಗೆ ಅಸಹನೆ ಇದೆಯೆಂದೇ ಅರ್ಥ. ಇದನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಲು ಲೇಖಕರು ನೀಡುವ ಸ್ಥಳಪುರಾಣ, ಐತಿಹ್ಯ, ದೇವಸ್ಥಾನದ ಪೂಜಾದಿ ವಿವರಗಳನ್ನು ಅವಲೋಕಿಸಬೇಕು. ಅಲ್ಲಿ ಎಲ್ಲಿಯೂ ವ್ಯಂಗ್ಯ-ವಿಡಂಬನೆಗಳು ತಲೆಹಾಕುವುದಿಲ್ಲ ಎಲ್ಲೆಲ್ಲಿ ವಿಡಂಬನೆ ಕಾಣಿಸಿಕೊಂಡಿದೆಯೋ ಅಲ್ಲಿ ಅದು ತನ್ನ ವಿಲೋಮ ಕ್ರಮದಲ್ಲಿ ಅಥವಾ ಪರೋಕ್ಷ ಮಾರ್ಗದಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತಾ ಹೋಗುತ್ತದೆ. ಕತೆಯ ಕೊನೆಯಲ್ಲಿ ನೈಜ ನಾರಾಯಣನೇ ಪ್ರತ್ಯಕ್ಷವಾಗಿ ಭಟ್ಟನನ್ನು ಶಿಕ್ಷಿಸುವುದು ಇದಕ್ಕೆ ಪೂರಕವಾದ ವಿಚಾರವೇ ಆಗಿದೆ. ಹೀಗೆ ವಿಡಂಬನೆಯ ಮೂಲಕ ಪ್ರತಿಪಾದಿಸ ಲಾಗುವ ಸಾಂಪ್ರದಾಯಿಕ ಮೌಲ್ಯಗಳಿಗೆ ಸಮಾನಾಂತರವಾಗಿ ದೇವಸ್ಥಾನಗಳ, ಅರಮನೆಗಳ, ಆಚರಣೆಗಳ ಬಗೆಗೆ ಪ್ರಶಂಸಾಪರ ದನಿ ಕೇಳಿಸುತ್ತದೆ.

ಕೃತಿಯ ಶೈಲಿ ಮತ್ತು ಭಾಷೆ ತುಂಬ ನವೀನವಾದುದು ಮತ್ತು ಸತ್ತ್ವಯುತ ವಾದುದು. ಕೃತಿಯ ಭಾಷೆಯಲ್ಲಿ ಕನಿಷ್ಠ ನಾಲ್ಕು ರೀತಿಗಳಿವೆ :

೧. ನಿರೂಪಕ ಕೇವಲ ವರ್ಣನೆಗೋಸ್ಕರ ಬಳಸುವ ಭಾಷೆ

೨. ಸಾಮಾನ್ಯ ಜನರು ವಿಚಾರ-ವಿನಿಮಯಕ್ಕೆ ಬಳಸುವ ಭಾಷೆ

೩. ಅರಮನೆಯಲ್ಲಿ ರಾಣಿಯರು ಬಳಸುವ ಜೈನರ ತುಳು

೪. ಅಲ್ಲಿ ಇಲ್ಲಿ ಬಳಕೆಯಾಗುವ ಮಲೆಯಾಳ ಮತ್ತು ಕನ್ನಡ.

ಇಡೀ ಕೃತಿಯಲ್ಲಿ ಭಾಷಾ ಪ್ರಭೇದಗಳ ಮಿಶ್ರಣ ಅದ್ಭುತವಾಗಿ ಸಾಧಿತವಾಗಿದೆ. ಎಲ್ಲ ಕಡೆಯೂ ಭಾಷೆಯ ಕಾರ್ಯವು ಕತೆಯ ಕಲ್ಪನಾಶೀಲತೆಗೆ ಮತ್ತು ವಿವರಣಾ ಸಾಮರ್ಥ್ಯಕ್ಕೆ ಸೀಮಿತವಾಗಿದೆ. ಸಂಭಾವನೆಯ ಹಂತದಲ್ಲಿ ಭಾಷೆಯು ಆ ಪಾತ್ರಗಳ ಸಾಮಾಜಿಕ ಮುಖವನ್ನು ಹೊರಹಾಕಲು ಹವಣಿಸುತ್ತಿರುತ್ತದೆ. ಸಿರಿ ಗರ್ಭಿಣಿ ಯಾದಾಗ ಎಂಕಮ್ಮ, ದಾರು, ಅಂಗಮ್ಮ, ಸುಬ್ಬು ಮೊದಲಾದವರು ಮಾತಾಡುವುದು ಇದಕ್ಕೆ ಸಾಕ್ಷಿ. ವಸ್ತುಸ್ಥಿತಿಯ ವರ್ಣನೆಯ ಹಂತದಲ್ಲಿ ನಿರೂಪಕನ ಭಾಷೆಯು ಸನ್ನಿವೇಶದ ಧಾರ್ಮಿಕತೆಯನ್ನು ಪ್ರಕಟಪಡಿಸುತ್ತದೆ. ಇಷ್ಟಿದ್ದರೂ ಕೃತಿಕಾರ ಭಾಷೆಯನ್ನು ತುಂಬ ಕ್ರಿಯಾತ್ಮಕವಾಗಿ ಬಳಸಿಕೊಂಡಿದ್ದಾನೆ ಎನ್ನಲು ಧೈರ್ಯ ಸಾಲದು. ಜನಪದರಿಂದ ಎತ್ತಿಕೊಂಡ ಲಕ್ಷ ಗಾದೆಗಳೂ ಈ ಕತೆಯಲ್ಲಿವೆ. ಜನಾಂಗದ

ಅವನತಿಯನ್ನೂ, ಕತೆಯಲ್ಲಿ ಮುಂದೆ ಉಂಟಾಗುವ ದುರಂತವನ್ನೂ ಸೂಚಿಸುವ ಧ್ವನಿಶಕ್ತಿ ಈ ಗಾದೆಗಳಿಗಿದೆ. ಕನ್ನಡದ ಮೊದಲ ಕಾದಂಬರಿಗಳಾದ ಇಂದಿರಾಬಾಯಿ, ವಾಗ್ದೇವಿ, ಮಾಡಿದ್ದುಣ್ಣೋ ಮಹಾರಾಯ ಕೃತಿಗಳಲ್ಲಿ, ನೈಜೀರಿಯಾದ ಮೊದಲ ಕಾದಂಬರಿಕಾರರಲ್ಲಿ ಒಬ್ಬರಾದ ಚಿನುವಾ ಅಚೀಬೆಯವರ ಕಾದಂಬರಿಗಳಾದ ಥಿಂಗ್ಸ್ ಫಾಲ್ ಅಪಾರ್ಟ್, ಎರೋ ಆಫ್ ಗಾಡ್ ಮೊದಲಾದ ಕೃತಿಗಳಲ್ಲಿ ಕಂಡುಬರುವ ಸಂಗತಿಯಿದು. ಈ ಅರ್ಥದಲ್ಲಿ 'ಮಿತ್ಯನಾರಾಯಣ ಕಥೆ'ಯು ನಿಜವಾದ ಅರ್ಥದಲ್ಲಿ ಕತೆಯೇ ಆದರೂ ಜನಜೀವನದೊಂದಿಗೆ ಭಾಷಿಕ ಸಂಬಂಧವನ್ನೂ, ಆ ಮೂಲಕ ಸಾಂಸ್ಕೃತಿಕ ಸಂಬಂಧವನ್ನೂ ಏರ್ಪಡಿಸಿಕೊಂಡಿರುವುದರಿಂದ ಎಲ್ಲೋ ಒಂದೆಡೆಯಲ್ಲಿ ಕಾದಂಬರಿಯ ಒಂದು ಸಣ್ಣ ಗುಣವನ್ನು ಹೊಂದಿರುವಂತೆ ಭಾಸವಾಗುತ್ತದೆ. ಕಾದಂಬರಿಗೂ ಜನಜೀವನಕ್ಕೂ ಇರುವ ಸಂಬಂಧದ ದೃಷ್ಟಿಯಿಂದ ಮಾತ್ರ ಈ ಮಾತನ್ನು ಹೇಳಲಾಗಿದೆ. ಶೀನಪ್ಪ ಹೆಗ್ಗಡೆಯವರಂಥ ಬ್ರಾಹ್ಮಣೇತರ ಜಾತಿಯ ಬರಹಗಾರನ ಪ್ರಜ್ಞಾಪರಿಸರದ ಬಗ್ಗೆಯೂ ಈ ಗಾದೆಗಳು ನಮ್ಮ ಗಮನವನ್ನು ಸೆಳೆಯುತ್ತವೆ.

ಶೀನಪ್ಪ ಹೆಗ್ಗಡೆಯವರು ಈ ಕೃತಿಯನ್ನು ಬರೆಯುವ ಹೊತ್ತಿಗೆ ಭಾರತಾದ್ಯಂತ ಹಲವು ಸುಧಾರಣಾಪರ ಆಂದೋಲನಗಳು ಚುರುಕಾಗಿದ್ದವು. ವಸಾಹತೀಕರಣ ಕ್ಕೊಳಪಟ್ಟ ತುಳುನಾಡಿನಲ್ಲಿಯೂ ಸಾಂಸ್ಕೃತಿಕ ಚಲನಶೀಲತೆ ಕಾಣಿಸಿಕೊಂಡಿತ್ತು. ಸ್ವತಃ ಸ್ವಾತಂತ್ರ್ಯ ಹೋರಾಟಗಾರರೂ, ಸಾಮಾಜಿಕ ಕಾರ್ಯಕರ್ತರೂ, ದೇವಸ್ಥಾನದ ಧರ್ಮದರ್ಶಿಗಳೂ ಆಗಿದ್ದ ಹೆಗ್ಗಡೆಯವರು ವಸಾಹತೀಕರಣದ ವಿರುದ್ಧ ತಮ್ಮ ಪ್ರಜ್ಞೆಯನ್ನು ವಿಕಾಸಗೊಳಿಸಿಕೊಳ್ಳುವುದು ಚಾರಿತ್ರಿಕ ಅನಿವಾರ್ಯವಾಗಿತ್ತು. ಈ ನಿಟ್ಟಿನಲ್ಲಿ ನೋಡಿದಾಗ ಶೀನಪ್ಪ ಹೆಗ್ಗಡೆಯವರಲ್ಲಿ ನಿಷ್ಠುರವಾದ ಒಂದು ಸಾಮಾಜಿಕ ವಿಡಂಬನೆ ಯಾಕೆ ಕಾಣಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ವಿಡಂಬನೆಯ ಕಾರ್ಯ ಮಾತ್ರ ಪರಂಪರೆಯನ್ನು ಸಮರ್ಥಿಸುವುದೇ ಆಗಿದೆ. 'ತಾನು ಬದುಕುತ್ತಿರುವ ಸಮಾಜವು ಬದಲಾಗಬೇಕಾದದ್ದು, ಪರಿವರ್ತನೆಗೆ ಒಳಗಾಗಬೇಕಾದದ್ದು ಎಂಬ ಪೂರ್ವ ನಿಶ್ಚಿತ ಗ್ರಹಿಕೆ'ಗಳು ಹೆಗ್ಗಡೆಯವರಲ್ಲಿ ಇದ್ದುವೇ ಎಂಬ ಬಗ್ಗೆ ನನಗೆ ಸಂಶಯವಿದೆ. ದೇವಳದ ಧರ್ಮದರ್ಶಿಗಳೂ, ಗುತ್ತಿನ ಯಜಮಾನರೂ ಆಗಿದ್ದ ಅವರಿಂದ ಅದನ್ನು ನಿರೀಕ್ಷಿಸುವುದೂ ತಪ್ಪಾದೀತು. ಆದರೂ ಸಮಾಜ ಬದಲಾವಣೆಯನ್ನು ಗ್ರಹಿಸುವಷ್ಟು ಅವರ ಸಂವೇದನೆ ಸೂಕ್ಷ್ಮವಾಗಿತ್ತು. ಅದನ್ನು ಒಪ್ಪಿಕೊಳ್ಳುವ, ಆದರಿಸುವ ಮನಸ್ಸು ಮಾತ್ರ ಇದ್ದಂತಿಲ್ಲ. ತಾನು ಬಾಳುತ್ತಿರುವ ಸಮಾಜದ ವಾಸ್ತವವು ಮೌಲ್ಯಾತ್ಮಕ ವಾಗಿ ಕುಸಿಯುತ್ತಿರುವುದನ್ನು ಗಾಢವಿಷಾದದಿಂದ ಗುರುತಿಸುವ ಅವರು ಅದೇ ಕ್ಷಣದಲ್ಲಿ ಕುಸಿತಕ್ಕೆ ಸಂಭ್ರಮಿಸುವುದಿಲ್ಲ, ಸಂತೋಷಿಸುವುದಿಲ್ಲ. ಕಾಲಸ್ಥಿತಿ ಮತ್ತು ಪರಿಸರ ಬದಲಾದಂತೆ ವ್ಯಕ್ತಿಗಳು ಬದಲಾಗಬೇಕಾದ್ದು ಅಗತ್ಯವಾಗುತ್ತದೆಯಾದರೂ, ಸಮಾಜ ಸಂಕ್ರಮಣ ಸ್ಥಿತಿಯಲ್ಲಿರುವಾಗ ಅವರಿಗೆ ಬದಲಾಗುವುದು ಸುಲಭಸಾಧ್ಯ

ವಾಗುವುದಿಲ್ಲ. ಏಕೆಂದರೆ ವಿಚಾರಗಳು ಅಥವಾ ಮೌಲ್ಯಗಳು, ಬದಲಾವಣೆ ಹೊಂದುವಷ್ಟು ಶೀವ್ರವಾಗಿ ಆಚಾರ ಮತ್ತು ರೂಢಿ–ಸಂಪ್ರದಾಯಗಳು ಬದಲಾಗುವುದಿಲ್ಲ.[4] ಮಹತ್ತ್ವದ ಬರಹಗಾರರ ಸೃಜನಶೀಲತೆ ಇಂಥ ಕಡೆಯೇ ಅರಳುತ್ತದೆ. ಸಾಮಾನ್ಯ ಬರಹಗಾರರು ಮಾತ್ರ ಸಮಾಜ ಜೀವನದ ಈ ಅಂತರ್ಲಯಕ್ಕೆ ಸಂವೇದಿಸಲಾಗದೆ, ಮೂಲತಃ ಮನುಷ್ಯಪರವಾದ ನಿಲುವನ್ನೂ ತಾಳಲಾರದೆ, ಮೌಲ್ಯದ ಮೇಲಿನ ಮೋಹಕ್ಕೆ ಬಲಿಯಾಗುತ್ತಾರೆ.[5] 'ಮಿತ್ಯನಾರಾಯಣ ಕತೆ'ಯಲ್ಲಿ ಹೆಗ್ಗಡೆಯವರಿಗೆ ಭಟ್ಟನ ಮತ್ತು ಸಿರಿಯ ಪ್ರೇಮ ಮುಖ್ಯವಾಗದೆ, ಮೋಸ–ಸುಳ್ಳಿನ ಕತೆಯೇ ಮುಖ್ಯವಾದದ್ದು ಈ ಕಾರಣಕ್ಕೆ. ಶೀನಪ್ಪ ಹೆಗ್ಗಡೆಯವರ ಬರಹದ ಈ ಮಿತಿಯನ್ನು ಮೀರುವುದೇ ಅವರಿಗೆ ನಾವು ಈ ಸಂದರ್ಭದಲ್ಲಿ ಕೊಡುವ ವಿಶೇಷ ಗೌರವವಾಗಬಹುದು.

ಆಧಾರ ಗ್ರಂಥಗಳು

1. ಕೃಷ್ಣಶಾಸ್ತ್ರೀ ಎ.ಆರ್. ೧೯೮೩, ಕಥಾಮೃತ ; ಬೆಂಗಳೂರು : ವಿಶ್ವಕನ್ನಡ ಸಮ್ಮೇಳನ.
2. ಚಿನ್ನಪ್ಪಗೌಡ ಕೆ. (ಸಂ.) ೧೯೮೯, ಪನಿಯಾರ ; ಮಂಗಳೂರು : ತುಳುಕೂಟ (೦).
3. ವಿವೇಕ ರೈ ಬಿ.ಎ. (ಸಂ.) ೧೯೮೭, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು : ಮಂಗಳೂರು ವಿಶ್ವವಿದ್ಯಾನಿಲಯ : ಕನ್ನಡ ವಿಭಾಗ.

4, 5. ಜಿ. ಎಚ್. ನಾಯಕ ೧೯೮೪, ನೋಡಿ : ಬಿ. ಎ. ವಿವೇಕ ರೈ (ಸಂ.) ೧೯೮೭ ಪು. ೧೧೩ ಮತ್ತು ೧೧೪ ಹಾಗೂ ಜಿ. ಎಚ್. ನಾಯಕ ೧೯೮೮, ನಿಜದನಿ ಹೆಗ್ಗೋಡು : ಅಕ್ಷರ ಪ್ರಕಾಶನ ಪು. ೨೧೪.

ಚಂದ್ರಮತಿ ಸೋಂದಾ

ಆಶಯ

ಕೆಲ ದಿನಗಳಿಂದ ಅತೀವ ಧಗೆ
ಮುನ್ನೀರು ಆವಿಯಾಗಿ ಮೋಡವಾಗಿ
ಘರ್ಷಣೆ, ಮಿಂಚು ಗುಡುಗು ಆರ್ಭಟ,
ಪ್ರಚಂಡ ಮಾರುತ, ಕಣ್ಣು ಮೂಗೆಲ್ಲ ಧೂಳು, ಉರಿ
ಮೊದಲ ಮಳೆಯ ಮಣ್ಣಿನವಾಸನೆ,
ಬಾಯಾರಿದ ನೆಲ ದಾಹ ಅಡಗಿಸಿಕೊಂಡು
ಸಂತಸದ ಚಿಗುರು, ಎಲ್ಲೆಲ್ಲೂ ಹಸಿರು
ಈ ಮುಂಗಾರಿಯ ಘೋಷಣೆಯ ಹಿಂದೆ
ವರ್ಷಾಕಾಲದ ಸಂಭ್ರಮ
ನೆಲ–ಮುಗಿಲುಗಳೊಂದಾಗಿ ಜೀವ ಜಗಕೆ
ಸುಖ ಶಾಂತಿ ನೆಮ್ಮದಿ

ಪ್ರಕೃತಿಯು ಈ ಬಗೆ ನಮಗೊಂದು ಸೂತ್ರ
ನಾವಿಂದು ನಿರಾಶರಾಗಬೇಕಿಲ್ಲ ಗೆಳತೀ
ನಾವೀಗ ಮುಂಗಾರಿನ ಅಂಚಿನಲ್ಲಿ
ಎಲ್ಲ ಘರ್ಷಣೆಯ ಹಿಂದೆ
ಇದ್ದೇ ಇದೆ ವರ್ಷಧಾರೆ.
ಮುಂಗಾರಿನ ಆರ್ಭಟ ಮುಗಿದು
ಮೋಡಗಳು ಕೆನೆಗಟ್ಟಿ
ಲೆಕ್ಕಿಸದೆ ಬಿರುಗಾಳಿಯನ್ನು
ಧೋ ಎಂದು ಮಳೆ ಸುರಿದಾಗಲೇ
ಬಾಯಾರಿ ನಿಂತ ಕಾದ ನೆಲ
ತಂಪಾಗಿ ಹಸಿರಾಗಿ ನಳನಳಿಸುವುದು
ನಾವಾಗ ನಿರಾಳ ಉಸಿರಾಡುವುದು

ಹಾಗೆಂದು ನಾವೀಗ ಕೈಕಟ್ಟಿ ಕೂರಬೇಕಿಲ್ಲ
ಕೊಳೆನಾಶಕಗಳ ಸಿಂಪಡಿಸಿ ಕಳೆಯೇಳದಂತೆ ಮಾಡೋಣ
ಹುಳುಹುಪ್ಪಟೆಗಳಿಂದ ಬೆಳೆಯನ್ನು ರಕ್ಷಿಸೋಣ

ಜಿ.ಜಿ. ಮಂಜುನಾಥನ್

ಕನ್ನಡ ಶ್ರಾವಕಾಚಾರಗಳು

ಜೈನ ಶ್ರಾವಕರು ಆಚರಿಸಬೇಕಾದ ವಿವರಗಳು ಪ್ರಥಮ ಶ್ರುತ ಆಚಾರಾಂಗದಲ್ಲಿ ಮತ್ತು ಏಳನೆಯ ಶ್ರುತಾಂಗವಾದ ಉಪಾಸಕಾಧ್ಯಯನದಲ್ಲಿ ದೊರೆಯುತ್ತವೆ. ಸ್ವಾಮಿ ಸಮಂತಭದ್ರಾಚಾರ್ಯರ ರತ್ನಕರಂಡಕ ಶ್ರಾವಕಾಚಾರವು ವಿಸ್ತಾರವಾಗಿ ಸ್ವತಂತ್ರವಾಗಿ ಈ ಅಂಶಗಳನ್ನು ಕುರಿತು ವಿವೇಚಿಸಿದೆ.

ಭಾವೀತೀರ್ಥಂಕರರೆಂದು ಪ್ರತೀತಿ ಹೊಂದಿರುವ ಸಮಂತ ಭದ್ರಾಚಾರ್ಯರು ಸುಮಾರು ಎರಡನೆಯ ಶತಮಾನದಲ್ಲಿದ್ದರೆಂದು ಭಾವಿಸಲಾಗಿದೆ. ಇವರು ಫಣಿಮಂಡಲಾಂತರ್ಗತ ಉರಗಪುರದ ದೊರೆಯಾಗಿದ್ದರು. ಈ ಫಣಿಮಂಡಲವು ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯೆ ಇರುವ ನಾಗರಖಂಡವಿದ್ದು, ಉತ್ಕಲಿಕೆ ಗ್ರಾಮವೆಂದು ದೇವಚಂದ್ರ ಹೇಳಿದ್ದಾನೆ. ಕಂಚಿಯಲ್ಲಿ ನಗ್ನಾಟಕ ಎಂದರೆ ದಿಗಂಬರ ಸಾಧುಪದವನ್ನು ಸ್ವೀಕರಿಸಿದರೆಂದು ತಿಳಿದುಬರುತ್ತದೆ. ಇವರನ್ನು ಭಗವಾನ್ ಜಿನಸೇನರು—

> ನಮಃ ಸಮಂತಭದ್ರಾಯ ಮಹತೇ ಕವಿವೇಧಸೇ
> ಯದ್ವಚೋ ವಜ್ರಪಾತೇನ ನಿರ್ಭಿನ್ನಾಃ ಕುಮತಾದ್ರಯಃ

ಎಂದು ಸ್ತುತಿಸಿದ್ದಾರೆ. ವಾದಿರಾಜ, ವಾದೀಭಸಿಂಹಸೂರಿ, ವರ್ಧಮಾನಸೂರಿ, ಶುಭಚಂದ್ರಾಚಾರ್ಯ ಸಕಲಕೀರ್ತಿ, ಬ್ರಹ್ಮಅಜಿತ, ಕವಿದಾಮೋದರ, ವಸುನಂದಿ, ವಿಜಯವರ್ಣಿ, ವೀರನಂದಿ, ಅಜಿತಸೇನ, ನರೇಂದ್ರಸೇನ ಮುಂತಾದ ಸಂಸ್ಕೃತ ಕೃತಿಕಾರರು ಇವರನ್ನು ಮುಕ್ತಕಂಠದಿಂದ ಸ್ತುತಿಸಿದ್ದಾರೆ. ಅನೇಕ ಶಿಲಾಶಾಸನಗಳಲ್ಲಿ ಇವರ ಚರಿತ್ರೆ ಕೊಂಡಾಡಲ್ಪಟ್ಟಿದೆ.

ಕನ್ನಡ ಸಾಹಿತ್ಯದಲ್ಲಿ ಆದಿಕವಿ ಪಂಪನಿಂದ ತೊಡಗಿ ಬಹುಪಾಲು ಎಲ್ಲರೂ ಇವರನ್ನು ಸ್ತುತಿಸಿದ್ದಾರೆ. ದೇವಚಂದ್ರನ ರಾಜಾವಳಿ ಕಥೆಯಲ್ಲಿ ಸಮಂತಭದ್ರರಿಗೆ ಸಂಬಂಧಿಸಿದ ಭಸ್ಮಕರೋಗ ಮತ್ತು ಕಂಚಿಯ ಶಿವಕೋಟಿ ಮಹಾರಾಜನ ಕಥೆಯಿದೆ. ಸಮಂತಭದ್ರರ ಪ್ರಭಾವ ಕಾರಣವಾಗಿ ಶಿವಕೋಟಿಮುನಿ ಜೈನಧರ್ಮಿಯನಾಗಿ ರತ್ನಮಾಲಾದಿ ಅನೇಕ ಶಾಸ್ತ್ರಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ. ತಮ್ಮ

ತಪಸ್ಸಾಮರ್ಥ್ಯದಿಂದ ಸಮಂತಭದ್ರರು ರತ್ನಕರಂಡಕಾದಿ ಜಿನಾಗಮ ಪುರಾಣವನ್ನು ಹೇಳಿ ಸ್ಯಾದ್ವಾದಿಗಳಾಗಿ ಸಮಾಧಿಪಡೆದರೆಂದು ದೇವಚಂದ್ರ ಹೇಳಿದ್ದಾನೆ.

ಆಚಾರ್ಯೋಽಹಂ ಕವಿರಹಮಹಂ ವಾದಿರಾಟ್ ಪಂಡಿತೋಽಹಂ
ದೈವಜ್ಞೋಽಹಂ ಭಿಷಗಹಮಹಂ ಮಾಂತ್ರಿಕಸ್ತಾಂತ್ರಿಕೋಽಹಂ
ರಾಜನ್ನಸ್ಯಾಂ ಜಲಧಿವಲಯಾ ಮೇಖಿಲಾಯಾಮಿಲಾಯಾಂ
ಆಜ್ಞಾಸಿದ್ಧಃ ಕಿಮಿತಿ ಬಹುನಾ ಸಿದ್ಧ ಸಾರಸ್ವತೋಽಹಂ

ಎಂದು ಪ್ರಕೀರ್ತಿತರಾದ ಸಮಂತಭದ್ರರು ಆಪ್ತಮೀಮಾಂಸಾ (ದೇವಾಗಮ), ಯುಕ್ತ್ಯನುಶಾಸನ (ವೀರಜಿನಸ್ತೋತ್ರ), ಸ್ವಯಂಭೂ ಸ್ತೋತ್ರ, ಜಿನಸ್ತುತಿ–ಶತಕ, ರತ್ನಕರಂಡಕ ಶ್ರಾವಕಾಚಾರ, ಪ್ರಾಭೃತ ಟೀಕು, ಗಂಧಹಸ್ತಿಮಹಾಭಾಷ್ಯ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ರತ್ನಕರಂಡಕ ಶ್ರಾವಕಾಚಾರವು ಸಂಸ್ಕೃತಭಾಷೆಯಲ್ಲಿದ್ದು ೧೪೯ ಶ್ಲೋಕ ಮತ್ತು ಒಂದು ವೃತ್ತದಿಂದ ಕೂಡಿದೆ. ಸಮ್ಯಗ್ದರ್ಶನವರ್ಣನಂ, ಸಮ್ಯಗ್ಜ್ಞಾನವರ್ಣನಂ, ಅಣುವ್ರತವರ್ಣನಂ, ಗುಣವ್ರತವ್ಯಾವರ್ಣನಂ, ಶಿಕ್ಷಾವ್ರತವ್ಯಾವರ್ಣನಂ, ಸಲ್ಲೇಖನವ್ಯಾವರ್ಣನಂ, ಏಕಾದಶಪ್ರತಿಮಾವರ್ಣನಂ ಎನ್ನುವ ಏಳು ಅಧಿಕಾರಗಳಿಂದ ಕೂಡಿದೆ.

ಯೇನಸ್ವಯಂ ವೀತಕಲಂಕವಿದ್ಯಾದೃಷ್ಟಿಕ್ರಿಯಾ ರತ್ನಕರಂಡ ಭಾವಂ
ನೀತಸ್ತಮಾಯಾತಿ ಪತೀಚ್ಛಯೇವ ಸರ್ವಾರ್ಥಸಿದ್ಧಿಸ್ತ್ರಿಷುವಿಷ್ಟಪೇಷು ॥೧೪೯

ಎನ್ನುವ ಶ್ಲೋಕದಿಂದ ಸಮಂತಭದ್ರರು ಈ ಕೃತಿಯನ್ನು ರತ್ನಕರಂಡಕ ಎಂದು ಕರೆದಿರುವುದು ತಿಳಿದುಬರುತ್ತದೆ. ಅಂತ್ಯಮಂಗಲದಲ್ಲಿ—

ಸುಖಯತು ಸುಖಭೂಮಿಃ ಕಾಮಿನಂ ಕಾಮಿನೀವ
ಸುತಮಿವ ಜನನೀಮಾಂ ಶುದ್ಧಶೀಲಾ ಭುನಕ್ತು
ಕುಲಮಿವ ಗುಣಭೂಷಾ ಕನ್ಯಕಾಸಂಪುನೀತಾತ್
ಜಿನಪತಿಪದಪದ್ಮಪ್ರೇಂಕ್ಷಣೀಃ ದೃಷ್ಟಿಲಕ್ಷ್ಮೀಃ ॥

ಎಂದು ಮುಕ್ತಾಯವಾಗಿದೆ.

ರಾಜಾಶ್ರಯ ಮತ್ತು ಪ್ರಜಾವಾತ್ಸಲ್ಯದಿಂದ ಪೋಷಣೆಗೊಂಡು ಕರ್ನಾಟಕದಲ್ಲಿ ಜೈನಧರ್ಮ ಪ್ರಬಲವಾಗಿದ್ದುದು ಐತಿಹಾಸಿಕ ಸತ್ಯ.

ಇಲ್ಲಿನ ಮುನಿವರ್ಗ ಮೂಲಾಚಾರವನ್ನು ಅನುಸರಿಸಿ ಪೋಷಿಸಿದುದಲ್ಲದೆ ಶ್ರಾವಕಾಚಾರವನ್ನು ಅಧ್ಯಯನ, ಅಧ್ಯಾಪನಗಳ ಮೂಲಕ ಉಳಿಸಿ ಬೆಳೆಸಿಕೊಂಡು ಬಂದಿತು. ಈ ಮಾತಿಗೆ ಪೂರಕವಾಗಿ ಬೇಲೂರು ತಾಲ್ಲೂಕು ಬಸ್ತಿಹಳ್ಳಿಯ ೧೫-೮-೧೨೬೪ರ ಶಾಸನದಲ್ಲಿ ಕಂಡುಬರುವ ಬಾಲಚಂದ್ರದೇವರು ನೇಮಿಚಂದ್ರ ಪಂಡಿತದೇವರಿಗೆ ಸಾರಚತುಷ್ಟಯಾದಿ ಗ್ರಂಥಗಳನ್ನು ವ್ಯಾಖ್ಯಾನ ಮಾಡುವ ಉಲ್ಲೇಖವನ್ನು ನೋಡಬಹುದಾಗಿದೆ.

ಶ್ರಾವಕಾಚಾರ ಗ್ರಂಥವನ್ನು ಬಸದಿಗಳಲ್ಲಿ ಮನೆಗಳಲ್ಲಿ ರಕ್ಷಿಸಿರುವುದು ಕಂಡು ಬರುತ್ತದೆ. ಕೊಲ್ಲಾಪುರದ ಲಕ್ಷ್ಮಿಸೇನಭಟ್ಟಾರಕರ ಹಸ್ತಪ್ರತಿಭಂಡಾರದಲ್ಲಿರುವ ರತ್ನಕರಂಡಕ ಶ್ರಾವಕಾಚಾರವನ್ನು ಸು. ೧೪೪೫ರಲ್ಲಿದ್ದ ತೆರಕಣಾಂಬಿಯ ಬೊಮ್ಮರಸಯ್ಯನು ಪ್ರತಿಮಾಡಿರುವುದು ಆ ಗ್ರಂಥದ ಪುಷ್ಪಿಕಾವಾಕ್ಯದಿಂದ ತಿಳಿದು ಬರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಸಮಂತಭದ್ರರ ರತ್ನಕರಂಡಕದ ಟೀಕು, ಆಯತವರ್ಮನ ರತ್ನಕರಂಡಕ, ಚಿಕ್ಕ ಶ್ರಾವಕಾಚಾರ, ಶ್ರಾವಕಾಚಾರ ಸಾಂಗತ್ಯ, ರತ್ನಕರಂಡಕದ ಕಥೆ, ಶ್ರಾವಕಾಚಾರ ಸಾರ, ಶ್ರಾವಕಾಚಾರ ವೃತ್ತಿ, ಸತೀಧರ್ಮಸಾರ ಎನ್ನುವ ಪ್ರಾಚೀನ ಗ್ರಂಥಗಳು ಲಭ್ಯವಿವೆ. ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರಕ್ಕೆ ಪಂಡಿತ ಸದಾಸುಖಜೀಯವರು ಹಿಂದೀ ವಚನಿಕೆಯೊಂದನ್ನು ಬರೆದಿದ್ದು ಅದನ್ನು ಪೂರಕ ಸಾಮಗ್ರಿಗಳೊಂದಿಗೆ ಮಿರ್ಜಿ ಅಣ್ಣಾರಾಯರು ಅನುವಾದಿಸಿದ್ದಾರೆ. ಮೂಡಬಿದಿರೆಯ ಪಂಡಿತ ಲೋಕನಾಥಶಾಸ್ತ್ರಿಗಳು ಕನ್ನಡ ಅನ್ವಯ ಮತು ಭಾವಾರ್ಥ ಸಹಿತ ಪ್ರಕಟಿಸಿದ್ದಾರೆ.

ಈ ಎಲ್ಲ ಗ್ರಂಥಗಳಲ್ಲಿ ಸು. ೧೪೦೦ರಲ್ಲಿದ್ದನೆಂದು ಕವಿಚರಿತೆಕಾರರು ಹೇಳಿರುವ ಆಯತವರ್ಮನು ಬರೆದ ಕನ್ನಡ ರತ್ನಕರಂಡಕ ಶ್ಲಾಘ್ಯವಾದುದಾಗಿದೆ. ಸಮಂತಭದ್ರರ ಹೆಸರನ್ನು ಹೇಳದಿದ್ದರೂ ಈತ ಅದೇ ಆಕರವನ್ನು ಬಳಸಿಕೊಂಡಿರುವುದಕ್ಕೆ ಗ್ರಂಥದಲ್ಲಿ ಅಂತರ್ಗತವಾಗಿರುವ ಸಾಮ್ಯಗಳು ಸಾಕ್ಷಿಯಾಗಿವೆ. ಮಿರ್ಜಿ ಅಣ್ಣಾರಾಯರು ಆಯತವರ್ಮನ ರತ್ನಕರಂಡಕವು ಸ್ವಾಮಿ ಸಮಂತಭದ್ರರ ರತ್ನಕರಂಡಕದ ಕೇವಲ ಕನ್ನಡ ಅನುವಾದ ಗ್ರಂಥವಂತೂ ಅಲ್ಲವೇ ಅಲ್ಲ. ಇದು ಸಮಂತಭದ್ರರ ಮೂಲ ಕೃತಿಯನ್ನು ಅನುಸರಿಸಿ ಕನ್ನಡದಲ್ಲಿ ಬರೆದ ಗ್ರಂಥವಾಗಿದೆ (XXIII) ಎಂದಿದ್ದಾರೆ. ಆಯತವರ್ಮನ ಆಶ್ವಾಸಾಂತ್ಯ ಗದ್ಯದಲ್ಲಿ—"ಇದು ಭಗವದರ್ಹತ್ಪರಮೇಶ್ವರ ಪರಮ ಭಟ್ಟಾರಕ ವೀತರಾಗ ಸರ್ವಜ್ಞವದನವನಜ ಸಮುದ್ಗತ ಸದಸದಾತ್ಮಕ ಪರಮತತ್ತ್ವ ಭಾವನಾಭಾವಿತಸ್ವಾಂತ ಶ್ರೀವರ್ಧಮಾನ ಸಿದ್ಧಾಂತದೇವ ಚರಣಸರಸೀರುಹಸ್ಮರಣ ಪರಿಣತಾಂತಃಕರಣ ಕುಶೇಶಯ ಶ್ರೀಮದಾಯತವರ್ಮವಿರಚಿತಮಪ್ಪ ರತ್ನಕರಂಡ ದೊಳ್"—ಎನ್ನುವ ವಿವರ ಮಾತ್ರ ಲಭ್ಯವಾಗಿದೆ. (ಕೆ.ಎ. ೨೮೯/೪)

ಈತನ ಕೃತಿ ಕಂದ ಮತ್ತು ಗದ್ಯದಿಂದ ಕೂಡಿದ್ದು ಚಂಪೂರೂಪವಾಗಿದೆ. ಇದರಲ್ಲಿ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ ಎನ್ನುವ ಮೂರು ಪರಿಚ್ಛೇದಗಳಿವೆ.

> ಶ್ರೀವೃಷಭಜಿನೇಂದ್ರಾದಿ ಮ
> ಹಾವೀರ ಜಿನಾಂತ್ಯಮಾದ ಜಿನಪತಿಗಳ್ (?)
> ಭವ್ಯಾಳಿಗೆ ಚತುರ್ವಿಂಶತಿ
> ದೇವರ್ದಯೆಗೆಯ್ಗೆ ವಿಮಳ ರತ್ನತ್ರಯಮಂ

ಎಂದು ಪ್ರಾರಂಭವಾಗುವ ಈ ಕೃತಿ ಸಮ್ಯಕ್ತ್ವದ ವಿವರಣೆಯೊಡನೆ ಮೊದಲಾಗಿ "ಆ ಸಮ್ಯಕ್ತ್ವಂ ನಿಸರ್ಗದಿಂದಮಧಿಗಮದಿಂದಮಕ್ಕುವಲ್ಲಿಮೆಂಟಂಗಮೆಂಬುವಾವು ವೆಂದೊಡೆ ನಿಶ್ಶಂಕೆ, ನಿಃಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿ, ಉಪಗೂಹನ, ಸ್ಥಿತೀಕರಣ, ವಾತ್ಸಲ್ಯ, ಧರ್ಮಪ್ರಭಾವನೆಯೆಂದಕ್ಕು" ಮುಂತಾಗಿ ಮುಂದುವರೆ ಯುತ್ತದೆ. ಲೋಕಮೂಢ ದೇವತಾಮೂಢ ಪಾಷಂಡಿಮೂಢ ಎನ್ನುವ ಮೂರು ಮೂಢಗಳ ವಿವರಗಳಿವೆ. ಜ್ಞಾನ, ಪೂಜಾ, ಕುಲ, ಜಾತಿ, ಸತ್ತ್ವ, ಧನ, ತಪ, ರೂಪ ಮುಂತಾದ ಎಂಟು ಮದಗಳನ್ನು ವಿನಯಜಲವರ್ಷದಿಂದ ಗೆಲ್ಲಬೇಕು ಎಂದಿದ್ದಾನೆ.

ಸಮ್ಯಕ್‌ಜ್ಞಾನವೆಂದರೆ ವಸ್ತುಸ್ವರೂಪವನ್ನು ಇರುವಂತೆ ತಿಳಿಸುವುದು. ಮತಿ, ಶ್ರುತ, ಅವಧಿ, ಮನಃಪರ್ಯಯ, ಕೇವಲ ಎನ್ನುವ ಐದು ಜ್ಞಾನಗಳ ವಿವರಗಳಿವೆ. ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗವೆಂದು ನಾಲ್ಕು ಜ್ಞಾನಗಳುಂಟು. ಪುರುಷಾರ್ಥಗಳ ವ್ಯಾಖ್ಯಾನ ಚರಿತ್ರೆ, ಪುರಾಣಗಳನ್ನು ತಿಳಿಸುವುದು ಪ್ರಥಮಾನುಯೋಗ. ಯುಗಪರಿವರ್ತನೆ, ಚತುರ್ಗತಿ, ತ್ರಿಲೋಕಾಲೋಕಭೇದಗಳನ್ನು ಕರಣಾನುಯೋಗ ತಿಳಿಸುತ್ತದೆ. ಕರಣಾನುಯೋಗ ಯತಿ ಮತ್ತು ಗೃಹಸ್ಥರ ಆಚರಣೆಗಳನ್ನೊಳಗೊಂಡಿದೆ. ಸಕಲ ಪ್ರಾಣಿಗಳಿಗೂ ಹಿತವಾದ ಏಳು ತತ್ತ್ವಗಳನ್ನು ತಿಳಿಸುವುದು ದ್ರವ್ಯಾನುಯೋಗ.

ಪಂಚಮಹಾಪಾತಕಗಳನ್ನು ಚಾರಿತ್ರ ನಾಶಪಡಿಸುತ್ತದೆ. ವಿಕಲ ಮತ್ತು ಸಕಲ ಎಂದು ಎರಡು ವಿಧವಾದದ್ದು ಸಮ್ಯಕ್ ಚಾರಿತ್ರ. ಸಕಲಚಾರಿತ್ರ ಯತಿಗಳ ಆಚರಣೆಗೆ ಸಂಬಂಧಿಸಿದ್ದು. ವಿಕಲಚಾರಿತ್ರ ಸಂಸಾರಿಗಳಿಗೆ ಸಂಬಂಧಿಸಿದ್ದು. ಅಣುವ್ರತ, ಗುಣವ್ರತ ಮತ್ತು ಶಿಕ್ಷಾವ್ರತವೆಂದು ವಿಕಲಚಾರಿತ್ರ ಮೂರು ಬಗೆ. ಕೊಲೆ ಹುಸಿ ಕಳವು ಕಾಮ ಮೂರ್ಛೆ ಎಂಬ ಪಂಚಮಹಾಪಾತಕಗಳ ನಿವೃತ್ತಿಯೇ ಅಣುವ್ರತ. ಅಣುವ್ರತದಲ್ಲಿ ಅಹಿಂಸೆ, ಸತ್ಯ, ಅಚೌರ್ಯ, ಪರದಾರ ನಿವೃತ್ತಿ ಮತ್ತು ಪರಿಗ್ರಹಪರಿಮಾಣ ಎಂಬ ಭೇದಗಳಿವೆ. ಅಣುವ್ರತಗಳನ್ನು ಅತಿಚರಿಸ ಬಾರದು.

ಗುಣವ್ರತಗಳು ಎಂಟು—ಅವು ಯಾವುವೆಂದರೆ ದಿಗ್ವಿರತಿ, ದೇಶವಿರತಿ, ಅನರ್ಥ ದಂಡವಿರತಿ, ಭೋಗೋಪಭೋಗ ಪರಿಮಾಣ, ದೇಶಾವಕಾಶಿಕ ಸಾಮಾಯಿಕ ಪ್ರೋಷ ಧೋಪವಾಸ, ವೈಯಾಪೃತ್ಯಗಳು. ಗುಣವ್ರತ ಧರಿಸಿದವರು ಮೂಲಂಗಿ ಬೆಣ್ಣೆ ಮುಂತಾದುವುಗಳನ್ನು ಬಳಸಬಾರದು. ಅಪಾತ್ರದಾನ ಕೊಡದು. ಪ್ರತಿನಿತ್ಯ ಅರ್ಹತ್ಪರಮೇಶ್ವರನ ಪೂಜೆ ನಡೆಸಬೇಕು.

ಸಕಲ ಪರಿಗ್ರಹಗಳನ್ನು ತ್ಯಜಿಸಿ ತಪಸ್ಸನ್ನು ಸ್ವೀಕರಿಸುವುದು ಸಲ್ಲೇಖನ. ಸಂನ್ಯಾಸ ಸ್ವೀಕರಿಸುವವನು ಬಂಧುಮಿತ್ರರನ್ನು ಕರೆಸಿ ಅದುವರೆಗೆ ನಡೆದ ಅಪಚಾರ ಗಳಿಗೆ ಕ್ಷಮೆ ಕೇಳಬೇಕು. ಅದುವರೆಗೆ ತಾನು ಮಾಡಿದ ಪಾಪಗಳನ್ನು ಗುರುಗಳಲ್ಲಿ

ನಿವೇದಿಸಿಕೊಳ್ಳಬೇಕು. ಪರಿಗ್ರಹಗಳನ್ನು ತ್ಯಜಿಸಬೇಕು. ಆಹಾರವನ್ನು ಕಡಿಮೆ ಗೊಳಿಸುತ್ತ ಕಡೆಗೆ ನೀರನ್ನು ಕೂಡ ಕುಡಿಯದೆ ಪಂಚನಮಸ್ಕಾರವನ್ನು ಜಪಿಸುತ್ತ ಸಿದ್ಧರ ಗುಣಗಳನ್ನು ನೆನೆಯುತ್ತ ಶರೀರ ತ್ಯಾಗಮಾಡಬೇಕು. ಸಲ್ಲೇಖನ ವ್ರತದಿಂದ ಪೂಜೆ ಅರ್ಥ ಐಶ್ವರ್ಯ ಮೊದಲಾದ ಸಕಲ ಅಭ್ಯುದಯಗಳು ನೆಲಸುತ್ತವೆ.

ಸಮಂತಭದ್ರರನ್ನು ಆಯತವರ್ಮನು ಅನುಸರಿಸಿರುವುದಕ್ಕೆ ಒಂದು ಉದಾಹರಣೆ—

ಚೌರಪ್ರಯೋಗ ಚೌರಾರ್ಥದಾನ ವಿಲೋಪನ ಸದೃಶಸನ್ಮಿಶ್ರಾಃ
ಹೀನಾಧಿಕವಿನಿಮಾನಂ ಪಂಚಾಸ್ತೇಯೇ ವ್ಯತೀಚಾರಾಃ ||೫೮

ಈ ಶ್ಲೋಕದ ಭಾವ ಆಯತವರ್ಮನಲ್ಲಿ ಹೀಗಿದೆ—

ಅದಕ್ಕೆ ಚೋರಪ್ರಯೋಗ, ಚೌರಾರ್ಥದಾನ, ವಿಲೋಪನಂ, ಪ್ರತಿರೂಪಕ ವ್ಯವಹಾರಂ, ಹೀನಾಧಿಕ ಮಾನೋನ್ಮಾನಮೆಂದತಿಚಾರಮಕ್ಕುಂ—ಎಂದು ಅನುವಾದಿಸಿದ್ದಾನೆ. ಇದೇ ಭಾಗ ಮುಂದುವರೆದು ಅವನಾಗಲೀಯದುದು ಕಳದಬ್ರತ ಮೆಂಬುದಕ್ಕುಮಲ್ಲಿ ಕಳ್ಳರೊಳು ಬೆರಸುವುದುಮವರ್ಗೆ ಬಿಯ್ಯಮಂ ಕೊಟ್ಟೆನಗೆ ಕಳ್ದೀಯಿಮೆಂಬುದುಮವರೊಳು ನಂಟತನಂಗೊಳ್ವುದುಂ ಚೋರಪ್ರಯೋಗಂ. ಅಂ ಪ್ರಯೋಗಿಸಿದೆನುಮಿಲ್ಲೆಮೊಡಂಬಟ್ಟೆನುಮಿಲ್ಲೆನಲ್ಲೆಂದು ಕಳ್ದುತಂದ ಕಳ್ಳನೊಡವೆಯಂ ಕೊಳ್ವುದು ಚೋರಾರ್ಥದಾನಂ ಪೆರರ ಕಸವರಂಗಳಂ ಸೂರೆಗೊಳುವದು ವಿಲೋಪನಂ ತುಪ್ಪದೊಳೆಣ್ಣೆಯನುಪ್ಪಿನೊಳ್ಮಳಲಂ ಪೊನ್ನೊಳು ಬೆಳ್ಳಿಯಂ ಬೆರಸಿ ಮತ್ತಮನೇಕ ಕೃತ್ರಿಮಂಗಳಂ ಮಾಡಿ ವ್ಯವಹರಿಸುವುದು ಪ್ರತಿರೂಪ ವ್ಯವಹಾರಂ ಅಳೆವುದು ಮಾನಂ ತೂಗುವುದುನ್ಮಾನಂ ಮತ್ತಾಯೆರಡರೊಳಂ ತಾಂ ಪಿರಿದರೊಳ್ಕೊಂಡು ಕಿರಿದರೊಳ್ಕೊ ಡುವುದು ಹೀನಾಧಿಕಮಾನೋನ್ಮಾನಂ ಎನ್ನುವಂತಹ ವಿವರಣೆಯನ್ನು ಕೊಡುತ್ತಾನೆ. ಇದು ಈತನ ಸ್ವಂತದ್ದೇ ಬೇರೆಯ ಮೂಲದಿಂದ ಆರಿಸಿಕೊಂಡು ಅನುವಾದಿಸುತ್ತಿ ದ್ದಾನೆಯೇ ಎನ್ನುವುದು ತಿಳಿದುಬರುವುದಿಲ್ಲ. ಬಹುಶಃ ಪ್ರಭಾಚಂದ್ರನು ಸಮಂತ ಭದ್ರರ ರತ್ನಕರಂಡಕ ಶ್ರಾವಕಾಚಾರಕ್ಕೆ ಬರೆದಿರುವ ಟೀಕನ್ನು ಈತನು ಆಶ್ರಯಿಸಿ ಬರೆದಿರಬಹುದು.

ರತ್ನಕರಂಡಕ ಟೀಕು ಕೆ.ಎ. ೪೦೮*

ಸ್ವಾಮಿ ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರಕ್ಕೆ ಅನ್ವಯಕ್ರಮದಲ್ಲಿ ಅರ್ಥವನ್ನು ಬರೆದಿದೆ. ಟೀಕಾಕಾರನ ಹೆಸರು ಕಾಲ ದೇಶಗಳ ವಿವರಗಳು ತಿಳಿದು ಬಂದಿಲ್ಲ. ಹಸ್ತಪ್ರತಿಯ ಕಡೆಯಲ್ಲಿ "ಕಾಳಯುಕ್ತ ಸಂವತ್ಸರದ ಶ್ರಾವಣ ಶುದ್ಧ

* ಇಲ್ಲಿ ಕೊಟ್ಟಿರುವ ಹಸ್ತಪ್ರತಿಗಳ ಸಂಖ್ಯೆಗಳು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಸಂಖ್ಯೆಗಳು.

ಅಷ್ಟಮಿಯೂ ಬುಧವಾರದಲ್ಲಿ ರತ್ನಕರಂಡಕವು ಬರೆದು ಮುಗಿಯಿತು" ಎಂದಿದೆ. ಈ ತೇದಿಯು ಕ್ರಿಸ್ತಶಕ ೫-೭-೧೩೧೮, ೩೦-೭-೧೪೩೮, ೨೫-೭-೧೪೯೮, ೧೭-೭-೧೬೭೮ನೆಯ ದಿನಗಳಿಗೆ ಸರಿಹೋಗುತ್ತದೆ. ಈ ಎಲ್ಲ ದಿನಾಂಕಗಳಲ್ಲಿಯೂ ಬುಧವಾರ ಬಂದಿದ್ದು ಯಾವ ಸಂವತ್ಸರಕ್ಕೆ ಈ ಕೃತಿ ಸೇರಿದ್ದು ಎಂದು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಕೃತಿಕಾರನ ಕಾಲವೋ ಪ್ರತಿಕಾರನ ಕಾಲವೋ ಎಂಬುದನ್ನು ಕೂಡ ಹೇಳಲು ಸಾಧ್ಯವಾಗುತ್ತಿಲ್ಲ. ಟೀಕೆಯ ಸ್ವರೂಪವನ್ನು, ಭಾಷೆಯನ್ನು ಗಮನಿಸಿ ೩೦-೭-೧೪೩೮ ಎನ್ನುವ ತೇದಿಯನ್ನು ಒಪ್ಪಬಹುದೆಂದು ಭಾವಿಸಬಹುದಾಗಿದೆ.

ಈ ಟೀಕಿನ ಪ್ರಧಾನಲಕ್ಷಣವೆಂದರೆ ಶಬ್ದಕ್ಕೆ ಶಬ್ದವನ್ನು ಪ್ರತಿನಿಧಾನಿಸುವಂತಹುದು. ಉದಾಹರಣೆಗೆ—

ನಮಃ ಶ್ರೀವರ್ಧಮಾನಾಯ ನಿರ್ಧೂತಕಲಿಲಾತ್ಮನೆ
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೆ ॥೧

ಟೀಕು: ಸಾಲೋಕಾನಾಂ—ಅ ಲೋಕವೊಡನೆ ಕೂಡಿದ, ತ್ರಿಲೋಕಾನಾಂ—ಮೂರು ಲೋಕಂಗಳಿಗೆ, ಯದ್ವಿದ್ಯಾ—ಆವನಾನೋರ್ವ ಪರಮೇಶ್ವರನ ಕೇವಲಜ್ಞಾನವು, ದರ್ಪಣಾಯತೊ—ಕನ್ನಡಿಯ ಹಾಗೆ ಆಚರಿಸುತ್ತಿಹುದು, ನಿರ್ಧೂತ—ಕೆಡಿಸಲ್ಪಟ್ಟ, ಕಲಿಲಾತ್ಮನೆ—ಜ್ಞಾನಾವರಣಾದಿ ಕರ್ಮಸ್ವರೂಪವನ್ನುಳ್ಳ ಶ್ರೀವರ್ಧಮಾನಾಯ—ಅಂತರಂಗ ಬಹಿರಂಗಶ್ರೀಯೊಳ್ ಕೂಡಿದ ವರ್ಧಮಾನತೀರ್ಥೇಶ್ವರಂಗೆ ನಮಃ—ನಮಸ್ಕಾರವ ಮಾಡಿಹೆನು.

ಕೆಲವು ಸಂದರ್ಭಗಳಲ್ಲಿ ವಿಶೇಷವಾಗಿ ಪಾರಿಭಾಷಿಕಶಬ್ದಗಳಿರುವಂತಹ ಕಡೆ ಆದರ ವಿವರಣೆಯನ್ನು ಸಂಕ್ಷೇಪವಾಗಿ ಕೊಡುವುದೂ ಉಂಟು ಉದಾಹರಣೆಗೆ—

ಅಣಿಮಾ ಮಹಿಮಾ ಲಘಿಮಾ ಗರಿಮಾಂತರ್ಧಾನ ಕಾಮರೂಪಿತ್ವಂ
ಪ್ರಾಪ್ತಿಃ ಪ್ರಾಕಾಮ್ಯವಶಿತ್ವೇಶಿತ್ವಾ ಪ್ರತಿಹತತ್ವಮಿತಿವೈಕ್ರಿಕಾಃ ॥

ಟೀಕು: ಅಣಿಮಾ—ಕಿರಿಯ ಶರೀರವ ಕೈಕೊಳುಹವು, ಮಹಿಮಾ—ಪರ್ವತದ ಸಮಾನವಹ ಶರೀರವ ಕೈಕೊಳುಹವು, ಲಘಿಮಾ—ಹಗುರವಹ ಶರೀರವ ಕೈಕೊಳುಹವು, ಗರಿಮಾ—ಗುರುತ್ವವಹ ಶರೀರವ ಕೈಕೊಳುಹವು, ಪ್ರಾಪ್ತಿಃ—ಭೂಮಿ, ಅಂತರ್ಧಾನ—ಅದೃಶ್ಯಾಕರಣವ ಕೈಕೊಳುಹವು, ಕಾಮರೂಪಿತ್ವಂ—ಬಗೆದ ರೂಪುಕೈಕೊಳಹವು, ಪ್ರಾಪ್ತಿಃ—ಭೂಮಿಯಲ್ಲಿದ್ದು ಬೆರಳತುದಿಯಿಂದ ಚಂದ್ರಾದಿತ್ಯರ್ಕಳ ಮುಟ್ಟುಹವು, ಪ್ರಾಕಾಮ್ಯ—ಉದಕದಲ್ಲಿ ಮುಳುಗಿ ಏಳುವ ಹಾಗೆ ಭೂಮಿಯಲ್ಲಿ ಮುಳುಗಿ ಏಳುಹವು, ಪ್ರಾಕಾಮ್ಯ—ಭೂಮಿಯ ಮೇಲೆ ನಡೆಯುವ ಹಾಗೆ ಉದಕದ ಮೇಲೆ ನಡೆಹವು, ವಶಿತ್ವ—ಎಲ್ಲರ ವಶಿತ್ವಮಾಡಿ ಕೊಳುಹವು, ಈಶಿತ್ವ—ಎಲ್ಲರಿಗೊಡೆಯರಾಗುಹವು, ಅಪ್ರತಿಹತ್ವಮಿತಿ—ಪರ್ವತವನುಚ್ಚಳಿಸುವೆನೆಂದಿಂತು, ವೈಕ್ರಿಕಾ—ವಿಕ್ರಿಯೆಗೊಳಗಾದ ಗುಣಂಗಳಹುವು.

ಈ ಕೃತಿಯಲ್ಲಿ ಸಮಂತಭದ್ರರ ಕೃತಿಯನ್ನು ವ್ಯಾಖ್ಯಾನಿಸುವುದರ ಜೊತೆಗೆ ಕೆಲವು ಬೇರೆ ಬೇರೆಯ ಶ್ಲೋಕಗಳನ್ನು ಉದ್ಧರಿಸಿ ಟೀಕನ್ನು ಬರೆದಿರುವುದುಂಟು—ಉದಾಹರಣೆಗೆ—

ಸೂರ್ಯಾರ್ಘ್ಯೆ ಗ್ರಹಣಸ್ನಾನಂ ಸಂಕ್ರಾಂತೌ ದ್ರವಿಣವ್ಯಯಃ
ಸಂಧ್ಯಾಸೇವಾಗ್ನಿ ಸತ್ಕಾರೋ ದೇಹಗೇಹಾರ್ಚನವಿಧಿಃ
ಗೋಪೃಷ್ಠಾಂತ ನಮಸ್ಕಾರಸ್ತನ್ಮೂತ್ರಸ್ಯನಿಷೇವಣಂ.
ರತ್ನವಾಹನ ಭೂವೃಕ್ಷ ಶಸ್ತ್ರಂ ಶೈಲಾದಿ ಸೇವನಂ ॥

ಎನ್ನುವಂತಹ ಹಲವಾರು ಶ್ಲೋಕಗಳನ್ನು ನೋಡಬಹುದು. ಇವು ಮೂಲಕೃತಿಗೆ ವಿವರಣೆಯನ್ನು ಒದಗಿಸುತ್ತವೆಯೆನ್ನಬಹುದು. ಟೀಕಾಕಾರನು ಇವುಗಳಿಗೂ ಟೀಕನ್ನು ಬರೆದಿರುವದನ್ನು ನೋಡಿದರೆ ಈತನು ಇವನ್ನು ಮೂಲಕೃತಿಯ ಭಾಗಗಳೆಂದು ಭಾವಿಸಿರಬಹುದಾಗಿದೆ. ವಾಸ್ತವದಲ್ಲಿ ಹಾಗಲ್ಲ.

ಚಿಕ್ಕ ಶ್ರಾವಕಾಚಾರ ಕೆ.ಎ. ೧೯೮

ಬಿಬಿಲಿಯೋಥಿಕ ಕರ್ನಾಟಕ ಗ್ರಂಥಮಾಲೆಯಲ್ಲಿ ಪ್ರಾಚೀನ ಕೃತಿಗಳನ್ನು ಪ್ರತಿ ಮಾಡಿ ಸಂರಕ್ಷಿಸುವ ಯೋಜನೆಯಡಿಯಲ್ಲಿ ೧–೩–೧೮೫೫ರಂದು ಬ್ರಹ್ಮಸೂರಿ ಶಾಸ್ತ್ರಿಗಳು ಪ್ರತಿಮಾಡಿದ್ದಾರೆ. ಈ ಕೃತಿಯನ್ನು ತಾಳೆನೋಡುವಲ್ಲಿ ನರಸಿಂಹಶಾಸ್ತ್ರಿಗಳು ಸಹಕರಿಸಿದ್ದಾರೆ. ಬ್ರಹ್ಮಸೂರಿಶಾಸ್ತ್ರಿಗಳು ಆರಂಭದಲ್ಲಿ ಟಿಪ್ಪಣಿಯೊಂದನ್ನು ಬರೆದಿದ್ದು ಈ ಪುಸ್ತಕದ ವಸ್ತುವನ್ನು ಹೀಗೆ ನಿರ್ದೇಶಿಸಿದ್ದಾರೆ. "ರತ್ನತ್ರಯದ ಸ್ವರೂಪವೂ ಶ್ರಾವಕರ ಆಚಾರಗಳೂ ವ್ರತಫಲಾದಿಗಳೂ ಹೇಳಲ್ಪಟ್ಟಿರುತ್ತವೆ." ಈ ಕೃತಿಕಾರನ ಕಾಲದೇಶಾದಿಗಳು ಇದುವರೆಗೆ ತಿಳಿದುಬಂದಿಲ್ಲ. ಅವರೇ ಗುರುತಿಸಿರುವಂತೆ ಈ ಕೃತಿಯಲ್ಲಿ ಬ್ರಹ್ಮಶಿವನ ಸಮಯಪರೀಕ್ಷೆ, ವೃತ್ತವಿಳಾಸನ ಶಾಸ್ತ್ರಸಾರ, ಮಾಘಣಂದಿಯ ಪದಾರ್ಥಸಾರ, ಜನ್ನನ ಯಶೋಧರ ಚರಿತೆ ಮತ್ತು ಅನಂತನಾಥಪುರಾಣದ ಪದ್ಯಗಳು ಸಂಕಲನಗೊಂಡಿವೆ.

ಶ್ರೀವೃಷಭಜಿನೇಂದ್ರಾದಿ ಮ
ಹಾವೀರ ಜಿನಾಂತ್ಯಮಾದಜಿನಪತಿಗಳು (?)
ಭವ್ಯಾಳಿಗೆ ಚತುರ್ವಿಂಶತಿ
ದೇವರ್ದಯೆಗೆಯ್ಗೆ ವಿಮಳರತ್ನತ್ರಯಮಂ ॥ ೧

ಎಂದು ಕೃತಿ ಆರಂಭವಾಗಿದೆ. ಕೃತಿಯುದ್ದಕ್ಕೂ ಕಂದ, ವೃತ್ತಗಳದೆ ಬಾಹುಳ್ಯ. ದರ್ಶನಶುದ್ಧಿಯೆಂತೆಂದೊಡೆ, ಸಪ್ತಪರಮಸ್ಥಾನಮೆಂತೆಂದೊಡೆ, ದೇವರಸ್ವರೂಪಮೆಂತೆಂದೊಡೆ, ಹದಿನೆಂಟುದೋಷಂಗಳಾವುವೆಂದೊಡೆ, ಗುರುವಿನ ಸ್ವರೂಪಮೆಂತೆಂದೊಡೆ ಎನ್ನುವಂತಹ ಗದ್ಯದ ತುಣುಕುಗಳು ಅಲ್ಲಲ್ಲಿವೆ. ಜೈನಧರ್ಮ ಮತ್ತು ಜೈನರೊಡನಾಟವನ್ನು ಕೊಂಡಾಡುವ ಪದ್ಯವೊಂದು ಹೀಗಿದೆ—

ಜೈನರ ಕೆಳೆ ಜೈನರ ನೆರೆ
ಜೈನರ ವ್ರತನಿಷ್ಠೆ ಜೈನಧರ್ಮಶ್ರವಣಂ
ಜೈನಪ್ರತಿಮಾರಾಧನೆ
ಜೈನಂಗಿವು ಕೂಡಿ ಬಂದೊಡವನೆ ಕೃತಾರ್ಥಂ ॥ ೧೩೧

ಪಂಚಾಣುವ್ರತದಲ್ಲಿ ಜೈನನಾದವನು ನಡೆಯಬೇಕೆಂದು ತಿಳಿಸುವ

ಕೊಲ್ಲದ ಪುಸಿಯದ ಕಳವಿನಿ
ತಿಲ್ಲದ ಪರವನಿತೆಯರ್ಗೆ ಪದಪಿಂ ಚಿತ್ತಂ
ಸಲ್ಲದ ಪರಿಗ್ರಹಕ್ಕೆಳ
ಸಿಲ್ಲದ ಸುವ್ರತಮಿವಯ್ದುಮಲ್ಲವೆ ರತ್ನಂ ॥ ೩೧

ಪಂಚಮಹಾಪಾತಕನುಂ
ಸಂಚಿತಪಾಪವನೆ ಕೆಡಿಸಲಾರನಮೋಘಂ
ಪಂಚಮಗತಿಯುಂ ಪಡೆವಡೆ
ಪಂಚಾಣುವ್ರತದಿ ನಡೆಯ ನಿರ್ಮಲಚರಿತಾ ॥ ೩೨

ಅಹಿಂಸಾತತ್ವದಲ್ಲಿ ನಂಬಿಕೆಯುಳ್ಳ ಜೈನರು ತಾವು ದಿನನಿತ್ಯ ಬಳಸುವ ಹತಾರುಗಳನ್ನು ಬೇರೆಯವರಿಗೆ ಎರವಲು ಕೊಡುವುದಿಲ್ಲ. ಏಕೆಂದರೆ ಆ ಆಯುಧಗಳಿಂದ ಇತರ ಧರ್ಮೀಯರು ಹಿಂಸೆಯನ್ನು ನಡೆಸಿದರೆ ಆ ಪಾಪಕ್ಕೆ ತಾವು ಪಕ್ಕಾಗುವೆವೆನ್ನುವ ನಂಬಿಕೆಯಿಂದ. ಆ ಪದ್ಯ ಹೀಗಿದೆ—

ಕುಡುಗೋಲಂ ಕೂರಿಗೆಯಂ
ಕೊಡಲಿ ಕುರಂಜಿಯನಗಳಂ ಹರಗುವ ಕುಡನಂ
ಬಡಿವೇರಿವೆಗಳ ಮುಟ್ಟಂ
ಕುಡರುಮವಂ ಪೆರರ್ಗೆ ಪಾಪಭೀತರ್ ಜೈನರ್ ॥ ೯೫

ಇಲ್ಲಿರುವ ಪದ್ಯಗಳ ಆಕರಗಳನ್ನೆಲ್ಲ ಶೋಧಿಸಿದ ಮೇಲೆ ಈತನ ಸ್ವಂತದ್ದೆಷ್ಟು, ಅನ್ಯ ಗ್ರಂಥಗಳಿಂದ ಉದ್ಧರಿಸಿರುವುದೆಷ್ಟು ಎನ್ನುವ ಲೆಕ್ಕ ಸಿಗುತ್ತದೆ. ಒಟ್ಟಿನಲ್ಲಿ ಈ ಕೃತಿಯಿಂದ ಕೃತಿಕಾರನ ವ್ಯಾಸಂಗದ ಹರಹನ್ನು ಗುರುತಿಸಬಹುದಾಗಿದೆ.

ಶ್ರಾವಕಾಚಾರ ಸಾಂಗತ್ಯ ಕೆ.ಎ. ೧೯೮

ಜೈನಮಹಿಳೆಯರನ್ನು ಉದ್ದೇಶಿಸಿ ಬರೆದ ಕೃತಿ ಇದು—

ಶ್ರಾವಕಾಚಾರದೊಳಗೆ ನಾಲ್ಕುವಚನವ । ನೀ ವಸುಧೆಯ ಸತಿಯರಿಗೆ
ಸಾವಧಾನದಿ ಕೇಳಿ ನಡೆಯಬೇಕೆಂದೆಂಬ । ಭಾವದಿಂದ ಹೇಳಿದೆವು ॥ ೧೦

ಎನ್ನುವುದು ಕವಿಯ ಆಶಯ. ಶಾಂತಿಜಿನನ ಪ್ರಾರ್ಥನೆಯೊಂದಿಗೆ ಆರಂಭವಾಗುವ ಈ ಕೃತಿಯಲ್ಲಿ ಸಮಂತಭದ್ರರು ಜಿನಸೇನರು ಮತ್ತು ಗುಣಭದ್ರರ ಉಲ್ಲೇಖಗಳಿವೆ. ಈ ಕವಿಯ ಹೆಸರು ಕಾಲ ದೇಶ ಮುಂತಾದ ವಿವರಗಳು ಯಾವುವೂ ದೊರೆತಿಲ್ಲ. ಸಾಂಗತ್ಯಛಂದಸ್ಸು ಪ್ರಧಾನವಾಗಿದ್ದ ೧೭ನೆಯ ಶತಮಾನ ಎಂದರೆ ಸು. ೧೬೫೦ರಲ್ಲಿ ಈ ಕೃತಿ ರಚಿತವಾಗಿರಬಹುದು.

ಅಷ್ಟಾದಶದೋಷರಹಿತ ಸರ್ವಜ್ಞನು । ಇಷ್ಟದೇವನು ನಮಗೆಂದು
ಸೃಷ್ಟಿಯೊಳಗುಳ್ಳ ದೈವಕೆ ಕೈಯಮುಗಿಯದ । ನಿಷ್ಠೆ ತಾನೆ ಸಮ್ಯಕ್ತ್ವ ॥ ೧೧

ಮುಂತಾಗಿ ಸಮ್ಯಕ್ತ್ವದ ಸ್ವರೂಪವನ್ನು ಹೇಳಿದ್ದಾನೆ. ಪಂಚವಿಂಶತಿ ದೋಷವ ಭಾವಶುದ್ಧದಿ ತೊಲಗಿಸುವುದೆಂದಿದ್ದಾನೆ. ಮೂರು ಮೂಢ, ಆರು ಅನಾಯತನ, ಎಂಟು ಮದ, ಎಂಟು ಶಂಕೆ ಮೊದಲಾದುವನ್ನು ಹೋಗಲಾಡಿಸಬೇಕೆಂದಿದೆ.

ಸ್ತ್ರೀಯರ ದೈನಂದಿನ ವ್ಯವಹಾರವನ್ನು ಹೇಳುತ್ತ ಮಾರಿ ಮಸಣಿ ಚಂಡಿ ಊರ ಬೇತಾಳ ಕೆರೆಯ ಜಟ್ಟಿಗ ಮರ ಮೊದಲಾಗಿ ಪೂಜಿಸಬಾರದು. ಇವುಗಳನ್ನು ಪೂಜಿಸುವ ಹೆಂಗಸಿಗೆ ಉತ್ತಮ ಸುಖ ಲಭಿಸುವುದಿಲ್ಲ ಎಂದಿದೆ. ಜೈನರಾದವರು ಕೊಲೆ ಹುಸಿ ಕಳವು ಪರಾಂಗನೆ ಅತಿಯಾಸೆ ಮಾಂಸ ಮದ್ಯ ಜೇನುತುಪ್ಪ ಹಾಲು ಮರದ ಹಣ್ಣು ಮುಂತಾದುವನ್ನು ಬಿಡಬೇಕು. ಇರುಳೂಟ, ರಸಗಾಯಿ, ಬೆಣ್ಣೆ ಗಿಣ್ಣುಗಳನ್ನು ಭಂಗಿ ಬೆಳ್ಳಿಯನ್ನು ಪರಿಹರಿಸಬೇಕು ಎಂದಿದೆ.

ಹೆಂಗಸರು ದಿನನಿತ್ಯ ಮೊಗೆ ಮುಂತಾದುವುಗಳನ್ನು ಹೇಗೆ ಬಳಸಬೇಕು. ಒಂದಕ್ಕೊಂದು ಮೊಗೆಯನ್ನು ಬೆರೆಸುವುದರಿಂದಾಗುವ ದೋಷಗಳು, ಹಾಲು ಮುಂತಾದುವನ್ನು ಜೋಪಾನಿಸುವ ರೀತಿ, ಬಹಿಷ್ಠೆಯಾದಾಗಿನ ನಡವಳಿಕೆ, ಜನನ ಸಮಯದಲ್ಲಿನ ಆಚರಣೆಗಳು ಮುಂತಾದುವನ್ನು ಹೇಳಿದೆ. ಕಸವನ್ನು ಗುಡಿಸಿ ಒಲೆಗೆ ತಳ್ಳಬಾರದು ಮುಂತಾದ ವಿಚಾರಗಳಿವೆ. ಬಾವಿಯ ತಡಿಯಲ್ಲಿ ಪಾತ್ರೆಗಳನ್ನಿಟ್ಟು ಹೋಗಬಾರದು, ಹಾಗೆ ಹೋದಾಗ ಕಾಗೆ ನಾಯಿಗಳು ಮುಟ್ಟಲು ಆ ಪಾಪ ಆ ಹೆಂಗಸಿಗೆ ಒದಗುತ್ತದೆ—ಮುಂತಾದ ದಿನಚರಿಯ ನಡೆವಳಿಕೆಗಳನ್ನು ಜೈನಮಹಿಳೆಯರಿಗೆ ಬೋಧಿಸುವ ಕೃತಿ ಶ್ರಾವಕಧರ್ಮಕ್ಕೆ ಪೂರಕವಾದ ಅಂಶಗಳನ್ನು ಒಳಗೊಂಡಿದೆ. ಇಂತಹುದೆ ಇನ್ನೊಂದು ಕೃತಿ ಬಂಧುವರ್ಮನ ಸತೀಧರ್ಮಸಾರ. ಈ ಬಗೆಯ ಕೃತಿಗಳು ಸಂಚಿಯಹೊನ್ನಮ್ಮನ ಹದಿಬದೆಯ ಧರ್ಮಕ್ಕೆ ಪ್ರೇರಣೆಯನ್ನು ಕೊಟ್ಟಿರಲು ಸಾಕು.

ರತ್ನಕರಂಡಕದ ಕಥೆ ಕೆ. ೯೭೨

ರತ್ನಕರಂಡಕದಲ್ಲಿ ಸಮಂತಭದ್ರರು ಸೂಚ್ಯವಾಗಿ ತಿಳಿಸಿರುವ ಆನುಪೂರ್ವಿಯನ್ನು ಆಧರಿಸಿ ರಚಿತವಾಗಿರುವ ಕೃತಿ ಇದು. ಈ ಕೃತಿಯ ಕರ್ತೃ ಕಾಲ ದೇಶ ವಿಚಾರಗಳು ತಿಳಿದುಬಂದಿಲ್ಲ. ಕೃತಿಯ ಸ್ವರೂಪವನ್ನು ನೋಡಿದರೆ ೧೩ನೆಯ ಶತಕದ ಗದ್ಯವೆನ್ನಬಹುದು. ಇದರಲ್ಲಿ ಎಂಟು ನಿಃಶಂಕಿತಾದಿ ಅಂಗಗಳನ್ನು ಆಚರಿಸಿದ ಅಂಜನಚೋರ, ಅನಂತಮತಿ, ಉದ್ದಾಯನ ಮಹಾರಾಜ, ರೇವತಿರಾಣಿ, ಜಿನೇಂದ್ರಭಕ್ತಶ್ರೇಷ್ಠಿ, ವಾರಿಷೇಣ, ವಿಷ್ಣುಕುಮಾರ, ವಜ್ರಕುಮಾರರ ಕಥೆಗಳು ಪಂಚಾಣುವ್ರತವನ್ನು ಆಚರಿಸಿದ ಯಮಪಾಲನೆಂಬ ಮಾತಂಗ, ಧನದೇವ ಶ್ರೇಷ್ಠಿ, ವಾರಿಷೇಣ, ನೀಲ, ಜಯಕುಮಾರರ ಕಥೆಗಳು, ಹಿಂಸಾದಿ ಪಂಚಪದಗಳಲ್ಲಿ ಪ್ರಸಿದ್ಧರಾದ ಧನಶ್ರೀ, ಶ್ರೀಭೂತಿ ಅಥವಾ ಸತ್ಯಘೋಷ, ತಾಪಸನೆಂಬ ಚೋರ, ಯಮದಂಡ, ಶ್ಮಶ್ರು

ನವನೀತನ ಕಥೆಗಳು ಮತ್ತು ಚತುರ್ವಿಧ ದಾನದಲ್ಲಿ ಪ್ರಸಿದ್ಧರಾದ ಶ್ರೀಷೇಣ, ವೃಷಭಸೇನೆ, ಕೌಂಡೇಶ, ಸೂಕರ ಮತ್ತು ಮಂಡೂಕನ ಕಥೆಗಳಿವೆ.

ರತ್ನಕರಂಡಕದ ಕಥೆಯು ಹಸ್ತಪ್ರತಿಯಲ್ಲಿನ ಮೊದಲ ೪ ಪತ್ರಗಳು ಲುಪ್ತವಾಗಿವೆ. ಉಪಗೂಹನ ಅಂಗದಿಂದ ಕೃತಿ ಲಭ್ಯವಾಗಿದ್ದು ಪೂರ್ತಿ ಇದೆ. ಉಪಗೂಹನದ ಕಥಾಭಾಗವನ್ನು ಇಲ್ಲಿ ಉದಾಹರಿಸಿದೆ.

ಉಪಗೂಹನ ಗುಣಂಗಳೊಳಂ ಜಿನೇಂದ್ರಭಕ್ತಂ ದೃಷ್ಟಾಂತಮಾದನದೆಂತೆಂದೊಡೆ ಜಂಬೂದ್ವೀಪದ ಭರತಕ್ಷೇತ್ರದ ಪಾಟಳಿಪುತ್ರ ನಗರಮನಾಳ್ವ ಯಶೋಧ್ವಜಂಗಂ ಸುಸೀಮಾದೇವಿಗಂ ಸುವೀರನೆಂಬ ಮಗನಾದನಾತಂ ಸಪ್ತವ್ಯಸನಾಭಿಭೂತಂ ತನ್ನರಪ್ಪ ದುಷ್ಟರೊಳು ಕೂಡಿರ್ದೊಂದು ದಿವಸಂ ಪೂರ್ವದೇಶ ತಾಮ್ರಲಿಪ್ತಿಪೊಳಲ ಜಿನೇಂದ್ರಭಕ್ತನೆಂಬ ಸೆಟ್ಟಿಯ ಸಪ್ತತಳಪ್ರಾಸಾದದೊಳು ಬಹುರತ್ನನಿರ್ಮಿತಮಪ್ಪ ಪಾರ್ಶ್ವದೇವರ ಛತ್ರತ್ರಯದಮೇಲಮೂಲ್ಯಮಪ್ಪ ವೈಡೂರ್ಯಮುಂಟೆಂಬುದಂ ಕೇಳ್ದು ರತ್ನಮಂ ತರಲು ನಮ್ಮಲ್ಲಿ ಸಮರ್ಥರಾರೆಂಬುದುಂ ಕುಮಾ[ರನಾ ಮಾ]ಡದೊಳು ಸೂರ್ಯನೆಂಬನಿಂದ್ರಮಾಣಿಕ್ಯಮುಮಂ ತರಲಾನೆ ಸಮರ್ಥನೆನಿದಾವ ಗಹನಮೆಂದು ಪೂಣ್ದು ಪೋಗಿ ಕಪಟವೃತ್ತಿಯಿಂ ಬ್ರಹ್ಮಚಾರಿಯಾಗಿ ಪಿರಿದಪ್ಪ ಕಾಯಕ್ಲೇಶದಿಂ ಗ್ರಾಮನಗರಂಗಳೊಳು ತನ್ನಂ ಪ್ರಸಿದ್ಧಿಮಾಡಿ ತಾಮ್ರಲಿಪ್ತಿಪುರಕ್ಕೆ ಬರೆ ಜಿನೇಂದ್ರಭಕ್ತಂ ಕಂಡವರ ಭಕ್ತನಾಗಿ ಬೆಸಕೆಯ್ಯುತ್ತಮಿರಲೊಮ್ಮೆ ಬಕವೇಷಿಯಪ್ಪುದನಱಿಯದೆ ನಿಮ್ಮಡಿಗಳು ಎನ್ನದೇಹಾರದೊಳಿರ್ಪುದಾಂ ಸ್ಥಳಯಾತ್ರೆಗೆ ಪೋದಪೆನೆನೆ ಗೃಹಭಂಡಾರದೊಳಿರ್ಪುದಯೋಗ್ಯಮೆನೆ ಕಾಲಂಪಿಡಿದೊಡಂಬಡಿಸಿ ಪೊಱವೊಳಲೊಳು ಬಿಟ್ಟಿರ್ದನನ್ನೆಗಮವಸರಂಬೆತ್ತೆನೆಂದು ವೈಡೂರ್ಯಮಾಣಿಕ್ಯಮಂ ಕೊಂಡು ಪೊಱಮಡುವನಂ ರತ್ನದ ಬೆಳಗಿಂದಿರುಳು ತಳಾಱರ್ಕಂಡ ಡೆಬ್ಬಟ್ಟೆ ಪುಗಲೆಡೆಗಾಣದಂಜಿ ಜಿನೇಂದ್ರಭಕ್ತನಸಾರ್ಥಮಂ ಪೊಕ್ಕನಾಗಳು ಸೆಟ್ಟಿಯುಂ ಕಳ್ಳನಪ್ಪುದನಱಿದು ಧರ್ಮಕ್ಕೆ ಪಳಿಯಾಯ್ತೆಂದಿದಂ ಮಱೆಸುವೆನೆಂದು ವಿನಯಪೂರ್ವಕಂ ತನ್ನಾಶ್ರಯದೊಳಿರಿಸಿದನನ್ನೆಗಂ ತಳಾಱರ್ಬಂದೊಡೆ ತಸ್ಕರನನುನ್ನತಾಸನದೊಳಿರಿಸಿ ತಳಾಱರ್ಗೆ ಜಿನೇಂದ್ರಭಕ್ತನಿಂತೆಂದನೆನ್ನನುಮತದಿಂ ರತ್ನಮಂ ತಪ್ಪ ಸಾಧುತಪಸ್ವಿಯುಂ ಪೂರ್ವಾಪರಮಂ ಬಗೆಯದೆ ಕೊಂದಿರ್ನೀಮೆಂದು ತಳಾಱರುಮಂ ಜನಮುಮಂ ನಂಬಿ ನುಡಿದು ಕಳಿಪಿ ಮತ್ತೆ ತಸ್ಕರನುಮಂ ಹಿತವಾಕ್ಯದಿಂ ಸದ್ಧರ್ಮದೊಳು ನಿಱಿಸಿದನಂತೆ ಸದ್ಧರ್ಮಪರಾಧಮಂ ಪ್ರಚ್ಛಾದಿಸುಗೆ ಭವ್ಯಜನಂಗಳೆಂಬುದು ಕಥಾಭಿಪ್ರಾಯಂ.

ಶ್ರಾವಕಾಚಾರ ಸಾರ ಕೆ.ಬಿ. ೯೬

ಇದರ ಕರ್ತೃ ಮಾಘಣಂದಿ. ಕಾಲ ಸು. ಕ್ರಿ.ಶ. ೧೨೫೩. ಶ್ರಾವಕಾಚಾರವೆಂಬುದು ನಾಮಂ ಮೂಲೋತ್ತರೋತ್ತರ ಭೇದದಿಂದ ಕರ್ತೃತ್ವಂ ತ್ರಿವಿಧವಲ್ಲಿ

ಶ್ರೀವರ್ಧಮಾನಸ್ವಾಮಿ ಮೂಲಕರ್ತೃ, ಗೌತಮಗಣಧರಸ್ವಾಮಿ ಉತ್ತರಕರ್ತೃಗಳು ಉತ್ತರೋತ್ತರ ಕರ್ತೃಗಳು ಅನೇಕರು. ಅವರೊಳು ಈ ಗ್ರಂಥಾಪೇಕ್ಷೆಯಿಂ ಸಾರೋದ್ಧಾರಕರು ಮಾಘಣಂದಿಸಿದ್ಧಾಂತ ಚಕ್ರವರ್ತಿದೇವರು. ಸಂಸ್ಕೃತ ಶ್ಲೋಕ, ಪ್ರಾಕೃತ ಗಾಢೆ, ಕಂದ, ವೃತ್ತ, ವಚನಗಳಿಂದ ಕೂಡಿದ ಈ ಕೃತಿಯು ಆರಂಭ—

ಶ್ರೀವೀರಜಿನಮಾನಮ್ಯವಸ್ತುತತ್ತ್ವೋಪದೇಶಕಂ
ಶ್ರಾವಕಾಚಾರಸಾರಾಖ್ಯಂ ವಕ್ಷ್ಯೇ ಕರ್ಣಾಟಭಾಷಯಾ

ಇಂತು ಮಂಗಳಾದ್ಯರ್ಥಂ ವಿಶಿಷ್ಟದೇವತಾನಮಸ್ಕಾರಮಂ ಮಾಡಿದಪರೂ ಶ್ರಾವಕಾಚಾರಸಾರಮಂ ದಶಾಧ್ಯಾಯದಿಂದ ಪೇಳ್ವೆವಲ್ಲಿ ಮಂಗಳ, ನಿಮಿತ್ತ, ಹೇತು, ಪರಿಣಾಮ, ನಾಮ, ಕರ್ತೃಗಳೆಂಬ ಷಡಾಧಿಕಾರಂಗಳಂ ಮುಂ ಪೇಳ್ದು ಬಳಿಕ್ಕ ಶಾಸ್ತ್ರಮಂ ವ್ಯಾಖ್ಯಾನಂ ಮಾಳ್ಕೆಂಬೀ ನ್ಯಾಯಮಂ ಮನದಲ್ಲಿ ತಾಳಿ ಮೋಕ್ಷಸುಖಾಪೇಕ್ಷೆಯಿಂ ಮಂಗಳಾದಿಗಳಂ ಪೇಳ್ವೆನದಲ್ಲಿ ಮುಂತಾಗಿ ಮುಂದುವರಿಯುತ್ತದೆ. ಮಾಘಣಂದಿ ಸಿದ್ಧಾಂತಿಗಳ ಶಾವಕಾಚಾರಸಾರದ ಸ್ವರೂಪವನ್ನು ತಿಳಿಯಲು ಒಂದು ಉದಾಹರಣೆ—

ಇನ್ನಪಾತ್ರಮೆಂತುಟೆನೆ–ಸ್ವಶುದ್ಧಾತ್ಮೈಕತ್ವಕ ಭಾವನಾಹೀನರುಂ ರಾಗದ್ವೇಷ ಮಲೀಮಸರುಂ ಮೂಢತ್ರಯಪ್ರರೂಢರುಂ ದಂಡತ್ರಯಮಂಡಿತರು ಗಾರವತ್ರಯಧಾರಕರುಂ ಶಲ್ಯತ್ರಯ ವಲ್ಲಭರುಂ ರತ್ನತ್ರಯದೂರರುಂ ಚತುಃಕಷಾಯಕಲುಷಿತರುಂ ಚತುರ್ಗತಿಗಮನಶೀಲರುಂ ಪಂಚೇಂದ್ರಿಯಲಂಪಟರುಂ ಪಂಚಮಿಥ್ಯಾತ್ವ ವಶಗತರುಂ ಷಡಾಯತನ ಸೇವಿಗಳುಂ ಷಡ್ಜೀವ ನಿಕಾಯ ವೈರಿಗಳುಂ ಸಪ್ತವ್ಯಸನಾಭಿಭೂತರುಂ ಸಪ್ತಸಂಸಾರ ಪರ್ಯಟನ ಶೀಲರುಂ ಅಷ್ಟಮದಾಷ್ಟವಿಷ್ಟರುಂ ಅಷ್ಟಶಂಕಾದಿ ದೂಷಿತರುಂ ಪುತ್ರಮಿತ್ರಕಲತ್ರಗೋತ್ರ ಪರಿವೃತರುಂ ವಿಕಥಾ ಆಲಾಪಿಗಳುಂ ಮಾಯಾಪ್ರಪಂಚಿಗರ್ಮೊದಲಾದ ಪಾಪಿಗಳಪಾತ್ರಂ ಇಂತಿವರ್ಗೆ ಕೊಟ್ಟದಾನಂ ಚತುರ್ಗತಿ ಭ್ರಮಣೆಯಂ ಮಾಳ್ಕುಂ (ಪತ್ರ ೧೩೫ ಅ).

ಶ್ರಾವಕಾಚಾರ ವೃತ್ತಿ

ಅಮಿತಗತಿಯ ಶ್ರಾವಕಾಚಾರಕ್ಕೆ ಸಾರತ್ರಯವೇದಿಯೆಂದು ಸ್ವಯಂ ವಿಶೇಷಿಸಿಕೊಂಡಿರುವ ೧೩೫೯ರಲ್ಲಿದ್ದ ಕೇಶವವರ್ಣಿ ಟೀಕನ್ನು ಬರೆದಿದ್ದಾನೆ. ಮಂಗರಾಜ ಮತ್ತು ದೇವಚಂದ್ರರೂ ಕೂಡ ಈತನನ್ನು ಸಾರತ್ರಯವೇದಿಯೆಂದು ಕರೆದಿದ್ದಾರೆ. ಕೇಶವವರ್ಣಿಯ ಗುರುಗಳು ಅಭಯಸೂರಿಸಿದ್ಧಾಂತ ಚಕ್ರವರ್ತಿಗಳು. ಪರಿಚ್ಛೇದಾಂತ್ಯ ಗದ್ಯಗಳಲ್ಲಿ—ಇಂತು ಪರಮಜಿನಸಮಯಸಿದ್ಧಾಂತಪೀಯೂಷಾರ್ಣವ ವರ್ಧಿಷ್ಣುಕುಮುದಬಾಂಧವ ಶ್ರೀಮದಭಯಸೂರಿಸಿದ್ಧಾಂತ ಚಕ್ರವರ್ತಿ ಶ್ರೀಪಾದಪದ್ಮಾರಾಧಕನಪ್ಪ ಸಾರತ್ರಯವೇದಿ ಕೇಷಣ್ಣ ವಿರಚಿತಾಮಿತಗತಿ ಶ್ರಾವಕಾಚಾರ ವೃತ್ತಿಯೊಳ್ ಎನ್ನುವ ವಿವರಗಳು ದೊರೆಯುತ್ತವೆ. ಈತನ ಕೃತಿಯ ಸ್ವರೂಪಕ್ಕೆ ಒಂದು ಉದಾಹರಣೆ—

ವಿಭೇದ್ಯಕರ್ಮಾಷ್ಟಕ ಶೃಂಖಲಾಂಯೇ ಗುಣಾಷ್ಟಕೈಶ್ವರ್ಯಮುಪೇತ್ಯ ಪೂತಂ
ಪ್ರಾಪ್ತಾಸ್ತ್ರಿಲೋಕಾಗ್ರ ಶಿಖಾಮಣಿತ್ವಂ ಭವಂತುಸಿದ್ಧಾ ಮಮಸಿದ್ಧಯೇತೇ

ಟೀಕು—ಯೇ—ಆರ್ಕೆಲಂಬರುಗಳು, ಕರ್ಮಾಷ್ಟಕ ಶೃಂಖಲಾಂ—ಅಷ್ಟಕರ್ಮಗಳೆಂಬ ಶೃಂಖಲೆಯಂ, ವಿಭೇದ್ಯ—ಕಡಿದು, ಪೂತಂ—ಪವಿತ್ರಮಪ್ಪ, ಗುಣಾಷ್ಟಕೈಶ್ವರ್ಯಂ—ಅಷ್ಟಗುಣೈಶ್ವರ್ಯಮಂ, ಉಪೇತ್ಯ—ಪಾರ್ದ, ತ್ರಿಲೋಕಾಗ್ರ ಶಿಖಾಮಣಿತ್ವಂ—ಮೂಱುಲೋಕದ ತುದಿಗೆ ಶಿಖಾಮಣಿಗಳಪ್ಪುದಂ, ಪ್ರಾಪ್ತಾಃ—ಎಯ್ದಿದರು, ತೇ—ಅಂತಪ್ಪ, ಸಿದ್ಧಾಃ—ಸಿದ್ಧಪರಮೇಷ್ಠಿಗಳು, ಮಮ—ಎನಗೆ, ಸಿದ್ಧಯೇ—ಸ್ವಾತ್ಮಫಲ ಲಬ್ಧಿಗೆ ಕಾರಣಂ, ಭವಂತು—ಅಪ್ಪರಕ್ಕೆ.

ಇದುವರೆಗೆ ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರ, ಅಮಿತಗತಿಯ ಶ್ರಾವಕಾಚಾರ ಮತ್ತು ಮಾಘಣಂದ್ಯಾಚಾರ್ಯರ ಶ್ರಾವಕಾಚಾರಗಳನ್ನು ಕುರಿತು ಪೂರ್ವಸೂರಿಗಳು ನಡೆಸಿರುವ ಅಧ್ಯಯನದ ಸ್ವರೂಪವನ್ನು ಪರಿಶೀಲಿಸಿದ್ದಾಯಿತು. ಇನ್ನು ಹೊಸಗನ್ನಡ ಸಾಹಿತ್ಯದಲ್ಲಿ ಸಮಂತಭದ್ರರ ರತ್ನಕರಂಡಕ ಶ್ರಾವಕಾಚಾರವನ್ನು ಕುರಿತು ವಿವೇಚಿಸಿರುವ ಎರಡು ಗ್ರಂಥಗಳನ್ನು ನೋಡಬಹುದಾಗಿದೆ.

ಮೊದಲನೆಯದು ಮೂಡಬಿದಿರೆಯ ಸರಸ್ವತೀಭೂಷಣ ಸ್ವರ್ಗೀಯ ಪಂಡಿತ ಲೋಕನಾಥಶಾಸ್ತ್ರಿಗಳು ಕನ್ನಡ ಅನ್ವಯ ಭಾವಾರ್ಥಸಹಿತ ಪ್ರಕಟಿಸಿರುವ ಆಚಾರ್ಯ ಸಮಂತಭದ್ರ ವಿರಚಿತ ರತ್ನಕರಂಡಕ ಶ್ರಾವಕಾಚಾರ. ಇದನ್ನು ವಿದ್ಯಾವಾಚಸ್ಪತಿ ಶ್ರೀವರ್ಧಮಾನ ಪಾರ್ಶ್ವನಾಥ ಶಾಸ್ತ್ರಿಗಳು ಪರಿಷ್ಕರಿಸಿ ಸೋಲಾಪುರದ ಶ್ರೀ ಆಚಾರ್ಯ ಜಂಬೂಸಾಗರ ಗ್ರಂಥಮಾಲೆಯಲ್ಲಿ ೧೯೫೪ರಲ್ಲಿ ಪ್ರಕಟಿಸಿದರು. ೧೯೬೩ರಲ್ಲಿ ಎಸ್. ಪಿ. ಶಾಂತರಾಜಯ್ಯ ಮತ್ತು ಸಹೋದರರು ೧೦೦೦ ಪ್ರತಿಗಳನ್ನು ಮುದ್ರಿಸಿ ಶಾಸ್ತ್ರದಾನ ಮಾಡಿದ್ದಾರೆ. ಲೋಕನಾಥ ಶಾಸ್ತ್ರಿಗಳು ಬರೆದಿರುವ ಅನ್ವಯಾರ್ಥ ಮತ್ತು ತಾತ್ಪರ್ಯಗಳ ಸ್ವರೂಪವನ್ನು ಅರಿಯಲು ಒಂದು ಉದಾಹರಣೆ—ಧರ್ಮಸ್ವರೂಪವರ್ಣನೆ

ಸದ್ದೃಷ್ಟಿಜ್ಞಾನ ವೃತ್ತಾನಿ ಧರ್ಮಂ ಧರ್ಮೇಶ್ವರಾವಿದುಃ
ಯದೀಯ ಪ್ರತ್ಯನೀಕಾನಿ ಭವಂತಿ ಭವಪದ್ಧತಿಃ ॥ ೩

ಅನ್ವಯಾರ್ಥ—ಧರ್ಮೇಶ್ವರಾಃ—ಧರ್ಮಕ್ಕೊಡೆಯರಾದ ಗಣಧರರು—ಮೊದಲಾದ ಆಚಾರ್ಯರು, ಸದ್ದೃಷ್ಟಿಜ್ಞಾನ ವೃತ್ತಾನಿ—ಸಮ್ಯಗ್ದರ್ಶನ ಸಮ್ಯಜ್ಞಾನ ಮತ್ತು ಸಮ್ಯಕ್ಚಾರಿತ್ರ ಇವುಗಳಿಗೆ, ಧರ್ಮಂ—ಧರ್ಮವೆಂದು, ವಿದುಃ—ಹೇಳುತ್ತಾರೆ. (ಯದೀಯ ಪ್ರತ್ಯನೀಕಾ) ಯದೀಯ—ಯಾವ ರತ್ನತ್ರಯರೂಪವಾದ ಧರ್ಮಗಳಿಗೆ, ಪ್ರತ್ಯನೀಕಾನಿ—ವಿಪರೀತಗಳಾದ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರಗಳು, ಭವಪದ್ಧತಿಃ—ಸಂಸಾರಕ್ಕೆ ಮಾರ್ಗ (ಕಾರಣ)ಗಳಾಗಿ, ಭವಂತಿ—ಆಗುತ್ತವೆ.

ತಾತ್ಪರ್ಯ—ಲೋಕದಲ್ಲಿ ಧರ್ಮೋಪದೇಶವನ್ನು ಮಾಡಿ ಭವ್ಯ ಪ್ರಾಣಿಗಳನ್ನುದ್ಧರಿಸಿ ತೀರ್ಥಂಕರರು ಗಣಧರರು ಮೊದಲಾದವರು ಯಥಾರ್ಥ (ನಿರ್ದೋಷ)

ವಾದ ನಂಬಿಕೆ, ತಿಳುವಳಿಕೆ, ನಡವಳಿಕೆ ಇವುಗಳಿಗೆ ಸಮ್ಯಗ್ದರ್ಶನಜ್ಞಾನ ಚಾರಿತ್ರ ಗಳೆಂದೂ, ರತ್ನತ್ರಯಗಳೆಂದೂ ಹೇಳುತ್ತಾರೆ. ಇವುಗಳಿಗೆ ಧರ್ಮವೆಂದು ಹೆಸರು. ಇವುಗಳಿಗೆ ವಿಪರೀತವೂ ಯಥಾರ್ಥವಲ್ಲ (ಸದೋಷ)ದಿರುವುದೂ ಅದರ ದೇವಗುರು ಶಾಸ್ತ್ರಗಳಲ್ಲಿ ಭಕ್ತಿಜ್ಞಾನ ವೈರಾಗ್ಯಗಳನ್ನಿಡುವುದಕ್ಕೆ ಮಿಥ್ಯಾದರ್ಶನ ಜ್ಞಾನ ಚಾರಿತ್ರ ಗಳೆಂದು ಹೆಸರು. ಇವು ಅಧರ್ಮಗಳಾಗಿಯೂ ಸಂಸಾರಪರಂಪರೆಗೆ ಕಾರಣಗಳಾಗಿಯೂ ಆಗಿವೆಯೆಂದು ತಿಳಿಯಬೇಕು. ಮುಂದೆ ಸಮ್ಯಗ್ದರ್ಶನದ ಸ್ವರೂಪವನ್ನು ಪ್ರತಿ ಪಾದಿಸುತ್ತಾರೆ.

ಈ ಕನ್ನಡ ಅನ್ವಯ ಭಾವಾರ್ಥವನ್ನು ಸಿದ್ಧಪಡಿಸುವಲ್ಲಿ ಪ್ರಭಾಚಂದ್ರಾಚಾರ್ಯರ ಸಂಸ್ಕೃತ ಟೀಕೆ ಮತ್ತು ಸದಾಸುಖಜೀಯವರು ಹಿಂದಿಯಲ್ಲಿ ಬರೆದಿರುವ ಟೀಕೆಯಿಂದ ಸಹಾಯಪಡೆದಿರುವುದಾಗಿ ಲೋಕನಾಥಶಾಸ್ತ್ರಿಗಳು ತಿಳಿಸಿದ್ದಾರೆ. ಈ ಪುಸ್ತಕದ ಉಪೋದ್ಘಾತದಲ್ಲಿ ಕೃತಿಸಾರ, ಶ್ರೀಸಮಂತಭದ್ರಾಚಾರ್ಯರ ಸಂಕ್ಷಿಪ್ತ ಪರಿಚಯ ಮುಂತಾದ ಭಾಗಗಳು ಕೂಡಿದ್ದು ಕೃತಿಯ ಅಧ್ಯಯನಕ್ಕೆ ಒಂದು ಒಳ್ಳೆಯ ಪ್ರವೇಶ ದೊರೆಯುತ್ತದೆ. 'ಜೈನವ್ರತಕಥಾಸುಮನಾವಲೀ' ಪುಸ್ತಕದಿಂದ ಅಷ್ಟಾಂಗ ಮೊದಲಾದವುಗಳಲ್ಲಿ ಪ್ರಸಿದ್ಧರಾದವರ ಚರಿತ್ರೆಯನ್ನು ಕಥಾರೂಪದಲ್ಲಿ ಅಳವಡಿಸ ಲಾಗಿದೆ. ಸುಮಾರು ೪೦ ವರ್ಷಗಳಿಗೂ ಮಿಾರಿ ಪ್ರಚಾರದಲ್ಲಿರುವ ಈ ಗ್ರಂಥವನ್ನು ಅನೇಕ ಜೈನ ಶ್ರಾವಕರು ಬಳಸಿಕೊಂಡು ಬಂದಿರುವುದು ಹರ್ಷದಾಯಕ.

ಕಡೆಯದಾದರೂ ಸಮಂತಭದ್ರ ವಿರಚಿತ ರತ್ನಕರಂಡಕ ಶ್ರಾವಕಾಚಾರವನ್ನು ಕುರಿತಂತೆ ಅಣ್ಣಾರಾಯ ಅಪ್ಪಣ್ಣ ಮಿರ್ಜಿ ಸೇಡಬಾಳ ಅವರು ೧೯೭೦ರಲ್ಲಿ ಪ್ರಕಟಿಸಿರುವ ಕೃತಿ ಕಿರೀಟಪ್ರಾಯವಾದದ್ದು. ಶ್ರೀಮಾನ್ ಆ. ನೇ. ಉಪಾಧ್ಯೆ ಅವರ ನೇತೃತ್ವ ದಲ್ಲಿ ಸಿದ್ಧಗೊಂಡ ಈ ಕೃತಿ ಪಂಡಿತ ಸದಾಸುಖಜೀಯವರ ಹಿಂದೀವಚನಿಕೆಯ ಕನ್ನಡ ಅನುವಾದ ಸಹಿತ ಪ್ರಕಟವಾಗಿದೆ. ಪಂಡಿತ ಜುಗಲ ಕಿಶೋರಜಿ ಮುಖ್ತಾರ ಇವರು ರತ್ನಕರಂಡಕ ಶ್ರಾವಕಾಚಾರದ ಮೇಲೆ ಸಮಿಾಚೀನ ಧರ್ಮಶಾಸ್ತ್ರವೆಂಬ ಗ್ರಂಥದಲ್ಲಿ ಪ್ರಕಟಿಸಿರುವ ಅಭಿಪ್ರಾಯಗಳನ್ನು ಅನುವಾದಿಸಿ ಕಂಸದಲ್ಲಿ ಕೊಟ್ಟಿದೆ. ಇಲ್ಲಿ ಹೀರಾಲಾಲ ಜೈನರ ತತ್ತ್ವಸಮುಚ್ಚಯವನ್ನು ಸಂಪಾದಿಸಿ ಅಳವಡಿಸಿದೆ. ಆಯತವರ್ಮನ ರತ್ನಕರಂಡಕದ ಭಾಗಗಳನ್ನು ಆಯಾ ಸೂತ್ರಗಳಿಗೆ ಹೊಂದುವ ಹಾಗೆ ಒಡೆದು ವ್ಯವಸ್ಥೆಗೊಳಿಸಿ ಅಡಿಟಿಪ್ಪಣಿಯಲ್ಲಿ ಹೊಂದಿಸಿದೆ. ಕನ್ನಡ ಕಾವ್ಯಗಳ ಭಾಗಗಳನ್ನು ಸಮುಚಿತವಾಗಿ ಅಲ್ಲಲ್ಲಿ ಅಳವಡಿಸಿದೆ.

ರತ್ನಕರಂಡಕ ಶ್ರಾವಕಾಚಾರದ ವಿಷಯಾನುಕ್ರಮಣಿಕೆ ಅತ್ಯಂತ ಸಂಕ್ಷಿಪ್ತವಾಗಿ ೫೪೦ ಪುಟಗಳ ವಿವರಗಳನ್ನು ತಿಳಿಸುತ್ತದೆ. ಈ ಕೃತಿಗೆ ಜೈನಧರ್ಮ, ಸಾಹಿತ್ಯ ಮತ್ತು ಸಿದ್ಧಾಂತ, ತತ್ತ್ವಸಮುಚ್ಚಯ, ತತ್ತ್ವಸಮುಚ್ಚಯದ ಶಬ್ದಕೋಶ, ತತ್ತ್ವಸಮುಚ್ಚಯದ ಗ್ರಂಥಪರಿಚಯ ಎನ್ನುವ ೪ ಪರಿಶಿಷ್ಟಗಳಿವೆ. ರತ್ನಕರಂಡಕ ಶ್ರಾವಕಾಚಾರ ಸೂತ್ರಸೂಚಿ, ಉದಾಹೃತ ಕನ್ನಡ ಪದ್ಯಗಳ ಸೂಚಿ, ವಿಶಿಷ್ಟ

ಶಬ್ದಸೂಚಿ ಮೊದಲಾದ ಸೂಚಿಗಳು ಗ್ರಂಥಪರಿಶೀಲನೆಯ ಹಾದಿಯಲ್ಲಿ ತುಂಬ ಸಹಾಯಕವಾಗಿವೆ.

ಪ್ರತಿಯೊಂದು ಶ್ಲೋಕಕ್ಕೂ ಅನ್ವಯಾರ್ಥ, ಅರ್ಥ, ವಿಶೇಷಾರ್ಥಗಳನ್ನು ಬರೆದು ಅಡಿಟಿಪ್ಪಣಿಯಲ್ಲಿ ಕೂಡ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿ ಕೊಟ್ಟಿರುವ ವಿರ್ಜಿ ಅಣ್ಣಾರಾಯರು ಈ ಕೃತಿಯ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಇದುವರೆಗಿನ ಸಮೀಕ್ಷೆಯಂತೆ ಎರಡನೆಯ ಶತಮಾನದ ಸ್ವಾಮಿ ಸಮಂತಭದ್ರಾಚಾರ್ಯರ ರತ್ನಕರಂಡಕ ಶ್ರಾವಕಾಚಾರದ ಅಧ್ಯಯನ, ಅಧ್ಯಾಪನ ಮತ್ತು ಅನುಸರಣೆಗಳ ಮೂಲಕ ಆರಂಭಗೊಂಡ ಕನ್ನಡ ಶ್ರಾವಕಾಚಾರ ಗ್ರಂಥಗಳ ರಚನೆ ಮಾಘಣಂದಿ ಮತ್ತು ಅಮಿತಗತಿಗಳ ಶ್ರಾವಕಾಚಾರಗಳನ್ನೂ ಒಳಗೊಂಡು ಪುಷ್ಟವಾಗಿ ಬೆಳೆದಿದೆ. ಕರ್ನಾಟಕದ ಜೈನ ಮುನಿಸಂಘಗಳು, ವಿದ್ವದ್ವರ್ಗ ಮತ್ತು ಶ್ರಾವಕರು ಇದನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

ಶ್ರಾವಕಾಚಾರದ ಚೌಕಟ್ಟಿನಲ್ಲಿ ರೂಪುಗೊಂಡು ಸಾಗಾರಧರ್ಮವನ್ನು ತಮ್ಮ ಜೀವನ ವಿಧಾನವಾಗಿ ಅಳವಡಿಸಿಕೊಂಡ ಜೈನಧರ್ಮೀಯರು ವೈಯಕ್ತಿಕವಾಗಿ ಲೌಕಿಕ ಮತ್ತು ಪಾರಮಾರ್ಥಿಕ ಸಾಧನೆ ಸಿದ್ಧಿಗಳನ್ನು ಪಡೆದಿದ್ದಾರೆ. ಕರ್ನಾಟಕದ ಇತರ ಧರ್ಮೀಯರ ಜೊತೆ ಹೊಂದಾಣಿಕೆಯ ಬಾಳುವೆಯನ್ನು ನಡೆಸಿ ದೇಶದ ಸುಖ ಶಾಂತಿಗಳಿಗೆ ಕಾರಣರಾಗಿದ್ದಾರೆ.

ವೈ. ಸಿ. ಭಾನುಮತಿ

ಮಂಡ್ಯ ಜಿಲ್ಲೆಯ ನಾಟಕ ಸಾಹಿತ್ಯ

ಕನ್ನಡ ನಾಟಕ ಸಾಹಿತ್ಯ ಆರಂಭಗೊಳ್ಳುವುದೆ ಮಂಡ್ಯ ಜಿಲ್ಲೆಯಿಂದ. ಕ್ರಿ.ಶ. ೧೬೮೦ರಲ್ಲಿದ್ದ ಸಿಂಗರಾರ್ಯನ 'ಮಿತ್ರವಿಂದಾಗೋವಿಂದ' ಪ್ರಥಮ ನಾಟಕವೆಂದು ಪರಿಗಣಿತವಾಗಿದೆ. ಈತ ಚಿಕದೇವರಾಜನ ಆಸ್ಥಾನದಲ್ಲಿ ಕವಿ ಹಾಗೂ ಆಪ್ತಸಚಿವನಾಗಿದ್ದ ತಿರುಮಲಾರ್ಯನ ತಮ್ಮ. 'ಮಿತ್ರವಿಂದಾಗೋವಿಂದ' ಶ್ರೀಹರ್ಷನ ಸಂಸ್ಕೃತ ನಾಟಕ ರತ್ನಾವಳಿಯ ಕನ್ನಡ ರೂಪಾಂತರ. ಶೃಂಗಾರ ಪ್ರಧಾನವಾದ 'ರತ್ನಾವಳಿ' ಆ ಕಾಲದಲ್ಲಿ ಜನಪ್ರಿಯತೆಯ ಉತ್ತುಂಗದಲ್ಲಿತ್ತು. ವರದಾಚಾರ್ಯರು ತಮ್ಮ ನಾಟಕ ಮಂಡಳಿಗೆ ರತ್ನಾವಳಿಯ ಹೆಸರನ್ನೇ ಇಟ್ಟಿದ್ದರು. ಸಿಂಗರಾರ್ಯ ವೈಷ್ಣವನಾದುದರಿಂದ ಮೂಲನಾಟಕದ ಆರಂಭಿಕ ಶಿವಸ್ತುತಿಗಳಿಗೆ ಬದಲಾಗಿ ಕನ್ನಡದಲ್ಲಿ ವಿಷ್ಣುಸ್ತುತಿ, ಶೈವನಾಮಗಳಿಗೆ ಪರ್ಯಾಯವಾಗಿ ವಿಷ್ಣುಸಂಬಂಧಿನಾಮಗಳನ್ನು ಹೊಂದಿಸಿದ್ದಾನೆ. ಈತನ ಧರ್ಮಾಭಿಮಾನದಿಂದ ಹರ್ಷನ ರತ್ನಾವಳಿ ಕನ್ನಡದಲ್ಲಿ ಮಿತ್ರವಿಂದಾಗೋವಿಂದ ಎಂದಾದರೂ ವಸ್ತುವಿನ್ಯಾಸದಲ್ಲಿ ಸಂಸ್ಕೃತನಾಟಕದ ಮಾದರಿಯನ್ನೇ ಅನುಸರಿಸಿದೆ.

ಆ ಬಳಿಕದಲ್ಲಿ ತಟ್ಟಿಕೆರೆ ಸಾಂಬಯ್ಯ ಮತ್ತು ಹಲಗೂರಿನ ಭಾಳಾಕ್ಷ ಎಂಬವರು ಅರಮನೆಯ ಪಂಡಿತಸಾಹಿತ್ಯದಿಂದ ದೂರನಿಂತು ಕರಿಭಂಟನ ಕಾಳಗ ಎಂಬ ಯಕ್ಷಗಾನ ನಾಟಕಗಳನ್ನು ರಚಿಸಿದುದಾಗಿ ತಿಳಿದುಬರುತ್ತದೆ.

ಮಂಡ್ಯ ಜಿಲ್ಲೆಯ ಹಾಗೂ ಕನ್ನಡದ ಮೊದಲ ಆಧುನಿಕ ನಾಟಕಕಾರರಲ್ಲಿ ಪ್ರಮುಖರೆಂದರೆ ಎಂ. ಎಲ್. ಶ್ರೀಕಂಠೇಶಗೌಡರು. ಕನ್ನಡ ನಾಟಕಗಳೆಂದರೆ ಸಂಸ್ಕೃತ ನಾಟಕಗಳ ಭಾಷಾಂತರ ಅಥವಾ ರೂಪಾಂತರ ಕೃತಿಗಳೆ ತುಂಬಿದ್ದ ಕಾಲದಲ್ಲಿ ಶ್ರೀಕಂಠೇಶಗೌಡರು ಷೇಕ್ಸ್‌ಪಿಯರನ ನಾಟಕಗಳನ್ನು ಭಾಷಾಂತರಿಸಲು ಹಂಬಲಿಸಿದ್ದು ಮಹತ್ವದ ಸಂಗತಿ. ಇಂಗ್ಲಿಷ್ ಸಾಹಿತ್ಯದ ಸಂಸರ್ಗದಿಂದ, ಕನ್ನಡದ ಅಭಿಮಾನದಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿದ ಇವರು "ಕನ್ನಡ ಸಂಸ್ಕೃತಗಳೆರಡರಲ್ಲೂ ಇಲ್ಲದ ವಿಷಯಗಳೂ ಶಬ್ದಗಳೂ ಶಬ್ದಪ್ರಯೋಗ ಚಾತುರ್ಯವೂ ವಾಕ್ಯಬಂಧನ ಕಾವ್ಯ

ಬಂಧನಗಳ ರೀತಿಯೂ ಲಕ್ಷಣ ಅಲಂಕರಣಗಳೂ ಕವಿತಾಚಮತ್ಕಾರಗಳೂ ಹಿಂದುಸ್ತಾನಿ ಇಂಗ್ಲಿಷ್ ಮುಂತಾದ ಇತರ ಭಾಷೆಗಳಿಂದ ತೆಗೆದುಕೊಂಡು ಕನ್ನಡವನ್ನು ರಸವತ್ತಾಗಿ ಮಾಡಿದರೇತಕ್ಕೆ ಆಕ್ಷೇಪಣೆ ? ''* ಎಂಬ ಸವಾಲನ್ನು ಅಂಗೀಕರಿಸಿ ಈ ನಿಟ್ಟಿನಲ್ಲಿ ಗಣನೀಯ ಕೊಡುಗೆಗಳನ್ನು ನೀಡಿದರು. ಶ್ರೀಕಂಠೇಶಗೌಡರು ಆರು ನಾಟಕಗಳನ್ನು ರಚಿಸಿದ್ದರೆಂದು ತಿಳಿದುಬರುತ್ತದೆ. ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯಂ, ಶೂರಸೇನಚರಿತ್ರೆ (ಒಥೆಲೊ), ರಾಮವರ್ಮ ಲೀಲಾವತಿ (ರೋಮಿಯೊ ಜೂಲಿಯಟ್), ಸೀತಾಸ್ವಯಂವರ ಮತ್ತು ಘೋಷಯಾತ್ರೆ. ಇವುಗಳಲ್ಲಿ ಸದ್ಯದಲ್ಲಿ ಲಭ್ಯವಿರುವ ನಾಟಕಗಳೆಂದರೆ ಪ್ರತಾಪರುದ್ರದೇವ, ಪ್ರಮೀಳಾರ್ಜುನೀಯಂ ಮತ್ತು ಸೀತಾಸ್ವಯಂವರ. ಪ್ರತಾಪರುದ್ರದೇವ ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕದ ಭಾಷಾಂತರ. ಪ್ರಮೀಳಾರ್ಜುನೀಯಂ ಅದೇ ನಾಟಕಕಾರನ 'ಮಿಡ್‌ಸಮರ್ ನೈಟ್ಸ್ ಡ್ರೀಮ್' ನಾಟಕದ ರೂಪಾಂತರ. ಸೀತಾಸ್ವಯಂವರ ಸ್ವತಂತ್ರ. ವಸ್ತು ಹೊರಗಿನದಾದರೂ, ಪಾತ್ರ ಮತ್ತು ಸನ್ನಿವೇಶಗಳಲ್ಲಿ ಭಾರತೀಕರಣವಾಗಿರುವ ಇವರ ಕೃತಿಗಳು ಭಾಷಾಂತರವೆನ್ನುವುದಕ್ಕಿಂತ ರೂಪಾಂತರವೆನ್ನುವುದು ಸೂಕ್ತ.

ಪ್ರತಾಪರುದ್ರದೇವದ ಸಂಭಾಷಣೆಯಲ್ಲಿ ಮೂಲದಿಂದ ಕೆಲವು ಮಾರ್ಪಾಡು, ಪ್ರಕ್ಷೇಪಗಳನ್ನು ಮಾಡಿಕೊಂಡಿದ್ದರೂ ಸನ್ನಿವೇಶವನ್ನು ಹಾಗೆಯೆ ಉಳಿಸಿಕೊಂಡಿರುವುದರಿಂದ ಕೆಲವೊಂದು ಸಾಂಸ್ಕೃತಿಕ ಭಿನ್ನತೆಗಳು ಕಂಡುಬರುತ್ತವೆ. ವಿಜಯಧ್ವಜ ರಾಜನನ್ನು ಚಂದ್ರವಲ್ಲಿ ಸ್ವಾಗತಿಸಿ ಔತಣಕೂಟಕ್ಕೆ ಕರೆತರುವ ಸನ್ನಿವೇಶ ಸಮಕಾಲೀನ ಸಂದರ್ಭದಲ್ಲಿ ಟೀಕೆಗೆ ಗುರಿಯಾದದ್ದೂ ಉಂಟು. ಈ ಕಾರಣದಿಂದಲೊ ಏನೊ ಪ್ರಮೀಳಾರ್ಜುನೀಯಂನಲ್ಲಿ ಹೆಚ್ಚಿನ ಸ್ವಾತಂತ್ರ್ಯ ವಹಿಸಿರುವುದು ಕಂಡುಬರುತ್ತದೆ. ಮೂಲದ ಕ್ವಿನ್ಸ್, ಸ್ನಗ್, ಬಾಟಂ, ಫ್ಲೂಟ್ ಮೊದಲಾದ ಪಾತ್ರಗಳನ್ನು ವಾಜರ ಮಾಯಾಚಾರಿ, ಮಡಿವಾಳ ಮಾಚಯ್ಯ, ನೆನೀಬಾರದ ನಾಗಪ್ಪ, ಕುಲಾಲ ಕುಂಟಿಶೆಟ್ಟಿ ಮೊದಲಾದ ದೇಶೀಪಾತ್ರಗಳನ್ನಾಗಿ ಪರಿವರ್ತಿಸಿರುವಲ್ಲಿ ಆತ್ಮೀಯ ವಾತಾವರಣವಿದೆ. ರಾಮವರ್ಮ ಲೀಲಾವತಿ ನಾಟಕವನ್ನು ಅಭ್ಯಾಸಮಾಡುವ ಭಾಗವಂತು ಮೂಲದಲ್ಲಿಲ್ಲದ ಸ್ವಂತಸೃಷ್ಟಿ. ಈ ಸಂದರ್ಭದಲ್ಲಿ ಮಿನುಗುವ ಹಾಸ್ಯ, ವೃತ್ತಿರಂಗಭೂಮಿಯ ಬಗೆಗಿನ ವ್ಯಂಗ್ಯ, ಗ್ರಾಮೀಣಕಸುವಿನಿಂದ ಕೂಡಿದ ಭಾಷೆಯಿಂದಾಗಿ ಇದೊಂದು ಭಾಷಾಂತರನಾಟಕವೆಂಬ ಭಾವನೆ ಎಲ್ಲಿಯೂ ಉಂಟಾಗುವುದಿಲ್ಲ. "ಷೇಕ್ಸ್‌ಪಿಯರ್‌ನ A Midsummer Night's Dream ನಾಟಕದ ರೂಪಾಂತರವಾದ ಶ್ರೀಕಂಠೇಶಗೌಡರ ಪ್ರಮೀಳಾರ್ಜುನೀಯದ ಕೆಲವು ದೃಶ್ಯ ಹಾಗೂ ಪಾತ್ರಕಲ್ಪನೆಗಳಲ್ಲಿ ಕಂಡುಬರುವ ವಾಸ್ತವದೃಷ್ಟಿ ಮತ್ತು ಹಾಸ್ಯಪರತೆ ಅವರು ಪ್ರಯತ್ನಪಟ್ಟಿದ್ದರೆ ಸ್ವತಂತ್ರ ಸಾಮಾಜಿಕ ಪ್ರಹಸನ ರಚನೆಗೆ ಶಕ್ತರಿದ್ದರೆಂಬುದನ್ನು

* ಶ್ರೀಕಂಠೇಶಗೌಡರ ಕೃತಿಗಳು : ಸಂ. : ಹ. ಕ. ರಾಜೇಗೌಡ, ಪುಟ ೨.

ತೋರಿಸುವಂತಿದೆ ".* ಎಂಬುದರಲ್ಲಿ ಸಂದೇಹವಿಲ್ಲ. ಈ ನಾಟಕ ವರದಾಚಾರ್ಯರ ರತ್ನಾವಳಿ ಕಂಪನಿ ಮೂಲಕ ಹಲವಾರು ಪ್ರಯೋಗಗಳನ್ನು ಕಂಡಿತು.

' ಸೀತಾಸ್ವಯಂವರ ' ಸಂಸ್ಕೃತ ಸೀತಾಪರಿಣಯ ನಾಟಕದಿಂದ ಪ್ರೇರಣೆಪಡೆದಿರ ಬಹುದಾದರೂ ನಿರ್ವಹಣೆಯಲ್ಲಿ ನಾವೀನ್ಯವಿದೆ. ಇಲ್ಲಿ ಜನಕರಾಜ ಮತ್ತು ರಾವಣ ರನ್ನು ವಿಚಿತ್ರರಂತೆ ಚಿತ್ರಿಸಲಾಗಿದೆ. ನಾಟಕದ ಅಂತ್ಯದಲ್ಲಿ ಗೌಡರ ಹಾಸ್ಯಪ್ರಜ್ಞೆ ಮತ್ತಷ್ಟು ನಿಖರವಾಗಿ ಗೋಚರಿಸಿದೆ. ಮೈಸೂರಿನ ಉಮೇಶ ಅವರು ಈ ನಾಟಕ ವನ್ನು ಯಶಸ್ವಿಯಾಗಿ ಪ್ರಯೋಗಿಸಿ ಎಂಬತ್ತರ ದಶಕದಲ್ಲಿಯೂ ಗೌಡರ ನಾಟಕಗಳ ಪ್ರಸ್ತುತತೆಯನ್ನು ಮನಗಾಣಿಸಿದ್ದಾರೆ.

ಶ್ರೀಕಂಠೇಶಗೌಡರು ' ಶ್ರೀಕಂಠೇಶ್ವರ ನಾಟಕಸಭಾ ' ಎಂಬ ತಮ್ಮದೇ ಆದ ಮಂಡಳಿಯನ್ನು ಕಟ್ಟಿದ್ದರು. ಸ್ವತಃ ನಟರೂ ಆಗಿದ್ದ ಇವರಿಗೆ ರಂಗಭೂಮಿಯ ಸ್ಪಷ್ಟ ಪರಿಕಲ್ಪನೆಗಳಿದ್ದವು. ಅಂದಿನ ಪ್ರೇಕ್ಷಕರ ಅಭಿರುಚಿಗೆ ಅನುಗುಣವಾಗಿ ತಮ್ಮ ನಾಟಕಗಳಲ್ಲಿ ಹಾಡುಗಳನ್ನು ಹಾಸ್ಯೋಕ್ತಿಗಳನ್ನು ತಂದರು. ಇದರಿಂದ ಇವರ ಶೈಲಿಯ ಬಿಗಿ ಸಡಿಲಿತೇನೋ ಎಂಬ ಸಂದೇಹ ಕೆಲವರಿಗೆ ಬಂದದ್ದುಂಟು. ಆದರೆ ಶ್ರೀಕಂಠೇಶಗೌಡರು ತಮ್ಮ ಇಂಗ್ಲಿಷ್ ಅನುವಾದಗಳ ಮೂಲಕ ಕನ್ನಡದ ದೇಶಿಯನ್ನೂ ಆಸ್ಥಾನದ ಸಂಸ್ಕೃತವನ್ನೂ ಬಳಸಿಕೊಂಡು ತಮ್ಮದೇ ಆದ ಭಾಷೆಯ ಛಾಪನ್ನು ಸೃಷ್ಟಿಸಿದರು. ಪರಂಪರೆಯ ಛಂದಸ್ಸನ್ನು ತಮ್ಮ ಕೃತಿಗಳಲ್ಲಿ ಬಳಸಿದರು. ಬಸವಪ್ಪ ಶಾಸ್ತ್ರಿ, ಜಯರಾಯಾಚಾರ್ಯ ಮೊದಲಾದ ಆಸ್ಥಾನವಿದ್ವಾಂಸರಿಗೆ ಹೊಯ್‌ಕಯ್ಯಾಗಿ ನಿಲ್ಲಲು ಯತ್ನಿಸಿದರು.

ಕನ್ನಡ ನಾಟಕ ಹೊಸ ದಿಗಂತಗಳನ್ನು ಕಂಡುಕೊಳ್ಳುತ್ತಿರುವ ಹೊತ್ತಿನಲ್ಲಿಯೂ ದೇವಶಿಖಾಮಣಿ ಅಳಸಿಂಗ್ರಾಚಾರ್ಯ ಮತ್ತು ಶೇಷಯ್ಯಂಗಾರ್ಯರು ಸಂಸ್ಕೃತನಾಟಕಗಳ ಮಾದರಿಯನ್ನೆ ಅನುಸರಿಸಿ ನಾಟಕಗಳನ್ನು ರಚಿಸಿದರು. ಕ್ರಿ.ಶ. ೧೮೭೭ರಲ್ಲಿ ಮೇಲು ಕೋಟೆಯಲ್ಲಿ ಜನಿಸಿ ಮದ್ರಾಸಿನಲ್ಲಿ ನೆಲಸಿದ ಅಳಸಿಂಗ್ರಾಚಾರ್ಯರು ವೈವಿಧ್ಯಮಯ ವಾದ ಕೃತಿಗಳನ್ನು ನೀಡಿದ್ದಾರೆ. ಇವರು ಸಂಸ್ಕೃತ ನಾಟಕಗಳನ್ನು ಆಧರಿಸಿ ಕನ್ನಡ ದಲ್ಲಿ ಚಂಡಕೌಶಿಕ, ಚಾಣಕ್ಯತಂತ್ರ, ಪಂಚರಾತ್ರ, ಶ್ರೀಮತಿ ಪರಿಣಯ, ಸ್ವಪ್ನ ವಾಸವದತ್ತ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಪಂಚರಾತ್ರ ಮಹಾಭಾರತದ ವಿರಾಟಪರ್ವದಿಂದ ಪ್ರೇರಣೆ ಪಡೆದ ಭಾಸನಾಟಕದ ಅನುವಾದ. ಶ್ರೀಮತಿ ಪರಿಣಯ ಅದ್ಭುತರಾಮಾಯಣದ ಒಂದು ಕಥೆಯನ್ನು ಆಧರಿಸಿದೆ.

ಕೃಷ್ಣರಾಜಪೇಟೆ ತಾಲ್ಲೂಕು ಹೊನ್ನೇನಹಳ್ಳಿಯ ಶೇಷಯ್ಯಂಗಾರ್ಯರು ಅಳಸಿಂಗಾಚಾರ್ಯರಂತೆ ಉದ್ಯೋಗಕ್ಕಾಗಿ ಮದರಾಸು ಸೇರಿದವರು. ಇವರು ಭಾಸ ಕವಿಯ ಬಾಲಚರಿತ ನಾಟಕವನ್ನು ಭಾಷಾಂತರಿಸಿದ್ದಾರೆ. ಶ್ರೀಕೃಷ್ಣನ ಬಾಲಲೀಲೆಯೆ

---

* ಆಧುನಿಕ ಕನ್ನಡ ನಾಟಕ: ಕೆ. ಮರುಳುಸಿದ್ದಪ್ಪ, ಪುಟ ೯೩.

ಈ ನಾಟಕದ ವಸ್ತು. ಏಕಕಾಲದಲ್ಲಿ ನಾಟಕ ರಚಿಸಿದ ಈ ಇಬ್ಬರು ಮಹನೀಯರ ಕೃತಿಗಳು ಗದ್ಯಪದ್ಯಾತ್ಮಕವಾದ ಸಾಂಪ್ರದಾಯಿಕ ಜಾಡಿನಲ್ಲಿ ಸಾಗಿವೆ.

ಆ ಬಳಿಕ ಬಂದ ಬಿ.ಎಂ.ಶ್ರೀ.ಯವರು ಆಧುನಿಕ ಕನ್ನಡ ಕಾವ್ಯಕ್ಕೆ ಹೊಸಹಾದಿ ಹೊಸನಡೆಯನ್ನು ತೋರಿದಂತೆ ಆಧುನಿಕ ನಾಟಕಕ್ಕೂ ನೂತನ ಆಯಾಮವನ್ನು ತಂದುಕೊಟ್ಟರು. ಶ್ರೀ ಅವರ ನಾಟಕಗಳಿಗೆ ಪ್ರಧಾನ ಪ್ರೇರಣೆ ಒದಗಿದ್ದು ಗ್ರೀಕ್ ನಾಟಕಗಳಿಂದ. ಹಳಗನ್ನಡ ಸಾಹಿತ್ಯದಲ್ಲಿ ನಾಟಕಗಳೆ ಇಲ್ಲವೆನ್ನುವವರಿಗೆ ನಮ್ಮ ಪರಂಪರೆಯ ಸಾಹಿತ್ಯದಲ್ಲಿನ ನಾಟಕೀಯತೆಯನ್ನು ತೆರೆದುತೋರಿದರು. ಗ್ರೀಕ್ ಸಾಹಿತ್ಯದಲ್ಲಿ ಕಂಡುಬರುವ ದುರಂತನಾಯಕರ ಲಕ್ಷಣವನ್ನು ನಮ್ಮ ಪೌರಾಣಿಕ ನಾಯಕರಲ್ಲಿಯೆ ಕಂಡುಕೊಳ್ಳಲು ಯತ್ನಿಸಿದರು. ಬಿ.ಎಂ.ಶ್ರೀ. ಅವರ ದುರಂತನಾಟಕಗಳ ಒಲವಿಗೆ ಪಂಪನೆ ಪ್ರೇರಣೆ ನೀಡಿರಬೇಕೆಂದು ಕ.ವೆಂ. ರಾಜಗೋಪಾಲ ಅವರು ಅಭಿಪ್ರಾಯಪಡುತ್ತಾರೆ—"ಪಂಪನ ಭಾಷೆ, ದೇಶಪ್ರೇಮ, ಭಾಷಾಭಿವ್ಯಕ್ತಿ, ಅಪೂರ್ವ ವಿಶ್ವಾಸದಿಂದ ದುರಂತಪಾತ್ರವನ್ನು (ಕರ್ಣನನ್ನು) ನೋಡುವುದು ಅಲ್ಲದೆ ಒಂದು ಸಂದರ್ಭವನ್ನು ಒಳಹೊಕ್ಕು ಬಿಡಿಸುವ ಪ್ರತಿಭೆ (ಭಾನುಮತಿಯೊಡನೆ ನೆತ್ತದ ಸರಸ ಮತ್ತು ಭರತಬಾಹುಬಲಿಗಳ ಸಂಘರ್ಷಣೆ) ಜೊತೆಗೆ ಕನ್ನಡವನ್ನು ಅದರ ಛಾಂದಸ್ಸಿಕ ಸಾಮರ್ಥ್ಯಕ್ಕೆ ಪಳಗಿಸುವ ಯತ್ನ ಇವುಗಳೆಲ್ಲ ಶ್ರೀಯವರಿಗೆ ಅನುಕೂಲವಾದ ಸೂಚನೆಗಳನ್ನು ನೀಡಿದ್ದಿರಬೇಕೆನ್ನಿಸುತ್ತದೆ."* ಗ್ರೀಕ್ ರುದ್ರನಾಟಕಗಳ ಮಾದರಿಯಲ್ಲಿ ರಚಿತವಾದ ಇವರ ಗದಾಯುದ್ಧ, ಅಶ್ವತ್ಥಾಮನ್, ಪಾರಸಿಕರು ಈ ಮೂರು ನಾಟಕಗಳೂ ವಿಭಿನ್ನವಾದುವು. 'ಗದಾಯುದ್ಧ' ರನ್ನನ ಇದೇ ಹೆಸರಿನ ಕಾವ್ಯದ ರೂಪಾಂತರ. ಇದರಲ್ಲಿ ರನ್ನನ ಅನೇಕ ಪದ್ಯಗಳನ್ನು ಶ್ರೀಯವರು ಅನಾಮತ್ತು ಸ್ವೀಕರಿಸಿದ್ದಾರೆ. ಈ ಅರ್ಥದಲ್ಲಿ ಶ್ರೀಯವರ ಗದಾಯುದ್ಧ ''ರನ್ನನ ಕೃತಿಯಿಂದ ಬೇರ್ಪಡಿಸಿ ತೆಗೆದ ಭಾಗ" ಎಂಬ ಎ. ಎನ್. ಮೂರ್ತಿರಾಯರ ಹೇಳಿಕೆ ಸಾಧುವಾಗಿದೆ. ಕೆಲವು ಪದ್ಯಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಈ ಕ್ವಚಿತ್ತಾದ ತಿರುವೇ ಮೂಲದಿಂದ ಸಾಕಷ್ಟು ಮಾರ್ಪಾಡಾಗಲು ಕಾರಣವಾಯಿತು. ಇಲ್ಲಿನ ಸಂಭಾಷಣೆಗಳು ಶ್ರೀಯವರ ಸ್ವಂತ ರಚನೆಗಳು. ರನ್ನನ ಗದಾಯುದ್ಧದ ನಾಯಕ ಸಾಹಸಭೀಮನಾದರೆ ಶ್ರೀಯವರ ನಾಟಕದ ನಾಯಕ ದುರ್ಯೋಧನ. ಗ್ರೀಕ್ ಪುರಾಣವೀರರಂತೆ ಈತನನ್ನು ಚಿತ್ರಿಸಲಾಗಿದೆ.

'ಅಶ್ವತ್ಥಾಮನ್' ಏಜಾಕ್ಸ್ ನಾಟಕದ ಸಮಾನಾಂತರ ರೂಪಾಂತರ. ಇದು ಕನ್ನಡದ ಶ್ರೇಷ್ಠ ದುರಂತನಾಟಕಗಳಲ್ಲಿ ಒಂದಾಗಿದ್ದು ಕನ್ನಡ ನಾಟಕಗಳ ಸಾಲಿನಲ್ಲಿ ಮಹತ್ವದ ಸ್ಥಾನ ಗಳಿಸಿದೆ. ಅನುಶಾಸನ ಪರ್ವದಲ್ಲಿ ಚಿರಂಜೀವಿಯಾಗಿದ್ದ ಅಶ್ವತ್ಥಾಮನ್ ಶ್ರೀಯವರ ದುರಂತನಾಯಕನಂತೆ ಆತ್ಮಹತ್ಯೆಮಾಡಿಕೊಳ್ಳುತ್ತಾನೆ,

* ಶ್ರೀನಿಧಿ : ಸಂ : ಡಾ. ಜಿ. ಎಸ್. ಶಿವರುದ್ರಪ್ಪ, ಪುಟ : ೨೫೭.

ವಿಧಿಯೊಡನೆ ಹೋರಾಡುತ್ತಾನೆ. ಹೀಗೆ ಶ್ರೀಯವರು ಏಜಾಕ್ಸ್ ನಾಟಕದ ನಾಯಕನನ್ನು ಇವನಲ್ಲಿ ಕಂಡುಕೊಳ್ಳುವಲ್ಲಿ ಜಾಣ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಗ್ರೀಕ್ ನಾಟಕದ ಕಥಾಹಂದರಕ್ಕೆ ಕಿಂಚಿತ್ತೂ ಕುಂದುಂಟಾಗದಂತೆ ಈ ನಾಟಕವನ್ನು ನಿರ್ವಹಿಸಿರುವ ರೀತಿ ಅನನ್ಯ.

'ಪಾರಸಿಕರು' ಈಸ್ಕಿಲಸ್‌ನ 'ಪರ್ಶಿಯನ್ಸ್' ನಾಟಕದ ಭಾಷಾಂತರ. ಗ್ರೀಕರಿಗೂ ಪರ್ಶಿಯನರಿಗೂ ನಡೆದ ಸಲಾಮಿಸ್ ಯುದ್ಧವನ್ನು ಪ್ರತ್ಯಕ್ಷವಾಗಿ ಕಂಡ ನಾಟಕಕಾರನು ತನ್ನ ಸಾಕ್ಷಿಪ್ರಜ್ಞೆಯಿಂದಲೆ ನಾಟಕವನ್ನು ರಚಿಸಿದ್ದಾನೆ. ಹೀಗೆ ಸಮಕಾಲೀನ ಐತಿಹಾಸಿಕ ಘಟನೆಯನ್ನು ದಾಖಲಿಸಿದ ಪ್ರಥಮ ನಾಟಕ ಎಂಬ ಹೆಗ್ಗಳಿಕೆಯೂ ಈ ನಾಟಕಕ್ಕಿದೆ. ಇಲ್ಲಿನ ತಂತ್ರ ಮತ್ತು ಇದು ವಿವರಿಸುವ ದೇವ ಮಾನವ ಸಂಬಂಧ, ವಿಧಿಯ ಕೈವಾಡ ಮೊದಲಾದ ತಾತ್ವಿಕ ಅಂಶಗಳು ವಿಶಿಷ್ಟವೆನಿಸಿವೆ.

ಭಾರತೀಯ ಸಾಹಿತ್ಯಿಕ ಮನೋಧರ್ಮ ಸುಖಾಂತವಾದುದು. ಇದಕ್ಕೆ ವ್ಯತಿರಿಕ್ತವೆಂಬಂತೆ ಶ್ರೀಯವರು ದುರಂತನಾಟಕವನ್ನು ಕನ್ನಡಕ್ಕೆ ಪರಿಚಯಿಸುವಲ್ಲಿ ಸಫಲರಾದರು. ಇವರು ಸ್ವತಂತ್ರ ನಾಟಕಗಳನ್ನು ಕೊಡಲಿಲ್ಲವೆಂಬುದು ನಿಜ. ಆದರೂ ಇವರ ನಾಟಕಗಳು ಬೀರಿದ ಪ್ರಭಾವ ವಿಶಿಷ್ಟವಾದುದು. ಅನಂತರದಲ್ಲಿ ಕ.ವೆಂ. ರಾಘವಾಚಾರ್ಯ, ಸುಜನಾ, ಟಿ. ವಿ. ವೆಂಕಟಾಚಲಶಾಸ್ತ್ರೀ ಮೊದಲಾದವರು ಗ್ರೀಕ್ ನಾಟಕಗಳನ್ನು ಭಾಷಾಂತರಿಸುವಲ್ಲಿ ಶ್ರೀ ಅವರ ಕೃತಿಗಳು ಪ್ರೇರಣೆ ನೀಡಿರುವುದನ್ನು ಅಲ್ಲಗಳೆಯುವಂತಿಲ್ಲ. ಇದೇ ಜಿಲ್ಲೆಯ ಸುಜನಾ ಅವರು ಸೋಫೊಕ್ಲಿಸನ ಏಜಾಕ್ಸ್ ನಾಟಕವನ್ನು ಸಮರ್ಥವಾಗಿ ಕನ್ನಡಕ್ಕೆ ತಂದಿದ್ದಾರೆ.

ಎಂ.ಆರ್.ಶ್ರೀ.ಯವರು ಕಂಠೀರವ ವಿಜಯ, ಧರ್ಮದುರಂತ, ನಾಗರಿಕ ಮತ್ತು ಕವಿಯ ಸೋಲು ಎಂಬ ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಮೈಸೂರು ಅರಸರಲ್ಲಿ ಅತ್ಯಂತ ಪ್ರಬಲನೆನಿಸಿದ್ದ ಕಂಠೀರವನರಸರಾಜ ಒಡೆಯನು ತಿರುಚನಾಪಳ್ಳಿಯ ಜಟ್ಟಿಯನ್ನು ಸೋಲಿಸಿದ್ದೆ 'ಕಂಠೀರವ ವಿಜಯ'ದ ವಸ್ತು. ಇದು ೧೯೩೩ರಲ್ಲಿ ಪ್ರಕಟವಾಯಿತು. ವಸ್ತುನಿರ್ವಹಣೆ ಹಾಗೂ ಪಾತ್ರ ರಚನೆಯಲ್ಲಿ ಹೆಚ್ಚಿನ ಕೌಶಲವೇನೂ ಕಂಡುಬರುವುದಿಲ್ಲ.

'ಧರ್ಮದುರಂತ' ಸಂಕೀರ್ಣ ಅಂಶಗಳನ್ನು ಒಳಗೊಂಡಿರುವ ಸತ್ವಪೂರ್ಣ ವಸ್ತುವನ್ನು ಹೊಂದಿದೆ. ಟಿಪ್ಪುಸುಲ್ತಾನನು ಬಿದನೂರನ್ನು ಗೆದ್ದಾಗ ಅಲ್ಲಿದ್ದ ರಾಮರಾಯ ಸೆರೆಸಿಕ್ಕುತ್ತಾನೆ. ಖಾನ್‌ಜಹಾನ್‌ಖಾನ್ ಎಂದು ಮತಾಂತರಗೊಳ್ಳುತ್ತಾನೆ. ಈತ ಮುಸ್ಲಿಂತತ್ವವನ್ನು ಆಳವಾಗಿ ಅಭ್ಯಾಸಮಾಡಿ ಪಾಂಡಿತ್ಯಗಳಿಸಿದ್ದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಆದರೆ ಎಂ.ಆರ್.ಶ್ರೀ.ಯವರು ರಾಮರಾಯನ ಬದುಕಿನ ಮೂಲಕ ಬಲವಂತ ಮತಾಂತರ ಮತ್ತು ಅದರ ಭೀಕರ ಪರಿಣಾಮಗಳನ್ನು ನಿರೂಪಿಸಲು ಯತ್ನಿಸಿದ್ದಾರೆ. ಇಲ್ಲಿ ರಾಮರಾಯನು ಖಾನ್‌ಜಹಾನ್‌ಖಾನನಾದ

ಬಳಿಕ ಒಸ್ಮಾ ಖಾಯಿಲೆ ಬೀಳುತ್ತಾನೆ. ಆಗ ಮೌಲಾನ ಮತ್ತು ಆತನ ಮಗಳು ಆಯೆಷಾ ಅವನಿಗೆ ಶುಶ್ರೂಷೆ ಮಾಡಿ ಆಪ್ತರಾಗುತ್ತಾರೆ. ಇವರಿಬ್ಬರೂ ವಿವಾಹವಾಗಬೇಕೆಂಬ ಹವಣಿಕೆಯಲ್ಲಿದ್ದಾಗಲೆ ಅತ್ತ ಆತನ ಮೊದಲ ಧರ್ಮದ ಬ್ರಾಹ್ಮಣ ಪತ್ನಿ ಲಲಿತೆ ಗಂಡನನ್ನು ಅರಸುತ್ತ ಇಲ್ಲಿಗೆ ಬರುತ್ತಾಳೆ. ರಾಮರಾಯ ಪತ್ನಿಗಾಗಿ ಹಾಗೂ ವೃದ್ಧ ತಂದೆತಾಯಿಗಳಿಗಾಗಿ ಹಿಂದೂಧರ್ಮಕ್ಕೆ ಮರಳಲು ಬಯಸುತ್ತಾನೆ. ಆದರೆ ಬ್ರಾಹ್ಮಣ ಸಮಾಜ "ಸಂಪೂರ್ಣ ಬ್ರಾಹ್ಮಣ್ಯ ನಿನಗೆ ದೊರೆಯುವುದಿಲ್ಲ. ಜಾತಿಯಿಂ ಬಿಟ್ಟವರು ಮರದಿಂದ ಕಡಿವಡೆದ ಕೊಂಬೆಗಳು ಅವುಗಳಂ ಸ್ವಸ್ಥಾನದಲಿ ಮತ್ತೆ ಪತ್ತಿಸಪ ಹಾಗಿಲ್ಲ" ಎಂದು ನಿರಾಕರಿಸುತ್ತದೆ. ಇದರಿಂದ ಲಲಿತೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ರಾಮರಾಯ ಹಿಂದೂಧರ್ಮಕ್ಕೆ ಮರಳಲು ಯತ್ನಿಸಿದುದನ್ನು ತಿಳಿದು ಆಯೆಷಾ ರೋಗಿಯಾಗಿ ಅಸು ನೀಗುತ್ತಾಳೆ. ಇವೆರಡೂ ಸಾವಿನಿಂದ ಜರ್ಝರಿತನಾದ ಖಾನ್ ಜಹಾನ್ ಖಾನನೂ ಪ್ರಾಣಬಿಡುತ್ತಾನೆ. ಇಲ್ಲಿ ನಾಟಕಕಾರರು ಈತನ ಮಾನಸಿಕ ತೊಳಲಾಟವನ್ನೂ ಮಾನವೀಯತೆ ಕಳೆದುಕೊಂಡ ಧರ್ಮದ ದುರಂತತೆಯನ್ನು ತುಂಬ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಸರಳರಗಳೆ ಮತ್ತು ಗದ್ಯದಿಂದ ಕೂಡಿದ ಈ ನಾಟಕದ ಶೈಲಿ ಪ್ರಯೋಗಕ್ಕೆ ಯೋಗ್ಯವಾಗಿಲ್ಲವೆಂಬ ಆಕ್ಷೇಪವಿದ್ದರೂ ವಸ್ತುವಿನ ಗಟ್ಟಿತನದಿಂದಾಗಿ ಗಮನ ಸೆಳೆಯುತ್ತದೆ.

'ನಾಗರಿಕ' ನಾಟಕ ಮುಸಲರ ಬಿಗಿಮುಷ್ಟಿಗೆ ಸಿಕ್ಕಿ ವಿಜಯನಗರ ಪತನವಾದುದನ್ನು ತಿಳಿಸುತ್ತದೆ. ಇದರ ಕೇಂದ್ರಬಿಂದು ನಾಗರಿಕನು ಪ್ರತಿಯೊಂದು ಸಂಗತಿಯನ್ನು ಒರೆಹಚ್ಚಿ ನೋಡುವ ವಿಚಾರವಂತ. ಈ ನಾಟಕ ರಚಿತವಾಗಿ ಬಹುವರ್ಷಗಳ ವರೆಗೆ ಅನೇಕ ಪ್ರದರ್ಶನಗಳನ್ನು ಕಂಡು ಜನಪ್ರಿಯತೆ ಗಳಿಸಿತ್ತು.

ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು ೨೩ ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ೬ ಗದ್ಯ ನಾಟಕಗಳು, ೧೭ ಗೀತರೂಪಕಗಳು. ಗಯಟೆಯ 'ಫೌಸ್ಟ್' ದುರಂತ ನಾಟಕವನ್ನು ಕೂಡ ಪು.ತಿ.ನ. ಅನುವಾದಿಸಿದ್ದಾರೆ. ಕನ್ನಡ ಗೀತನಾಟಕಗಳಿಗೆ ಇವರ ಕೊಡುಗೆ ಅದ್ವಿತೀಯವಾದುದು. ಇವರ ಕಾವ್ಯದಂತೆ ಇವರ ಗೀತನಾಟಕಗಳೂ ಭಾರತೀಯ ಪರಂಪರೆಯ ಪ್ರಜ್ಞಾವಲಯದಲ್ಲಿಯೆ ರೂಪುತಳೆದಿವೆ. ಇವು ಪ್ರಕೃತಿ, ಪುರಾಣ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ರಚಿತವಾಗಿರುವಂಥವು. 'ವರ್ಷಹರ್ಷ'ದಲ್ಲಿ ಮಳೆಗಾಲದ ವಿವಿಧ ಮುಖಗಳನ್ನು 'ವಸಂತಚಂದನ'ದಲ್ಲಿ ವಸಂತಋತುವಿನ ಸೊಬಗನ್ನು 'ಶರದ್ವಿಲಾಸ'ದಲ್ಲಿ ಶರದೃತುವಿನ ವೈಭವವನ್ನು ಬಣ್ಣಿಸುವ ಈ ನಾಟಕಗಳಲ್ಲಿ ಪ್ರಕೃತಿಯೆ ಕೇಂದ್ರ ಬಿಂದು. ನಿಸರ್ಗದ ವಿವಿಧ ವ್ಯಾಪಾರಗಳನ್ನು ಇಲ್ಲಿ ಸಾಕ್ಷಾತ್ಕರಿಸಲಾಗಿದೆ. ಇವು ಕಾಳಿದಾಸನ ಋತುಸಂಹಾರವನ್ನು ನೆನಪಿಗೆ ತರುತ್ತವೆ. 'ದೀಪಲಕ್ಷ್ಮಿ'ಯಲ್ಲಿ ನರಕಾಸುರನನ್ನು ಸಂಹರಿಸಿದ ಶ್ರೀಕೃಷ್ಣನಿಗೆ ದೀಪಾರಾಧನೆಯ ಭಾಗವೂ ಸೇರಿ ಅದಕ್ಕೊಂದು ದೈವಿಕನೆಲೆ ಉಂಟಾಗಿದೆ.

ರಾಮೋದಯಂ, ಸೀತಾಪರಿಣಯಂ, ಹರಿಣಾಭಿಸರಣ, ಶಬರಿ, ಅಹಲ್ಯೆ, ರಾಮ ಪಟ್ಟಾಭಿಷೇಕ ನಾಟಕಗಳು ರಾಮಾಯಣದ ವಿವಿಧ ಸಂದರ್ಭಗಳನ್ನು ಆಧರಿಸಿ ರಚಿತವಾದುವು. 'ಸತ್ಯಾಯನ ಹರಿಶ್ಚಂದ್ರ' ಮತ್ತು 'ಹಂಸದಮಯಂತಿ' ಮಹಾಭಾರತದ ಉಪಾಖ್ಯಾನಗಳಿಂದ ಪ್ರೇರಣೆ ಪಡೆದಿವೆ. ಸತ್ಯಾಯನ ಹರಿಶ್ಚಂದ್ರದಲ್ಲಿ "ಶಿವಭಂಡಾರವನ್ನೊಡೆದು ಸರ್ವಶುದ್ಧಿಕರವಾದ ಮೌಲ್ಯವನ್ನು ಮಾನವನ ಬಾಳಿಗೆ ತಂದ" ಹರಿಶ್ಚಂದ್ರನ ಕಥಾನಕದ ಮೂಲಕ ಸತ್ಯದ ಶಾಶ್ವತ ಮೌಲ್ಯವನ್ನು ಪ್ರತಿಪಾದಿಸಿದೆ. ಹಂಸದಮಯಂತಿಯ ವಸ್ತು ತೀರ ತೆಳುವಾದುದು. ನಳದಮಯಂತಿಯರ "ಎದೆಗೊಲುಮೆ ಕಿಡಿಯ ತೂರುವ" ಕೆಲಸಮಾಡುವ ಹಂಸವೆ ಈ ನಾಟಕದ ಪ್ರಮುಖ ಪಾತ್ರ. 'ಕವಿ' ಗೀತರೂಪಕದಲ್ಲಿ ಯಕ್ಷಗಾನಕ್ಕೆ ಹತ್ತಿರವಾದಂಥ ತಂತ್ರವನ್ನು ಬಳಸಿದೆ.

ಪು.ತಿ.ನ. ಅವರ ಗೀತರೂಪಕಗಳಲ್ಲಿ ಗೋಕುಲ ನಿರ್ಗಮನ ಮತ್ತು ಅಹಲ್ಯೆಗೆ ವಿಶೇಷಸ್ಥಾನವಿದೆ. 'ಗೋಕುಲ ನಿರ್ಗಮನ'ವು ಅಕ್ರೂರಾಗಮನ ಮತ್ತು ವೇಣುವಿಸರ್ಜನ ಎಂಬ ಎರಡು ಭಾಗಗಳಲ್ಲಿ ಬಿಚ್ಚಿಕೊಳ್ಳುತ್ತದೆ. ಕೃಷ್ಣನ ಅಗಲಿಕೆಯಿಂದ ಗೋಕುಲದಲ್ಲಿ ವಿಷಾದದ ಮಬ್ಬು ಕವಿಯುವುದನ್ನು ಧ್ವನಿಪೂರ್ಣವಾಗಿ ತರಲಾಗಿದೆ. 'ಅಹಲ್ಯೆ'ಯಲ್ಲಿ ಇಂದ್ರನಿಗೆ ಮನಸೋಲುವ ಆಕೆಯ ತುಮುಲವನ್ನು ನಾಟಕಕಾರರು ತುಂಬ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ವಿಕಟಕವಿ ವಿಜಯ ಪು.ತಿ.ನ. ಅವರ ಗೀತನಾಟಕಗಳಲ್ಲಿ ವಿಶಿಷ್ಟವಾಗಿ ನಿಲ್ಲುತ್ತದೆ. "ಭಾರತದಲ್ಲಿ ನಡೆದ ಸ್ವಾತಂತ್ರ್ಯ ಸಮರದ ವಿಪ್ಲವ ಒಂದು ದೇಶೀಯ ಸಂಸ್ಥಾನದಲ್ಲಿ ಹೇಗೆ ತೆರೆಯಿಟ್ಟಿತು ಎಂಬ ಇತಿಹಾಸ ಈ ನಾಟಕದಲ್ಲಿ ಹಾದು ಹೋಗಿದೆ" ಎಂದು ನಾಟಕಕಾರರೆ ಇದರ ವಸ್ತುವಿನ ಸಂದರ್ಭವನ್ನು ಸೂಚಿಸಿದ್ದಾರೆ. ಇದು ೧೯೪೫–೪೭ರ ಅವಧಿಯ ರಾಜಕೀಯ ವಿಪ್ಲವವನ್ನು ತಿಳಿಸುವ ನಾಟಕ. ಇದನ್ನು ಹೊರತುಪಡಿಸಿದರೆ ಪು.ತಿ.ನ. ಅವರ ಬಹುಪಾಲು ನಾಟಕಗಳು ಹಿಂದಿನ ಪುರಾಣ ಸಾಮಗ್ರಿಯನ್ನೆ ಅವಲಂಬಿಸಿವೆ. ಇವರ ಗೀತನಾಟಕಗಳು ಸಂಗೀತ ಮತ್ತು ಸಾಹಿತ್ಯದ ಸಾಹಚರ್ಯದಿಂದ ಸೃಷ್ಟಿಯಾಗಿರುವಂಥವು. ಇಲ್ಲೆಲ್ಲ ನಾಟಕಕಾರರ ಸಂಗೀತ ಪರಿಜ್ಞಾನ ಒಡೆದುಮೂಡಿದೆ. ಇವು ರಂಗದ ಮೇಲೆ ಪ್ರಯೋಗವಾಗಲು ಉನ್ನತಮಟ್ಟದ ಸಂಗೀತ ಮತ್ತು ಅಭಿನಯವನ್ನು ಬೇಡುತ್ತವೆ. ಸಂಗೀತಪ್ರಿಯರನ್ನು ಸೆಳೆಯುವಷ್ಟು ಇವು ಸಾಮಾನ್ಯ ಪ್ರೇಕ್ಷಕರನ್ನು ಆಕರ್ಷಿಸಲಾರವು. ಈ ನಾಟಕಗಳಲ್ಲಿ ಕಂಡುಬರುವ ಕಾವ್ಯದ ಚೆಲುವು ಮತ್ತು ಸಂಗೀತದ ಮಾಧುರ್ಯದಲ್ಲಿ ಇವುಗಳ ಆಧಿಕ್ಯವಿದೆ.

ಬಿ.ಎಂ.ಶ್ರೀ. ಅವರ ಪರಂಪರೆಯಲ್ಲಿ ಎ. ಎನ್. ಮೂರ್ತಿರಾಯರು 'ಆಷಾಢಭೂತಿ' ಎಂಬ ನಾಟಕವನ್ನು ರಚಿಸಿದ್ದಾರೆ. ಇದು ಫ್ರೆಂಚ್ ನಾಟಕಕಾರ ಮೊಲಿಯರ್ ಬರೆದ ತಾರ್ತೂಫ್ (Tartuffe) ನಾಟಕದ ರೂಪಾಂತರ. ಮುಗ್ಧತೆಯ ದುರುಪಯೋಗ ಇಲ್ಲಿನ ವಸ್ತು. ಅದಕ್ಕೆ ತಕ್ಕ ಪ್ರತೀಕಾರವೂ ಇಲ್ಲಿ ಸೂಚಿತವಾಗಿದೆ.

ನವ್ಯನಾಟಕಕಾರರಲ್ಲಿ ಮಂಡ್ಯಜಿಲ್ಲೆಯ ಏಕೈಕ ನಾಟಕಕಾರರೆಂದರೆ ಬಿ. ಸಿ. ರಾಮಚಂದ್ರಶರ್ಮ. 'ಸೆರಗಿನ ಕೆಂಡ' ಎಂಬುದು ಇವರದೆ ಕಥೆಯನ್ನು ಆಧರಿಸಿದ ಪ್ರಸಾರನಾಟಕ. ಈ ನಾಟಕದ ಕೇಂದ್ರಪಾತ್ರ ಲಲಿತೆ. ಅವಳು ಯೌವನದಲ್ಲಿ ಪ್ರಿಯಕರನೊಂದಿಗೆ ಓಡಿಬಂದ ಘಟನೆ ನೀತಿಬಾಹಿರವೆಂದು ಕೊರಗುವುದನ್ನು ಆ ನೆನಪು ಅವಳ ಬಾಳಿಗೆ ಸೆರಗಿನ ಕೆಂಡವಾಗಿ ಪರಿಣಮಿಸುವುದನ್ನು ನಾಟಕಕಾರರು ಮನೋವಿಶ್ಲೇಷಣಾತ್ಮಕವಾಗಿ ಪರಿಭಾವಿಸಿದ್ದಾರೆ. ಶರ್ಮರ ಮತ್ತೊಂದು ನಾಟಕ 'ಬಾಳಸಂತೆ' ಸಿಪಾಯಿದಂಗೆಯಲ್ಲಿ ಮುಖ್ಯಪಾತ್ರ ವಹಿಸಿದ ಪೇಶ್ವೆ ನಾನಾ ಸಾಹೇಬನನ್ನು ಕುರಿತದ್ದಾಗಿದೆ. ಇದೊಂದು ಪುಟ್ಟ ನಾಟಕವಾದರೂ ಪೇಶ್ವೆ ನಾನಾ ಸಾಹೇಬನ ದಿಟ್ಟ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಸಫಲವಾಗಿದೆ.

ರಾಜಕಾರಣಿಗಳು ನಾಟಕಕಾರರಾಗುವುದು ವಿರಳ. ಅಂಥ ವಿರಳಪಂಕ್ತಿಗೆ ಸೇರಿದ ಮಂಡ್ಯಜಿಲ್ಲೆಯ ಪ್ರಮುಖ ರಾಜಕೀಯ ಪಟುಗಳಾದ ಎಚ್. ಕೆ. ವೀರಣ್ಣ ಗೌಡ ಮತ್ತು ಕೆ. ವಿ. ಶಂಕರಗೌಡ ಅವರು ನಾಟಕಗಳನ್ನು ರಚಿಸಿ ತಮ್ಮ ಸೃಜನ ಶೀಲತೆಯನ್ನು ಮೆರೆದಿದ್ದಾರೆ. ವೀರಣ್ಣಗೌಡರು ಶಿವಾಜಿವಿಜಯ ಮತ್ತು ಬುದ್ಧದೇವ ಎಂಬ ಎರಡು ಮಕ್ಕಳ ನಾಟಕಗಳನ್ನು ರಚಿಸಿ ಆ ಮಹಾಪುರುಷರ ವ್ಯಕ್ತಿತ್ವವನ್ನು ಪರಿಚಯಿಸಿಕೊಡುವ ಪ್ರಯತ್ನಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಕೆ. ವಿ. ಶಂಕರಗೌಡರ ಸಾಹಿತ್ಯಸೇವೆ ವಿಸ್ತಾರವಾದುದು. ೧೯೫೦ರಲ್ಲಿ ನಾಟಕಗಳ ರಚನೆಗೆ ಕೈಹಾಕಿದ ಇವರು 'ಪಾದುಕಾಕಿರೀಟ', 'ಕೂಡಿಬಾಳೋಣ', 'ಶಿಷ್ಟಾಚಾರ', 'ದನಿ' ಮತ್ತು 'ಗುರಿತಪ್ಪಿದ ಗುಂಡು' (ಅಪ್ರಕಟಿತ) ನಾಟಕಗಳನ್ನು ರಚಿಸಿದ್ದಾರೆ. 'ಪಾದುಕಾ ಕಿರೀಟ'ಗೆ ಆಕರಗಳು ಭಾಸನ 'ಪ್ರತಿಮಾನಾಟಕ', ಕುವೆಂಪು 'ರಾಮಾಯಣ ದರ್ಶನಂ' ಮತ್ತು ಅ.ನ.ಕೃ ಅವರ 'ಚಿತ್ರವಿಚಿತ್ರ' ಕಾದಂಬರಿ. ಸಹಕಾರತತ್ವದ ಅಡಿಗಲ್ಲಿನ ಮೇಲೆ ನವಸಮಾಜ ನಿರ್ಮಾಣವಾಗಬೇಕೆಂಬ ಕನಸು 'ಕೂಡಿಬಾಳೋಣ' ನಾಟಕದಲ್ಲಿ ವ್ಯಕ್ತವಾಗಿದೆ. ಕೆ. ವಿ. ಶಂಕರಗೌಡರು ತಮ್ಮ ದೀರ್ಘಕಾಲದ ರಾಜಕೀಯ ಅನುಭವದ ಆಧಾರದ ಮೇಲೆ ಶಿಷ್ಟಾಚಾರ, ದನಿ, ಗುರಿತಪ್ಪಿದ ಗುಂಡು ನಾಟಕಗಳನ್ನು ರಚಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಾದ ಭ್ರಮನಿರಸನ, ಅತ್ಯಾಚಾರ, ಬದಲಾವಣೆಯ ಬಯಕೆ, ರಾಮರಾಜ್ಯದ ಕನಸು, ಸಮಾಜದ ಭ್ರಷ್ಟ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆ ಇವೇ ಮೇಲಿನ ಮೂರುನಾಟಕಗಳ ವಸ್ತುವಾಗಿವೆ. ರಾಜಕೀಯ ಕ್ಷೇತ್ರದ ಓರೆಕೋರೆಗಳೆಲ್ಲ ಈ ನಾಟಕಗಳಲ್ಲಿ ಬಿಂಬಿತವಾಗಿವೆ. ರಂಗ ಪ್ರಯೋಗದ ದೃಷ್ಟಿಯಿಂದ ನೃತ್ಯ, ಹಾಡು ಮುಂತಾದ ಮನರಂಜನೆಯ ಅಂಶಗಳನ್ನು ನಾಟಕದ ಒಡಲಲ್ಲಿ ಸೇರಿಸಲಾಗಿದೆ. ವೈಯಕ್ತಿಕವಾಗಿ ಗಾಂಧಿ ಮತ್ತು ಜೆ. ಪಿ. ಸಿದ್ಧಾಂತಗಳಿಗೆ ಮಾರುಹೋದ ಶಂಕರಗೌಡರು ಸಮಾಜವನ್ನು ಒಳ್ಳೆಯದರ ಕಡೆಗೆ ಕೊಂಡೊಯ್ಯಬೇಕೆಂದು ನಾಟಕಗಳ ಮೂಲಕ ನಡೆಸಿದ ಪ್ರಯತ್ನ ಮೆಚ್ಚುವಂತಹದು.

ರಾಜಮಹಾರಾಜರ ಚರಿತ್ರೆಗಳು ಮಂಡ್ಯಜಿಲ್ಲೆಯ ಲೇಖಕರಿಗೆ ಯಾವತ್ತೂ

ಸ್ಫೂರ್ತಿಯ ವಿಷಯವಾಗಿವೆ. ಈ ನಿಟ್ಟಿನಲ್ಲಿ ಡಾ. ಜೀ.ಶಂ.ಪ. ಅವರ ಬಾಬರ್, ನಾಡಿನ ಕರೆ, ಮಂತ್ರಿಪುಂಗವ ನಾಟಕಗಳನ್ನು ಗಮನಿಸಬಹುದು. ಇವು ಆ ಕಾಲಕ್ಕೆ ರೇಡಿಯೋ ಪ್ರಸಾರನಾಟಕಗಳಾಗಿಯೂ ಯಶಸ್ಸುಗಳಿಸಿದ್ದವು. ಹ. ಕ. ರಾಜೇಗೌಡರು ಯಲಹಂಕ ಪ್ರಭುಗಳು ಮತ್ತು ಪಟ್ಟಮಹಾದೇವಿ ಎಂಬ ಎರಡು ನಾಟಕಗಳನ್ನು ರಚಿಸಿದ್ದಾರೆ. ಎರಡನೆಯದು ಅಪ್ರಕಟಿತ. ಯಲಹಂಕ ಪ್ರಭುಗಳನ್ನು ಕುರಿತಂತೆ ಆಳವಾಗಿ ಅಭ್ಯಾಸಮಾಡಿರುವ ಇವರು ಆ ಪ್ರಭುಗಳ ಬಗೆಗೆ ತಮಗಿದ್ದ ಒಲವನ್ನು ನಾಟಕದ ವಸ್ತುವಿನ ಆಯ್ಕೆಯಲ್ಲಿಯೂ ಪ್ರಕಟಪಡಿಸಿದ್ದಾರೆ. ಇದು ಬೆಂಗಳೂರು ಕೆಂಪೇಗೌಡನ ಶೌರ್ಯಸಾಹಸಗಳನ್ನು ಆ ಕಾಲದ ರಾಜಕೀಯ ಪರಿಸ್ಥಿತಿಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. 'ಪಟ್ಟಮಹಾದೇವಿ' ರಚನೆಯಲ್ಲಿ ಶಾಂತಲೆಯ ಜೀವಿತದ ಬಗೆಗೆ ಹೊಸಬೆಳಕು ಬೀರುವ ಜಾನಪದೀಯ ಅಂಶಗಳನ್ನು ಬಳಸಿಕೊಂಡಿರುವುದರಿಂದ ಹೊಸದೃಷ್ಟಿಯೊಂದು ಕಂಡುಬರುತ್ತದೆ.

ಕ್ಯಾತನಹಳ್ಳಿ ರಾಮಣ್ಣ ಅವರು 'ಆರವತ್ತಕ್ಕೆ ಅರುಳೋ ಮರುಳೋ' 'ಅಡವಿಯಲ್ಲಿ ದೊರೆಮಕ್ಕಳು' ಮತ್ತು 'ಹಲಗಲಿಯ ಬೇಡರು' ಎಂಬ ಮೂರು ನಾಟಕಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಮೊದಲನೆಯದು ನಗೆನಾಟಕ. ಉಳಿದೆರಡು ರೂಪಾಂತರಗಳು. 'ಹಾವಾಗಿ ಹರಿದ ಅಣ್ಣಯ್ಯ' ಎಂಬ ಜನಪದ ಕಥೆ ಅಡವಿಯಲ್ಲಿ ದೊರೆಮಕ್ಕಳು ನಾಟಕದ ಆಕರ. ಹಲಗಲಿಯ ಬೇಡರು ಬ್ರಿಟಿಷರ ನಿಶ್ಶಸ್ತ್ರೀಕರಣ ಕಾಯ್ದೆ ವಿರುದ್ಧ ದಂಗೆಯೆದ್ದ ರೋಮಾಂಚನಕಾರಿ ಘಟನೆಯನ್ನೊಳಗೊಂಡಿದೆ. ಈ ದಂಗೆಗೆ ಲಿಖಿತ ಇತಿಹಾಸವಿಲ್ಲದಿದ್ದರೂ ಫ್ಲೀಟರು ಸಂಗ್ರಹಿಸಿದ ಲಾವಣಿಯೆ ಪ್ರಸ್ತುತ ನಾಟಕದ ಬೆನ್ನೆಲುಬು. ಅಂದು ನಡೆದ ದಂಗೆ ನಾಟಕವಾಗಿ ಮೂರ್ತಗೊಳ್ಳುವಲ್ಲಿ ಯಶಸ್ವಿಯಾಗಿದೆ. ಇವರಂತೆ ಜಾನಪದದಿಂದ ಸ್ಫೂರ್ತಿಪಡೆದ ಮತ್ತೊಬ್ಬ ನಾಟಕಕಾರರೆಂದರೆ ಜಿ.ವಿ.ಡಿ. ಇವರು ಜನಪದಕ್ರೀಡೆ, ಶಿಶುಪ್ರಾಸಗಳು, ದೊಂಬಿದಾಸರು, ಹೆಳವರು ಇತ್ಯಾದಿ ವಿಷಯಗಳನ್ನು ನಾಟಕದ ಚೌಕಟ್ಟಿಗೆ ಅಳವಡಿಸಿ ಮಕ್ಕಳಿಗಾಗಿ 'ಕಾಯಕವೇ ಕೈಲಾಸ ಮತ್ತು ಇತರ ರೂಪಕಗಳು' ಎಂಬ ಪುಸ್ತಕದ ಮೂಲಕ ಕಿರುನಾಟಕಗಳನ್ನು ಪ್ರಕಟಿಸಿದ್ದಾರೆ. ಇವು ಆಕಾಶವಾಣಿಯ ಪ್ರಸಾರಕ್ಕೆಂದು ಕಾಲಪರಿಮಿತಿಗೊಳಗಾಗಿ ಸಿದ್ಧವಾಗಿದ್ದರೂ ತಮ್ಮ ಉದ್ದೇಶವನ್ನು ಈಡೇರಿಸುವಲ್ಲಿ ಸಫಲವಾಗಿವೆ. ಜವರನಹಳ್ಳಿ ಸಿದ್ದಪ್ಪ ಅವರ 'ಕಲ್ಲಹಿಡಿದೋರು' ನಾಟಕ ಗ್ರಾಮೀಣಜೀವನದ ಹಿನ್ನೆಲೆಯಲ್ಲಿ ರಚಿತವಾಗಿದೆ. ಹಳ್ಳಿಗರ ಮೂಢನಂಬಿಕೆಯ ಮೇಲೆ ಬೆಳಕು ಚೆಲ್ಲುವ ಈ ನಾಟಕದ ಭಾಷೆ ಕೂಡ ಗ್ರಾಮೀಣಬನಿಯಿಂದ ಕೂಡಿದೆ.

ವೃತ್ತಿರಂಗಭೂಮಿ ಮತ್ತು ಹವ್ಯಾಸಿರಂಗಭೂಮಿಗಳ ಸಮನ್ವಯ ಶಕ್ತಿಯಾಗಿ ರೂಪುಗೊಂಡಿರುವ ಎಚ್. ಕೆ. ಯೋಗಾನರಸಿಂಹ ಅವರು ಪಾಂಡವಪುರ ತಾಲ್ಲೂಕು ಹಳೇಬೀಡಿನಲ್ಲಿ ೫–೭–೧೯೨೭ ರಂದು ಜನಿಸಿದರು. ಎಚ್. ರಾಮಚಂದ್ರಶಾಸ್ತ್ರಿಗಳ ಮಂಜುನಾಥೇಶ್ವರ ನಾಟಕ ಮಂಡಳಿಯನ್ನು ಸೇರಿ ೧೯೪೫ರಲ್ಲಿ ರಂಗಪ್ರವೇಶಮಾಡಿದ

ಇವರು ಗುಬ್ಬಿಕಂಪನಿ, ಹಿರಣ್ಣಯ್ಯ ಮಿತ್ರಮಂಡಳಿಗಳಲ್ಲಿ ನಟನಾಗಿ ಗಾಯಕನಾಗಿ ರಂಗಭೂಮಿಯ ಜೊತೆಜೊತೆಯಲ್ಲಿ ಬೆಳೆದರು. ವೃತ್ತಿರಂಗಭೂಮಿಯಿಂದ ಚಲನ ಚಿತ್ರರಂಗಕ್ಕೆ ಪದಾರ್ಪಣೆಮಾಡಿ ಅಸಂಖ್ಯಾತ ಚಿತ್ರಗಳಿಗೆ ಸಾಹಿತ್ಯ ಒದಗಿಸಿದರು. ಇಂದಿಗೂ ಹವ್ಯಾಸಿ ರಂಗಭೂಮಿಗೆ ನಾಟಕಗಳನ್ನು ರಚಿಸುತ್ತ ದಿಗ್ದರ್ಶಿಸುತ್ತ ಕ್ರಿಯಾತ್ಮಕವಾಗಿ ತೊಡಗಿರುವ ಇವರು ಹದಿನೈದು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ರಾಜಾವಿಕ್ರಮ, ಅಡಿಗೆಭಟ್ಟ, ಕಳ್ಳಭಟ್ಟ, ಕೈಕಾರಾಣಿ, ಚಂದ್ರಹಾಸ ನಾಟಕಗಳು ಪ್ರಸಿದ್ಧವಾಗಿವೆ. ಉತ್ತಮ ಕಂಠಶ್ರೀ ಪಡೆದ ಇವರ ರಂಗಗೀತೆಗಳು ಇಂದಿಗೂ ಜನಪ್ರಿಯ.

ಮಂಡ್ಯಜಿಲ್ಲೆ ನಾಟಕಕಾರರಲ್ಲಿ ಹೆಚ್ಚಿನ ಸಂಖ್ಯೆಯ ಪ್ರಹಸನಗಳನ್ನು ನೀಡಿದವರು ಎ.ಎಸ್. ಮೂರ್ತಿಯವರು. ಇವರ ನಾಟಕಗಳ ಸಂಖ್ಯೆ ಶತಕವನ್ನು ಮೀರಿ ಹೋಗಿದೆ. ಚತುರ ಸಂಭಾಷಣೆಗಳಿಂದ ಕೂಡಿದ ಇವರ ಪ್ರಹಸನಗಳು ಸಮಾಜದ ಅಂಕುಡೊಂಕನ್ನು ದೈನಂದಿನ ಜೀವನದ ಸಮಸ್ಯೆಯನ್ನು ಪ್ರಸ್ತಾಪಿಸುತ್ತವೆ. ಇತ್ತೀಚೆಗೆ ತಮ್ಮ ಷಷ್ಟ್ಯಬ್ಧಿ ಸಂದರ್ಭದಲ್ಲಿ 'ನಾಲ್ಕುನಾಟಕ'ಗಳನ್ನು ಪ್ರಕಟಿಸಿದ್ದಾರೆ. ಸ್ವಂತ ನಾಟಕಗಳನ್ನೇ ಅಲ್ಲದೆ ವಿಶ್ವನಾಟಕಕಾರರ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ನಿರ್ದೇಶಕರು, ನಟರೂ ಆದ ಎ. ಎಸ್. ಮೂರ್ತಿ ತಮ್ಮ ವಿಶಿಷ್ಟಬಗೆಯ ಮಾತುಗಾರಿಕೆಯಿಂದ ಮೋಡಿಮಾಡಬಲ್ಲರು. ಗೆಳೆಯರ ಗುಂಪಿನ ಮೂಲಕ ಬೀದಿನಾಟಕ ಚಳುವಳಿಗೆ ಚಾಲನೆ ನೀಡಿದ ಮೂರ್ತಿಯವರ 'ಕಟ್ಟು' ಬೀದಿನಾಟಕಗಳ ಪ್ರಯೋಗದಲ್ಲಿ ಮೊದಲನೆಯದು. ಬಿ. ವಿ. ಕಾರಂತರು ಇವರ 'ಜಂಬೂಸವಾರಿ' ನಾಟಕವನ್ನು ನಿರ್ದೇಶಿಸಿದ್ದರೆಂಬುದು ಗಮನಾರ್ಹ.

ಈ ಜಿಲ್ಲೆಯ ಮತ್ತೊಬ್ಬ ಪ್ರಹಸನಕಾರ ಕೆ ಗುಂಡಣ್ಣ ಅವರು 'ಗಂಡ್ಸಲ್ವೆ ಗಂಡ್ಸು', 'ಹರಿದ್ರಾಕುಂಕುಮ', 'ಅನ್‌ಎಂಪ್ಲಾಯ್ಡ್ ಅಳಿಯ', 'ಪಂಚಭೂತ', 'ಕಣ್ಣಿಗೆ ಮಣ್ಣು', 'ಖೋಟಾಪೈಸೆ', 'ಬಕಪಕ್ಷಿ', 'ಶಂಕವಾದ್ಯ' ಮೊದಲಾದ ಹಲವು ಕೃತಿಗಳನ್ನು ಕೊಟ್ಟಿದ್ದಾರೆ. 'ಹರಿದ್ರಾಕುಂಕುಮ' ೧೯೬೧ರ ನಾಟಕ ಅಕಾಡೆಮಿ ಪ್ರಶಸ್ತಿಗಳಿಸಿದೆ. ಶಾಲಾ ಕಾಲೇಜುಗಳಲ್ಲಿ ನಡೆಯುವ ಮನರಂಜನಾ ಕಾರ್ಯಕ್ರಮಗಳಲ್ಲಿ ಗುಂಡಣ್ಣ ಅವರ ನಾಟಕಗಳಿಗೆ ಬೇಡಿಕೆಯಿದೆ.

ಪಾಂಡವಪುರದ ನಾ. ನರಸಿಂಹಮೂರ್ತಿ ಅವರು 'ಟೋಫನ್ ಅವಾಂತ್ರ', 'ಹೆಂಡ್ತಿ ಗುಲಾಮ' ಇವೇ ಮೊದಲಾದ ಹತ್ತಾರು ನಾಟಕಗಳನ್ನು ಕೈಲಾಸಂ ಧಾಟಿಯಲ್ಲಿ ಬರೆದಿದ್ದಾರೆ. ಮನರಂಜನೆಯೆ ಇವುಗಳ ಧ್ಯೇಯ. ಡಿ. ಲಿಂಗಯ್ಯನವರು ನಾಲ್ಕು ನಾಟಕಗಳನ್ನು ಪ್ರಕಟಿಸಿದ್ದಾರೆ. ಇವರ 'ದಡ್ಡ ಶಿಖಾಮಣಿ' ನಗೆನಾಟಕವಾದರೆ, 'ಬಡತನದ ಬಾಳು' ಹಳ್ಳಿಯ ಬಡರೈತನೊಬ್ಬನ ಸಾಲದ ಬವಣೆಯನ್ನು ಮನಮಿಡಿಯುವಂತೆ ನಿರೂಪಿಸುತ್ತದೆ. ಸಿ. ಪಿ. ನಾಗರಾಜು ಅವರು 'ಅಂಗಿಬಟ್ಟೆ', 'ಒಂದು ರೂಪಾಯಿ' ಮೊದಲಾದ ನಾಟಕಗಳನ್ನು ರಚಿಸಿ ಸಾಮಾಜಿಕ ಕಳಕಳಿ

ಯನ್ನು ವ್ಯಕ್ತಪಡಿಸಿದ್ದಾರೆ. ಅಂಬಿಗರಹಳ್ಳಿ ತಿಮ್ಮೇಗೌಡ ಅವರು ‘ ಅಂಬಿಗರ್ ’ ಕಾವ್ಯನಾಮದಿಂದ ‘ ನೇಗಿಲಯೋಗಿ ’, ‘ ಕಣ್ಣು ತೆರೆಯಿತು ’ ಮೊದಲಾದ ನಾಟಕಗಳನ್ನು ಬರೆದಿದ್ದಾರೆ. ವೈಜ್ಞಾನಿಕ ಬೇಸಾಯದ ಅಗತ್ಯತೆಯನ್ನು ಹೇಳುವ ನೇಗಿಲಯೋಗಿ ಬೋಧಪ್ರದವಾಗಿದೆ. ಇವರ ‘ ಕಣ್ಣು ತೆರೆಯಿತು ’ ನಾಟಕಕ್ಕೆ ದಕ್ಷಿಣ ಕನ್ನಡ ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದೊರೆತಿದೆ.

ಮಂಡ್ಯ ಜಿಲ್ಲೆಯ ಈಚಿನ ಪೀಳಿಗೆಯ ಹಲವು ಲೇಖಕರು ನಾಟಕಗಳನ್ನು ಬರೆದಿದ್ದಾರೆ. ರಮೇಶ ಹುಲ್ಲುಕೆರೆ ಅವರ ‘ ಮಂಥರೆ ’, ‘ ಲಂಕೇಶ್ವರ ’ ನಾಟಕಗಳು ಯಶಸ್ವಿಯಾಗಿ ಪ್ರಯೋಗವಾಗಿವೆ. ಡಾ. ಅರ್ಜುನಪುರಿ ಅಪ್ಪಾಜಿಗೌಡ ಅವರು ‘ ನಿಸರ್ಗದ ಕರೆ ’ ಮತ್ತು ‘ ಜಾತಿ ಬಿಟ್ಟ ಪ್ರೀತಿ ’ ಎಂಬ ನಾಟಕಗಳನ್ನು ರಚಿಸಿದ್ದಾರೆ. ಹುಲಿವಾನ ರಾಮಲಿಂಗು ಅವರು ನಟ, ನಾಟಕಕಾರ ಹಾಗೂ ನಿರ್ದೇಶಕರಾಗಿ ಜಿಲ್ಲೆಯ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವುದಲ್ಲದೆ ‘ ಬದುಕು ’, ‘ ಬದಲಾಗದವರು’, ‘ಅರಿವು’ ಮುಂತಾದ ನಾಟಕಗಳನ್ನು ಪ್ರಕಟಿಸಿದ್ದಾರೆ. ಡಾ. ಈಶ್ವರಾಚಾರ್ ಅವರು ‘ ಕುರಿದೊಡ್ಡಿ ಕುರುಕ್ಷೇತ್ರ ’ ಮತ್ತು ‘ ರಂಗಿದೊಡ್ಡಿ ರಾಮಾಯಣ ’ ಎಂಬ ನಾಟಕಗಳನ್ನು ಬರೆದು ಅಪಾರ ಜನಪ್ರಿಯತೆ ಗಳಿಸಿದ್ದಾರೆ. ಕುರುಕ್ಷೇತ್ರ ನಾಟಕ ಕಲಿಯಲು ಹೋಗಿ ಪಾತ್ರಧಾರಿಗಳ ನಡುವೆಯೆ ದೊಡ್ಡ ಕುರುಕ್ಷೇತ್ರವಾಗುವುದು ‘ ಕುರಿದೊಡ್ಡಿ ಕುರುಕ್ಷೇತ್ರ ’ದ ವಸ್ತು. ಈ ನಾಟಕ ಮಂಡ್ಯಜಿಲ್ಲೆಯಲ್ಲಿ ನಡೆಯದ ತಾಣವಿಲ್ಲ. ಇದರ ಸ್ಫೂರ್ತಿಯಿಂದ ಹಲವಾರು ನಾಟಕಕಾರರು ಹುಟ್ಟಿಕೊಂಡರು.

ಸಿದ್ಧರಾಜು (‘[illegible]’), ಬಿ. ಗಂಗಾಧರ್ (‘ದುರ್ಗಾಪುರದ ದಾನವರು’), ಡಾ. ಎಂ. ರಾಮಕೃಷ್ಣ (‘ಅಪೂರ್ವ ಮಿಲನ’, ‘ಭ್ರಮನಿರಸನ’, ‘ಭಕ್ತನಂದ’), ಕೆ. ಟಿ. ರಾಜಂ (‘ಬಡ್ಡಿ ಭದ್ರೇಗೌಡ’), ಹಲ್ಲೇಗೆರೆ ಶಂಕರ್ (‘ಕೊಂಕುಬಾಲದ ನಾಯಕರು ’), ಬ. ಮಾ. ಶಿವರಾಜು (‘ ಪ್ರೇಮದ ಕತೆ ’, ‘ ಪ್ರೇಮದುರಂತ ’), ಎಸ್. ಎಂ. ಜಯಪ್ರಕಾಶ್ (‘ಭೂಲೋಕವೇ ಯಮಲೋಕ’), ಎಂ. ನಾರಾಯಣ ಸ್ವಾಮಿ (‘ಸಾಕ್ಷಿ’), ಗಂಟಗೌಡನಹಳ್ಳಿ ಸೋಮಶೇಖರಾಚಾರ್ (‘ಬಳ್ಳಿ ಬಾಡಿತು ಹೂವು ಅರಳಿತು’), ಮಾರಿಗೌಡನಹಳ್ಳಿ ಚನ್ನೇಗೌಡ (‘ವಿಧಿಸಂಕಲ್ಪ’), ದೊಡ್ಡರಸಿನಕೆರೆ ತೋಟಶೆಟ್ಟಿ (‘ ಬಾಳಿನ ಅಂತ್ಯ ’), ರಾಮಕೃಷ್ಣ (‘ಜನಮರುಳೋ ಜಾತ್ರೆ ಮರುಳೋ’), ಆ. ಮ. ಶಂಕರ್ (ಶುಭಾರಂಭ), ಸತ್ಯಾನಂದ (ಇದು ಊರೇ) ಇವರೇ ಮೊದಲಾದ ನಾಟಕಕಾರರು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಈ ಪ್ರಮಾಣದ ನಾಟಕಕಾರರಿರುವುದಕ್ಕೆ ಜಿಲ್ಲೆಯ ಜನತೆಯ ಪ್ರೋತ್ಸಾಹವೆ ಕಾರಣವೆಂಬುದನ್ನು ಮರೆಯುವಂತಿಲ್ಲ.

ನಾಟಕ ಮತ್ತು ರಂಗಭೂಮಿ ಪರಸ್ಪರ ಪೂರಕವಾದುವು. ನಾಟಕದ ಬೆಳವಣಿಗೆಯಲ್ಲಿ ನಟ ಅನಿವಾರ್ಯ. ‘ಹಳೆಯ ಮೈಸೂರಿನ ಪ್ರಥಮ ನಟನೆಂದು ಖ್ಯಾತಿವೆತ್ತ

ಮಂಡ್ಯಂ ರಂಗಾಚಾರ್ಯರು (೧೮೫೭), ಮಳವಳ್ಳಿ ಸುಂದರಮ್ಮ ಮೊದಲಾದ ಪ್ರತಿಭಾವಂತ ನಟರು ಈ ಜಿಲ್ಲೆಯಲ್ಲಿ ಆಗಿಹೋಗಿದ್ದಾರೆ. ಮಂಡ್ಯಂ ರಂಗಾಚಾರ್ಯರ ನಟನೆಯ ಸ್ಫೂರ್ತಿಯಿಂದಲೆ ಮೈಸೂರಿನ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಸ್ಥಾಪಿತವಾಯಿತೆಂಬ ಹೇಳಿಕೆಯಿದೆ. ರಂಗಭೂಮಿಯ ತಾಂತ್ರಿಕ ಪರಿಕರಗಳಿಗೆ ಸಂಬಂಧಿಸಿದಂತೆ ಸು. ೧೮೩೮ರ ಹೊತ್ತಿಗಾಗಲೆ ಇಲ್ಲಿ 'ಗರ್ಕಳ್ಳಿ ಸೀನ್ಸ್' ಇದ್ದಿತೆಂದು ತಿಳಿದುಬರುತ್ತದೆ. 'ಮಂಡ್ಯ ಸೀನ್ಸ್' ಮತ್ತು 'ಕೊಡಗಳ್ಳಿ ಸೀನ್ಸ್'ಗಳು ಇಂದಿಗೂ ಪ್ರಸಿದ್ಧ. ಮಂಡ್ಯದ ಗೆಳೆಯರ ಬಳಗದ ಬಿ. ಜಯಪ್ರಕಾಶಗೌಡ ಮತ್ತು ಮಿತ್ರರು ಹವ್ಯಾಸಿ ನಾಟಕ ಚಳವಳಿ ಇಂದಿಗೂ ಈ ಜಿಲ್ಲೆಯಲ್ಲಿ ಉಳಿದಿರುವುದಕ್ಕೆ ಒತ್ತಾಸೆಯಾಗಿದ್ದಾರೆ. ನಾಟಕ ಪ್ರದರ್ಶನದ ಹಣದಿಂದ ಇಲ್ಲಿನ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯದ ಕಟ್ಟಡ ತಲೆಯೆತ್ತಿದೆ. ಈ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳು ಹೆಚ್ಚು ಪ್ರಚುರದಲ್ಲಿವೆ. ಗ್ರಾಮಗಳ ನಾಟಕಾಸಕ್ತರು ವರ್ಷವಿಡಿ ತಾಲೀಮುಮಾಡಿ, ಪ್ರದರ್ಶನದ ದಿನದಂದು ಬಂಧುಮಿತ್ರರನ್ನೆಲ್ಲ ಊರಿಗೆ ಆಹ್ವಾನಿಸಿ ಔತಣನೀಡುವ ಸಂಪ್ರದಾಯವಿದೆ. ಅಂದು ಬಂಧುಮಿತ್ರರು ಪಾತ್ರಧಾರಿಗಳಿಗೆ ಉಡುಗೊರೆಗಳನ್ನು ಕೊಟ್ಟು ಸನ್ಮಾನಿಸುವರು.

ಮೇಲಿನ ಸಮೀಕ್ಷೆಯಿಂದ ಮಂಡ್ಯಜಿಲ್ಲೆಯ ನಾಟಕಸಾಹಿತ್ಯ ಸಮೃದ್ಧವಾಗಿದೆಯೆಂದು ಹೇಳಬಹುದು. ಈ ಜಿಲ್ಲೆಯ ಲೇಖಕರು ಹಲವು ಪ್ರಥಮಗಳಿಗೆ ಪಾತ್ರವಾಗುವಂಥ ನಾಟಕಗಳನ್ನು ನೀಡಿರುವುದು ಹೆಮ್ಮೆಯ ಸಂಗತಿ. ವಸ್ತುವಿನ ದೃಷ್ಟಿಯಿಂದ ಧೋರಣೆಯ ದೃಷ್ಟಿಯಿಂದ ವಿವಿಧ ಮಜಲುಗಳಿಗೆ ಸೇರಿದ ನಾಟಕಗಳು ಇಲ್ಲಿವೆ. ಇತ್ತೀಚಿನ ನಾಟಕಕಾರರಲ್ಲಿ ಮನರಂಜನೆಯ ಅಂಶಗಳು ಹೆಚ್ಚಾಗಿ ಕಂಡುಬರುತ್ತಿದ್ದರೂ ಮಂಡ್ಯಜಿಲ್ಲೆಯಲ್ಲಿ ರಂಗಭೂಮಿ ಚಟುವಟಿಕೆಯನ್ನು ಜೀವಂತವಾಗಿಡುವಲ್ಲಿ ಇವರ ಪಾತ್ರವಿರುವುದನ್ನೂ ತಳ್ಳಿಹಾಕುವಂತಿಲ್ಲ.

ಬಿ. ವೀರಭದ್ರಪ್ಪ

ದ್ರುಂಗ, ಡಂಗ, ಅಡಂಗಮ್ ಯಾವುದು ಸರಿ?

ಮಲೆ ತಲೆದೋಱಿದೆಂದುದನೆ ಕೊಟ್ಟುದಡಂಗಮಡಂಗಿಬಂದೊಡೊ
ಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕಶತ್ರುಮಂ
ಡಳಿಕರೆ ಮಿತ್ರಮಂಡಳಿಕರಾದರನಾಕುಳಮಿಂದು ನಾಳೆಮಾ
ರ್ಮಲೆದರನಿಕ್ಕಿ ನಮ್ಮನೆೞ್ದಿಕ್ಕುಗುಮೀ ನೆಲೆಯಿಂ ಗುಣಾರ್ಣವಂ

[ವಿಕ್ರಮಾರ್ಜುನವಿಜಯಂ, ಆ. ೨, ಪದ್ಯ ೯೦]

ಈ ಪದ್ಯದಲ್ಲಿ ಅಡಗಿರುವ ಕ್ಲೇಶವೆಲ್ಲ ಮೊದಲನೆಯ ಪಂಕ್ತಿಯಲ್ಲಿದೆ. ಪದ್ಯದ ಉಳಿದ ಭಾಗವನ್ನು ನೋಡಿದರೆ ಅದರಲ್ಲಿ ಮೂರು ವಾಕ್ಯಗಳಿವೆ. ಮೊದಲನೆಯ ಪಂಕ್ತಿಯಲ್ಲಿ ಒಂದನೆಯ ವಾಕ್ಯ ''ಮಲೆ ತಲೆದೋಱಿದೆಂದುದನೆ ಕೊಟ್ಟುದು'' ಅರ್ಥ ಪೂರ್ಣವಾಗಿ ಸ್ಪಷ್ಟವಾಗಿದೆ. ಮುಂದಿನ ಭಾಗ "ಅಡಂಗಮಡಂಗಿ ಬಂದೊಡೊಕ್ಕಲಿಗ ವೆಸರ್ಗೆ ಪೂಣ್ದುದು ಕುಱುಂಬು" ಎಂಬುದರಲ್ಲಿ "ಒಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು" ಎಂಬುದು ಒಂದು ವಾಕ್ಯವಾಗುತ್ತದೆ. "ಅಡಂಗಮಡಂಗಿ ಬಂದೊಡೆ ಎಂಬುದು ಮಾತ್ರ ಪೂರ್ಣವಾಕ್ಯವಾಗುವುದಿಲ್ಲ, ಅಲ್ಲದೆ "ಅಡಂಗಂ" ಎಂಬ ಶಬ್ದ ಅಂಥದೊಂದಿದ್ದ ಪಕ್ಷದಲ್ಲಿ ಅರ್ಥವಾಗುವುದಿಲ್ಲ. ಆದ್ದರಿಂದ ಪಾಠ ದೋಷ ಈ ಭಾಗದಲ್ಲಿ ಅಡಗಿರಬೇಕು. ಇದನ್ನು ಊಹೆಯಿಂದ ಸರಿಪಡಿಸಬೇಕಾಗಿದೆ. 'ಡಂಗಂ' ಎಂಬ ಶಬ್ದವೊಂದುಂಟು; ಇದನ್ನೇ ಪಂಪನು ಇನ್ನೊಂದೆಡೆ (ಆ.೯-೩೯) ಬಳಸಿದ್ದಾನೆ. ಹಾಗಾದರೆ 'ಡಂಗಮಡಂಗಿ ಬಂದೊಡೆ' ಎಂಬ ಪಾಠ ಉಂಟಾಗುತ್ತದೆ. ಆದರೆ ಇನ್ನೂ ವಾಕ್ಯದ ಪೂರ್ಣತೆಯಾಗಲಿಲ್ಲ; ಆದ್ದರಿಂದ 'ಬಂದೊಡೆ' ಎಂಬುದನ್ನು 'ಬಂದುದು' ಎಂದು ತಿದ್ದಬಹುದು, ಆಗ ಪೂರ್ಣತೆಯುಂಟಾಗುತ್ತದೆ. ಆದ್ದರಿಂದ ಈ ಊಹಾ ಪರಿಷ್ಕೃತ ಪಾಠ:

"ಮಲೆತಲೆದೋಱಿದೆಂದುದನೆ ಕೊಟ್ಟು[ದು]ಡಂಗಮಡಂಗಿ ಬಂ[ದುದೊ]ಕ್ಕಲಿಗ..." ಎಂದಾಗುತ್ತದೆ. ಮೊದಲಿನ ಪಂಕ್ತಿಯಲ್ಲಿ ಎರಡು ವಾಕ್ಯಗಳಾಗುತ್ತವೆ. ಒಂದೇ ಪದ್ಯರಂಗದಲ್ಲಿ ಹಲವು ವಾಕ್ಯನಟರನ್ನು ಆಡಿಸುವುದು ಪಂಪನ ಶೈಲಿಯ

ವಿಶಿಷ್ಟಗುಣ ಎಂದು ಆದಿಪುರಾಣದ ೯–೬ ಪದ್ಯವನ್ನು ಉದಾಹರಣೆಗೆ ಕೊಟ್ಟು "ಆದ್ದರಿಂದ ಮೇಲೆ ಊಹಾ ನಿಯೋಜಿತವಾದ ಪಾಠಕ್ಕೆ ಅಂತಸ್ಸಂಭಾವ್ಯತೆಯಿದೆ",[೧] ಎನ್ನುತ್ತಾರೆ ಶ್ರೀ ಡಿ.ಎಲ್.ಎನ್.

ಈ 'ಡಂಗ' ಪದ ಪಂಪಭಾರತದ ನವಮಾಶ್ವಾಸದ ಮೂವತ್ತೊಂಭತ್ತನೆ ಪದ್ಯದಲ್ಲಿ ಮತ್ತೊಮ್ಮೆ ಬರುತ್ತದೆ. ಅದನ್ನು ಕುರಿತು ಡಿ. ಎಲ್. ಎನ್. "ಇದರಲ್ಲಿ ಪಾಠಾಂತರ ದೋಷಗಳಿವೆ. 'ಡಂಗಂ[ಕ]ಣ್ಮಲೆವ' ಎಂಬುದಕ್ಕೆ 'ಡಂಗಂತಣ್ಮಲೆವ' ಎಂದು ಎರಡು ಪ್ರತಿಗಳಲ್ಲೂ 'ಡಂಗಂನಣ್ಮಲೆವ' ಎಂದು ಒಂದರಲ್ಲೂ 'ಡಂಗಂಗಳ್ಮಲೆವ' ಎಂದು ಇನ್ನೊಂದು ಪ್ರತಿಯಲ್ಲೂ ಪಾಠಭೇದಗಳಿವೆ. "ಮಂಡಲಂಗಳ್ ಪ್ರತ್ಯಂತಂಗಳ್" ಎಂಬ ಪದಗಳ ಪರಂಪರೆಯನ್ನು ಗಮನಿಸಿದರೆ ಅವುಗಳ ಹಿಂದೆಯೂ 'ಗಳ್' ಅಂತ್ಯವಾದ ಶಬ್ದವಿರಬೇಕೆಂದು ಬೋಧೆಯಾಗುತ್ತದೆ. ಆದ್ದರಿಂದ ಮೇಲಿನ ಪಾಠಗಳಲ್ಲಿ ಕೊನೆಯದಾದ 'ಡಂಗಂಗಳ್ಮಲೆವ' ಎಂಬುದು ಪರಿಗ್ರಾಹ್ಯ.

ಮೇಲಿನ ಪದ್ಯದ ಸರಿಯಾದ ಪಾಠ ಹೀಗಿದೆ—

ಪೊಂಗುವ ಮಲೆಪರ ಮಲೆಗಳ
ಡಂಗಂ[ಗಳ್ಮ]ಲೆವ ಮಂಡಲಂಗಳ್ ಪ್ರತ್ಯಂ ।
ತಂಗಳೆನಲೊಳವೆ ಪಾಂಡವ
ರಂಗೆಡೆಗೊಳೆ ನಿನಗೆ ಕುರುಕುಲಾಂಬರ ಭಾನೂ॥

ಅಯ್ಯಾ ಕೌರವ! ನೀನು ಪಾಂಡವರ ಸ್ನೇಹವನ್ನು ಸಂಪಾದಿಸಿದರೆ ಸೊಕ್ಕಿ ನಿನಗೆ ಎದುರುಬೀಳುವ ಮಲೆರಾಜರ ಮಲೆಗಳ ಡಂಗಗಳಾಗಲಿ ಉದ್ಧತವಾಗಿ ವರ್ತಿಸುವ ಮಂಡಲಗಳಾಗಲಿ ಗಡಿನಾಡುಗಳಾಗಲಿ ಯಾವುವೂ ಇರುವುದಿಲ್ಲ ಎಂದು ಪದ್ಯದ ವಾಕ್ಯಾರ್ಥ.

ಇಲ್ಲಿನ 'ಡಂಗ' ಶಬ್ದದ ಆನುಪೂರ್ವಿಯನ್ನು ನೋಡಿದರೆ ಅದು ಬೆಟ್ಟದರಸುಗಳ ಬೆಟ್ಟಗಳಿಗೆ ಸಂಬಂಧಿಸಿದೆ ಎಂದು ತಿಳಿಯದಿರಲಾರದು. "ಹೆಚ್ಚು ಸ್ಪಷ್ಟವಾಗಿ ಅದರ ಅರ್ಥ ಗೊತ್ತಾಗುವುದಿಲ್ಲ," ಎಂದು ಹೇಳಿ ಅದರ ಅರ್ಥ ಮತ್ತು ನಿಷ್ಪತ್ತಿಯನ್ನು ಪೆಷಾವರ್‌ನಲ್ಲಿರುವ ಮ್ಯೂಜಿಯಂನ ಕ್ರಿ.ಶ. ೧೪೯೧ರಲ್ಲಿ ಲಿಖಿತವಾದ ಶ್ರೀ ವಾಹ್ನಡಕನ ಸಂಸ್ಕೃತ ಶಾಸನದಲ್ಲಿರುವ 'ದ್ರಂಗ' ಪದಕ್ಕೆ ಅದರ ಸಂಪಾದಕರಾದ ಡಾ. ಸ್ಟೆಕೊನೊರ ಈ ಕೆಳಗಿನ ಇಂಗ್ಲಿಷ್ ಅನುವಾದವನ್ನು ಕೊಡುತ್ತಾರೆ.

According to Dr. Sten Konow the term dranga signifies a watch-station established near mountain passes for the double purpose of guarding the approaches to the valley and of collecting customs revenue. (Tr : of Rajatarangini Vol. II p. 591) ;"[೨]

---

೧. ಗ್ರಂಥಸಂಪಾದನೆ ಡಾ. ಡಿ. ಎಲ್. ನರಸಿಂಹಾಚಾರ್, ಪು. ೧೯೭–೧೯೮.

೨. ಪೀಠಿಕೆಗಳು, ಲೇಖನಗಳು—ಡಾ. ಡಿ. ಎಲ್. ನರಸಿಂಹಾಚಾರ್, ಪು. ೮೭೭–೮೭೮,

ಇದರಂತೆ 'ದ್ರಂಗ'ವು ಪರ್ವತಶ್ರೇಣಿಗಳ ಘಾಟಿಮಾರ್ಗಗಳಲ್ಲಿ ಸುಂಕದ ವಸೂಲಿಗಾಗಿ ಫಲವತ್ತಾದ ಪ್ರದೇಶಗಳ ರಕ್ಷಣೆಗಾಗಿ ನಿಯಮಿತವಾದ ಠಾಣ್ಯ ಅಥವಾ ಸುಂಕದಕಟ್ಟೆ" ಎಂದು ಹೇಳಿ ಕಲ್ಹಣನ ರಾಜತರಂಗಿಣಿಯನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ಆರ್. ಎಸ್. ಪಂಡಿತ್ ಅವರು ಕೊಟ್ಟಿರುವ ಅರ್ಥವನ್ನೂ ಉಲ್ಲೇಖಿಸಿದ್ದಾರೆ.

"Frontier post, observation post, watch-station on ದ್ರಾಂಗಿಕ ಎಂಬ ಶಬ್ದಕ್ಕೆ Warden of the Klatch station. Commandant of the watch-station (River of Kings ; VII-140, VIII-1577-14).

ಬೇರೆ ಬೇರೆ ರಾಜರ ಹಿಡುವಳಿಗೆ ಒಳಪಟ್ಟ ನಾಡುಗಳ ನಡುವೆ ಸೀಮಾ ಪ್ರದೇಶಗಳಲ್ಲಿರುವ ಘಾಟ್ ರಸ್ತೆಗಳ ಉನ್ನತ ಸ್ಥಳಗಳಲ್ಲಿ ಇಂಥ 'ದ್ರಂಗ'ಗಳು ಇದ್ದುವು. ಈ 'ದ್ರಂಗ' ಶಬ್ದ ಕನ್ನಡಕ್ಕೆ ಬರುವಾಗ 'ದಂಗ' ಎಂದು ರೂಪಾಂತರ ಹೊಂದಿದೆ,"[೩] ಎನ್ನುತ್ತಾರೆ.

ಡಿ. ಎಲ್. ಎನ್. ಅವರು ಹೇಳಿರುವ ಊಹಾಪಾಠ ಸರಿಯಲ್ಲ. ಏಕೆಂದರೆ 'ಅಡಂಗವ್' ಎಂಬ ಶಬ್ದ ಅಂಥದೊಂದಿದ್ದ ಪಕ್ಷದಲ್ಲಿ ಅರ್ಥವಾಗುವುದಿಲ್ಲ ಎನ್ನುತ್ತಾರೆ ಈಗಿರುವ 'ಕಣ್ಮಲೆವ' ಪದವಿಟ್ಟುಕೊಂಡರೂ ಅರ್ಥಪುಷ್ಟಿ ಇದೆ. ಆದರೆ ಬಹುವಚನಕ್ಕಾಗಿ 'ಡಗಂಗಳ್ಮಲೆವ' ಇಟ್ಟುಕೊಳ್ಳಬಹುದು. ಅದನ್ನು ಮುಂದೆ ಚರ್ಚಿಸಲಾಗುವುದು.

ಕಿಟಲ್‌ಕೋಶದಲ್ಲಿ 'ಕುಱುಂಮ್ಬು' ಕುಱುಬ, L. a man belonging to a fort (ಅಡಂಗಾಯ್ತ್ತ, ಕೊಟ್ಟವಳ kk (ಕಬ್ಬಿಗರ ಕೈಪಿಡಿ) 37 Sm 45 ತೋಂಟದಾರ್ಯರ ಶಬ್ದಮಂಜರಿ T. ಕೊಱ್ಱವ, ಕೋ a head man, king, ಕುಱುಮ್ಬು a fort, ಕುಱು a hill, Tu ಕುತ್ತ, steepness. T M. ಕುಱುಪ್ಪು, a chief a caste of mountaineers[೪] ಇದರ ಪ್ರಕಾರ ಅಡಂಗಾಯ್ತ್ತ ಎಂದರೆ ಕೋಟೆ fort ಎಂದೇ ಅರ್ಥ. ಕುಱುಮ್ಬು ಎಂದರೂ a fort ಎಂದು ಅರ್ಥ. ಆದ್ದರಿಂದ 'ಅಡಂಗು' ಎಂಬ ಶಬ್ದವೊಂದಿದೆ ಎಂದಂತಾಯಿತು. ಅದಕ್ಕೆ ಅರ್ಥ ಕೋಟೆ ಎಂದಾಗುತ್ತದೆ. ಕಿಟಲ್‌ಕೋಶದಲ್ಲಿರುವ ಈ ಪದವನ್ನು ಡಿ. ಎಲ್. ಎನ್. ಗಮನಿಸಿಲ್ಲ. ಪಂಪಭಾರತದ ನವಮಾಶ್ವಾಸದ ಮೂವತ್ತೊಂಬತ್ತನೆ ಪದ್ಯದಲ್ಲಿ ಬಳಸಿರುವ 'ಅಡಂಗಂ' ಪದವನ್ನು ಗಮನಿಸಿ ಅದನ್ನು 'ಡಂಗಂ' ಎಂದು ಅವರು ಓದಿದ್ದಾರೆ. 'ಗ' ಪ್ರತಿಯ ಪಾಠಾಂತರ ಸ್ವೀಕರಿಸಿ 'ಡಂಗಂಗಳ್ಮಲೆವ' ಎಂದು ತಿದ್ದಿದ್ದಾರೆ. ಅದು ಸರಿಯಾದ ಪಾಠ. ಆದರೆ 'ಡಂಗ' ಎಂಬುದು ಸರಿಯಲ್ಲ. ಡಂಗಗಳಾಗಲಿ ಎಂಬರ್ಥ ಸರಿಯಲ್ಲ. ಡಾ. ಸ್ಟೆರ್ಕೊನೊ, ಡಾ. ಸ್ಟೀನ್ ಇವರು ರಾಜತರಂಗಿಣಿಗೆ ಮಾಡಿರುವ

---

೩. ಪೀಠಿಕೆಗಳು, ಲೇಖನಗಳು—ಡಾ. ಡಿ. ಎಲ್. ನರಸಿಂಹಾಚಾರ್, ಪು. ೮೭೭—೮೮೮

೪. ಕಿಟಲ್‌ಕೋಶ—ಕಿಟಲ್, ಪು. ೪೭೬.

ಇಂಗ್ಲಿಷ್ ಭಾಷಾಂತರ ಆಧರಿಸಿ Dranga signifies a watch-station ಎಂಬುದರಿಂದಲೂ ಮತ್ತು ಆರ್. ಎಸ್. ಪಂಡಿತರು ಮಾಡಿರುವ ಅರ್ಥದ ಆಧಾರದಿಂದಲೂ ಡಂಗವೇ ಸರಿ ಎನ್ನುತ್ತಾರೆ. 'ದ್ರಂಗ' ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಡಂಗ ಆಗಿದೆ ಎನ್ನುತ್ತಾರೆ. ಇಷ್ಟೆಲ್ಲ ಹೇಳುವ ಕಾರಣ ಅವರಿಗೆ 'ಅಡಂಗವ್ರ್' ಎಂಬ ಪದ ಕಾಣಿಸದಿರುವುದು. ಅಪಾರ ಪಾಂಡಿತ್ಯ ಪಡೆದು ವಿದ್ವಾಂಸರಲ್ಲಿ ಶ್ರೇಷ್ಠರೆನಿಸಿದ ಡಿ.ಎಲ್.ಎನ್. ಅವರ ಕಣ್ಣಿಗೆ ಆ ಪದ ಬಿದ್ದಿರಲಾರದೆ? 'ಅಡಂಗಮಡಂಗಿ ಬಂದೊಡೆ' ಎಂದು ಸರಿಯಾಗಿಯೆ ಪದವಿಭಾಗ ಮಾಡಿದ ಅವರು 'ಅಡಂಗಂ' ಎಂಬ ಶಬ್ದ ಅಂಥದ್ದೊಂದಿದ್ದ ಪಕ್ಷದಲ್ಲಿ ಅರ್ಥವಾಗುವುದಿಲ್ಲ ಎನ್ನುತ್ತಾರೆ. ಅಂಥ ಒಂದು ಪದ ಇರುವುದರ ಬಗ್ಗೆಯೇ ಅವರಿಗೆ ಅನುಮಾನವಿದೆ. ಇದನ್ನು ರಾಜತರಂಗಿಣಿಯ ಅನುವಾದ ಮತ್ತು ವಾಹ್ನಡಕನ ಸಂಸ್ಕೃತ ಶಾಸನದ ಅನುವಾದದ ಆಧಾರದ ಮೇಲೆ ಪಂಪಭಾರತದಲ್ಲಿ ಬರುವ ಡಂಗಕ್ಕೆ ಅರ್ಥಮಾಡಿರುವ ಡಿ. ಎಲ್. ಎನ್. — "ಅಯ್ಯಾ ಕೌರವ ನೀನು ಪಾಂಡವರ ಸ್ನೇಹವನ್ನು ಸಂಪಾದಿಸಿದರೆ ಸೊಕ್ಕಿ ನಿನಗೆ ಎದುರು ಬೀಳುವ ಮಲೆರಾಜರ ಮಲೆಗಳ ಡಂಗಗಳಾಗಲಿ, ಗಡಿನಾಡುಗಳಾಗಲಿ ಯಾವುದೂ ಇರುವುದಿಲ್ಲ—ಎಂದು ಆ ಪದ್ಯಕ್ಕೆ ಅರ್ಥಮಾಡಿ ಡಂಗ ಎಂದರೆ ಸುಂಕದ ಕಟ್ಟೆ ಎನ್ನುತ್ತಾರೆ. ಈ ಅರ್ಥದ ಪ್ರಕಾರ ಕೌರವ ಪಾಂಡವರ ಸ್ನೇಹಗಳಿಸಿದ್ದೆ ಆದರೆ ಮಲೆರಾಜರ ಮಲೆಗಳ ಸುಂಕದ ಕಟ್ಟೆಗಳೇ ಇರುವುದಿಲ್ಲ ಎಂದಂತಾಗುತ್ತದೆ. ಸುಂಕದ ಕಟ್ಟೆ ಇರುವುದು ಸುಂಕ ವಸೂಲಿಗೆ. ಅಂಥ ಸುಂಕದ ಕಟ್ಟೆಗಳೇ ಇರುವುದಿಲ್ಲ ಎಂದರೇನು? ಆದಾಯದ ಮೂಲಗಳೆಲ್ಲ ಬಂದ್ ಆಗುತ್ತವೆ ಎಂದರ್ಥವೆ? ಅಥವಾ ಸುಂಕ ವಸೂಲಿ ನಿಂತು ಹೋಗುತ್ತೆ ಎಂದರ್ಥವೆ? ನಿಜ ಎಂದರೆ ಇದು ಔಚಿತ್ಯಪೂರ್ಣ ಅರ್ಥವಲ್ಲ. 'ಅಡಂಗವ್ರ್' ಎಂಬ ಪದವೊಂದಿದೆ. ಅದಕ್ಕೆ ಕೋಟೆ ಎಂದರ್ಥ, ಅದನ್ನಿಟ್ಟುಕೊಂಡು ಈ ಪದ್ಯವನ್ನು ಅರ್ಥಮಾಡಿದರೆ—

ಸೊಕ್ಕಿ ಮೇಲೆ ಬೀಳುವ ಮಲೆರಾಜರ ಬೆಟ್ಟಗಳಿಂದ ಕೂಡಿದ ಕೋಟೆಗಳಾಗಲಿ, ಉದ್ಧಟತನದಿಂದ ವರ್ತಿಸುವ ಮಂಡಲಗಳಾಗಲಿ, ಗಡಿನಾಡುಗಳಾಗಲಿ, ಯಾವುವೂ ಇರುವುದಿಲ್ಲ—ನೀನು ಪಾಂಡವರೊಡನೆ ಸ್ನೇಹಮಾಡಿಕೊಂಡರೆ!—ಎಂದಾಗುತ್ತದೆ. ಮಂಡಲಗಳಾಗಲಿ, ಗಡಿನಾಡುಗಳಾಗಲಿ ಎನ್ನುವಾಗ ವಾಚ್ಯಾರ್ಥ ಭಂಗಹೊಂದಿ ಲಕ್ಷ್ಯಾರ್ಥ ನೆಲೆಸಿಲ್ಲುತ್ತದೆ. ಅಂದರೆ ಮಂಡಲಗಳ, ಗಡಿನಾಡುಗಳ ಅಧಿಪತಿಗಳು ಹಾಗೇ ಮಲೆರಾಜರ ಬೆಟ್ಟಗಳಿಂದ ಕೂಡಿದ ಕೋಟೆಯ ಅಧಿಪತಿಗಳು ಯಾರೂ ಇರುವುದಿಲ್ಲ, ಯಾವುವೂ ಇರುವುದಿಲ್ಲ ಗಡಿನಾಡು ಮಂಡಲಗಳ ಉಲ್ಲೇಖದ ಜತೆಗೆ ಸುಂಕದಕಟ್ಟೆ ಇರಲು ಸಾಧ್ಯವಿಲ್ಲ. ಕವಿಯ ಉದ್ದೇಶ ಸೀಮಾರೇಖೆಗಳು ಶತ್ರುಗಳು ಯಾವುವೂ, ಯಾರೂ ಇರುವುದಿಲ್ಲ. ಎಲ್ಲ ಅರ್ಜುನನ ವಶವಾಗುತ್ತವೆ ಎಂದು ಹೇಳಬೇಕು. ಆದ್ದರಿಂದ ಹಾಗೆ ಹೇಳುವಾಗ ಬೆಟ್ಟಗಳಿಂದ ಆವೃತವಾದ ಕೋಟೆಗಳೂ ಇರುವುದಿಲ್ಲ ಎಂದು ಹೇಳುವುದು ಸರಿಕಾಣುತ್ತದೆ. ಇಡೀ ಭೂಭಾಗವೆಲ್ಲ ಒಂದಾದಾಗ ಅದರ ಒಳಗಡೆ

ಕೋಟೆಗಳೂ, ಅದರ ರಕ್ಷಕರೂ ಇರುವುದೇಕೆ ? ಅವುಗಳ ಆವಶ್ಯಕತೆಯೂ ಇರುವುದಿಲ್ಲ ಎಂಬುದು ಸರಿಯಾದ ಅರ್ಥ. ಅಂದರೆ ಇಡೀ ಭೂಮಂಡಲಕ್ಕೆ ಒಡೆಯನಾಗುತ್ತೀಯ, ಶತ್ರುಗಳಿದ್ದಾಗ ಕೋಟೆಗಳ ಆವಶ್ಯಕತೆ, ಶತ್ರುಗಳೇ ಇಲ್ಲವಾದಾಗ ಕೋಟೆಗಳೇಕೆ, ಎಂಬರ್ಥವೂ ಇದೆ. ಇಲ್ಲಿ ಎಲ್ಲ ಬಿಟ್ಟು ಮಲೆಪರ ಮಲೆಗಳ ಕೋಟೆಗಳ ಪ್ರಸ್ತಾಪವೇಕೆ? ಮಲೆಪರನ್ನು ಕುರಿತು ಡಾ. ಎಂ. ಚಿದಾನಂದಮೂರ್ತಿಯವರು—"ಹೆಚ್ಚು ಸುಸಂಘಟಿತ ರಾಗಿ, ದೊಡ್ಡ, ದೊಡ್ಡ ರಾಜರನ್ನೇ ಎದುರಿಸಿ ಆಗಾಗ್ಗೆ ನಾಡಿನ ಮೇಲೆ ದಾಳಿಯಿಟ್ಟು ಬರುತ್ತಿದ್ದವರು ಮಲೆಪರು. (ಮಲೆಬೆಟ್ಟ) ಇವರು ದುರ್ಗಮವಾದ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತ, ಒಂದು ರೀತಿಯಲ್ಲಿ ನಾಗರಿಕತೆಯಿಂದ ದೂರವಾಗಿ ಸ್ವಾತಂತ್ರ್ಯಪ್ರಿಯರಾಗಿ ಬಾಳುತ್ತಿದ್ದರು. ಪರ್ವತ ಯುದ್ಧಗಳಲ್ಲಿ ನಿಷ್ಣಾತರಾಗಿದ್ದ ಇವರನ್ನು ಹಲವುರಾಜರು ಒಲಿಸಿಕೊಂಡು ಯುದ್ಧಗಳಲ್ಲಿ ಇವರ ಸಹಾಯವನ್ನು ಪಡೆಯುತ್ತಿದ್ದರು"[೫] ಎನ್ನುತ್ತಾರೆ. ಎಂದರೆ ಮಲೆಪರು ಪರ್ವತ ದುರ್ಗದ ಅಧಿಪತಿಗಳೂ, ಪರ್ವತದುರ್ಗದ ಹೋರಾಟದಲ್ಲಿ ವೀರರೂ, ನಿಷ್ಣಾತರೂ ಆದವರು ಅಂಥವರಿಗೆ ಸಂಬಂಧಪಟ್ಟವು ಅಡಂಗರ್ವ್‌ಗಳು ! ಎಲ್ಲ ಕೋಟೆಗಳೂ ಇಲ್ಲವಾಗುತ್ತವೆ ಎಂದು ಏಕೆ ಹೇಳಬಾರದಿತ್ತು, ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಇದು ಸಮಸ್ತ ಭಾರತ, ಕನ್ನರನನ್ನು ಅರ್ಜುನನೊಡನೆ ಸಮಸ್ತೀಕರಿಸಿ ರಚಿಸಿದ ಕಾವ್ಯ. ಅಷ್ಟೇಕೆ ಪಂಪನೂ ಅರ್ಜುನನೊಡನೆ ಮೇಳವಿಸಿ ಕೊಂಡಿದ್ದಾನೆ. ಆಗಾಗ್ಗೆ ದಂಗೆ ಏಳುವ ಪ್ರವೃತ್ತಿ ಮಲೆಗಳ ರಾಜನದು. ಇಂಥವರು ಇರುವುದು ಮಲೆಗಳ ಕೋಟೆಗಳಲ್ಲಿ, ಬನವಾಸಿ ಪ್ರಾಂತ್ಯದಲ್ಲಿ ! ಅರ್ಥಶಾಸ್ತ್ರ ಹೇಳುವ ಅಟವಿಬಲ ಇದೇ. ಅವರು ಲೂಟಿ ಹೊಡೆಯಲು ಯಾವಾಗಲೂ ಕಾತರರಾಗಿರುತ್ತಾ ರೆಂದು ಕೌಟಿಲ್ಯನು ಹೇಳುತ್ತಾನೆ.[೬] ಆದ್ದರಿಂದ ಇಂಥವರೂ ಇಲ್ಲವಾಗುತ್ತಾರೆ, ಪಾಂಡವರ ಗೆಳೆತನ ಮಾಡಿಕೊಂಡರೆ ! 'ಮಲೆಪರ ಮಲೆಗಳ ಡಂಗಂ' ಎಂಥವು? ಮಲೆಪರ ಬೆಟ್ಟಗಳಿಂದ ಕೂಡಿದ ಕೋಟೆಗಳು ಎಂದರ್ಥ. ಕೋಟೆಗಳಲ್ಲಿ ಮೂರು ವಿಧ. ಕೌಟಿಲ್ಯನ ಅರ್ಥಶಾಸ್ತ್ರ "ದೇವಕೃತವಾದ ಪರ್ವತಮಯ ಪ್ರದೇಶಗಳನ್ನು (ಪರ್ವತ ದುರ್ಗ) ಜಲಾವೃತದ್ವೀಪ ಹಾಗೂ ಕಂದಕದಿಂದಾವೃತವಾದ ಪ್ರದೇಶಗಳನ್ನು (ಜಲ ದುರ್ಗ) ಮತ್ತು ದಟ್ಟವಾದ ಕಾನನ ಪ್ರದೇಶಗಳನ್ನು (ವನದುರ್ಗ) ಜನಪದ ರಕ್ಷಣೆಗೂ ರಾಜರ ಆತ್ಮರಕ್ಷಣೆಗೂ ಬಳಸಿಕೊಳ್ಳಲು ಸೂಚಿಸಿದೆ. ದುರ್ಗ ಎಂಬ ಸಂಸ್ಕೃತಪದಕ್ಕೆ ಕೋಟೆ ಎಂದರ್ಥ[೭] ಎಂಬುದನ್ನು ಡಾ. ಪಿ. ಎಸ್. ರಾಮಾನುಜಂ ಉಲ್ಲೇಖಿಸಿ

---

೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದಮೂರ್ತಿ, ಪು. ೨೯೬.

೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ — ಡಾ. ಎಂ. ಚಿದಾನಂದಮೂರ್ತಿ, ಪು. ೩೭೦–೩೭೩, ೨೯೬ ಅಡಿಟಿಪ್ಪಣಿ.

೭. ಚಂದ್ರವಳ್ಳಿ—ಲೇ. ಚಿತ್ರದುರ್ಗದ ಅಭಿದಾನ–ಒಂದು ವಿವೇಚನೆ — ಡಾ. ಪಿ. ಎಸ್. ರಾಮಾನುಜಂ, ಭಾಗ ೨, ಪು. ೨.

ದ್ದಾರೆ. ಹರಿಹರನ ಗಿರಿಜಾಕಲ್ಯಾಣದ ಆ. ೨, ವ. ೧೦೫, ಪು. ೫೮ರಲ್ಲಿ ಗಿರಿದುರ್ಗ, ವನದುರ್ಗ ಮತ್ತು ಜಲದುರ್ಗಗಳ ಪ್ರಸ್ತಾಪವಿದೆ. ಇದೂ ಗಮನಿಸಬೇಕಾದ ಅಂಶ.

'ಮಲೆಗಳಡಂಗಂ' ಎಂದರೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸೂಚಿಸಿರುವ ಪರ್ವತ ದುರ್ಗವೇ ಆಗಿದೆ. ಆದ್ದರಿಂದ ಮಲೆಗಳ ಡಂಗಂಗಳ್ ಅಲ್ಲ, ಅದು ಮಲೆಗಳ+ ಅಡಂಗಂಗಳ್ (ಮಲೆಗಳ ತೋಟಗಳು) ಎಂದಾಗುತ್ತದೆ. ಅಂದರೆ ಮಲೆಪರ ಪರ್ವತ ದುರ್ಗಗಳು ಇಲ್ಲವಾಗುತ್ತವೆ. ಆದ್ದರಿಂದ 'ಡಂಗಂ' ಎಂದು ಓದುವುದಕ್ಕಿಂತ 'ಅಡಂಗಂ' ಎಂದೇ ಓದಬೇಕು. ಈ ಪದವನ್ನು ಕುರಿತು ಡಿ. ಎಲ್. ಎನ್. ಅವರು ತಮ್ಮ 'ಡಂಗ ಹಾಕು ಎಂದರೇನು?' ಎಂಬ ಲೇಖನದಲ್ಲಿ ಸಾಕಷ್ಟು ವಿಚಾರಮಾಡಿದ್ದಾರೆ. ಪಂಪ ಭಾರತದ —

ಮಲೆತಲೆದೋಱದೆಂದುದನೆ ಕೊಟ್ಟುದಡಂಗಮಡಂಗಿ ಬಂದೊಡೊ
ಕ್ಕಲಿಗವೆಸರ್ಗೆ ಪೂಣ್ದುದು ಕುಱುಮ್ಬು...

ಎಂಬುದನ್ನು ಒಳಪ್ರಾಸಕ್ಕೆ ಮಾರುಹೋಗಿ ಊಹಾಪಾಠ ಸಂಯೋಜಿಸಿ 'ಡಂಗ' ಪದ ಬರುವಂತೆ ಮಾಡಿದ್ದಾರೆ.

ಮಲೆತಲೆದೋಱದೆಂದುದನೆ ಕೊಟ್ಟು[ದು]ಡಂಗಮಡಂಗಿ ಬಂ
[ದುದೊ]ಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು......

ಎಂದು ಊಹಾಪಾಠ ಕೊಟ್ಟಿದ್ದಾರೆ. ಆಗ ಡಂಗ ಪದ ಪ್ರತ್ಯೇಕವಾಗಿ ನಿಲ್ಲುತ್ತದೆ. ಪಂಪ ಭಾರತದ ಸ್ವೀಕೃತ ಪಾಠವಿಟ್ಟುಕೊಂಡು ಪದವಿಭಾಗ ಮಾಡಿದರೆ 'ಅಡಂಗಮ್' ಎಂದೇ ಇಟ್ಟುಕೊಳ್ಳಬಹುದು.

ಇದರ ಅರ್ಥ—"ಬೆಟ್ಟವು ತಲೆಯನ್ನು ತೋಱಿಸದೆ ಹೇಳಿದ್ದನ್ನು ಕೊಟ್ಟಿತು ; (ಅರ್ಜುನನ ಪರಾಕ್ರಮಕ್ಕೆ ಹೆದರಿದ ಪರ್ವತರಾಜರು ತಲೆಮರೆಸಿಕೊಂಡಿದ್ದು ಅವನು ಹೇಳಿದ್ದನ್ನೆಲ್ಲ ತೆತ್ತರು) ; ಡಂಗವು ಅಡಂಗಿ ಬಂತು (ಡಂಗಪಾಲಕರೆಲ್ಲ ಮರೆಯಾಗಿ ಬಂದು ಅರ್ಜುನನ ವಶವಾದರು ; ಸಣ್ಣ ಪುಟ್ಟ ದೊರೆಗಳೆಲ್ಲ ಅರ್ಜುನನಿಗೆ ಒಕ್ಕಲುತನ ಮಾಡಲು ಪ್ರತಿಜ್ಞೆಯನ್ನು ಕೈಕೊಂಡರು. ಉಳಿದ ಶತ್ರುರಾಜರು ಅರ್ಜುನನನ್ನು ಅಡ್ಡಗಟ್ಟದೆ ಮಿತ್ರ ಸಾಮಂತರಾದರು. ಇವತ್ತೋ ನಾಳೆಯೋ ಅರ್ಜುನ ಏನೂ ಪ್ರಯೋಜನವಿಲ್ಲದೆ ಎದುರುಬಿದ್ದವರನ್ನೆಲ್ಲ ಸೋಲಿಸಿ ನಮ್ಮನ್ನು ನಮ್ಮ ಈ ನೆಲೆಗಳಿಂದ ಕಿತ್ತು ಅತ್ತ ಎಸೆದು ಹಾಕುತ್ತಾನೆ."[೮] ಎಂದು ಪೂರ್ಣ ಪದ್ಯಕ್ಕೆ ಅರ್ಥ ಮಾಡಿದ್ದಾರೆ. ಅರ್ಜುನ ಎಂಥವನು ಎಂಬುದೂ ಇದರಿಂದ ತಿಳಿಯುತ್ತದೆ.

ಅರ್ಜುನ ಎಂಥವನೆಂದರೆ ಅರ್ಜುನನ ಪರಾಕ್ರಮಕ್ಕೆ ಮೆಚ್ಚಿದ ಮಲೆಪರು ತಮ್ಮ ಮಲೆಗಳನ್ನೇ ಕೊಟ್ಟುಬಿಟ್ಟರು. ಕೋಟೆಗಳೆಲ್ಲ ಅಡಗಿ ಅವನ ವಶವಾದುವು. ಎಂದುದನೆ ಕೊಟ್ಟುದು+ಅಡಂಗಮ್ ಅಡಂಗಿ ಬಂದುದು. ಮಲೆ ಕೇಳಿದ್ದನ್ನೆಲ್ಲ

೮. ಪೀಠಿಕೆಗಳು. ಲೇಖನಗಳು—ಡಾ. ಡಿ.ಎಲ್. ನರಸಿಂಹಾಚಾರ್, ಪು. ೮೭೭.

ಕೊಟ್ಟಿತು. ಕೋಟೆ ಅಡಗಿ ಬಂತು, ಕೋಟೆಕಾಯುವ ಕೋಟೆ ಪಾಲಕರೆಲ್ಲ ತಡಮಾಡದೆ ಒಕ್ಕಲಿಗವೆಸರ್ಗೆ ಅಂದರೆ ವ್ಯವಸಾಯ ವೃತ್ತಿಯನ್ನು ಕೈಗೊಳ್ಳಲು ಪ್ರತಿಜ್ಞೆ ಮಾಡಿದರು. (ಏಕೆಂದರೆ ಅರ್ಜುನನೇ ಚಕ್ರವರ್ತಿಯಾದರೆ ಕೋಟೆಕಾಯುವ ಆವಶ್ಯಕತೆ ಏಕೆ? ತ್ರೈಲೋಕ್ಯವೀರನಾದ ಅವನಿಗೆ ಶತ್ರುಗಳೇ ಇಲ್ಲ ಎಂದಮೇಲೆ ಅವರು ತಮ್ಮ ವೃತ್ತಿಯನ್ನು ಬಿಟ್ಟು ಒಕ್ಕಲುತನ ಕೈಗೊಳ್ಳಲು ತೀರ್ಮಾನಿಸಿದ್ದು ಸಹಜವಾಗಿದೆ.) ಇನ್ನು ಮಿಕ್ಕ ಶತ್ರುಮಂಡಳಿಕರೆಲ್ಲ ಮಿತ್ರಮಂಡಳಿಕರಾದರು. ಇಂದೊ ನಾಳೆಯೊ ಅನಾಯಾಸವಾಗಿ ತಿರುಗಿಬೀಳುವವರನ್ನು ಇಕ್ಕಿ ಮೆಟ್ಟಿ ನಮ್ಮನ್ನೂ ನಮ್ಮ ನೆಲೆಗಳಿಂದ ಅತ್ತ ಕಿತ್ತು ಎಸೆಯುತ್ತಾನೆ ಎಂದು ಕರುಬಿ ಸಂಶಯದಿಂದ ಈಗಲೇ ಅವನನ್ನೂ, ಅವನ ಅನುಜರನ್ನೂ ಸದೆಬಡಿಯುವ ಸಂಚಿಗೆ ನಾಂದಿ ಹಾಡುತ್ತಾನೆ ದುರ್ಯೋಧನ!—ನನಗೆ ತಿಳಿದಂತೆ ಇದು ಸರಿಯಾದ ಅರ್ಥ. 'ಮಲೆತಲೆ ದೋಱದೆಂದುದನೆ ಕೊಟ್ಟುದು ಅಡಂಗವ್ ಅಡಂಗಿ ಬಂದುದು ಕುಱುಂಬು ತೞುಂಬದೆ ಒಕ್ಕಲಿಗವೆಸರ್ಗೆ ಪೂಣ್ದುದು' ಎಂದು ಅನ್ವಯ ಮಾಡಿದರೆ ಚೆನ್ನ. ಆದ್ದರಿಂದ ಮಲೆಗಳ ಅಡಂಗಂಗಳು ಸಹಜವಾಗೇ ಅರ್ಜುನನ ವಶವಾದ ಮೇಲೆ, ಶತ್ರು ಸಾಮಂತರು ಮಿತ್ರ ಸಾಮಂತರಾದ ಮೇಲೆ ಅವನ ಅನುಜರ ಅಂದರೆ ಪಾಂಡವರ ಸ್ನೇಹಮಾಡಿಕೊಂಡರೆ ಇವರೆಲ್ಲ ನಿನಗೆ ಅಧೀನರಾಗುತ್ತಾರೆ, ಯಾವ ಶತ್ರುಗಳೂ ಗಡಿಗಳೂ ಇರುವುದಿಲ್ಲವೆಂದು (ಆ. ೯—ಪ. ೩೯ರಲ್ಲಿ) ಹೇಳುವುದರಲ್ಲಿ ಔಚಿತ್ಯವಿದೆ.

ಈ ಪದ್ಯ ಅರ್ಜುನನ ಬಿಲ್ವಿದ್ಯೆಯ ಪರೀಕ್ಷಾ ಸಂದರ್ಭದ ನಂತರದ ಪ್ರಸಂಗಕ್ಕೆ ಸಂಬಂಧಿಸಿದ್ದು. ಪಾಂಡವರ ಕೌರವರ ವಿದ್ಯೆಯ ಪರಿಣತೆಯನ್ನು ದ್ರೋಣಾಚಾರ್ಯರೂ ಪರೀಕ್ಷಿಸಬೇಕಿತ್ತು ಮತ್ತು ಸಮಸ್ತ ಪ್ರಜೆಗಳಿಗೂ ತೋರ್ಪಡಿಸಬೇಕಿತ್ತು. ಆದ್ದರಿಂದ ಈ ವಿದ್ಯಾ ಪರೀಕ್ಷಾ ಸಂದರ್ಭದಲ್ಲಿ ಅರ್ಜುನನ ಸರದಿಯೂ ಬಂದಿತು. ಅರ್ಜುನನ ಬಿಲ್ವಿದ್ಯೆಯನ್ನು ಕಂಡು ದುರ್ಯೋಧನನ ಮುಖ ಚಿಕ್ಕದಾಯಿತಂತೆ! ಇದನ್ನು ಕವಿ ತುಂಬ ಸೊಗಸಾಗಿ ಹೇಳುತ್ತಾನೆ. 'ದುರ್ಯೋಧನನ ಮೊಗಂ ತಲೆನವಿರಗಂಟಿಂ ಕಿಱಿದಾಗೆ' ಎನ್ನುತ್ತಾನೆ. ಪಂಪ! ಮುಖ ತುರುಬಿಗಿಂತಲೂ ಚಿಕ್ಕದಾಯಿತಂತೆ! ಎಂಥ ಸೊಗಸಾದ ಹೋಲಿಕೆ!! ಅರ್ಜುನನ ಪರಾಕ್ರಮಕ್ಕೆ ಕರುಬಿದ ದುರ್ಯೋಧನ ಧೃತರಾಷ್ಟ್ರನನ್ನು ಕುರಿತು ವಿದ್ಯೆಯ ಪ್ರದರ್ಶನ ಪ್ರಸಂಗದಲ್ಲಿ ನಡೆದ ಘಟನೆಯನ್ನು ಸೂಚ್ಯವಾಗಿ ಹೇಳುತ್ತ ಇವರನ್ನು ಹೀಗೇ ಬಿಟ್ಟರೆ ಒಂದಲ್ಲ ಒಂದುದಿನ ನಮ್ಮನ್ನೂ ಇಕ್ಕಿಮೆಟ್ಟಿ ತಾನೇ ಚಕ್ರವರ್ತಿಯಾಗುತ್ತಾನೆ ಎನ್ನುತ್ತಾನೆ. ಈ ಸಂಶಯ ಬರಲು ಅವನಿಗೆ ಅರ್ಜುನನ ಪರಾಕ್ರಮದ ಬಿಲ್ವಿದ್ಯೆ ಮತ್ತು ನೆರೆದ ಪ್ರಜೆಗಳ ತೀರ್ಮಾನ ಕಾರಣವಾಗಿದೆ.

ಪಾಂಡವರ ಕೌರವರ ವಿದ್ಯಾನಿಪುಣತೆಯ ಪ್ರದರ್ಶನದ ಪ್ರಸಂಗ ಒಂದು ಅದ್ಭುತ ಪ್ರಸಂಗ. ಇದನ್ನು ವೀಕ್ಷಿಸಲು ಮಲೆರಾಜರ ಅಡಂಗಪಾಲಕರು ಶತ್ರು ಮಂಡಳಿಕರು ಸಹ ಬಂದಿದ್ದರೆಂದು ಕಾಣುತ್ತದೆ. "ನೆರೆದುದಗಣಿತ ಕರಿತುರಂಗಮ/

ವರವರೂಥ ಪದಾತಿ ಭೂವಿಶ್ವರರು ಬಂದರು ನೋಡಲೆಂದು[೯] ಎಂಬುದು ಕುಮಾರವ್ಯಾಸನ ಉಕ್ತಿ. ಅರ್ಜುನನ ಬಿಲ್ವಿದ್ಯೆಯ ಪ್ರದರ್ಶನಕ್ಕೆ ಮೆಚ್ಚಿ ಮಲೆಪರು ಮಂಡಳಿಕರು ಅವನ ಅಧೀನದಲ್ಲಿರುವುದಾಗಿ ಒಪ್ಪಿಕೊಳ್ಳುತ್ತಾರೆ. ಮಲೆರಾಜರು ಅರ್ಜುನನಿಗೆ ಶರಣಾದರು ಎಂಬುದರಲ್ಲಿ ಅರ್ಥವಿದೆ. ಅರ್ಜುನ ಇಂದ್ರಪುತ್ರ. ಇಂದ್ರನ ವಜ್ರಾಯುಧ ಬೆಟ್ಟಗಳಿಗೆ ಸಿಂಹಸ್ವಪ್ನ. ಅವುಗಳಿಗೆಲ್ಲ ರೆಕ್ಕೆಬಂದು ಹಾರಾಡುತ್ತಿದ್ದಾಗ ವಜ್ರಾಯುಧದಿಂದ ಆ ರೆಕ್ಕೆಗಳನ್ನು ಕಡಿದುಹಾಕಲಾಯಿತು. ಅಂಥವನ ಪುತ್ರ ಅರ್ಜುನ ಎಂದಮೇಲೆ ಮಲೆರಾಜರು ಅರ್ಜುನನ ಪರಾಕ್ರಮಕ್ಕೆ ಮೆಚ್ಚಿ ಅವನಿಗೆ ಅಧೀನವಾಗಿರಲು ಒಪ್ಪಿಕೊಳ್ಳುವುದರಲ್ಲಿ ಔಚಿತ್ಯವಿದೆ. ಆದ್ದರಿಂದಲೆ 'ಮಲೆ ತಲೆದೋರಿದು' ಎಂದು ಹೇಳಿರುವುದು. ಹೀಗೆ ಅವರೆಲ್ಲರೂ ಬಿಲ್ವಿದ್ಯೆಯ ಪ್ರಸಂಗದಲ್ಲಿ ಅರ್ಜುನನ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಬಳಿಕ ದುರ್ಯೋಧನನಿಗೆ ಬೇರೆ ದಿಕ್ಕೇ ಕಾಣದಂತಾಗಿ ಇನ್ನು ಇವನನ್ನು ಹೀಗೇ ಬಿಟ್ಟರೆ ನಮ್ಮನ್ನು ಈ ನೆಲೆಯಿಂದಲೇ ಕಿತ್ತು ಅತ್ತ ಎಸೆಯುತ್ತಾನೆಂದು ವೃದ್ಧ ತಂದೆಯ ಹತ್ತಿರ ಗುಟ್ಟಾಗಿ ದುರ್ಯೋಧನ, ಕರ್ಣನ ಸಹಿತ ಪಿತೂರಿ ನಡೆಸಲು ಹೊಂಚುಹಾಕುತ್ತಾನೆ. 'ಮಲೆತಲೆದೋರಿದು' ಎಂದರೆ ಮಲೆಗಳಲ್ಲಿರುವ ಕೋಟೆಗಳೂ, ಅವುಗಳ ರಕ್ಷಕರೂ ಮಣಿದ ಮೇಲೆ ಇನ್ನೆಲ್ಲಿಯ ಶತ್ರುತ್ವ? ಕೋಟೆರಕ್ಷಕರಿಗೆ ಬೇರೆ ಕೆಲಸವಿಲ್ಲದ್ದರಿಂದ ಅವರು ವ್ಯವಸಾಯ ವೃತ್ತಿಯನ್ನು ಸ್ವೀಕರಿಸಲು ಮುಂದಾಗುವುದರಲ್ಲಿ ಔಚಿತ್ಯವಿದೆ.

ಪಂಪಭಾರತದ ಜೂಜಿನ ಪ್ರಸಂಗದಲ್ಲಿ—

ವ್ಯಾಳಗಜಂಗಳನಗ್ಗದ
ಸೂಳೆಯರೊಕ್ಕಲನನರ್ಘ್ಯವಸ್ತುಗಳನಿಳಾ
ಪಾಳಂ ಸೋಲ್ತೊಡೆ ಜೂದಿನ
ಕೇಳಿಯನಾ ಕೇಳ[ಯ]ನಿತಱೊಳೆ ಮಾಣಿಸಿದರ್[೧೦]

ಎನ್ನುತ್ತಾನೆ ಪಂಪ. ಮದಿಸಿದ ಆನೆ, ಶ್ರೇಷ್ಠ ವೇಶ್ಯೆಯರು, ಒಕ್ಕಲು, ಅನರ್ಘ್ಯ ವಸ್ತುಗಳು ಹೀಗೆ ಎಲ್ಲವನ್ನೂ ಧರ್ಮರಾಜ ಸೋತಮೇಲೆ ಅಷ್ಟಕ್ಕೆ ಜೂಜನ್ನು ನಿಲ್ಲಿಸಿದರು, ಬಿಡಿಸಿದರಂತೆ. ಇಲ್ಲಿ ಒಕ್ಕಲು ಎಂಬುದೂ ಗಮನಾರ್ಹ. ಇವರು ಯುದ್ಧದಲ್ಲಿ ಸೋತು ಹೀಗೆ ಅರ್ಜುನನಿಗೆ ಊಳಿಗಮಾಡಲು ಒಪ್ಪಿಕೊಳ್ಳಲಿಲ್ಲ. ಬಿಲ್ವಿದ್ಯೆಯನ್ನು ಮೆಚ್ಚಿ ಇವನಿಗೆ ಅಧೀನನಾಗಿರಲು ಒಪ್ಪಿಕೊಳ್ಳುತ್ತಾರೆ. ಇದೊಂದು ರೀತಿಯ ಮೆಚ್ಚುಗೆಯ ಬಹುಮಾನ. ಇದನ್ನೆಲ್ಲ ವಿವರವಾಗಿ ಪಂಪ ಹೇಳದಿದ್ದರೂ ಸೂಕ್ಷ್ಮವಾಗಿ ಸಹೃದಯ ಓದುಗರ ಕಲ್ಪನೆಗೆ ಥಟ್ಟನೆ ಹೊಳೆಯುವಂತೆ ನಿರೂಪಿಸಿರುವುದು ಪಂಪನ ಸಾರಸಂಗ್ರಹ ಶಕ್ತಿಗೊಂದು ಉದಾಹರಣೆಯಾಗಿದೆ. ಹತ್ತು

———

೯. ಕರ್ಣಾಟಕ ಭಾರತ ಕಥಾಮಂಜರಿ—ಕುಮಾರವ್ಯಾಸ, ಸಂ. ೭, ಪ. ೧೫. ಪು. ೨೧

೧೦. ಪಂಪಭಾರತ—ಪಂಪ. ಆ. ೭. ಪ. ೩. ಪು. ೧೬೮.

ಹೇಳುವಲ್ಲಿ ಒಂದು ಮುತ್ತು ಕಟ್ಟಿ ಮಾತನ್ನು ಮಾಣಿಕ್ಯಗೊಳಿಸುವ ಅಪಾರ ಸಂಗ್ರಹ ಶಕ್ತಿ ಅವನದು. "ಸಣ್ಣಪುಟ್ಟ ದೊರೆಗಳೆಲ್ಲ ಅರ್ಜುನನಿಗೆ ಒಕ್ಕಲುತನ ಮಾಡಲು ಪ್ರತಿಜ್ಞೆಯನ್ನು ಕೈಕೊಂಡರು. ಉಳಿದ ಶತ್ರುರಾಜರು ಅರ್ಜುನನ್ನು ಅಡ್ಡಗಟ್ಟದೆ ಮಿತ್ರ ಸಾಮಂತರಾದರು" ಎಂಬ ಡಿ.ಎಲ್.ಎನ್. ಅವರ ಅರ್ಥ ಸರಿಯಲ್ಲ. ಇದನ್ನು ಪರಿಗ್ರಹಿಸಿದರೆ ಅರ್ಜುನನ ಮೇಲೆ ಇವರೆಲ್ಲ ಸೇರಿ ಯುದ್ಧ ಮಾಡಿದರು ಎಂದೇ ಅರ್ಥವಾಗುತ್ತದೆ. ಮೇಲೆ ವಿವರಿಸಿದಂತೆ ಇದು ಯುದ್ಧ ಪ್ರಸಂಗವಂತೂ ಅಲ್ಲವೆ ಅಲ್ಲ. ಒಕ್ಕಲುತನದ ಪ್ರಸಂಗ, ಅಡ್ಡಗಟ್ಟುವ ಪ್ರಸಂಗ ಇಲ್ಲಿಲ್ಲ.

ಐಂದ್ರ, ವಾರುಣ, ವಾಯುವ್ಯ, ಆಗ್ನೇಯ, ಪಾರ್ವತಾದಿ ಬಾಣಗಳನ್ನು ಪ್ರಯೋಗಿಸಿದಾಗ ಏನಾಯಿತು ಎಂಬುದನ್ನು ಪಂಪ ಆ. ೨, ಪ. ೭೭ರಲ್ಲಿ ಸ್ಪಷ್ಟವಾಗಿ ಸಂಗ್ರಹವಾಗಿ ಒಂದೇ ಒಂದು ವೃತ್ತದಲ್ಲಿ ತಿಳಿಸುತ್ತಾನೆ. ಅದೇ ವಿಷಯವನ್ನು ಕುಮಾರವ್ಯಾಸ ವಿಸ್ತಾರವಾಗಿ ವಿವರಿಸಿ ಸಂಧಿ ೭ರಲ್ಲಿ ಪ. ೪೩, ೪೪, ೪೫ರಲ್ಲಿ ವಿಸ್ತರಿಸಿ ಹೇಳುತ್ತಾನೆ (ಪು ೨೨). ಪಂಪನದು ಸಂಕ್ಷಿಪ್ತ. ಆದ್ದರಿಂದ ಮಲೆಪರು, ಕುಱುಂಬರು ಮಂಡಳಿಕರೆಲ್ಲ ಅರ್ಜುನನ ವಿದ್ಯೆ ಮೆಚ್ಚಿ ವಶವಾದರೆಂದೇ ಅರ್ಥ. ಇದಕ್ಕೆ ನಿದರ್ಶನವಾಗಿ ಅಜ್ಞಾತವಾಸ ಮುಗಿದು ಅಭಿಮನ್ಯು ಉತ್ತರೆಯರ ವಿವಾಹವಾದ ಬಳಿಕ— "ಮಲೆಪರ್ ಮಂಡಳಿಕರ್ ಕಱುಂಬರದಟರ್ ವೀರರ್ಕಳುಂ ತಮ್ಮ ಬಾ। ಬ್ದಿಲೆಯಂ ಬೇಡಿದ ವಸ್ತು ವಾಹನಮುಮಂ ಮುಂದಿಟ್ಟು ಮೂವಿಟ್ಟಯೊ॥ ಕ್ಕಲವೋಲಿಂ ಬೆಸಕಯ್ಯೆ ಸಂತವಿರುತುಂ ಕುಂತೀಸುತರ್ ತಮ್ಮ ತೋ। ಳ್ವಲಯಂ ನಚ್ಚರೆ ದಾಯಿಗರ್ ಧರೆಯನಾಳ್ದಂದಟ್ಟಿರೆಂಬೀವದಿಂ"[೧೧] ಇಲ್ಲಿ ಬರುವ ಮಲೆಪರು, ಮಂಡಳಿಕರು, ಕಱುಂಬರ್ ಕುಱುಂಬರ್ ಎಂದಿರಬೇಕು. ಇದಕ್ಕೆ ಡಿ. ಎಲ್. ಎನ್. ಅಸೂಯಾಪರರು ಎಂದು ಪಂಪಭಾರತದ ದೀಪಿಕೆಯಲ್ಲಿ ಅರ್ಥಕೊಟ್ಟಿದ್ದಾರೆ. ಕ್ಷತ್ರಿಯ ಗುಣದವರ ಮಧ್ಯೆ ಕರುಬುವವರು ಬರಲಾರರು! ಆದ್ದರಿಂದ ಕುಱುಂಬರ್ ಅಂದರೆ ಕೋಟೆಯ ರಕ್ಷಕರು ಎಂಬರ್ಥ ಸರಿ. ತಮಿಳಿನಲ್ಲಿ 'ಕುಱುಂಬು' ಎಂದರೆ ಕೋಟೆ ಎಂದರ್ಥ. ಕನ್ನಡದಲ್ಲಿ 'ಕುಱುಂಬ' ಎಂದರೆ ಕೋಟೆಯಲ್ಲಿ ವಾಸಿಸುವವನು ಎಂದರ್ಥ"[೧೨] ಕುಱುಂಬು ಎಂಬುದು ಬೆಟ್ಟಗುಡ್ಡಗಳಲ್ಲಿ ವಾಸಿಸುವ, ಜನಾಂಗದ ವ್ಯಕ್ತಿ ಎಂದೂ ಅರ್ಥವಾಗುತ್ತದೆ. (A Kan.-Eng. Dictionary, p. 448)" ಎಂದು ಡಾ. ಎಂ. ಚಿದಾನಂದಮೂರ್ತಿಗಳು ತಿಳಿಸುತ್ತಾರೆ.[೧೩]

---

೧೧. ಪಂಪಭಾರತ—ಪಂಪ. ಆ.೯. ಪ. ೧೦. ಪು. ೨೨೫.

೧೨. A Dravidian Etymological Dictionary–Dr. Emenuo and Burrow, p. 127.

೧೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದಮೂರ್ತಿ ಪು. ೨೯೫.

ಅದಟರ್, ವೀರರ್ ಕಳ್ ಎಲ್ಲರೂ ಕ್ಷತ್ರಿಯರೆ, ವೀರರೆ! ಅಭಿಮನ್ಯು ಉತ್ತರೆಯರ ವಿವಾಹ ಸಂದರ್ಭದಲ್ಲಿ ಇವರೆಲ್ಲ ಪಾಂಡವರಿಗೆ 'ಮೂವಿಟ್ಟವೊಕ್ಕಲವೋಲಿಂ ಬೆಸಕೆಯ್ಯಲು' ತಮ್ಮ ತನುಮನಧನವನ್ನೆಲ್ಲ ಸಮರ್ಪಿಸುತ್ತಾರೆ. ಮೂವಿಟ್ಟ ಕೆಲಸ ಮಾಡಲಿಲ್ಲ, ಹಾಗೆ, ಅಂತೆ ಕೆಲಸಮಾಡಿದರು. ಇದನ್ನೂ ಗಮನಿಸಬಹುದು, ಎಂದರೆ ಯುದ್ಧಮಾಡದೇ ಗೆದ್ದು ಅಧೀನತೆಗೆ ಒಳಪಡಿಸಿಕೊಳ್ಳುವುದಕ್ಕಿಂತ ತಮ್ಮ ಆದರ್ಶ, ಸತ್ಯಸಂಧತೆ ಪ್ರಭಾವದಿಂದಲೂ ಹೀಗೆ ಅಧೀನಪಡಿಸಿಕೊಳ್ಳುವುದು ಸಾಧ್ಯ ಎಂಬುದಕ್ಕೆ ಇದು ನಿದರ್ಶನ.

ಇಲ್ಲಿ ಸುಂಕದಕಟ್ಟೆ ಅಧಿಕಾರಿಗಳು ಅಥವಾ ಸುಂಕದಕಟ್ಟೆ ಎಂಬರ್ಥ ಬರುವ 'ಡಂಗ' ಪದ ಬರಲು ಸಾಧ್ಯವಿಲ್ಲ, ಬಂದರೂ ಅದು ಔಚಿತ್ಯಪೂರ್ಣವಲ್ಲ. ಪಂಪನ ಅಷ್ಟೇಕೆ ಕೇಶಿರಾಜನಲ್ಲೂ ಪದವಿಭಾಗ ಮಾಡಿದಾಗ 'ಅಡಂಗವರ್' ಪದವೇ ಬರುತ್ತದೆ. ಆದರೆ ಕೇಶಿರಾಜ ವೃತ್ತಿಯಲ್ಲಿ 'ಡಂಗಾಯ್ತು' ಎಂದು ಕೊಟ್ಟಿದ್ದಾನಲ್ಲ ಎಂಬ ಸಂಶಯ ಬರುತ್ತದೆ. ಕಿಟೆಲ್ ಕೋಶದಲ್ಲಿ 'ಅಡಂಗಾಯ್ತು' ಎಂದು ಸ್ಪಷ್ಟವಾಗಿ ಉದ್ಧರಿಸಲ್ಪಟ್ಟಿದೆ. ಹಲವಾರು ಗ್ರಂಥಾಧಾರದಿಂದ ಸಿದ್ಧವಾದ ಕಿಟೆಲ್ ಕೋಶದಲ್ಲೂ, ಪಂಪನಲ್ಲೂ 'ಅಡಂಗಾಯ್ತು' 'ಅಡಂಗವರ್' ಎಂದು ಸ್ಪಷ್ಟವಾಗಿರುವುದರಿಂದ ಕೇಶಿರಾಜನು ಕೊಟ್ಟಿರುವ ಪ್ರಯೋಗದಲ್ಲಿ ಆಯ್ತುಕ್ಕೆ-ಝುಳಂಬಾಯ್ತುರ್, ಸೂೞಾಯ್ತುರ್, ಕಲ್ಲಾಯ್ತುರ್, ಡಂಗಾಯ್ತುರ್, ಅಚ್ಚುಳಾಯ್ತುರ್ ಎಂದಿದೆಯಲ್ಲ? ಇಲ್ಲಿ ಡಂಗಾಯ್ತುರ್ ಎಂದು ಸ್ಪಷ್ಟವಾಗಿದೆ ನಿಜ. ಆದರೆ–

ಆಯ್ತುಬ್ಧಿಯೆ ಘೂರ್ಣಿಸುವಂ
ತಾಯ್ತುರಮನೆಯೊಳಗೆ ಪುಗುವ ಪೊಱಮಡುವ ಝುಳಂ
ಬಾಯ್ತುರ ಸೂೞಾಯ್ತುರ ಕ
ಲ್ಲಾಯ್ತುರ ಡಂಗಾಯ್ತುರಚ್ಚುಳಾಯ್ತುರ ರಭಸಂ॥೧೪

ಎಂಬಲ್ಲಿ "ಕಲ್ಲಾಯ್ತುರ್ + ಅಡಂಗಾಯ್ತುರ್ + ಅಚ್ಚುಳಾಯ್ತುರ್" ಎಂದು ಪದ ವಿಭಾಗ ಮಾಡಲು ಅವಕಾಶವಿದೆ. ಈ ಪದದ ಅಸ್ತಿತ್ವ 'ಡಂಗ' ರೂಪದಲ್ಲಿ ಸ್ವತಂತ್ರವಾಗಿರಬಹುದೆ? ಈ ಎರಡೂ ರೂಪದಲ್ಲಿ ಈ ಪದವಿರಬಹುದೆಂದು ಸಂದೇಹಪಡಲು ಪರಿಷತ್ತಿನ ಕನ್ನಡ ನಿಘಂಟು ಸ್ವಲ್ಪಮಟ್ಟಿಗೆ ಸಹಾಯಮಾಡುತ್ತದೆ.

"ಡಂಗ–ಡಂಗೆ (ನಾ) ೧. ಬೆಟ್ಟಗಳ ಘಾಟಿಮಾರ್ಗಗಳ ಬುಡದಲ್ಲಿ ಸುಂಕದ ವಸೂಲಿಗಾಗಿಯೂ ಫಲವತ್ತಾದ ಪ್ರದೇಶಗಳ ರಕ್ಷಣೆಗಾಗಿಯೂ ನಿಯಮಿತವಾದ ಠಾಣ್ಯ; ಕಾವಲುಕಟ್ಟೆ, ಪೊಂಗುವ ಮಲೆಪರ ಮಲೆಗಳಡಂಗಂ [ಕ]ಣ್ಮಲೆ ಮಂಡಲಂಗಳ್ ಪ್ರತ್ಯಂತಂಗಳೆನಲೊಳವೆ (ಪಂಪ ಭಾ.-೯-೩೯); ಅದಟರೆವೆಂದು ಬೇಗಿ ಬೆಸೆದಿರ್ಪನಿತಲ್ಲದೆ ಪೊಣ್ಮಿ ಪೊಂಗಿ ಡಂಗದ ಸವಲಕ್ಕ ವಿಂಜಡ, ವರಾಳದ, ಲಂಜಿಯ

೧೪. ಶಬ್ದಮಣಿದರ್ಪಣಂ-ಕೇಶಿರಾಜ. ಸೂ. ೧೦೯, ಪು. ೨೧೮.

ಚಿತ್ರಗೊಟ್ಟದಗ್ಗದ ನೃಪರಂ ಪಳಂಚಲೆದು ವೀರಶಿಖಾಮಣಿ ನಾಗವರ್ಮನಂದದೆ ನೆಲನಂ ನಿವಿುಚ್ಚಿರ್ದ ಪರಾಗ್ರಳ ಚಕ್ರಿಯ ದಂಡನಾಯಕರ್ (ನಾಂಬೇಡ್-೩-೧೫; ೧೦-೪೭) 2. ಕೋಟೆ, ದುರ್ಗ, ಡಂಗಾಯ್ತು. [<ಸಂ. ದ್ರಂಗ]

ಡಂಗ ಪಾಲಕರೆಲ್ಲ ಮರೆಯಾಗಿ ಬಂದು ಅರ್ಜುನನ ವಶವಾದರು. (ಶಬ್ದ ವಿ. ೭೪" [೧೫] —ಎಂದು ಪ್ರಯೋಗ ಸಹಿತ ಅರ್ಥಕೊಟ್ಟದ್ದು ಮೊದಲನೆಯದರಲ್ಲಿ 'ಅಡಂಗವ್' ಎಂದು ಪದವಿಭಾಗ ಮಾಡಲು ಅವಕಾಶವಿದ್ದರೂ ಎರಡನೆಯದರಲ್ಲಿ ಅವಕಾಶವಿಲ್ಲ. ಡಂಗದ ಸವಲಕ್ಕ ವೀಜಸವರಾಳದ ಲಂಜಿಯ ಚಕ್ರಗೊಟ್ಟದ ಅಗ್ಗದ ನೃಪರನ್ನು ನಾಗವರ್ಮ ಸೋಲಿಸಿ ರಾಜ್ಯ ವಿಸ್ತರಿಸಿದ, ಕಟ್ಟಿದ ಎಂಬುದನ್ನು ನೋಡಿದರೆ ಡಂಗದ ಸವಲಕ್ಕವಿಂಜ ಎಂಬುದು ರಾಜ್ಯವನ್ನು ಸೂಚಿಸುತ್ತದೆ. ಇನ್ನು ಮೂರನೆಯದು ಡಿ.ಎಲ್.ಎನ್. ರದೇ ಆದ್ದರಿಂದ ಆ ಬಗ್ಗೆ ಹೆಚ್ಚು ಹೇಳುವುದು ಇಲ್ಲಿ ಅಪ್ರಸ್ತುತ. ಪಂಪಭಾರತದ ಪ್ರಯೋಗವನ್ನು ಒಂದನೇ ಅರ್ಥದ ಕೆಳಗೆ ಕೊಟ್ಟಿರುವುದರಿಂದ ಡಂಗಕ್ಕೆ ಸುಂಕದಕಟ್ಟೆ ಎಂದೇ ಇಲ್ಲೂ ಅರ್ಥವಾಗುತ್ತದೆ. ಇಷ್ಟು ನಿದರ್ಶನವಿತ್ತದ್ದರ ಕಾರಣವಿಷ್ಟೆ 'ಸುಂಕದಕಟ್ಟೆ ಅಥವಾ ಕೋಟೆ, ದುರ್ಗ' ಎಂಬ ಅರ್ಥಬರುವ ಪದ 'ದ್ರಂಗವೊ', 'ಡಂಗವೊ' ಅಥವಾ 'ಅಡಂಗವ್' ಪದವೊ ಎಂಬುದನ್ನು ನಿರ್ಣಯಿಸುವುದಕ್ಕಾಗಿ. ಕೇಶಿರಾಜನ ಮತ್ತು ಪರಿಷತ್ತಿನ ನಿಘಂಟಿನಲ್ಲಿ ಕೊಟ್ಟಿರುವ ಪ್ರಯೋಗ ಎರಡರ ವಿನಾ ಮತ್ತೆಲ್ಲೂ ಡಂಗರೂಪ ಕಾಣುವುದಿಲ್ಲ. ಬಹುಶಃ ಇವು ತಪ್ಪುಗಳಾಗಿ ಕೈಚಳಕದಿಂದ ನುಸುಳಿರಬಹುದು. ಡಾ. ಸ್ಟೆನ್‌ಕೊನೊ ಆಗಲಿ, ರಾಜತರಂಗಿಣಿಯನ್ನು ಇಂಗ್ಲಿಷ್‌ಗೆ ಭಾಷಾಂತರಿಸಿರುವ ಡಾ. ಸ್ಟೀನ್‌ರಾಗಲಿ, ಆರ್. ಎಸ್. ಪಂಡಿತರಾಗಲಿ 'ಡ್ರಂಗ' ಎಂಬ ಪದವನ್ನು ಸಂಸ್ಕೃತದ ಪದವೆಂದು ಭಾವಿಸಿ ಅದಕ್ಕೆ watch-station, observation post, frontier post ಎಂದು ಹೇಗೆ ಅರ್ಥೈಸಿದರೊ ತಿಳಿಯದು. ಈ ಪದ ಸಂಸ್ಕೃತದ್ದೇ ಆಗಿದ್ದರೆ ಆ ಮಾತು ಬೇರೆ. 'ದ್ರಂಗ' ಎಂಬ ಪದ ಅಮರಕೋಶದಲ್ಲಿಲ್ಲ. ಆಪ್ಟೆಯವರ ಚಿಕ್ಕ ಸಂಸ್ಕೃತ ನಿಘಂಟಿನಲ್ಲೂ ಇಲ್ಲ. ಸರ್ ವಿಲಿಯಮ್ಸ್ ಮೋನಿಯರ್‌ರವರ ಸಂಸ್ಕೃತ-ಇಂಗ್ಲಿಷ್ ಕೋಶದಲ್ಲೂ (ಪು. 500) ಮತ್ತು ಪ್ರಿನ್ ಟಿ. ಎಸ್. ಆಪ್ಟೆಯರ The Practical Sanskrit Dictionary ಯಲ್ಲೂ (Part II, ಪು. 842ರಲ್ಲಿ) ಈ ಪದವಿದೆ. ಆದರೆ ಇದಕ್ಕೆ a city, town ಎಂದು ಅರ್ಥವಿತ್ತಿದ್ದಾರೆ. ಡಿ ಎಲ್. ಎನ್. ಅವರು ಹೇಳುವ ಅರ್ಥದ ದ್ರಂಗ ಪದ ಈ ಕೋಶಗಳಲ್ಲಿಲ್ಲ. ಇಲ್ಲಿರುವ ಪದಕ್ಕೆ ನಗರ, ಪಟ್ಟಣ ಎಂದರ್ಥವಿದೆ. ಅಂದರೆ ಈ ಪದ ದ್ರಾವಿಡಪದವಾಗಿದ್ದು ಸಂಸ್ಕೃತಕ್ಕೆ ಹೋಗಿರಬಹುದೆ? ಎಂಬುದು ಪ್ರಶ್ನೆ. ಇದು ನಮ್ಮ ಪ್ರಸ್ತುತ ಪದ್ಯಕ್ಕೆ ಸಂಬಂಧ ಹೊಂದದು. 'ದ್ರಂಗ' ಪದದಿಂದ ಡಂಗ ಬಂದಿದೆ ಎಂದು ಹೇಳಲು ಬರುವಂತಿಲ್ಲ. ಡಿ. ಎಲ್.ಎನ್. ಅವರು ಸಂಸ್ಕೃತ ದ್ರಂಗ

---

೧೫. ಪರಿಷತ್ತಿನ ಕನ್ನಡ ನಿಘಂಟು, ಪು. ೩೧೬೬.

ಕನ್ನಡಕ್ಕೆ ಬರುವಾಗ 'ಡಂಗ' ಆಗಿದೆ ಎನ್ನುತ್ತಾರೆ. ಸಂಸ್ಕೃತದಲ್ಲಿ ಆ ಪದವಿಲ್ಲದಿರುವಾಗ ಕನ್ನಡಕ್ಕೆ ಅದು ಡಂಗ ಆಗಿ ಬರುವುದಾದರೂ ಹೇಗೆ? ಹಾಗಾದರೆ ಸಂಸ್ಕೃತ ಶಾಸನದಲ್ಲಿ, ರಾಜತರಂಗಿಣಿಯಲ್ಲಿ ಈ ಪದ ಹೇಗೆ ಕಾಣಿಸಿಕೊಂಡಿತು? ಎಂಬ ಸಂಶಯದ ಪ್ರಶ್ನೆಯೇಳುತ್ತದೆ. ಭಾರತದಲ್ಲಿ ಆರ್ಯರು ಬರುವುದಕ್ಕಿಂತ ಮುಂಚೆಯೆ ದ್ರಾವಿಡರು ವಾಸವಾಗಿದ್ದರು ಅವರ ಸಂಸ್ಕೃತಿ ಉನ್ನತಮಟ್ಟದ್ದಾಗಿತ್ತು ಎಂದಮೇಲೆ ಅವರ ಭಾಷೆಯೂ ಅಷ್ಟೇ ಪ್ರಚುರವಾಗಿದ್ದಿರಬೇಕು. ಅರಿಶಿ ಇಂಗ್ಲಿಷ್‌ಗೆ ರೈಸ್ ಆಗಿ ಹೋದಂತೆ ಕೆಲವು ದ್ರಾವಿಡ ಪದಗಳು ವರ್ಣಗಳು ಸಂಸ್ಕೃತ ಭಾಷೆಗೆ ಹೋಗಿವೆ. ಎರಡು ಸಂಸ್ಕೃತಿಗಳು ಪರಸ್ಪರ ಒಂದುಕಡೆ ಸೇರಿ ಬಾಳುವಾಗ ಕೊಡುಕೊಳ್ಳುವುದು ಸಹಜ. ಭಾಷೆ ಸಂಸ್ಕೃತಿಯ ಪ್ರಸಾರಮಾಧ್ಯಮವಾದ್ದರಿಂದ ಪರಸ್ಪರ ಕೊಡುಕೊಳ್ಳುವಿಕೆ ಆಗುವುದು ತೀರ ಸಹಜ. ಎರಡು ಸ್ವರಗಳ ಮಧ್ಯೆ 'ಡ' ಬಂದಾಗ ಈಡೌಸ್ತು ತಾ ಎಂಬ ಸೂತ್ರದ ಪ್ರಕಾರ 'ಳ' ಕಾರವಾಗುತ್ತದೆ. ಆದ್ದರಿಂದ ಅಗ್ನಿಮೀಡೇ ಎಂಬುದು 'ಅಗ್ನಿಮೀಳೇ' ಆಗುತ್ತದೆ ಎನ್ನುತ್ತಾರೆ ಋಗ್ವೇದಕ್ಕೆ ಭಾಷ್ಯ ಬರೆದ ಸಾಯಣಾಚಾರ್ಯರು! ಕೇಶಿರಾಜ ರಳದ ಉಚ್ಚಾರಣೆ ಕುರಿತು 'ಡಕಾರಮಂ ಬೆಟ್ಟಿತಾಗುಚ್ಚರಿಸೆ 'ಱ' ಕಾರಂ ಪುಟ್ಟುಗುಂ' ಎನ್ನುತ್ತಾನೆ. ಅಂದರೆ ಋಗ್ವೇದದ ಪ್ರಥಮ ಋಕ್‌ನಲ್ಲಿ ಬರುವ 'ಅಗ್ನಿಮೀಳೇ' ಪದದಲ್ಲಿ ಕೇಶಿರಾಜ ಹೇಳುವ 'ಱ' ಇರಬೇಕೆಂದು ಹೇಳದೆ ವಿಧಿಯಿಲ್ಲ. ಹಾಗಾದರೆ ಕನ್ನಡದ ಒಟ್ಟಿನಲ್ಲಿ ದ್ರಾವಿಡ ಭಾಷೆಯ ಈ ವರ್ಣ, ಧ್ವನಿಮಾ ವೇದಗಳಲ್ಲಿ ಪ್ರಥಮವಾದ ಋಗ್ವೇದಕ್ಕೆ ಹೇಗೆ ಹೋಯಿತು? ಇದು ವಿಚಾರಯೋಗ್ಯ ವಿಷಯ. ಇದನ್ನು ಪ್ರತ್ಯೇಕವಾಗಿ ಒಂದು ಲೇಖನದಲ್ಲಿ ಚರ್ಚಿಸಲಾಗುವುದು. ಇಲ್ಲಿ ಇಷ್ಟು ಹೇಳಬಹುದು–ದ್ರಾವಿಡ ಭಾಷೆಯ ಎಷ್ಟೋ ಪದಗಳು ಸಂಸ್ಕೃತಕ್ಕೆ ಹೋಗಿವೆ ಎಂಬುದು ಭಾಷಾತಜ್ಞರಿಗೆ ತಿಳಿದ ವಿಷಯ. ಹಾಗೇ ಇದೂ ಕೂಡ ಹೋಗಿರಬಹುದು. 'ಡಂಗ' ಪದಕ್ಕಿಂತ 'ಅಡಂಗವು' ಎಂಬ ಪದ ಸಾಧುವೂ, ಅರ್ಥಪೂರ್ಣವೂ ಆದ ಶಬ್ದ. ಅಡಂಗವು ಪದ ಅಡಗು ಅಂದರೆ ಬಚ್ಚಿಟ್ಟುಕೊಳ್ಳು ಎಂಬ ಅರ್ಥದಲ್ಲಿ ವ್ಯವಹರಿಸಿ ಲಕ್ಷ್ಯಾರ್ಥದಲ್ಲಿ ಅಡಗಿಸಿಕೊಳ್ಳುವಂಥದ್ದು ಕೋಟೆ ಎಂಬರ್ಥದಲ್ಲಿ ಬಳಸಲ್ಪಟ್ಟಿದೆ ಎಂದರೆ ತಪ್ಪಾಗಲಾರದು. ಕೋಟೆಯನ್ನು ನಡೆಸುವವನು ಎಂಬರ್ಥದಲ್ಲಿ ತದ್ಧಿತ ಪ್ರತ್ಯಯ 'ಆಯ್ತು' ಹತ್ತಿ 'ಅಡಂಗಾಯ್ತು' ಎಂದಾಗುತ್ತದೆ. ಸೂಳಿಗಾಯ್ತು, ಕಲ್ಲಾಯ್ತು, ಡಂಗಾಯ್ತು ಇತ್ಯಾದಿ ಉದಾಹರಣೆಗಳನ್ನು ಕೇಶಿರಾಜನು ಕೊಟ್ಟಿದ್ದಾನೆ. ಪದ್ಯರೂಪದ ಪ್ರಯೋಗದಿಂದ ಇದು ಅಡಂಗಾಯ್ತುದೆ. ಇಂಗ್ಲಿಷ್, ಸಂಸ್ಕೃತ ಪದಗಳಿಗೆ ಹತ್ತುವ ಪ್ರತ್ಯಯಗಳು ಆದಿಯಲ್ಲಿ ಸೇರುತ್ತವೆ. ಅಂತ್ಯದಲ್ಲಿ ಸೇರುವುದಿಲ್ಲ. ಇದು ಸಂಸ್ಕೃತ ಪದವಲ್ಲವೆಂದು ಇದರಿಂದಲೂ ಸ್ವಲ್ಪ ಧೈರ್ಯವಾಗಿ ಹೇಳಬಹುದು. ಡಂಗೆ ಎಂಬುದಕ್ಕೆ ಡಂಗೆ–vv. tumult, uproar viit etc.: ಎಂದು ಕಿಟೆಲ್ ಕೋಶದ ಅರ್ಥ. ಇದರಿಂದ ಡಂಗ ರೂಪ ದಂಗೆ ಏಳುವವರು, ಕೋಟೆ ರಕ್ಷಕರು ಎಂಬರ್ಥದಲ್ಲಿ ಬಂದಿರಬಹುದೆ?

ಕನ್ನಡ ನಿಘಂಟಿನಲ್ಲಿ 'ಗುಂಡು ತೀವಿದ ಡಂಗದವೋಲ್' ಎಂಬ ತತ್ತ್ವರತ್ನ ಪ್ರದೀಪಿಕೆಯ ಪ್ರಯೋಗ ಕೊಟ್ಟು '[< ಪ್ರಾ ಡಂಗಾ]' ಎಂದಿದ್ದಾರೆ (ಪು. ೪೧೬-೮). ಪ್ರಾಕೃತವೊ, ಸಂಸ್ಕೃತವೊ ಖಚಿತತೆ ಇಲ್ಲ. ಡಿ.ಎಲ್.ಎನ್., ಎಂ. ಚಿದಾನಂದ ಮೂರ್ತಿ ಮತ್ತು ಕನ್ನಡ ನಿಘಂಟುಕಾರರಿಂದ ಸಂಸ್ಕೃತದ ದ್ರಂಗ ಪ್ರಾಕೃತದ ಡಂಗ ಆಗಿ ಕನ್ನಡಕ್ಕೆ 'ಡಂಗ'ವಾಗಿ ಬಂದಿದೆ ಎಂದು ತಿಳಿಯುತ್ತದೆ. ಆದರೆ ಅರ್ಥ ಮಾತ್ರ ಸಂಸ್ಕೃತದಲ್ಲಿ ಬೇರೆಯಾಗಿದೆ. ಕನ್ನಡ ನಿಘಂಟು [< ? ಡಂಗ+ಆಯ್ತು] ಎಂದು ಪ್ರಶ್ನೆಚಿಹ್ನೆ ಹಾಕಿದೆ. ಆದ್ದರಿಂದ ಪರಿಷತ್ತಿನ ನಿಘಂಟಿನಿಂದ ಉಂಟಾಗುವ ಸಂಶಯ ದೂರವಾಗುತ್ತದೆ. ಈ ಪದದ ಬಗ್ಗೆ ಡಿ.ಎಲ್.ಎನ್. ಅವರೆ ಖಚಿತವಾಗಿ ಅಧಿಕಾರ ಯುತವಾಗಿ ಅರ್ಥೈಸಲು ಪ್ರಯತ್ನಿಸಿರುವುದರಿಂದ ಪರಿಷತ್ತಿನ ಕನ್ನಡ ನಿಘಂಟು ಅವರ ಅರ್ಥವನ್ನು ಸ್ವೀಕರಿಸಿರುವುದರಲ್ಲಿ ತಪ್ಪೇನಿಲ್ಲ. ಆದರೆ ಡಂಗಕ್ಕೆ ಕೋಟೆ, ದುರ್ಗ ಎಂದು ಅರ್ಥಕೊಟ್ಟಿರುವುದು ಸರಿಯಲ್ಲ.

'ಅಡುಗು' ಎಂಬ ಪದಕ್ಕೆ 'ಅಡಂಗಾಯ್ತು' ಎಂಬುದಕ್ಕೂ ಹಳೆಯ ಕಿಟಲ್ ಕೋಶದಲ್ಲಿ ಅರ್ಥಕೊಟ್ಟಿಲ್ಲ. ಆದರೆ ಕುಜುಮ್ಮು ಎಂಬುದಕ್ಕೆ ಅರ್ಥಸೂಚಿಸುವಾಗ 'ಅಡಂಗಾಯ್ತು' ಎಂಬುದಕ್ಕೂ ಅರ್ಥಕೊಟ್ಟಿದೆ. ೧೯೭೦ರಲ್ಲಿ ಪ್ರೊ. ಎಂ. ಮರಿಯಪ್ಪ ಭಟ್ಟರು ಸಂಪಾದಿಸಿದ ಕಿಟಲ್ ಕೋಶದಲ್ಲಿ ಅಡಂಗ್ಕು–hiding, a place of hiding or of refuge, a fort ಎಂದು ಅರ್ಥಕೊಟ್ಟು "ಅಡಂಗಮಡಂಗಿ ಬಂದೊ ಡೊಕ್ಕಲಿಗವೆಸರ್ಗೆ ಪೂಣ್ದುದು ಕುಜುಂಬು" ಎಂಬ ಪಂಪಭಾರತದ ದ್ವಿತೀಯಾ ಶ್ವಾಸದ ತೊಂಬತ್ತನೇ ಪದ್ಯಭಾಗವನ್ನು ಪ್ರಯೋಗರೂಪದಲ್ಲಿ ಕೊಟ್ಟಿದೆ.[೧೬] ಡಂಗ ವಾಗಲಿ ದ್ರಂಗವಾಗಲಿ ಕಿಟಲ್ ಕೋಶದಲ್ಲಿಲ್ಲ.

ಡಿ.ಎಲ್.ಎನ್. ಅವರ ಪ್ರಧಾನ ಸಂಪಾದಕತ್ವದಲ್ಲಿ ಸಂಪಾದಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ—

"ಅಡಂಗಾಯ್ತು, ಅಡಂಗಾಯಿತ(ನಾ)–ಕೋಟೆಯ ರಕ್ಷಣೆ ಮಾಡುವವನು ಎಂದು ಅರ್ಥಕೊಟ್ಟು ಹಲವು ಪ್ರಯೋಗಗಳನ್ನೂ ಕೊಟ್ಟಿದೆ.

"ಕುಟುಂಬರೆಂದುಂ ಅಡಂಗಾಯ್ತರೆಂದುಂ ಕೊಟ್ಟವಳರೆ ಕಳಸ (೧೮–೩೫೧)".

"ಕಲ್ಲಾಯ್ತರ ಡಂಗಾಯ್ತರಚ್ಚುಳಾಯ್ತರ ರಭಸಂ" (ಶಮದ. ೧೯೮ ಪ್ರಯೋಗ).

"ನಾಯಕರ ಅಡಪವಳ್ಳರ ಪಡಿಯುಜರ ಡಂಗಾಯ್ತರ ಸಿಡುಗೇರಿಗಳೊಪ್ಪಿದವು. (ಕು. ರಾಸಾಂ–೪–೧೧೧) ;

"ತಮ್ಮ ಡಂಗಾಯ್ತರ್ಗಂ ಪರಿಯಂ ಕೇಳಿಪುದುಂ ಪಡೆವಳರೆಲ್ಲರ್ ದಿಮ್ಮನೆಟ್ಟು (ರಾಮಾಶ್ವ ೧೦೫–೩೦) ; (ಕಶಮಂ. ೪೬, ಕಬಕ್ಕೈ-೩೬ ; ಕರ್ಣನಿ–೨೪ ನೋ).

೧೬. ಕಿಟಲ್‌ಕೋಶ ಭಾಗ ೧—ಸಂ. ಪ್ರೊ. ಎಂ. ಮರಿಯಪ್ಪಭಟ್ಟ ಪು, ೩೨.

ಅಡಂಗಾಯಿತ=ಸಜೀವ ಸೂಬಾಯಿತರು. ಸುತ್ತಿದ ಡಂಗಾಯಿತರುಂ (ಲೀಲಾವ ೭-೬೮ ಪ. ಮೇಲಿನ ಅನೇಕ ಪ್ರಯೋಗಗಳಲ್ಲಿ ಈ ಶಬ್ದವನ್ನು “ಡಂಗಾಯ್ತು” ಎಂದು ಬಿಡಿಸುವುದೂ ಸಾಧ್ಯ. ಇದರ ಮೂಲಪಾಠ “ಡಂಗಾಯ್ತು” ಎಂದೇ ಇದ್ದಿರಬಹುದು. ‘ಡಂಗ’ ‘ಡಂಗಾಯ್ತು’ ಪದಾ [<? ಡಂಗ+ಆಯ್ತು][೧೭] ಎಂದಿದೆ.

ಈ ಮೇಲಿನ ಭಾಗದಿಂದ ಪಂಪಭಾರತದ ಮತ್ತು ಎಲ್ಲ ಪ್ರಯೋಗಗಳ ಪದ ಅಡಂಗಾಯ್ತು, ಅಡಂಗವರ್ ಎಂಬುದಾಗಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೂ ‘ಡಂಗ’ ಎಂಬ ಪದಕ್ಕೆ ಅರ್ಥ ಹೇಳುವಾಗ ಶಬ್ದಮಣಿದರ್ಪಣದ ಪ್ರಯೋಗವನ್ನೂ ಮತ್ತು ಇತರೆ ಪ್ರಯೋಗವನ್ನೂ ಕೊಡದೆ ಬಿಟ್ಟಿದ್ದಾರೆ. ಅಲ್ಲಿ ಕೊಟ್ಟಿರುವ ಪಂಪಭಾರತದ ಪ್ರಯೋಗದಲ್ಲಿ ‘ಡಂಗ’ ಪದ ಬರದೆ ‘ಅಡಂಗವರ್’ ಪದವೆ ಬರುತ್ತದೆ ಎಂಬುದನ್ನು ಮರೆತುಬಿಟ್ಟಂತಿದೆ. ಅಡಂಗಾಯ್ತುದ ಪ್ರಯೋಗಗಳು ಸ್ಪಷ್ಟವಾಗಿ ಅಡಂಗು, ಅಡಂಗಾಯ್ತು, ಅಡಂಗವರ್ ಎಂಬ ರೂಪವನ್ನು ಕೊಡುತ್ತಿದ್ದರೂ ‘ಡಂಗಾಯ್ತು’ ಎಂಬುದರ ಪರವೇ ಒಲವಿದೆ. “ಅಡಂಗಾಯ್ತರಿಂದುಂ ಕೊಟ್ಟವಳಂ ತಮ್ಮ ಡಂಗಾಯ್ತುಗಿಗಂ” ಇವುಗಳನ್ನು ಡಂಗಾಯ್ತು ಎಂದು ಹೇಗೆ ಪದವಿಭಾಗ ಮಾಡಲು ಸಾಧ್ಯ? ಹಾಗಿದ್ದರೆ ಇವನ್ನೆಲ್ಲ ‘ಡಂಗ’ ಪದಕ್ಕೆ ಅರ್ಥ ಹೇಳುವ ಕಡೆ ಪ್ರಯೋಗರೂಪದಲ್ಲಿ ಕೊಡಬಹುದಿತ್ತು. ಪದ್ಯಗಳ ಸಂದರ್ಭ, ಪಾದದಲ್ಲಿನ ಸಮಾಸ, ಕಾವ್ಯದ ಪರಿಸರದಲ್ಲಿ ‘ಡಂಗ’ ಪದ ಬರದೆ ಅಡಂಗವರ್, ಅಡಂಗಾಯ್ತು ಪದವೇ ಸಿದ್ಧಿಸುವುದು ಮತ್ತು ಅದಕ್ಕೆ ಅರ್ಥ ಕೋಟೆ, ಕೋಟೆಕಾಯುವವನು ಎಂದಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ‘ಅಡಂಗವರ್’ ಎಂಬ ಪದ ಬಂದಿದೆ ಎಂಬುದನ್ನು ತಿಳಿದೂ, ಅದಕ್ಕೆ ಅರ್ಥ ಕೋಟೆ ಎಂದು ಗೊತ್ತಿದ್ದರೂ ಸಂದಿಗ್ಧವಾದ, ಖಚಿತ ಅರ್ಥವಿಲ್ಲದ ಅನುಮಾನಾಸ್ಪದವಾದ ‘ಡಂಗ’ ಪದದ ಬಗ್ಗೆ ಒಲವಿರುವುದು ಸೂಕ್ತವಲ್ಲ. ಡಂಗಕ್ಕೆ ಕೋಟೆ, ದುರ್ಗ ಎಂದು ಅರ್ಥಮಾಡಿದರೆ ರಾಜತರಂಗಿಣಿಗೆ, ವಾಹ್ನಡಕನ ಸಂಸ್ಕೃತ ಶಾಸನಕ್ಕೆ ವ್ಯಾಖ್ಯಾನ ಮತ್ತು ಭಾಷಾಂತರ ಮಾಡಿರುವ ವಿದ್ವಾಂಸರ ಗತಿಯೇನು? ಅದನ್ನು ಅರ್ಥಶಾಸ್ತ್ರದ ಪಾರಿಭಾಷಿಕ ಪದವೆಂದು ಕರೆಯೋಣವೆ? ಡಾ. ಎಂ. ಚಿದಾನಂದಮೂರ್ತಿಯವರೂ ‘ಡಂಗ’ ಎಂದರೆ ಸುಂಕದ ಕಟ್ಟೆಗಳು ಎಂದೇ ಭಾವಿಸಿದಂತಿದೆ.” ಮಾಲಿಕರ ಸುಂಕದ ಕಟ್ಟೆಗಳು (ಡಂಗ ದ್ರಂಗ=ಸುಂಕದ ಕಟ್ಟೆ) ರಾಜ್ಯದ ಅಂಚಿನಲ್ಲಿರುವುದರಿಂದ ಅಪಾಯಕಾರಿಯೆಂದೂ ಪಾಂಡವರ ಸ್ನೇಹವನ್ನು ಪಡೆದರೆ ಮಾಲಿಕರ ಹಾವಳಿಯಿಂದ ತಪ್ಪಿಸಿಕೊಳ್ಳಬಹುದೆಂದೂ ಪಂಪನ ಶ್ರೀಕೃಷ್ಣನು ಕೌರವನಿಗೆ ಹೇಳುತ್ತಾನೆ,[೧೮] ಎಂದು ಅರ್ಥಮಾಡಿದ್ದಾರೆ. ಇದು

೧೭. ಕನ್ನಡ ನಿಘಂಟು—ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ ಪು. ೨೨೧.

೧೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದಮೂರ್ತಿ. ಪು. ೨೯೬.

ಸರಿಯಲ್ಲವೆಂದು ಹೇಳದೆ ವಿಧಿಯಿಲ್ಲ. ಪರಿಷತ್ತಿನ ನಿಘಂಟಿನಲ್ಲಿ 'ಅಡಂಗಾಯ್ತು' ಪದಕ್ಕೆ ಮೂಲ 'ಡಂಗ' ಎಂಬ ಅನುಮಾನಾರ್ಥವನ್ನು ಸೇರಿಸಿದ್ದಾರೆ. ಇದೂ ಸರಿಯಲ್ಲ. ಅಡಂಗಾಯ್ತು ಪದವೆ ಸರಿ. ಅಡಂಗಮ್ ಎಂಬುದರಿಂದ ಬಂದದ್ದು ಈ ಪದ. ಭಾಷಾ ಬೆಳವಣಿಗೆಯ ದೃಷ್ಟಿಯಿಂದ Observation post, Watch station, ಸುಂಕದಕಟ್ಟೆ ಮುಂತಾದ ಅರ್ಥಗಳಿಗೆ 'ಡಂಗ' ಪದವನ್ನೂ ಮತ್ತು ಸಂಸ್ಕೃತದ 'ದ್ರಂಗ' ಪದಕ್ಕಿರುವ city, town ಎಂಬ ಅರ್ಥವನ್ನೂ, ಕೋಟೆ, ದುರ್ಗ ಎಂಬ ಅರ್ಥಕ್ಕೆ 'ಅಡಂಗಮ್' ಎಂಬ ಪದವನ್ನೂ ಇಟ್ಟುಕೊಳ್ಳಬಹುದು. ಆಗ ಕನ್ನಡ ಕೋಶಕ್ಕೆ ಒಂದು ಹೊಸ ಪದವನ್ನು ಖಚಿತವಾದ ಅರ್ಥದಲ್ಲಿ ಸೇರಿಸಿಕೊಂಡಂತಾಗುತ್ತದೆ.

ಒಂದು ವಿಷಯವಂತೂ ಸ್ಪಷ್ಟ—ಪಂಪಭಾರತದ ಪದ್ಯಗಳಿಗೆ ಮತ್ತು ಇನ್ನಿತರೆ ಕಡೆಗಳ ಪ್ರಯೋಗಗಳಿಗೆ ಸ್ಪಷ್ಟವಾಗಿ, ಕೂಲಂಕಷವಾಗಿ ವಿಚಾರಮಾಡಿದಾಗ 'ಡಂಗ' ಪದ ಪದವಿಭಾಗದಲ್ಲಿ ಬರುವುದಿಲ್ಲ. ಅದು 'ಅಡಂಗಮ್' ಪದವೆ. ಕನ್ನಡ ನಿಘಂಟು ಅದನ್ನು ಸ್ಪಷ್ಟವಾಗಿ ಗುರುತಿಸಿದೆ. ಪಂಪ ಭಾರತದ ೯-೩೯ರ ಪ್ರಯೋಗವನ್ನು ಇದರಡಿಯಲ್ಲಿ ಕೊಡದೆ 'ಡಂಗ' ಪದಕ್ಕೆ ಪ್ರಯೋಗವಾಗಿ ಕೊಟ್ಟಿರುವುದು ಸರಿಯಲ್ಲ. ಪ್ರೊ. ಎಂ. ಮರಿಯಪ್ಪಭಟ್ಟರ ಸಂಪಾದಕತ್ವದ ಕಿಟಲ್ ಕೋಶದಲ್ಲಿ ಅಡಂಗು ಎಂಬ ಪದವನ್ನು ಕೊಟ್ಟು ಪಂಪಭಾರತದ ಪ್ರಯೋಗವನ್ನೂ ಕೊಟ್ಟಿದ್ದಾರೆ. ಇದಕ್ಕೆ ಸುಂಕದ ಕಟ್ಟೆ, ಅಥವಾ Observation post, Watch-station ಎಂಬ ಅರ್ಥಗಳು ಸರಿಯಲ್ಲ. ಪಂಪಭಾರತದ ಪದ್ಯಕ್ಕಂತು ಈ ಅರ್ಥ ಅನ್ವಯವಾಗುವುದಿಲ್ಲ. ಅಲ್ಲಿರುವ ಪದ ಅಡಂಗಮ್ ಅದರ ಅರ್ಥ ಕೋಟೆ, ದುರ್ಗ ಎಂದಾಗುತ್ತದೆ ಎಂದು ಹೇಳದೆ ವಿಧಿಯಿಲ್ಲ.

ಆಕರ ಗ್ರಂಥಗಳು

೧. ಗ್ರಂಥ ಸಂಪಾದನೆ—ಡಾ. ಡಿ. ಎಲ್. ನರಸಿಂಹಾಚಾರ್

೨. ಪೀಠಿಕೆಗಳು, ಲೇಖನಗಳು—ಡಾ. ಡಿ. ಎಲ್. ನರಸಿಂಹಾಚಾರ್

೩. ಕಿಟೆಲ್‌ಕೋಶ—ಕಿಟೆಲ್

೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದಮೂರ್ತಿ

೫. ಚಂಪ್ರುವಳ್ಳಿ—ಸಂ. ಡಾ. ಎಂ. ವಿ. ಶ್ರೀನಿವಾಸ ಮತ್ತು ಲಕ್ಷ್ಮಣ ತೆಲಗಾವಿ

೬. ಕರ್ಣಾಟಕ ಭಾರತ ಕಥಾಮಂಜರಿ—ಕುಮಾರವ್ಯಾಸ

೭. ಪಂಪಭಾರತ ಭಾಗ-೧ ಮತ್ತು ೨—ಪಂಪ

೮. A Dravidian Etymological Dictionary—Dr. Emenuo and Burrow

೯. ಶಬ್ದಮಣಿದರ್ಪಣಂ—ಕೇಶಿರಾಜ

೧೦. ಪರಿಷತ್ತಿನ ಕನ್ನಡ ನಿಘಂಟು

೧೧. ಕಿಟೆಲ್‌ಕೋಶ ಭಾಗ-೧—ಸಂ. ಪ್ರೊ. ಎಂ. ಮರಿಯಪ್ಪಭಟ್ಟ

ಎಂ. ಎಸ್. ಪುಟ್ಟಣ್ಣ
ಸಂಗ್ರಹ : ಡಾ. ಎಚ್. ಎಸ್. ಸುಜಾತಾ

ಹಾತಿಂ ತಾಯ್

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

೫ನೇ ಸಂಪುಟ

೧ನೇ ಅಧ್ಯಾಯ

ನಿಡಾ ಪರ್ವತಕ್ಕೆ ಪ್ರಯಾಣ

ನಿಡಾ ಎಂಬ ಕಾಡಿಗೆ*........ಹೋಗುತಾ ಪ್ರತಿವೂರಿನಲ್ಲಿಯೂ ಪ್ರತಿಪಟ್ಟಣದಲ್ಲಿಯೂ ದಾರಿಯನ್ನು ಕೇಳಿಕೊಂಡು ಹೋಗುತಾ ಇದ್ದನೆಂದು ಚರಿತ್ರಕರ್ತರು ಹೇಳುವರು. ಹತೀಮನು ಆರು ತಿಂಗಳು (ನಡೆದ) ತರುವಾಯ ಒಂದು ಪಟ್ಟಣದ ಸಮೀಪಕ್ಕೆ ಹೋಗುತಾ ಇರುವಾಗ ಆ ಪುರದ ಬಹಿರ್ಭಾಗದ ಮೈದಾನದಲ್ಲಿ ಆ ಪುರವಾಸಿಗಳೆಲ್ಲಾ ಸೇರಿದ್ದರು. ಆಗ ಹತೀಮನು ತನ್ನ ಮನಸ್ಸಿನಲ್ಲಿ – ಹೀಗೆ ಜನ ಸೇರಲು ಕಾರಣವೇನು ? ನಾನು ಹೋಗಿ ವಿಚಾರಿಸಬೇಕು, ಎಂದುಕೊಂಡನು. ಈ ತಾತ್ಪರ್ಯದಿಂದ ಆ ಜನರ ಸಮೀಪಕ್ಕೆ ಜಾಗ್ರತೆಯಾಗಿ ಹೋಗುತಾ ಇದ್ದನು. ಆ ಜನರು ಇವನನ್ನು ಕಂಡ ಕೂಡಲೆ – ಬಾರೈಯ್ಯಾ, ಪರಸ್ಥಳದವನೆ, ನಿನಗೆ ಸ್ವಾಗತವಾಗಲಿ, ನಿನಗೋಸ್ಕರ ನಾವು ಇಲ್ಲಿ ಕಾದಿದೇವೆ, ಎಂದು ಗಟ್ಟಿಯಾಗಿ ಕೂಗಿದರು.

ಹತೀಮನು ಆ ಗುಂಪಿನೊಳಕ್ಕೆ ಹೋದ ತರುವಾಯ ಅಲ್ಲಿ ದೊಡ್ಡದೊಡ್ಡ ಮೇಜುಗಳು ಹಾಕಿ ಅದರ ಮೇಲೆ ವಿಧವಿಧವಾದ ಆಹಾರಗಳನ್ನೂ ಪೇಯಗಳನ್ನೂ ಇರಿಸಿದ್ದರು. ಅದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಅಲ್ಲಿ ಸಿದ್ಧವಾಗಿದ್ದ ಒಂದು ಚಟ್ಟ ಕಾಣಿಸಿತು. ಮರಣ ಹೊಂದಿದವನ ಸಂಬಂಧಿಗಳು ಸುತ್ತಿಕೊಂಡಿದ್ದರು. ಆ ಗುಂಪಿನವರಲ್ಲಿ ಮುಖಂಡನಾದವನು ಹತೀಮನನ್ನು ಕುರಿತು – "ಅಯ್ಯಾ ವಿದೇಶಿಯೇ, ಇದು ನಮ್ಮ ಪದ್ಧತಿ, ನಮ್ಮ ಜನರಲ್ಲಿ ಬಡವರಾಗಲಿ, ಭಾಗ್ಯವಂತರಾಗಲಿ, ಯಾರಾದರೂ ಸತ್ತರೆ, ಪುರದ ಬಹಿರ್ಭಾಗದಲ್ಲಿ ಹೀಗೆ ನಾವುಗಳು ಸೇರಿ ಒಳ್ಳೇ

* ಹಸ್ತಪ್ರತಿಯಲ್ಲಿ ಈ ಭಾಗ ತ್ರುಟಿತವಾಗಿದೆ.

ಭೋಜನಕ್ಕೆ ಸಿದ್ಧಮಾಡುತ್ತೇವೆ. ಆದರೆ ನಮ್ಮ ಇನ್ನೊಂದು ನಿಬಂಧನೆ ಇದೆ; ಒಬ್ಬ ವಿದೇಶೀಯನು ನಮ್ಮ ಬಳಿಗೆ ಬರುವ ತನಕ ಈ ಆಹಾರವನ್ನು ತಿನ್ನುವುದೂ ಇಲ್ಲ, ಶವವನ್ನು ಹೂಳುವುದೂ ಇಲ್ಲ. ಆದರೆ ಒಬ್ಬ ವಿದೇಶೀಯನಾದ (ಅತಿಥಿಯು) ಬಂದ ಮೇಲೆ ಅವನಿಗೆ ಮೊದಲು ಭೋಜನ ಮಾಡಿಸಿ ತರುವಾಯ ನಾವು ಭುಂಜಿಸುತ್ತೇವೆ. ನಾವು ಇಲ್ಲಿನ ಅತಿಥಿಯನ್ನು ನಿರೀಕ್ಷಿಸಿಕೊಂಡಿರತಕ್ಕದ್ದು ಇಂದಿಗೆ ಏಳನೇ ದಿವಸ, ಪ್ರತಿದಿನವೂ ಅಡಿಗೆ ಸಿದ್ಧವಾಗುವುದು. ಸಾಯಂಕಾಲವಾಗಿ ಅತಿಥಿ ಯಾರೂ ಬಾರದೇ ಇದ್ದರೆ, ನಮ್ಮ ಹೆಂಗಸರು ಮಕ್ಕಳು ಊಟಾ ಮಾಡುವುದಕ್ಕಾಗಿ ಅದನ್ನು ಹಿಂದಕ್ಕೆ ಕಳುಹಿಸಿಬಿಡುತ್ತೇವೆ. ಅವರಿಗೆ ಈ ನಿರ್ಬಂಧವಿಲ್ಲ ನಮ್ಮ ಮಟ್ಟಿಗೆ ಈಗ ಏಳು ದಿವಸದಿಂದಲೂ ನಾವು ರೊಟ್ಟಿಯನ್ನು ತಿಂದೂ ಇಲ್ಲ, ನೀರನ್ನು ಕೂಡಿದೂ ಇಲ್ಲ ಆದ್ದರಿಂದ, ಗಂಭೀರನಾದ ವಿದೇಶಿಯೆ, ನಾವು ಎಷ್ಟು ಸಂತೋಷದಿಂದ ನಿನ್ನನ್ನು ಎದುರುಗೊಳ್ಳುತ್ತೇವೆಯೋ ನೀನೇ ಊಹಿಸಿಕೊಳ್ಳಬಹುದು. ಈಗ ಈ ಶವವನ್ನು ಜಾಗ್ರತೆಯಾಗಿ ಹೂಳಿಬಿಟ್ಟು ನಾವು ಪಾರಣೆ ಮಾಡೋಣ,... ಎಂದು ಹೇಳಿದರು.

ಆಗ ಹರೀವಂಸ - ಒಂದು ತಿಂಗಳವರೆಗೂ ಯಾವ ಅತಿಥಿಯೂ ಬಾರದೇ ಹೋಗುವ ಸಂಭವ ಬಂದರೆ, ಶವ ಏನಾಗಬೇಕು ? ನೀವು ಹೇಗೆ ಬದುಕಿರುತ್ತೀರಿ ? ಎಂದು ಕೇಳಿದನು. ಆ ಮಾತಿಗೆ ಆ ಜನರು - ಅದು ಅಪೂರ್ವ, ಪ್ರಾಯೇಣ ಹಾಗೆ ಇಲ್ಲ. ಒಬ್ಬ ಸ್ಥಳಾಂತರದವರನ್ನು ಕಾಣದೇ ಇರುವುದು ಒಂದು ವಾರಕ್ಕೆ ಹೆಚ್ಚಾಗಿರುವುದೇ ಇಲ್ಲ. ಒಂದು ವೇಳೆ ಯಾರೂ ಬಾರದೇ ಇರುವ ಸಂಭವ ಇದ್ದಲ್ಲಿ ಹದಿನೈದನೇ ದಿವಸ ನಾವು ಭೋಜನ ಮಾಡಿಬಿಡುತ್ತೇವೆ. ಹೀಗೆ ಒಬ್ಬ ಅತಿಥಿ ಬರುವ ತನಕ ಹದಿನೈದು ದಿವಸಕ್ಕೆ ಒಂದು ಸಾರಿ ಈ ಪ್ರಕಾರ ಮಾಡುತ್ತೇವೆ. ಇದು ನಮ್ಮ ಶಾಸ್ತ್ರ. ಸತ್ತವರ ವಿಚಾರದಲ್ಲಿ ಒಂದು ತಿಂಗಳವರೆಗೂ ಹೆಣ ಕೊಳೆಯುವುದಿಲ್ಲ, ಎಂದರು.

ಹರೀವಂ—ಹಾಗಾದರೆ ನಾನು ಕೇಳುತ್ತೇನೆ, ಒಂದು ತಿಂಗಳಾದರೂ ಅಭ್ಯಾಗತರು ಯಾರೂ ಬಾರದೆ ಹೋದಲ್ಲಿ, ಶವವನ್ನು ಏನು ಮಾಡುತ್ತೀರಿ ?

ಜನರು—ಆ ಗಡುವು ಕಳೆಯುವುದರೊಳಗಾಗಿ ಶವವು ನಾತ ಹಿಡಿದರೆ, ಅದನ್ನು ಹೂಳಿಬಿಡುತ್ತೇವೆ. ಹಾಗಾಗುವುದಾದರೆ, ಪುರವಾಸಿಗಳು ಹೆಂಗಸರು ಗಂಡಸರು ಆದಿಯಾಗಿ ಆರು ತಿಂಗಳ ತನಕ ಹಗಲು ಉಪವಾಸವಾಗಿದ್ದು ಸಾಯಂಕಾಲಕ್ಕೆ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳತಕ್ಕ ನಿಬಂಧನೆ ಇದೆ. ಸತ್ತವರ ಪ್ರೇತ ತೃಪ್ತ್ಯರ್ಥವಾಗಿ ನಾವು ಈ (ದೇಹದಂಡನೆಯನ್ನು) ಮಾಡಿಕೊಳ್ಳುತ್ತೇವೆ. ಶವವು ಹೀಗೆ ಕೊಳೆತುಹೋದರೆ ಸತ್ತವರು ಪಾಪಿಷ್ಠರಾಗಿ ಬಾಳಿದರೆಂದು ತಿಳಿಯಲು ಒಂದು ದೃಷ್ಟಾಂತವೆಂದು ಭಾವಿಸಿ, ಸತ್ತವರಿಗೆ (ಸದ್ಗತಿ ಬರಲೆಂದು) ದೇವರನ್ನು ಬೇಡಿಕೊಳ್ಳುತ್ತೇವೆ.

ಹತೀಮ—ಈ ಆರು ತಿಂಗಳ ಉಪವಾಸದ ಗಡವಿನೊಳಗಾಗಿ ಇನ್ನೊಬ್ಬ ಸತ್ತು ಹೋದರೆ, ಏನು ಮಾಡುತಿರಿ ?

ಜನರು—ಒಬ್ಬ ವಿದೇಶಿ ಬರುವ ತನಕ (ಶವವನ್ನು) ಹಾಗೆಯೇ ಇಟ್ಟಿರುತೇವೆ. ಒಂದು ತಿಂಗಳ ಕೊನೆಯಲ್ಲಿಯೂ ಯಾರೂ ಬಾರದಿದ್ದರೆ, ನಾವು ಅಗತ್ಯ ವಾದರೆ ಶವವನ್ನು ಹೂಳಿಬಿಟ್ಟು, ಆರು ತಿಂಗಳು ಮುಗಿಯುವವರೆಗೆ ಸತ್ತ ವನಿಗಾಗಿ ಉಪವಾಸ ಇದ್ದು ದೇವರ ಪ್ರಾರ್ಥನೆ ಮಾಡುತೇವೆ. ಆಮೇಲೆ ಹಬ್ಬದ ಹಾಗೆ ಮಾಡಿ ಒಳ್ಳೇ ಭೋಜನವನ್ನು ಮಾಡಿ ಊರಲ್ಲಿರತಕ್ಕ ಬಡವರಿಗೆ ಬೇಕಾದಷ್ಟು ಧರ್ಮವನ್ನು ಕೊಟ್ಟು ದರಿದ್ರರಾದವರಿಗೆ ದಾನವನ್ನು ಕೊಟ್ಟು ನಾವು ಒಬ್ಬರಿಗೊಬ್ಬರು ಪರಸ್ಪರ ಉಪಕಾರಗಳನ್ನು ಮಾಡುತೇವೆ. ತರುವಾಯ ನಾವು ಮೆರವಣಿಗೆ ಮಾಡಿಕೊಂಡು ಸತ್ತವರ ಸಮಾಧಿ ಬಳಿಗೆ ಹೋಗಿ ಅಲ್ಲಿ ಬಡ ಬಗ್ಗರಿಗೆ ದಾನ ಧರ್ಮಗಳನ್ನು ಕೊಟ್ಟು ನಮ್ಮ ಕೆಲಸಗಳಿಗೆ ಹೋಗುತೇವೆ.

ಇಂಥಾ ವಿಚಿತ್ರವಾದ ಪದ್ಧತಿಯನ್ನು ಕೇಳಿ ಹತೀಮನು ಆಶ್ಚರ್ಯದಿಂದ ಸ್ತಂಭೀಭೂತನಾಗಿ ನಿಂತಿರಲು, ಆ ಜನರು ಶವವನ್ನು ಮನೆಯೊಳಕ್ಕೆ ಕೊಂಡುಹೋಗಿ ಲಕ್ಷಣವಾದ ಒಂದು ಕಾಲುಮಣೆಯ ಮೇಲೆ ಮಲಗಿಸಿ ಅದಕ್ಕೆ ಉತ್ತಮವಾದ ವಾಸನೆಯನ್ನು ಕಟ್ಟಿ ಸುತ್ತ ಸಾಂಬ್ರಾಣಿ ಹೊಗೆಯನ್ನು ಹಾಕಿ ತಾವು ಭೋಜನ ಮಾಡತಕ್ಕ ಅನ್ನವನ್ನು ಹೊತ್ತುಕೊಂಡು ಏಳು ಸಾರಿ ಆ ಕಾಲುಮಣೆಯ ಸುತ್ತಲೂ ಪ್ರದಕ್ಷಿಣ ಮಾಡಿದರು. ತರುವಾಯ ಆಹಾರವನ್ನು ತಂದು ಮೇಜಿನ ಮೇಲಿರಿಸಿದರು. ಆ ಗುಂಪಿಗೆ ಮುಖಂಡನಾದವನು ಹತೀಮನನ್ನು ಕುರಿತು- ಅಯ್ಯಾ ಯೋಗ್ಯನಾದ ದೇಶಾಂತರ ವಾಸಿಯೇ, ನಿನ್ನ ಕೈಯನ್ನು ನೀಡು, ಆಹಾರವನ್ನು ರುಚಿ ನೋಡು. ನೀನು ನಮ್ಮ ಮಾತನ್ನು ನಡೆಸಿಕೊಟ್ಟರೆ, ನಮಗೆ ಬಹಳ ಉಪಕಾರವಾಗುವುದು. ತರುವಾಯ ನಮ್ಮ ಹಸಿವನ್ನು ಅಡಗಿಸಿಕೊಳ್ಳಲು ನಮಗೆ ಸ್ವಾತಂತ್ರ್ಯ ಉಂಟಾಗುವುದು, ಎಂದು ಹೇಳಿದರು. ಅವರು ಕೇಳಿಕೊಂಡ ಪ್ರಕಾರ ಹತೀಮನು ಊಟ ಮಾಡಿದನು. ತರುವಾಯ ಜನರೆಲ್ಲಾ ಭೋಜನ ಮಾಡಿದರು. ಉಳಿದ ಪದಾರ್ಥಗಳನ್ನು ತಮ್ಮ ಹೆಂಗಸರು ಮಕ್ಕಳಿಗಾಗಿ ಊರಿಗೆ ಕಳುಹಿಸಿದರು. ಆಮೇಲೆ ಅವರು ತಮ್ಮ ಮೈಯಲಿಗೆ ಬಟ್ಟೆಯನ್ನು ತೆಗೆದು ಅಗಸನಿಗೆ ಹಾಕಿ ಮಡಿ ಬಟ್ಟೆಯನ್ನು ಹಾಕಿಕೊಂಡು ಹೆಣವನ್ನು ಹೊತ್ತುಕೊಂಡು ಕಾಡಿಗೆ ಹೊರಟರು.

ಅವರು ಹೊರಡುವ ಸಮಯದಲ್ಲಿ ಆ ಮುಖಂಡನು ಹತೀಮನನ್ನು ಸಂಭೋದಿಸಿ—ಧೀರನಾದ ದೇಶಾಂತರವಾಸಿಯೇ, ನೀನು ಕೂಡಲೆ ಹೊರಡಕೂಡದು. ನಮ್ಮೂರಲ್ಲಿ ನೀನು ಕೆಲವು ದಿವಸ ಇರಲು ಇಷ್ಟ ಉಳ್ಳವನಾದರೆ ಬೇಕಾದ ಉಪಚಾರ ವೆಲ್ಲಾ ನಡೆಯುವುದು, ಎಂದು (ಔತನ ಕೊಟ್ಟನು). ಹತೀಮನು ಇದಕ್ಕೆ ಒಪ್ಪಿ ಪುರ ಪ್ರವೇಶ ಮಾಡಿದನು. ಒಳ್ಳೇ ಉಪ್ಪರಿಗೆಯನ್ನು ಇವನಿಗಾಗಿ ಬಿಡಿಸಿದರು. ಉತ್ತಮ ವಾದ ಆಹಾರ ಪೇಯ ಮೊದಲಾದ್ದನ್ನು ಅವನ ಮುಂದೆ ತಂದಿರಿಸಿದರು. ಇಷ್ಟೇ

ಅಲ್ಲ, ಒಳ್ಳೇ ಸುಂದರ ಸ್ತ್ರೀಯರು ತಮ್ಮ ಮೋಹಕರವಾದ ವಿಲಾಸಗಳಿಂದ ಅವನಿಗೆ ಆನಂದ ಉಂಟಾಗುವ ಹಾಗೆ ಮಾಡಿದರು.

ತಾನು ಬಂದಿರತಕ್ಕ ಆ ಪಟ್ಟಣದಲ್ಲಿ ವಿಚಿತ್ರವಾದ ಪದ್ಧತಿಗಳಿರುವುದನ್ನು ಕಂಡು ಹತೀಮು ಆಶ್ಚರ್ಯಪಟ್ಟನು. ಅವನು ಆಹಾರದಲ್ಲಿ ಮಿತವಾಗಿದ್ದುದೂ ಅಲ್ಲದೆ ತನ್ನ ಸಮೀಪದಲ್ಲಿದ್ದ ಸುಂದರಿಯರನ್ನು ಲೇಶವೂ ಗಮನಿಸಲಿಲ್ಲ. ಒಂದು ವಾರದಲ್ಲಿ ಆ ಊರ ಮುಖ್ಯಾಧಿಕಾರಿಯು ಹತೀಮನ ಮಿತವಾದ ಅಭ್ಯಾಸಗಳನ್ನೂ ಅವನ ಸೌಜನ್ಯವನ್ನೂ ಕೇಳಿ, ಅವನನ್ನು ಕರೆಯಿಸಿ ವಾಡಿಕೆಯಾದ ಮರ್ಯಾದೆಯನ್ನು ಮಾಡಿ ಅವನನ್ನು ಕುರಿತು—ಅಯ್ಯಾ ಗಂಭೀರನಾದ ವಿದೇಶಿಯೇ, ನಾನು ನಿನ್ನ ವಿಷಯವಾಗಿ ಕೇಳಿದ ಮಾತುಗಳಿಂದ ನಾನು ವಿಶೇಷವಾಗಿ ಆನಂದಭರಿತನಾದೆ. ನಮ್ಮಲ್ಲಿಯೇ ನೀನು ವಾಸವಾಗಿರಬೇಕು. ನನ್ನ ಮಗಳು ನಿನಗೆ ಪತ್ನಿಯಾಗಿರುತ್ತಾಳೆ, ಎಂದನು. ಹತೀಮನು ಇದಕ್ಕಾಗಿ ಅಧಿಕಾರಿಗೆ ವಂದಿಸಿ, ತನಗೆ ಕಾರ್ಯಗೌರವವಿದೆ, ಸಾವಕಾಶವಾಗಕೂಡದು ಎಂದನು. ಆಗ

ಅಧಿಕಾರಿ—ಕಡೆಗೆ ನೀನು ಹೀಗೆ ಪ್ರಯಾಣ ಮಾಡಿ ಬರಲು ನಿನ್ನ ಉದ್ದೇಶವೇನು? ನಿನ್ನ (ಕೆಲಸಕ್ಕೆ) ಸಹಾಯ ಮಾಡಲು ನನ್ನ ಕೈಲಾದ್ದೆಲ್ಲವನ್ನೂ ಮಾಡುತೇನೆ. ನಿನಗೆ ಅದರಿಂದ ಅನುಕೂಲವಾಗುವುದಾದರೆ ನಿನ್ನ ಸಂಗಡ ಬೇಕಾದರೂ ಬರುತೇನೆ.

ಹತೀಮು—ನಿಜವಾಗಿಯೂ ಸ್ವಾಮಿ, ನಿಮ್ಮ ಸತ್ಸ್ವಭಾವಕ್ಕಾಗಿ ನಿಮಗೆ ನಾನು ಕೃತಜ್ಞನಾಗಿದೇನೆ. ನನಗಿರುವ ಕಷ್ಟಗಳನ್ನು ನೀಗಿಕೊಂಡು ಹೋಗುವುದರಲ್ಲಿ ಯಾರು ನನ್ನ ಸಂಗಡ ಇದ್ದರೂ ನಾನು ವ್ಯಸನ ಪಡುತೇನೆ

ಅಧಿಕಾರಿ—ಕಡೆಗೆ, ನೀನು ಯಾವ ಕೆಲಸಕ್ಕಾಗಿ ಬಂದೆ ಅದನ್ನಾದರೂ ಹೇಳು.

ಹತೀಮು—ನಾನು ಹೋಗಬೇಕಾದ ದಾರಿ ಯಾವುದು, ಅಷ್ಟನ್ನಾದರೂ ಹೇಳಿದರೆ, ನೀನು ಸಂಗಡ ಬಂದ ಹಾಗೆಯೇ ಆಯಿತು.

ಆಗ ಹತೀಮನು ಹಸನ್‌ಬನು ಮತ್ತು ಅವಳ ನಲ್ಲನಾದ ಮುನೀರ್ ಇವರಿಬ್ಬರ ಕಥೆಯನ್ನು ಲೇಶವೂ ಬಿಡದೆ ಹೇಳಿ, ತಾನು ನಾಲ್ಕು ಒಗಟುಗಳನ್ನು ಒಡೆದದ್ದು ಐದನೇ ಪ್ರಶ್ನೆಯಾದ "ನಿಡಾ ಪರ್ವತದ ವಿವರವನ್ನು ಹೇಳುವುದು", ಇದಕ್ಕಾಗಿ ತಾನು ಹುಡುಕಾಡುತಾ ಇರುವುದನ್ನು ವಿವರಿಸಿದನು. ತರುವಾಯ ಕೊನೆಯಲ್ಲಿ ಹತೀಮನು—ನಾನು ಷಹಾಬಾದನ್ನು ಬಿಟ್ಟು ಆರು ತಿಂಗಳಾಯಿತು. ಅನೇಕ ಪಟ್ಟಣಗಳನ್ನು ಸುತ್ತಿದೆ, ನಾನು ಕಂಡ ಪ್ರತಿ ಮನುಷ್ಯನನ್ನು ವಿಚಾರಿಸಿದೆ. ಯಾರೂ ಬೇಕಾದ ಸಂಗತಿಯನ್ನು ಹೇಳಲಿಲ್ಲ. ಸ್ವಾಮಿ ನಿಡಾ ಪರ್ವತ ಎಲ್ಲಿದೆ ಎನ್ನುವುದನ್ನು ನನಗೆ ಹೇಳಿಕೊಟ್ಟಲ್ಲಿ, ತಾವು ಅಲ್ಲಿಗೆ ನನ್ನೊಡನೆ ಬಂದರೆ ಹೇಗೆಯೋ ಹಾಗೆಯೇ ನನಗೆ ಉಪಯೋಗವಾಗುವುದು, ಎಂಬುದಾಗಿ ನುಡಿದನು.

ಅಧಿಕಾರಿಯು ವಯಸ್ಸಾದವನು, ಅನೇಕ ವಿಷಯಗಳನ್ನು ಬಲ್ಲವನು. ಅವನು ವಿದ್ಯಾವಂತರಿಂದ ಕೇಳಿ ಇದ್ದದರಲ್ಲಿ, ನಿಡ ಪರ್ವತವು ಬಹು ಎತ್ತರವಾದ್ದು, ದಕ್ಷಿಣಕ್ಕೆ ಸುಲೇಮತ್ ಕಡೆ ಇರತಕ್ಕದ್ದು ಎಂದು ಆತನಿಗೆ ಜ್ಞಾಪಕವಿತ್ತು. ಹತೀಮನಿಗೆ ಅದನ್ನು ಹೇಳಿ, ಮುಂದಕ್ಕೆ ಅದೇ ಹೆಸರುಳ್ಳ ಒಂದು ಪಟ್ಟಣವು ಆ ಪರ್ವತದ ಸಮೀಪದಲ್ಲಿರುವ ಹಾಗೂ, ಅಲ್ಲಿನ ಜನರಿಗೆ ಮರಣವಿಲ್ಲವೆಂತಲೂ ತಿಳಿಸಿದ್ದೂ ಅಲ್ಲದೆ— ಆ ಪ್ರದೇಶದಲ್ಲಿ ರೋಗವನ್ನೂ ಮರಣವನ್ನೂ ಯಾರೂ ಅರಿಯರು, ಕಂಣಿನಲ್ಲಿ ನೋಡೋಣವೆಂದರೂ ಅಲ್ಲಿ ಸಮಾಧಿ ಇಲ್ಲ, ಎಂಬುದಾಗಿ ನುಡಿದನು. ಇದನ್ನು ಕೇಳಿ ಹತೀಮನಿಗೆ ವಿಶೇಷವಾಗಿ ಸಂತೋಷವಾಗಿ—ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ನಾನು ಅಲ್ಲಿಗೆ ಹೋಗಬೇಕು, ಎಂದನು. ಆಗ ಆ ಮುದುಕನಾದ (ಅಧಿಕಾರಿಯು)—ಯಾರೂ ಸಂಗಡ ಇಲ್ಲದೆ ಒಂಟಿಯಾಗಿ ನೀನು ಅಲ್ಲಿಗೆ ಹೇಗೆ ಹೋಗುತೀಯೇ? ಎಂದು ಕೇಳಲು, ಹತೀಮನು—ದೇವರು ನನಗೆ ದಾರಿ ತೋರಿಸುತಾನೆ, ಎಂಬುದಾಗಿ ಉತ್ತರ ಹೇಳಿದನು.

ಆ ಅಧಿಕಾರಿಯು ಹತೀಮನಿಗೆ ವಿಶೇಷವಾಗಿ ದ್ರವ್ಯವನ್ನೂ ಬೆಲೆಯುಳ್ಳ ಒಡವೆಗಳನ್ನೂ ಕೊಡಲು, ಹತೀಮನು ಅದರಲ್ಲಿ ಸ್ವಲ್ಪವನ್ನು ದಾರಿವೆಚ್ಚಕ್ಕಾಗಿ ಸ್ವೀಕರಿಸಿದನು ಮತ್ತು ಉಳಿದದ್ದನ್ನು ಬಡವರಿಗೆ ಕೊಡಿಸಿ ತಾನು ಮುಂದಕ್ಕೆ ಪ್ರಯಾಣ ಮಾಡಿದನು. ಮೂರು ತಿಂಗಳ ತರುವಾಯ ಒಂದು ದೊಡ್ಡ ಪಟ್ಟಣ ಸಿಕ್ಕಿತು. ಅದರ ಸುತ್ತಲೂ ಸಮಾಧಿಯಾಗಲಿ ಶವಗಳನ್ನು ಹೂಳುವುದಕ್ಕೆ ಮಾಡಿದ ಸ್ಥಳಗಳಾಗಲೀ ಯಾವುದೂ ಇರಲಿಲ್ಲ ಅದರಿಂದ ತನ್ನ ಮಿತ್ರ ಹೇಳಿದ ಸ್ಥಳ ಅದೇಯೆ ಎಂದು ತೃಪ್ತಿ ಪಟ್ಟುಕೊಂಡು ಹತೀಮನು ಆ ಪುರಕ್ಕೆ ಪ್ರವೇಶ ಮಾಡಿದನು. ಆ ವೂರ ಜನರು ಅವನ ಸುತ್ತಲೂ ಸುತ್ತಿಕೊಂಡು—ಹೇಳೈ ವಿದೇಶಿಯೆ, ಎಲ್ಲಿಂದ ಬಂದೆ ಎಲ್ಲಿಗೆ ಹೋಗುತೀಯೆ? ಎಂಬುದಾಗಿ ಪ್ರಶ್ನೆ ಮಾಡಿದರು. ಅದಕ್ಕೆ ಹತೀಮನು—ನಾನು ಷಹಬಾದಿನಿಂದ ಬಂದೆ, ನಿಡ ಪರ್ವತಕ್ಕೆ ಹೋಗುತಾ ಇದೇನೆ, ಎಂದು ಉತ್ತರ ಕೊಟ್ಟನು.

ಜನರು—ಅಯ್ಯಾ ವಿದೇಶಿಯೇ, ಇಂಥಾ ಯೋಚನೆಯನ್ನು ಬಿಟ್ಟು ಬಿಡು. ನಿಡ ಪರ್ವತ ಬಹಳ ದೂರ ಇದೆ. ಅದರ ದಾರಿ ಬಹಳ ಅಪಾಯಕರವಾದ್ದು.

ಹತೀಮ—ನನಗೆ ಅಪಾಯದ ಭಯವಿಲ್ಲ. ನಾನು ದೇವರನ್ನು ನಂಬಿದೇನೆ. ಆತನು ನನ್ನನ್ನು ಕರೆದುಕೊಂಡು ಹೋಗುತಾನೆ. ಜನರು—ಕೊನೆಗೆ ಈ ರಾತ್ರಿಯಾದರೂ ಇಲ್ಲಿ ವಿಶ್ರಮಿಸಿಕೊ, ಬಹಳ ಆಯಾಸ ಪಟ್ಟಿದೀಯ.

ಅದರಂತೆ ಹತೀಮನು ಅವರ ಮಾತನ್ನು ಅಂಗೀಕರಿಸಿ ಆ ರಾತ್ರಿ ಅಲ್ಲಿ ನಿಂತನು.

ಆ ದಿವಸ ಇನ್ನೊಂದು ಕೆಲಸವಾಯಿತು. ಆ ಪುರನಿವಾಸಿಗಳಲ್ಲಿ ಒಬ್ಬನಿಗೆ ದೇಹಾಲಸ್ಯವಾಗಿ ಮಲಗಿಕೊಂಡನು. ತರುವಾಯ ಅವನ ಸಂಬಂಧಿಗಳು ಸೇರಿ ಆ ಕ್ಷಣವೇ ಅವನನ್ನು ಕೊಂದು ಹಾಕಿದರು. ತರುವಾಯ ಅವನ ಮಾಂಸವನ್ನು

ತಿನ್ನುವುದಕ್ಕಾಗಿ ಸಮಭಾಗ ಮಾಡಿಕೊಂಡರು. ಆ ಪಟ್ಟಣಕ್ಕೆ ಹತೀಮು ಪ್ರವೇಶ ಮಾಡಿದ ಕಾಲದಲ್ಲಿ ಮೊದಲು ಅವನೊಡನೆ ಮಾತನಾಡಿದ ಮನುಷ್ಯನು ಸತ್ತು ಹೋದವನ ಸಂಬಂಧಿಯಾದ್ದರಿಂದ, ಅವನ ಭಾಗಕ್ಕೂ ಆ ಮಾಂಸ ಸ್ವಲ್ಪ ಬಂತು. ಆ ದಿನದ ರಾತ್ರಿಯ ತಿಂಡಿಗಾಗಿ ಹತೀಮು ವಾಸವಾಗಿದ್ದ ಮನೆಯಲ್ಲಿ ಆ ಮಾಂಸವನ್ನು ಆ ಮನುಷ್ಯ ಸುಡಿಸಿದನು; ತರುವಾಯ ಒಂದು ಹೂಜಿಯಲ್ಲಿ ನೀರನ್ನೂ ಎರಡು ರೊಟ್ಟಿಯನ್ನೂ ತನ್ನ ಬಂಧುವಿನ ಮಾಂಸವನ್ನೂ ತಂದಿರಿಸಿ ಕೇವಲ ಔತ್ಸುಕ್ಯ ಉಳ್ಳ ಆದರದಿಂದ ಹತೀಮುನನ್ನು ಕುರಿತು ಆ

ಮನುಷ್ಯ—ಅಯ್ಯಾ ವಿದೇಶಿಯೇ, ನಮ್ಮಲ್ಲಿ, ಭೋಜನಕ್ಕೆ ಬರಬೇಕು. ಅಂಥಾ ಭೋಜನವನ್ನು ನಿನ್ನ ಜನ್ಮದಲ್ಲಿ ನೀನು ಯಾವಾಗಲೂ ಮಾಡಿಲ್ಲ.

ಹತೀಮು—ಭೂಮಿಯ ಮೇಲಿರುವ ಧಾನ್ಯಭಕ್ಷಿಗಳಾದ ಪ್ರತಿ ಜಂತುವಿನ ಮಾಂಸವನ್ನು ನಾನು ತಿಂದಿದ್ದೇನೆ ಇಂಥಾ ಮಾಂಸವನ್ನು ನಾನು ಎಂದಿಗೂ ನೋಡಿಲ್ಲವೆಂದು ನೀನು ಊಹಿಸಿಕೊಂಡಿದ್ದೀಯಲ್ಲಾ, ಹಾಗಾದರೆ ಅದು ಯಾವ ಜಂತುವಿನ ಮಾಂಸ?

ಮನುಷ್ಯ—(ಕೇವಲ ಅಟ್ಟಹಾಸದಿಂದ) ನೀನು ಹೇಳತಕ್ಕದ್ದು ನಿಜವಾಗಿರಬಹುದು. ನೀನು ಮನುಷ್ಯರ ಮಾಂಸವನ್ನು ಯಾವಾಗಲಾದರೂ ತಿಂದು ಇರುವುದುಂಟೆ? ಅದೇ ಇದು.

ಈ ಮಾತನ್ನು ಕೇಳಿ ಹತೀಮುನಿಗೆ ಅತ್ಯಂತ ಭಯ ಉಂಟಾಯಿತು; ಆಗ ಅವನು ಆತ್ಮಗತವಾಗಿ–ಇದು ಹಿಂದಕ್ಕೆ ನಾನು ಕೇಳಿದ್ದ ಮನುಷ್ಯ ಭಕ್ಷಕರ ಊರಾಗಿರಬಹುದು, ಪ್ರಾಯೇಣ ಇವರ ಬಳಿಗೆ ವಿದೇಶಿಯರು ಯಾರು ಬಂದರೂ ಅವರನ್ನೂ ಕುಯಿದು ತಿಂದಿರಬಹುದು ಎಂದುಕೊಂಡನು. ಆಗ ಆ ಮನುಷ್ಯನು ಹತೀಮುನಲ್ಲಿ ಅಂತರ್ಗತವಾದ ಅಭಿಪ್ರಾಯವನ್ನು ತಿಳಿದು,

ಮನುಷ್ಯ—ಹವ್ವದ್ದೈ, ಇದು ಮನುಷ್ಯಾಹಾರಿಗಳ ಪಟ್ಟಣ. ನಾವು ಕೆಲವರು ನಿನ್ನ ಮಾಂಸವನ್ನು ತಿನ್ನುವ ಸಮಯ ಬರುತಾ ಇದೆ.

ಹತೀಮು—(ಎಚ್ಚೆತ್ತುಕೊಂಡು) ಸ್ವಾಮಿ, ಸಹಾಯರಹಿತನಾದ ವಿದೇಶಿಯನ್ನು ಕೊಂದು ಅವನನ್ನು ತಿನ್ನುವುದು ಸಾಧ್ಯವೇ? ದೇವರ ಭೀತಿಯು ನಿಮ್ಮ ಕಣ್ಣ ಮುಂದೆ ಇಲ್ಲವೆ?

ಮನುಷ್ಯ—ಅಯ್ಯಾ, ಧೀರನಾದ ಅರಬ್ಬನೆ, ನೀನು ಊಹಿಸಿಕೊಂಡಿರುವ ಮಟ್ಟಿಗೆ ನಾವು ಅಷ್ಟು ಕೆಟ್ಟವರಲ್ಲ, ನಮ್ಮ ಪದ್ಧತಿಗಳನ್ನರಿಯದೆ ನಮ್ಮಲ್ಲಿ ಬಂದ ಮಾರ್ಗಸ್ಥರನ್ನು ನಾವು ಕೊಲ್ಲುವುದಿಲ್ಲ.

ಹತೀಮು—ನನ್ನ ಮುಂದೆ ಇರುವುದು ಮನುಷ್ಯರ ಮಾಂಸವೆಂದು ಈಗ ತಾನೆ ನೀನು ಹೇಳಿದೆ. ಅದು ವಿದೇಶಿಯ ಮಾಂಸವಿರಬಹುದು, ನಿಮ್ಮ ಕೂಟಕ್ಕೆ ಸೇರಿದವನ ಮಾಂಸವಾಗಿರಲಾರದು ಎಂದು ನಾನು ನಿಶ್ಚೈಸಿಕೊಂಡೆ.

ಮನುಷ್ಯ—ಅದಕ್ಕೆ ಪ್ರತಿಯಾದ್ದು ನಮ್ಮೂರಲ್ಲಿ ಒಂದು ಪದ್ಧತಿ ಇದೆ. ಯಾರಿಗಾದರೂ ನಮ್ಮೂರಲ್ಲಿ ಅಲಸಿಕೆಯಾದರೆ, ಅವನ ಸಂಬಂಧಿಗಳು ಸೇರಿಕೊಂಡು ಆ ಮನುಷ್ಯನ ಸಂಕಟವನ್ನು ಪರಿಹಾರ ಮಾಡುವುದಕ್ಕಾಗಿ ಅವನನ್ನು ಕೊಲ್ಲುವರು.

ಹತೀಮ—ನಿಮ್ಮ ಹಾಳು ಕ್ರೂರವಾದ ಪದ್ಧತಿಯನ್ನು ಸುಟ್ಟರು. ಭಗವಂತನು ಈ ಲೋಕದಲ್ಲಿ ತಾನು ಸೃಷ್ಟಿಸಿದವರಿಗೆ ಒಂದೊಂದು ಕಾಲದಲ್ಲಿ ರೋಗವನ್ನು ತರುತಾನೆ; ಅವನ ಚಿತ್ತಕ್ಕೆ ಬಂದಾಗ ಆರೋಗ್ಯವನ್ನು ದಯಪಾಲಿಸುತ್ತಾನೆ, ಎಂಬುದನ್ನು ನೀನು ಕಾಣೆಯ? ರೋಗ ಬಂದವರನ್ನು ನಿಮ್ಮ ಕೈಯ್ಯಾರ ಕೊಲ್ಲುವುದಕ್ಕಿಂತಲೂ ನೀಚವಾದ ಕೆಲಸ ಉಂಟೆ? ಅನೇಕ ಸಾವಿರ ಜನ ನಿರಪರಾಧಿಗಳ ರಕ್ತವನ್ನೂ ಹೀಗೆ ಚೆಲ್ಲಾಡುವ ಕೃತ್ಯವಂ ಮಾನುಷ ಸಂಬಂಧವಾದ ದಯಾರಸವು ಸಹಿಸಲಾರದು. ಮನುಷ್ಯರು ತಮ್ಮ ಕಣ್ಣಿನಲ್ಲಿ ನಿಮ್ಮಂಥವರನ್ನು ನೋಡುವುದೂ ಕೂಡ ಪಾಪಕರವಾದ್ದು.

ಹತೀಮನು ಈ ಪ್ರಕಾರ ಹೇಳಿ ತಟ್ಟನೆ ಎದ್ದು ಕಾಡಿಗೆ ಓಡಿಹೋದನು. ಆ ರಾತ್ರಿಯೆಲ್ಲಾ ಓಡಿದ, ಮಾರನೇ ದಿನ ಸಾಯಂಕಾಲದವರಿಗೂ ಓಡಿದ. ನಿಲ್ಲಲೇ ಇಲ್ಲ. ಆಗ ಆ ಹಾಳ ಪಟ್ಟಣದಿಂದ ಸಾಕಾದಷ್ಟು ದೂರವಾಗಿ ಬಂದೆನೆಂದು ಗೊತ್ತಾಯಿತು. ಆಗ ಸಾವಕಾಶವಾಗಿ ಮೂರನೇ ದಿವಸದವರೆಗೂ ಮೆಲ್ಲಗೆ ನಡೆಯುತಾ ಹೋದನು. ಹಸವಿನ ಬಾಧೆ ಬಹಳವಾಯಿತು. ಸಮಯಾಂತರದಲ್ಲಿ ಯಾವ ಕೃತ್ಯವನ್ನು ಅತ್ಯಂತ ಕ್ರೂರವಾದ್ದೆಂದು ತಿಳಿಯುತಿದ್ದನೋ ಅಂಥಾ ಕೃತ್ಯವನ್ನು ಈ ಸಂದರ್ಭದಿಂದ ಮಾಡಬೇಕಾಗಿ ಬಂತು. ಒಂದು ಜಿಂಕೆ ಮರಿಯನ್ನು ಕೊಂದುಹಾಕಿ, ಚಕ್ಕಮುಕ್ಕಿ ಹೊಡೆದು ಬೆಂಕಿ ಹತ್ತಿಸಿ ಅದರಲ್ಲಿ ಆ ಮಾಂಸವನ್ನು ಬೇಸಿದ. ಈ ಮಧ್ಯೆ ಒಂದು ಸಿಂಹ ಅವನ ಬಳಿಗೆ ಬಂತು. ಹತೀಮನು ಹೆದರಿಕೊಳ್ಳದೆ—ನಿನಗೆ ಹಸಿವಾಗಿದ್ದರೆ, ನನ್ನಲ್ಲಿರುವ ಆಹಾರವೆಲ್ಲಾ ಇದೇಯೇ, ತಿಂದು ತೃಪ್ತನಾಗು, ಎಂದನು.

ಸಿಂಹವು ಆ ಜಿಂಕೆ ಮರಿಯನ್ನೆಲ್ಲಾ ತಿಂದುಬಿಟ್ಟಿತು. ಹತೀಮನು ಬೆಂಕಿಯ ಮೇಲೆ ಹಾಕಿ ಸುಡುತಿದ್ದ ಸ್ವಲ್ಪ ತುಂಡು ಉಳಿಯಿತು. ತರುವಾಯ ಸಮೀಪದಲ್ಲಿದ್ದ ಒಂದು ಕುಂಟೆಯಲ್ಲಿ ನೀರನ್ನು ಕುಡಿದು ಹೊರಟನು. ಹತೀಮನು ಈ ಪ್ರಕಾರ ಹಸಿವನ್ನು ದಾಹವನ್ನು ಕಾಡಿನಲ್ಲಿ ದೊರೆಯುವ ಫಲಗಳಿಂದಲೂ ಆ ಸರೋವರದ ನೀರಿನಿಂದಲೂ ಆರಿಸಿಕೊಂಡು ಮುಂದಕ್ಕೆ ಹೊರಟನು. ಆ ದಿವಸ ಬಹಳ ಹೊತ್ತು ಬೆಂಗಾಡಾದ ಆ ಅರಣ್ಯದಲ್ಲಿ ಹೋದ ಮೇಲೆ, ಅವನಿಗೆ ದಾಹ ಅತ್ಯಂತವಾಯಿತು. ಕಡೆಗೆ ಅಷ್ಟು ದೂರದಲ್ಲಿ ಭೂಮಿಯ ಮೇಲೆನಿಂದ ಸ್ವಲ್ಪ ಎತ್ತರವಾಗಿ ಪರ್ವತದ ಆಕೃತಿ ಕಾಣಿಸಿತು. ಅದನ್ನು ಕಂಡು ಸ್ವಲ್ಪ ಸಂತೋಷವಾಯಿತು. ಪರ್ವತಗಳಲ್ಲಿ ಸಾಧಾರಣವಾಗಿ ದೊರೆಯಬಹುದಾದ ಸಣ್ಣದಾದ ತಂಪಾದ ಹಳ್ಳಗಳಲ್ಲಿ ತನ್ನ ದಾಹ

ವನ್ನು ಬೇಗ ತಿರುಗಿಸಿಕೊಳ್ಳಬಹುದೆಂದು ನಿರೀಕ್ಷಿಸಿಕೊಂಡಿದ್ದನು. ಆದರೆ ಅವನಿಗೆ ಆದ ಆಶಾಭಂಗವು ಬಹು ಸಂಕಟಕರವಾಗಿತ್ತು. ಅಲ್ಲಿ ಕಂಡ ಬೆಟ್ಟವು ಸೈಯಾಂ ಎಂಬ ಪ್ರಚಂಡ ಮಾರುತದಿಂದ ಸ್ಥಳದಿಂದ ಸ್ಥಳಕ್ಕೆ ಚಲಿಸುತ್ತಿರುವ ಮರಳಗುಡ್ಡೆಯಾಗಿತ್ತು. ಒಂಟಿಯಾಗಿ ನಿಂತಿದ್ದ ಒಂದು ಮರದ ಕೆಳಗೆ ಬಸವಳಿದು ಕೂತುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಸಮೀಪದಲ್ಲಿ ಷೇರ್ ಪೀರ್ ಎಂಬ ಒಂದು ನೀರು ಕೋಳಿ ಕಾಣಿಸಿತು. ಅವನ ರಕ್ಕೆ ತೀವ್ರವಾಗಿತ್ತು, ಎದ್ದು ವಿಶೇಷ ಹುಮ್ಮಸ್ಸಿನಿಂದ ಆ ಪಕ್ಷಿಯು ಕಡೆಗೆ ಹೋದನು. ಇವ ಬಂದ ಕೂಡಲೆ ಅದು ಓಡಿಹೋಯಿತು. ಆ ಸ್ಥಳದಲ್ಲಿ ಒಂದು ನಿಧಿ ಸಿಕ್ಕಿತು. ಅದು ನಿರ್ಮಲವಾದ ಉದಕವುಳ್ಳ ಸರೋವರ. ಆಗ ನೆಲದ ಮೇಲೆ ಉದ್ದಕ್ಕೆ ನಮಸ್ಕಾರ ಮಾಡಿ ಆ ದಯಾಸಾಗರನಿಗೆ ವಂದಿಸಿ ಆ ಸರೋವರದಲ್ಲಿ ದಾಹಶಮನ ಮಾಡಿಕೊಂಡು ಮುಂದಕ್ಕೆ ಹೊರಟನು.

ಆ ಮರಳ ಕಾಡಿನಲ್ಲಿ ಬಹಳ ದೂರ ಹೋದಮೇಲೆ ಮನುಷ್ಯರ ವಾಸಸ್ಥಾನದ ಗುರುತುಗಳು ಕಂಡವು. ಸಾಯಂಕಾಲದ ಸಮಯದಲ್ಲಿ ಚೆನ್ನಾಗಿ ಸಾಗುವಳಿ ಮಾಡಿದ ಪ್ರದೇಶ ಸಿಕ್ಕಿತು. ಆ ಕಡೆ ಒಂದು ಹೊಲದಲ್ಲಿ ದೊಡ್ಡದಾಗಿ ಬೆಂಕಿ ಉರಿಯುತ್ತಿತ್ತು. ಅದರ ಸುತ್ತಲೂ ಜನರು ಗುಂಪು ಸೇರಿಕೊಂಡಿದ್ದರು. ಹಶೀಮನು ಆಗ ಎಲ್ಲರಿಗೂ ಸಂತೋಷ ಕಾಲವಿರಬಹುದೆಂದು ಊಹಿಸಿಕೊಂಡು ಆ ಜನರ ಸಮೀಪಕ್ಕೆ ಹೋಗಿ ಅವರೊಡನೆ ಹೇಳಿದ್ದೇನೆಂದರೆ;

ಹಶೀಮ—ಅಯ್ಯಾ ಮಿತ್ರರ, ಹೇಳಿ, ಇದು ಯಾವ ದೇಶ? ನಿಮ್ಮ ತಲೆಯ ಮೇಲಿನ ಕೂದಲನ್ನೂ ಮುಖದ ಮೇಲಿನ ಕೂದಲನ್ನೂ ಯಾಕೆ ಒಂದು ವಿಜಾತಿಯಾಗಿ ಕತ್ತರಿಸಿಕೊಳ್ಳುತೀರಿ? ಹೀಗೆ ಬೆಂಕಿಯ ಸುತ್ತಲೂ ಸುತ್ತಿಕೊಂಡು ಏನು ಮಾಡುತೀರಿ? ಇಷ್ಟೊಂದು ರಾಶಿ ಒಣಗಿದ ಸೌದೆ ಯಾತಕ್ಕೆ?

ಗುಂಪಿನವರು—ಇದು ನಮ್ಮ ಸಂಬಂಧಿಯಾದ ಒಬ್ಬ ಗಂಡಸಿನ ಚಿತೆ. ಅವನ ಶರೀರವು ಶುದ್ಧವಾದ ಯಜ್ಞೇಶ್ವರನಲ್ಲಿ ಉರಿದು ಹೋಗುತ್ತಾ ಇದೆ. ಅವನ ಸಂಗಡ ಆತನ ಪತ್ನಿಯೂ ಅಗ್ನಿಪ್ರವೇಶವನ್ನು ಮಾಡಿಬಿಟ್ಟು ತಾನಾಗಿ ಉರಿದು ಹೋದಳು.

ಹಶೀಮ—ಹಾಗಾದರೆ ನಿಮ್ಮಲ್ಲಿ ಹೆಣವನ್ನು ಹೂಳುವುದಿಲ್ಲವೆ? ದಿಕ್ಕಿಲ್ಲದ ಆ ಹೆಂಗಸನ್ನು ಯಾಕೆ ಬೆಂಕಿಗೆ ಹಾಕಿದಿರಿ? ಖಂಡಿತವಾಗಿಯೂ ನಿರಪರಾಧಿಗಳ ಮರಣಕ್ಕೆ ನೀವು ಉತ್ತರ ಹೇಳಬೇಕು.

ಗುಂಪಿನವರು—ಈ ದೇಶಕ್ಕೆ ನೀನು ಹೊಸಬನಾಗಿ ಕಾಣುತೀಯ. ಇದು ಹಿಂದುಸ್ಥಾನ್ ಚಕ್ರಾಧಿಪತ್ಯ. ಹಿಂದುಗಳಲ್ಲಿ ಗಂಡನ ಚಿತೆಗೆ ಹೆಂಡತಿಯು ಜೀವಸಹಿತ ಬಿದ್ದು ದಹನವಾಗಿ ಹೋಗತಕ್ಕ ಪದ್ಧತಿ ಇದೆ. ಅವಳನ್ನು ಬಲವಾಗಿ ಬೆಂಕಿಗೆ ಹಾಕಲಿಲ್ಲ. ಅವಳು ತಾನಾಗಿ ಬಿದ್ದು ದಹನ ಮಾಡಿಕೊಂಡಳು.

ಹತೀವು—ಸತ್ತವರ ಸಂಗಡ ಬದುಕಿರುವವರನ್ನು ಸುಡುವುದು ನಿಜವಾಗಿಯೂ ಮಹಾ ಕೆಟ್ಟ ಪದ್ಧತಿ. ಹತೀವುನು ಹೀಗೆ ಹೇಳಿ ಹಿಂದುಗಳು ಮನುಷ್ಯಾಹಾರಿಗಳಿಗಿಂತಲೂ ಉತ್ತಮವಲ್ಲವೆಂದು ತಿಳಿದು ತನ್ನ ದಾರಿ ಹಿಡಿದುಕೊಂಡು ಹೊರಟು ಹೋದನು.

ಹತೀವುನು ರಾತ್ರಿಯಲ್ಲಾ ನಡೆದು ಮೂರನೇ ದಿವಸ ಮಧ್ಯಾಹ್ನದ ಸಮಯದಲ್ಲಿ ಒಂದು ದೊಡ್ಡ ಗ್ರಾಮಕ್ಕೆ ಬಂದನು. ಕ್ಷುತ್ಪಿಪಾಸಗಳಿಂದ ಆಯಾಸಪಟ್ಟು ಬಳಲಿ, ಆ ಹಳ್ಳಿಯಲ್ಲಿ ಊಟಮಾಡಿ ಆಯಾಸ ಪರಿಹಾರಮಾಡಿಕೊಳ್ಳುವುದಕ್ಕಾಗಿ ಒಬ್ಬರ ಮನೆಯೊಳಕ್ಕೆ ಹೋಗಿ ಮನೆಯ ಯಜಮಾನನನ್ನು ಕುಡಿಯುವುದಕ್ಕೆ ನೀರನ್ನು ಕೊಡಿ ಎಂದು ಕೇಳಿದನು. ಆ ಮನುಷ್ಯನು ಕೂಡಲೆ ಒಂದು ಪಾತ್ರೆಯಲ್ಲಿ ಹಾಲನ್ನೂ ಒಂದು ಪಾತ್ರೆಯಲ್ಲಿ ಮಜ್ಜಿಗೆಯನ್ನು ತಂದಿರಿಸಿ–ಅಯ್ಯಾ ಅತಿಥಿಯೆ, ಇವೆರಡೂ ಕುಡಿಯುವ ಪದಾರ್ಥ, ತಂಣಗೂ ಆಯಾಸಪರಿಹಾರವಾಗಿಯೂ ಆಗುವುದು. ನಿನಗೆ ಯಾವುದು ಬೇಕೋ ಅದನ್ನು ತೆಗೆದುಕೊಂಡು ನಿನ್ನ ದಾಹವನ್ನು ಶಮನ ಮಾಡಿಕೊ. ಸೆಕೆಯಿಂದಲೂ ಆಯಾಸದಿಂದಲೂ ನಿನ್ನ ತುಟಿಯೆಲ್ಲಾ ಒಣಗಿ ಹೋಗಿದೆ, ಎಂದು ಅತ್ಯಂತ ಆದರದಿಂದ ಹೇಳಿದನು. ಹತೀವುನು ಮಜ್ಜಿಗೆಯನ್ನು ಪೂರ್ತಿಯಾಗಿ ಕುಡಿದು ತರುವಾಯ ಹಾಲನ್ನು ಕುಡಿಯುವ ಸಮಯದಲ್ಲಿ ಆ ಗೃಹಸ್ಥನು–ಅಯ್ಯಾ ಅತಿಥಿ, ನಿನಗೆ ಕುಡಿಯುವುದಕ್ಕೆ ಹೇಗೆ ಬೇಕೋ ಹಾಗೆಯೇ ಆಹಾರವೂ ಬೇಕಾಗಿದೆ. ನನಗೆ ಅನ್ನ ಮಾಡಿ ಇರಿಸಿದಾರೆ, ಅದರಲ್ಲಿ ಸ್ವಲ್ಪ ತರುತೇನೆ. ಹಾಲಹಾಕಿಕೊಂಡು ಭೋಜನ ಮಾಡು, ಎಂದು ಹೇಳಿದನು.

ಆಗ ಹತೀವುನು ದಯಾಳುವಾದ ಆ ಗೃಹಸ್ಥನನ್ನು ಅತ್ಯಂತ ವಿನಯದಿಂದ ವಂದಿಸಿ, ಹಿಂದುಗಳ ಮನೆಯಲ್ಲಿ ತನಗೆ ತೋರಿಸಿದಂಥಾ ಡಂಭವಿಲ್ಲದ ದಯವನ್ನೂ ನಿಜವಾದ ಆದರವನ್ನೂ ಕಂಡು ತನ್ನ ಮನಸ್ಸಿನಲ್ಲಿ ಮೆಚ್ಚಿ ಆಶ್ಚರ್ಯಪಡುತಾ ಇರಲು, ಆ ಮನೆಯ ಯಜಮಾನನು ಅನ್ನವನ್ನು ತಂದು ಹತೀವುನಿಗೆ ಬಡಿಸಿದನು. ಅವನು ಅದನ್ನು ಹೊಟ್ಟೆ ತುಂಬ ಉಂಡು ಮಲಗಿಕೊಂಡನು. ಅವನಿಗೆ ಮಾರ್ಗಾಯಾಸ ಬಹಳವಾಗಿದ್ದದರಿಂದ ಬೆಳಗಾಗುವ ತನಕ ಎಚ್ಚರವಿಲ್ಲದೆ ನಿದ್ರೆ ಬಂತು. ಬೆಳಗಾದ ಮೇಲೆ ಮನೇ ಯಜಮಾನನಾದ ಆ ಹಿಂದುವು–ಅಯ್ಯಾ ವಿದೇಶಾಂತರದ ಪುರುಷನೆ, ಬೆಳಗಿನ ಊಟ ಸಿದ್ಧವಾಗಿದೆ. ಊಟಕ್ಕಾಗಿ ನಾನು ನಿನಗೋಸ್ಕರ ಕಾದಿದೇನೆ. ಮುಂದಕ್ಕೆ ಪ್ರಯಾಣ ಮಾಡಲು ನಿನಗೆ ಬಹಳ ಆಯಾಸವಾಗಿದೆ. ಚೆನ್ನಾಗಿ ನಿನ್ನ ಅಲಸಿಗೆ ಪರಿಹಾರವಾಗಿ ಶಕ್ತಿ ಬರುವ ತನಕ ಎರಡು ಮೂರು ದಿವಸ ಇಲ್ಲಿಯೇ ಇದ್ದು ವಿಶ್ರಮಿಸಿಕೊ, ಎಂದು ಹೇಳಿದನು.

ಹತೀವುನು ಎದ್ದು ಗೃಹಸ್ಥನ ಮನೆಯಲ್ಲಿ ಭೋಜನವನ್ನು ಮಾಡಿ

ಹೇಳಿದ್ದೇನೆಂದರೆ

ಹಶೀಮ.—ಅಯ್ಯಾ ಧರ್ಮಾತ್ಮನಾದ ಹಿಂದುವೆ (ಗೃಹಸ್ಥನೆ), ನೀನು ಮಾಡಿದ ಲೋಕೋತ್ತರವಾದ ಉಪಕಾರಕ್ಕೆ ಪರದೇಶಿಗೆ ನೀನು ತೋರಿದ ದಯಕ್ಕೆ ದೇವರು ಖಂಡಿತವಾಗಿಯೂ ನಿನಗೆ ಒಳ್ಳೇದನ್ನು ಮಾಡುತ್ತಾನೆ.

ಹಿಂದೂ ಗೃಹಸ್ಥ—ಧೀರನಾದ ಅರಬ್ಬರವನೆ. ನಾನು ನಿನಗಾಗಿ ಅಲ್ಪಸ್ವಲ್ಪ ಕೆಲಸ ಮಾಡಿದೆ. ನೀನು ಮೂರು ಹಗಲು ಮೂರು ರಾತ್ರಿ ನನ್ನ ಮನೆಯಲ್ಲಿದ್ದ ಹೊರತು ಅತಿಥಿ ಸತ್ಕಾರವಾಯಿತೆಂದು ನಾನು ಎಣಿಸುವುದಿಲ್ಲ.

ಹಶೀಮು—ಇದು ನಿನ್ನ ಸಂತೋಷವಾಗಿದ್ದರೆ, ನಾನು ನನ್ನ ಮನಸಾಕ್ಷಿಯಾಗಿಯೂ ನೀನು ಕೊಡುವ ಔತನಕ್ಕೆ ಒಪ್ಪಿದೆ.

ತರುವಾಯ ಆ ಹಿಂದೂ ಗೃಹಸ್ಥನು ಹಶೀಮುನಿಗೆ ತನ್ನ ದೇಶದ ವಿಚಾರವನ್ನು ಹೇಳಿ ಸಂತೋಷಪಡಿಸಿ, ಎರಡನೇ ಸಾರಿ ಊಟಕ್ಕೆ ಬಗೆಬಗೇ ಪದಾರ್ಥಗಳನ್ನು ರುಚಿರುಚಿಯಾಗಿ ಬಡಿಸಿದನು. ಅವನ ನಡತೆಯನ್ನೂ ಪ್ರತ್ಯಪೇಕ್ಷೆ ಇಲ್ಲದ ದಯವನ್ನೂ ಮತ್ತು ತನಗೆ ಬಡಿಸಿದಂಥಾ ಸಾಧಾರಣವಾದ ಮತ್ತು ಆರೋಗ್ಯಕರವಾದ ಆಹಾರವನ್ನೂ ಕಂಡುಕೊಂಡು ಹಶೀಮು ಆನಂದಪರವಶನಾಗಿ "ಖಂಡಿತವಾಗಿಯೂ ದೇಶಗಳಲ್ಲೆಲ್ಲಾ ಹಿಂದುಸ್ಥಾನವೇ ಸ್ವರ್ಗ" ಎಂದು ಹೆಚ್ಚಾದ ಸಂತೋಷದಿಂದ ಕೂಗಿದನು. ಆಗ ಹಶೀಮುನು ತಾನೂ ಸಂಭಾಷಣೆಯನ್ನು ಮಾಡಿದ ಮೇಲೆ, ಆ ಗೃಹಸ್ಥನನ್ನು ಕುರಿತು ಹಿಂದುಗಳ ನಡತೆ* ಅನ್ಯಥಾ ಸರ್ವೋತ್ತಮವಾಗಿದ್ದರೂ ಹಿಂದುಗಳಲ್ಲಿ ಒಂದು ಕಳಂಕವೇನೋ ಇದೆ ಎಂದು ಹೇಳಿ

ಹಶೀಮು—ಸ್ವಾಮಿ ಕ್ಷಮಿಸಬೇಕು, ನಿಮ್ಮ ದೇಶದಲ್ಲಿ ಒಂದು ಪದ್ಧತಿ ಬಹು ಕೆಟ್ಟದಾಗಿದೆ. ಸತ್ತ ಗಂಡನೊಡನೆ ಬದುಕಿರುವ ಹೆಂಡತಿ ಸಹಗಮನಮಾಡತಕ್ಕದ್ದು. ಸತ್ತವರು ಯಾವ ಮಣ್ಣಿನಿಂದ ಆದರೋ ಆ ಮಣ್ಣಿಗೆ ಅವರನ್ನು ಸೇರಿಸುವದನ್ನು ನಾನು ನೋಡಿದ ಅಭ್ಯಾಸವಿದೆ. ಬದುಕಿರುವವರನ್ನು ಬಲಿಕೊಡುವುದು ಕಂಡರೆ ಮನಸ್ಸೆಲ್ಲಾ ಕಲಕಿಕೊಂಡು ಬರುವುದು.

ಗೃಹಸ್ಥ—ಗಂಭೀರನಾದ ಅರಬ್ಬರವನೆ, ಪರದೇಶದವರು ಇಂಥಾ ಅಭಿಪ್ರಾಯ ಪಡುತ್ತಾರೆ. ಆದರೆ ಗಂಡನಿಗೂ ಹೆಂಡತಿಗೂ ಇರುವ ಪ್ರೀತಿ ಎಂಬ ಅತ್ಯಂತ ಬಲವತ್ತರವಾದ ಕಟ್ಟನ್ನು ಕುರಿತು ವಿಚಾರಮಾಡಿದರೆ, ಗಂಡಸತ್ತ ಮೇಲೆ ಹೆಂಡತಿಯು ಜನ್ಮಕ್ಕೆ ಆಧಾರವಿಲ್ಲವೆಂದು ನೀನು ಸುಲಭವಾಗಿ ಊಹಿಸಬಹುದು. ಅಂಥಾ ಬಲವಾದ ಸಂಬಂಧಕ್ಕೆ ವಿಚ್ಛಿತ್ತಿ ಬಂತು ಎನ್ನುವುದು ಆಶ್ಚರ್ಯಕರವಾದ್ದಲ್ಲವೇ? ಚಿತೆಯ ಮೇಲೆ ಅವಳು ಬಿದ್ದು ಉರಿದುಹೋಗಬೇಕೆಂದು ನಾವು ಹೆಂಗಸನ್ನು ಬಲವಂತ ಮಾಡುತ್ತೇವೆಂಬದಾಗಿ ಊಹಿಸಕೂಡದು. ಅವಳು ತನ್ನ ಸ್ವಂತ ಇಷ್ಟದಿಂದ ಮನಸಾಕ್ಷಿಯಾಗಿ ಸಂತೋಷದಿಂದ ತನಗೆ

---

* ನಡತೆ—ವಿನಯಯುಕ್ತವಾದ ಸುಗುಣ

ಈ ಪ್ರಪಂಚದಲ್ಲಿ ಆಗಬೇಕಾದ್ದು ಇನ್ನೇನೂ ಇಲ್ಲವೆಂದು ತಿಳಿದು ತನ್ನ ಪತಿಯ ಹಿಂದೆ ತಾನೂ ಹೋಗುತಾಳೆ. ಅಯ್ಯಾ ನೀನು ವಿದೇಶಿ. ನಮ್ಮ ಸಂಗಡ ಕೆಲವು ದಿವಸ ವಾಸ ಮಾಡಿಕೊಂಡಿದ್ದರೆ ಈ ವಿಚಾರವು ನಿನಗೆ ಚೆನ್ನಾಗಿ ಗೊತ್ತಾಗುವುದು.

ಹೀಗೆ ಇವರಿವರಿಗೆ ಸಂಭಾಷಣ ಜರುಗಿದ ತರುವಾಯ ಮಾರುದಿವಸವೇ ಒಂದು ಸಂಗತಿ ನಡೆಯಿತು. ಆ ವೂರ ಹೆಗ್ಗಡೆಯು ಕೆಲವು ದಿವಸ ಆಲಸ್ಯವಾಗಿ ಮಲಗಿದ್ದು ಆ ದಿವಸ ಬೆಳಿಗ್ಗೆ ತೀರಿಹೋದನು. ಆತನಿಗೆ ನಾಲ್ಕುಜನ ಹೆಂಡಿರು ಇದ್ದರು. ಒಬ್ಬಳಿಗೆ ಇಬ್ಬರು ಗಂಡುಮಕ್ಕಳಿದ್ದರು. ಇನ್ನೊಬ್ಬಳಿಗೆ ಮೂರುಜನ ಹೆಣ್ಣು ಮಕ್ಕಳಿದ್ದರು. ಇನ್ನಿಬ್ಬರಿಗೆ ಮಕ್ಕಳೇ ಇರಲಿಲ್ಲ. ಸಾಯಂಕಾಲದ ಸಮಯಕ್ಕೆ ಎಲ್ಲವನ್ನೂ ಸಿದ್ಧಮಾಡಿಕೊಂಡು ಶವವನ್ನು ಸಾಗಿಸಿಕೊಂಡು ಹೋದರು. ಅವನ ನಾಲ್ಕು ಜನ ಹೆಂಡಿರೂ ಒಳ್ಳೇಸೀರೆಯನ್ನುಟ್ಟು ಒಡವೆಗಳೆಲ್ಲವನ್ನೂ ಇಟ್ಟುಕೊಂಡು ಸುವಾಸನೆಯಾದ ಪುಷ್ಪಮಾಲೆಯನ್ನು ಕತ್ತಿಗೆ ಹಾಕಿಕೊಂಡು ಒಳ್ಳೇ ಫಲಗಳನ್ನು ಆ ಮಾಲೆಗೆ ಕಟ್ಟಿ, ಕೈಯಲ್ಲಿ ವೀಳಯವನ್ನು ಹಿಡಿದು ಅದನ್ನು ಹಾಕಿಕೊಳ್ಳುತಾ ಅಗಿಯುತಾ ಗಂಡನ ಹಿಂದೆ ಹೊರಟರು.

ಆ ಹೆಂಗಸರ ಸಂಬಂಧಿಗಳಲ್ಲಾ ಅವರ ಸುತ್ತಲೂ ಸುತ್ತಿಕೊಂಡು ಅಳುತಾ ಪ್ರಾಣತ್ಯಾಗ ಮಾಡಿಕೊಳ್ಳಬೇಡಿ ಎಂದು ಕೇಳಿಕೊಳ್ಳುತಿದ್ದರು. ಆದರೆ ಆ ಸ್ತ್ರೀಯರು ಅದಕ್ಕೆ ಒಪ್ಪಲಿಲ್ಲ. ಯಾವ ಮಾತನ್ನೂ ಕಿವಿಯ ಮೇಲೆಯೇ ಹಾಕಿಕೊಳ್ಳುತಿರಲಿಲ್ಲ. ಇದೆಲ್ಲವನ್ನೂ ಹತೀಮು ನೋಡಿ, ಅನುಭವದಿಂದ ನಿಷ್ಕರ್ಷೆ ಮಾಡಿಕೊಳ್ಳಬೇಕೆಂದು ಆ ಹೆಂಗಸರ ಸಮೀಪದಲ್ಲಿ ಹೋಗಿ ನಿಂತು ಅವರನ್ನು ಕುರಿತು—ತಾಯಿ ಇದೇನು ಹುಚ್ಚು? ಬುದ್ಧಿಗೆ ವಿರೋಧವಾಗಿ ದಯಾರಸಕ್ಕೆ ವಿಪರೀತವಾಗಿ ಮನಸ್ಸೆಲ್ಲಾ ಕಲಕಿ ಹೋಗತಕ್ಕ ಈ ಹಾಳ ಪದ್ಧತಿಯನ್ನು ಅನುಸರಿಸಿ, ಮಕ್ಕಳನ್ನು ಬಿಟ್ಟು ನೀವು ಪ್ರಾಣತ್ಯಾಗವನ್ನು ಮಾಡುವುದು ಯುಕ್ತವೆ? ಎಂದನು.

ಆ ಸ್ತ್ರೀಯರಲ್ಲಿ ಒಬ್ಬಾಕೆಯು ಅಪ್ಸರಸ್ತ್ರೀಯರ ನಗುವೋ ಎನ್ನುವ ಹಾಗೆ ಮಂದಹಾಸದಿಂದ ಹತೀಮನನ್ನು ಕುರಿತು.

"ಅಯ್ಯಾ ಅರಬ್ಬರವನೆ, ನಮ್ಮ ದೇಶದ ಪದ್ಧತಿಯನ್ನು ನೀನು ಅರಿಯದೆಯಾದ ಕಾರಣ ನಿನ್ನ ಮಾತನ್ನು ನಾನು ಕ್ಷಮಿಸುತೇನೆ. ಹಾಗಲ್ಲದಿದ್ದರೆ ಈ ಪ್ರಪಂಚಕ್ಕೇ ಸತ್ತವರಾಗಿರುವ ನಮ್ಮಲ್ಲಿ ಇಂಥಾ ಮಾತನಾಡಲು ಧೈರ್ಯಮಾಡಿದ್ದು ವರಟು ಮಾತಾಗಿದೆ. ಕ್ಷಮೆಗೆ ಅರ್ಹವಾದ್ದಲ್ಲ. ನಮ್ಮ ಗಂಡನ ಸಂಗಡ ನಾವು ಸ್ವರ್ಗಕ್ಕೆ ಹೋಗುತೇವೆ. ನಾವು ಬದುಕಿರುವಾಗ ಒಟ್ಟಿಗೆ ಸೌಖ್ಯವಾಗಿ ಬಾಳಿಕೊಂಡಿದ್ದೆವು. ಮರಣವು ನಮ್ಮನ್ನು ಯಾಕೆ ಅಗಲಿಸಬೇಕು? ಅಂಥಾ ಪುರುಷನನ್ನು ದೇವರು ಕರೆದುಕೊಂಡ ಮೇಲೆ ನಮ್ಮನ್ನು ಈ ಪ್ರಪಂಚದಲ್ಲಿರಿಸಿಕೊಂಡು ಕೊರಗಿಸುವುದು ಮಾತ್ರ ದಯಾರಸವೊ? ನಮ್ಮ ಪ್ರೀತಿಗೆ ಪಾತ್ರನಾದ ಒಬ್ಬ ಪತಿಯನ್ನು ಮರೆತು

ಬೇರೊಬ್ಬನನ್ನು ಮಾಡುವ ಹಾಗೆ ದುರ್ಬುದ್ಧಿಯನ್ನು ಹುಟ್ಟಿಸುವ ಪಾಪಶೇಷದ ಮೋಸವನ್ನು ದೇವರು ಹಾಳು ಮಾಡಲಿ ನಮ್ಮ ಪತಿ ಇಲ್ಲದ ನಮ್ಮ ಮುಂದಿನ ಬಾಳು ನರಕಯಾತನೆಗಿಂತಲೂ ಕೇಡಾದ್ದು. ನಾವು ವಿಶೇಷವಾಗಿ ಪ್ರೀತಿಸತಕ್ಕಂಥಾ ಪದಾರ್ಥದ ಸಂಗಡ ನಾವು ಯಾಕೆ ಹೋಗಬಾರದು. ನಮ್ಮಿಬ್ಬರ ಪ್ರಾಣವೂ ಒಟ್ಟಿಗೆ ಸೇರಿ ಲೋಕಾಂತರವನ್ನು ಹೊಂದುವಾಗ ನಮ್ಮಿಬ್ಬರ ದೇಹದ ಬೂದಿಯೂ ಒಟ್ಟಿಗೆ ಸೇರುವಂತೆ, ನಮ್ಮಿಬ್ಬರಿಗೂ ಒಂದೇ ಚಿತೆಯ ಮೇಲೆ ಯಾಕೆ ದಹನವಾಗ ಕೂಡದು ?

ಹಶೀಮನು ಎಷ್ಟು ಹೇಳಿಕೊಂಡಾಗ್ಯೂ ಕೇಳದೆ ಅಲಕ್ಷ್ಯದಿಂದ ಆ ಸ್ತ್ರೀಯು ಈ ಪ್ರಕಾರ ಮಾತನಾಡಿದಳು. ಚಿತೆಯು ಸಿದ್ಧವಾಯಿತು. ಆ ನಾಲ್ಕುಜನ ಸ್ತ್ರೀಯರೂ ವಿಶೇಷವಾದ ಔತ್ಸುಕ್ಯದಿಂದ ತಮ್ಮ ಒಡವೆಗಳನ್ನು ತೆಗೆದು ಸುತ್ತಲೂ ಇದ್ದ ಸಂಬಂಧಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದನ್ನು ಕೊಟ್ಟು ಚಿತೆಯನ್ನು ಏರಿ ಗಂಡನ ಸುತ್ತಲೂ ನಿಂತುಕೊಂಡರು ಇಬ್ಬರು ಹೆಂಡಿರು ಒಬ್ಬೊಬ್ಬಳು ಒಂದೊಂದು ಕೈನಂತೆ ಹಿಡಿದುಕೊಂಡರು. ಉಳಿದ ಇಬ್ಬರು ಒಂದೊಂದು ಕಾಲಿನಂತೆ ಹಿಡಿದು ಕೊಂಡರು. ಈಪ್ರಕಾರ ಕೂತುಕೊಂಡು ಕಡೇ ಸಾರಿ ಸುತ್ತಲೂ ನೋಡಿ ಅಳುತಾ ಇರುವ ತಮ್ಮ ಬಂಧುಗಳನ್ನು ಕಂಡು ಮಂದಸ್ಮಿತರಾದರು. ತರುವಾಯ ಅವರ ಮೇಲೆ ವಿಶೇಷವಾಗಿ ಸೌದೆಯು ಹೇರಲ್ಪಟ್ಟಿತು. ಎಲ್ಲಾ ಕಡೆಯಲ್ಲಿಯೂ ಅಗ್ನಿ ಪ್ರವೇಶವಾಯಿತು. ತಾ ನೋಡಿದ್ದರಲ್ಲಿ ನಂಬಿಕೆ ಇಲ್ಲದೆ ಕಾತರನಾಗಿ ಮೌನದಿಂದ ಕೊನೇ ಫಲಿತಾಂಶವೇನೆಂದು ನೋಡುತಾ ಇದ್ದನು. ಅವರು ಉರಿಯಿಂದ ಈಚೆಗೆ ಬಂದು ಬಿಡುತಾರೆಂದು ಪ್ರತಿಕ್ಷಣದಲ್ಲಿಯೂ ನಿರೀಕ್ಷಣೆ ಮಾಡಿಕೊಂಡಿದ್ದನು. ಆದರೆ ಅವನ ನಿರೀಕ್ಷಣೆಗೆ ಭಂಗ ಬಂತು. ಆ ಉರಿಯಿಂದ ಯಾವ ಕೂಗೂ ಕೇಳಿಬರಲಿಲ್ಲ. ತಪ್ಪಿಸಿಕೊಂಡು ಹೋಗುವ ರೀತಿ ಸ್ವಲ್ಪವೂ ಕಾಣಬರಲಿಲ್ಲ. ಕಡೆಗೆ ಚಿತೆಯೆಲ್ಲಾ ಸುಟ್ಟು ಬೂದಿಗುಡ್ಡೆಯಾಯಿತು. ಆ ಹೆಂಗಸರ ಸ್ಥಿತಿಯನ್ನು ನೋಡಿ ಹಶೀಮನು ಯೋಚನೆ ಮಾಡುತಾ ಕಂಣಿನಲ್ಲಿ ನೀರ ಹಾಕಿದನು. ಆದರೆ ಉದಾರವಾದ ಅವನ ಮನಸ್ಸು ಆ ಸ್ತ್ರೀರ ಪ್ರೀತಿಯನ್ನು ಕಂಡು ಆಶ್ಚರ್ಯಭರಿತವಾಯಿತು.

ಕಡೆಗೆ ಅಲ್ಲಿದ್ದ ಜನರೆಲ್ಲಾ ಮನೆಗಳಿಗೆ ಹೊರಟು ಹೋದರು. ಹಶೀಮನು ತನ್ನ ಗೃಹಸ್ಥನೊಡನೆ ಆ ಸ್ಥಳದಿಂದ ಹೋಗುತಾ ಇರುವಾಗ ಆ ಮನುಷ್ಯನು— ಅಯ್ಯಾ ಅರಬರವನೆ, ಚಿತೆಗೆ ಬೀಳಲು ಯಾರೂ ಆ ಸ್ತ್ರೀಯರನ್ನು ಬಲವಂತ ಮಾಡು ವುದಿಲ್ಲವೆಂದು ಈಗ ನಿನಗೆ ಮನದಟ್ಟಾಗಿರಬಹುದು. ಅದು ತಾವಾಗಿ ಹೆಂಗಸರು ಮನಃಪೂರ್ತಿಯಾಗಿ ಮಾಡತಕ್ಕ ಕೆಲಸವಾಗಿದೆ. ಇದು ದಂಪತಿಗಳಿಗಿರುವ ಪ್ರೇಮದ ಆಧಿಕ್ಯವನ್ನು ತೋರಿಸತಕ್ಕದ್ದಾಗಿದೆ, ಎಂದನು. ಅದಕ್ಕೆ

ಹಶೀಮ—ನೀನು ಹೇಳುವುದೂ ನಿಜ. ಆದರೆ ನನಗೆ ತೋರುವುದೇನೆಂದರೆ, ಪತಿಯು ಮರಣಾನಂತರ ಸ್ತ್ರೀಯು ಒಂಟಿಯಾಗಿ ಜೀವಿಸಿಕೊಂಡು ಶುದ್ಧಳಾಗಿ

ಇರುವುದೇ ಮೃತನಾದ ಗಂಡನ ವಿಷಯದಲ್ಲಿ ಅವಳು ಪತಿವ್ರತೆಯಾಗಿದಾ ಳೆಂದು ಹೇಳಲು ಉತ್ತಮವಾದ ದೃಷ್ಟಾಂತ. ಅವಳಿಗಾಗಿ ಆಶೆಬಿದ್ದು ಬರತಕ್ಕ ಇತರರನ್ನು ತಿರಸ್ಕರಿಸಿ ತಾನು ಪ್ರಾಮಾಣಿಕಳಾಗಿದೇನೆಂದು ಲೋಕಕ್ಕೆ ಮನವಟ್ಟು ಮಾಡಿಕೊಡುವುದು ಒಂದು ದೃಷ್ಟಾಂತ. ಉರಿಯು ಚಿತೆಗೆ ಬೀಳುವುದಕ್ಕಿಂತಲೂ ಇದು ಪಾತಿವ್ರತ್ಯಕ್ಕೆ ನಿಜವಾದ ಪರೀಕ್ಷೆ.

ಕೆಲವು ದಿವಸದ ಮೇಲೆ ಹತೀಮನಿಗೆ ಪೂರ್ತಿಯಾಗಿ ಆಯಾಸ ಪರಿಹಾರವಾದ ಮೇಲೆ ತನ್ನ ಗೃಹಸ್ಥನನ್ನು ಕುರಿತು.

ಹತೀಮ—ಅಯ್ಯಾ ಮಿತ್ರ, ಈಗ ನಾನು ಹೊರಡಬೇಕು. ನಿಡಾ ಪರ್ವತವನ್ನು ನೋಡುವುದಕ್ಕೆ ಹೋಗುತಾ ಇದೇನೆ.

ಗೃಹಸ್ಥ—ಇಲ್ಲಿಗೆ ಸಾಕು. ಮುಂದಕ್ಕೆ ನೀನು ಹೋಗಬೇಡೈ. ಅದು ಬಹಳ ದೂರ ಇದೆ ದಾರಿ ಅಪಾಯವಾದ್ದು ಆ ಸ್ಥಳಕ್ಕೆ ಹೋಗುವುದು ಮನುಷ್ಯ ಮಾತ್ರದವರಿಗೆ ಸಾಧ್ಯವಿಲ್ಲ.

ಹತೀಮ—ನಾನು ದೇವರನ್ನು ನಂಬಿದೇನೆ. ಅವನು ನನ್ನನ್ನು ಅಲ್ಲಿಗೆ ಕರೆದು ಕೊಂಡು ಹೋಗಿ ಕ್ಷೇಮವಾಗಿ ಹಿಂದಕ್ಕೆ ಕರೆತರುತಾನೆ.

ಈ ಪ್ರಕಾರ ಹೇಳಿ ಹತೀಮನು ಮುಂದಕ್ಕೆ ಪ್ರಯಾಣ ಮಾಡಿ ಹಗಲು ರಾತ್ರಿ ಸಹಾ ಊರಿಂದ ಊರಿಗೆ ಪಟ್ಟಣದಿಂದ ಪಟ್ಟಣಕ್ಕೆ ಹೋಗುತಾ ಹಿಂದುಸ್ಥಾನದ ಉತ್ತರಮೇರೆಯನ್ನು ಸೇರಿದನು. ತರುವಾಯ ಒಂದು ದೊಡ್ಡ ಮರಳ ಕಾಡನ್ನು ದಾಟಿ ಹೋಗಲು ದೂರದಲ್ಲಿ ಒಂದು ದೊಡ್ಡ ಪಟ್ಟಣ ಕಾಣಿಸಿತು. ಹೀಗೆ ಮನುಷ್ಯರು ವಾಸವಾಗಿರುವ ಕಡೆಗೆ ಕರೆದುತಂದು ಬಿಟ್ಟನಲ್ಲಾ ಎಂದು ದೇವರನ್ನು ವಂದಿಸಿದನು.

ಆ ವೂರ ಬಾಗಿಲು ಸ್ವಲ್ಪ ದೂರ ಇರುವಾಗ ದೊಡ್ಡದಾದ ಜನರ ಗುಂಪು ಕಾಣಿಸಿತು. ಸಮೀಪಕ್ಕೆ ಹೋಗುತಾ, ಜನರು ಯೇನೋ ಚರ್ಚೆ ಮಾಡುವ ರೀತಿಯಲ್ಲಿ ಅನೇಕ ಧ್ವನಿ ಕೇಳಿಸಿತು. ಹತೀಮನು ಅಲ್ಲಿಗೆ ಹೋಗಿ ಒಬ್ಬ ಪುರವಾಸಿಯನ್ನು ಕುರಿತು.

ಹತೀಮ—ಅಯ್ಯಾ ಮಿತ್ರ ಹೇಳು, ಈಗ ಕೇಳಿಸುತಾ ಇರುವ ಗದ್ದಲಕ್ಕೆ ಕಾರಣವೇನು?

ಪುರವಾಸಿ—ನಮ್ಮ ಹೆಗ್ಗಡೆಯ ಮಗಳು ಸತ್ತುಹೋದಳು. ಅವಳ ಗಂಡನು ಅವಳ ಸಂಗಡ ಸಜೀವವಾಗಿ ಹೂಳಿಸಿಕೊಳ್ಳಲು ಒಪ್ಪಲೇಬೇಕೆಂದು ಹೇಳುತಿದಾರೆ. ಇದಕ್ಕೆ ಅವನು ಒಪ್ಪುವುದಿಲ್ಲ. ಅಯ್ಯಾ ವಿದೇಶಿ, ಆ ಗದ್ದಲಕ್ಕೆ ಇದೇ ಕಾರಣ.

ಹತೀಮ—ಸತ್ತವರ ಸಂಗಡ ಇದ್ದವರನ್ನೂ ಹೂಳಿ ಬಿಡುವುದು ನಿಮ್ಮಲ್ಲಿಯೂ ಪದ್ಧತಿ ಉಂಟೆ? ಈ ಭಾಗ್ಯಹೀನನು ಕೇವಲ ದೀನನಾಗಿದಾನೆ. ಸಜೀವವಾಗಿ

ತವನನ್ನು ಸಮಾಧಿಗೆ ಹಾಕಲಿಕ್ಕಿದ್ದಲ್ಲಿ ತನ್ನ ಕೈಯಲ್ಲಿ ಪ್ರಾಣವನ್ನೂ ಮರಣವನ್ನೂ ಇರಿಸಿಕೊಂಡಿರತಕ್ಕ ದೇವರನ್ನು ಕಂಡರೆ ನಿನಗೆ ಭೀತಿ ಇಲ್ಲವೇ ?

ಹೆಗ್ಗಡೆ—(ಹಕೀಮ ಹೇಳಿದ ಮಾತನ್ನು ಕೇಳಿ, ನಾವು ಪತಿತರೆಂದು ನಿಷ್ಕರ್ಷೆ ಮಾಡಿಕೊಳ್ಳುವುದಕ್ಕೆ ಮುಂಚೆ ನನ್ನ ಮಾತು ಒಂದಿದೆ ಕೇಳ್ರಿ. ನನ್ನ ಮಗಳ ಗಂಡನಾದ ಈ ತರುಣನು ಹಿಂದಕ್ಕೆ ನಿನ್ನ ಹಾಗೆಯೇ ಮಾರ್ಗಸ್ಥನಾಗಿ ನಮ್ಮೂರಿಗೆ ಬಂದನು. ನಮ್ಮ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾ ನನ್ನ ಮಗಳನ್ನು ಕಂಡು ಅತಿಯಾಗಿ ಮೋಹಿಸಿದನು. ಅವರಿಬ್ಬರಿಗೂ ಪರಸ್ಪರ ಅನುರಾಗವಿತ್ತು. ಆದಕಾರಣ ನಮ್ಮ ಪದ್ಧತಿಯ ಪ್ರಕಾರ ಅವನು ನಡೆದುಕೊಳ್ಳುವುದಾದರೆ ಅವರಿಬ್ಬರೂ ಮದುವೆಯಾಗಲು ನನ್ನ ಆಕ್ಷೇಪಣೆ ಇರಲಿಲ್ಲ. ಆ ಪದ್ಧತಿಯೇನೆಂದರೆ, ಹೆಂಡತಿ ಮೊದಲು ತೀರಿಹೋದಲ್ಲಿ ಗಂಡನನ್ನು ಸಜೀವವಾಗಿ ಅವಳೊಡನೆ ಹೂಳಿಬಿಡಬೇಕು ಎಂಬುವುದು. ಇದಕ್ಕೆ ಅವನು ಒಪ್ಪಿದ. ಪ್ರಮಾಣ ಪುರಸ್ಸರವಾಗಿ ತಾನು ಮಾಡಿದ ವಾಗ್ದಾನದಂತೆ ಈಗ ನಡೆಯುವುದಿಲ್ಲವೆನ್ನುತಾನೆ.

ಹಕೀಮ—(ಆ ವಿಚಾರವನ್ನು ಕೇಳಿ, ಆ ತರುಣನನ್ನು ಕುರಿತು) ನಿನಗೆ ನಾಚಿಕೆ ಇಲ್ಲವೇ ? ಯಾಕೆ ನಿನ್ನ ಮಾತಿನಂತೆ ನಡೆದುಕೊಳ್ಳುವುದಿಲ್ಲ? ಆಯುಸ್ಸು ಎಷ್ಟೇ ಹೆಚ್ಚು ಎಂದರೂ ಕಡಿಮೆ ಯಾದದ್ದು, ಅಸ್ಥಿರವಾದದ್ದು. ಇದಕ್ಕಾಗಿ ನಿನ್ನ ಹೆಸರನ್ನು ಕೆಡಿಸಿಕೊಳ್ಳುವ ಇಷ್ಟವಿದೆಯೇ ?

ತರುಣ—(ಕಣ್ಣಿನಲ್ಲಿ ನೀರ ಹಾಕುತ್ತಾ) ಅಯ್ಯಾ, ಉದಾರಿಯಾದ ವಿದೇಶಿಯೇ, ನನ್ನ ಶತ್ರುಗಳ ಜೊತೆಗೆ ನೀನೂ ಸೇರಿಕೊಳ್ಳಬಹುದೆ ? ಇಂಥಾ ಪದ್ಧತಿಯನ್ನು ನಿಮ್ಮ ದೇಶದಲ್ಲಿ ಅಂಗೀಕಾರ ಮಾಡುತ್ತಾರೆಯೇ ? ನಾನು ಕೇಳುತ್ತೇನೆ.

ಹಕೀಮ—ವರ್ತಮಾನದಲ್ಲಿ ಅದಲ್ಲ ಮಾತು, ನಿನ್ನ ಸಮಯಬಂಧದಂತೆ ನೀನು ನಡೆದುಕೊಳ್ಳಬೇಕೆ ಎಂಬುದು.

ತರುಣ—ಇದು ಹುಚ್ಚು, ನಾನು ಜೀವಂತನಾಗಿರುವವರೆಗೂ ಇದಕ್ಕೆ ನಾನು ಬದ್ಧನಾಗುವುದಿಲ್ಲ. ಆಗ ಹಕೀಮನು, ಜನರು ಹೆಣವನ್ನು ಹೂಳದೆ ಇರುವುದು ಒತ್ತಟ್ಟಿಗೆ, ಸತ್ತವಳ ಗಂಡನು ಶವದ ಸಂಗಡ ಹೂಳಲ್ಪಡಲು ಒಪ್ಪದೇ ಇರುವುದು ಒತ್ತಟ್ಟಿಗೆ, ಹೀಗೆ ಉಭಯ ಸಂಕಟ ಒದಗಿರುವುದನ್ನು ಕಂಡು ಮೃತಳ ಗಂಡನ ಕಿವಿಯಲ್ಲಿ—ಹೂಳಲ್ಪಡ ವುದಕ್ಕೆ ನೀನು ಒಪ್ಪಿಕೊ ; ಸರಿಯಾದ ಸಮಯದಲ್ಲಿ ನಾನು ನಿನ್ನನ್ನು ಬಿಡಿಸಿಕೊಳ್ಳುತ್ತೇನೆ, ಇದಕ್ಕೆ ನನ್ನ ಮಾತೇ ಸಾಕ್ಷಿ, ಎಂದು ಪಿಸು ಮಾತನಾಡಿದನು. ಅದಕ್ಕೆ ಆ ಮನುಷ್ಯನು—ಸಮಾಧಿಯಿಂದ ಎದ್ದು ಪುನಃ ನಾನು ಈಚೆಗೆ ಬರುವವರೆಗೆ ನೀನು ಸಹಾಯಮಾಡುವ ತನಕ ನಾನು ಅಲ್ಲಿರುವುದು ಹೇಗೆ ಎಂದು ಕೇಳಲು, ಹಕೀಮನು—ಆ ಕೆಲಸವನ್ನು ನನಗೆ ಬಿಡು, ಅದನ್ನು ನಾನು ನೋಡಿಕೊಳ್ಳುತೇನೆ ಎಂದು ನುಡಿದನು. ಆಗ

ಹತೀಮು—(ಆ ಜನರನ್ನು ಕುರಿತು ಗಟ್ಟಿಯಾಗಿ) ಆ ತರುಣನು ಜೀವಸಹಿತವಾಗಿ ಹೂಳಿಸಿಕೊಳ್ಳುವುದಕ್ಕೆ ಒಪ್ಪಿದ್ದಾನೆ. ಆದರೆ ಅವನ ದೇಶದಲ್ಲಿ ಮಾಡಿರುವ ಹಾಗೆ ಸಮಾಧಿಯಲ್ಲಿ ಒಂದು ಗೂಡನ್ನು ಮಾಡಿ ಅದಕ್ಕೆ ಗಾಳಿ ಬೆಳಕು ಬರುವ ಹಾಗೆ ಒಂದು ತೂತನ್ನು ಮಾಡಿರಬೇಕು. ನೀವು ಸಮಾಧಿಯನ್ನು ಒಂದು ಗೂಡಿನ ಹಾಗೆ ಮಾಡಿ ಅದಕ್ಕೆ ಕಿಟಕಿಯನ್ನು ಇಟ್ಟುಕೊಟ್ಟರೆ, ಆ ತರುಣನು ನಿಮ್ಮ ಪದ್ಧತಿಯಂತೆ ನಡೆದುಕೊಳ್ಳುತಾನೆ.

ಹೆಗ್ಗಡೆ—ಇಷ್ಟು ಅನುಕೂಲ ಮಾಡಿಕೊಡುವ ಅಧಿಕಾರ ನನ್ನ ಕೈಯಲಿಲ್ಲ. ನಾನು ಕಾಜಿಯನ್ನು ಕೇಳಿ ಅವ ಹೇಳಿದ ಹಾಗೆ ನಡೆಯುತೇನೆ.

ಅದಕ್ಕೆ ಒಪ್ಪಿ ಸಂಬಂಧಪಟ್ಟ ಜನರೂ ಹತೀಮನೂ ಸಹಾ ಆ ಗ್ರಾಮಾಧಿಕಾರಿಯ ಬಳಿಗೆ ಹೋದರು. ಆ ಅಧಿಕಾರಿಯು ಬಹಳವಾಗಿ ಯೋಚನೆ ಮಾಡಿ "ಆ ಯೌವನಸ್ಥನಿಗೆ ಅವನ ದೇಶದಲ್ಲಿ ಮಾಡುವ ಹಾಗೆ ಸಮಾಧಿಯನ್ನು ಮಾಡಿಕೊಡಬೇಕು; ನ್ಯಾಯವು ನಮ್ಮ ಪರವಾಗಿದ್ದಾಗ್ಯೂ, ಅವನು ವಿದೇಶಿಯಾದ ಕಾರಣ, ಅವನಿಗೆ ಅಷ್ಟೊಂದು ಕಾಠಿಣ್ಯವನ್ನು ತೋರಿಸುವುದು ನಮಗೆ ಮಾನವಲ್ಲ," ಎಂಬುದಾಗಿ ತೀರ್ಮಾನ ಮಾಡಿದನು.

ಸಮಾಧಿಯನ್ನು ಕಟ್ಟುವ ಕೆಲಸಕ್ಕೆ ಆರಂಭಿಸಿದರು. ಅದರಲ್ಲಿ ಒಂದು ಗೂಡನ್ನು ಮಾಡಿದರು. ಆ ಗೂಡಿನಲ್ಲಿ ಗಂಡಹೆಂಡಿರನ್ನು ಕೂಡಿ ಗಂಡನು ತಪ್ಪಿಸಿಕೊಂಡು ಹೋಗದ ಹಾಗೆ ಕಾವಲನ್ನು ಇರಿಸಿದರು. ಗಂಡನನ್ನು ಆ ಗೂಡಿನಲ್ಲಿ ಕೂಡುತಾ ಇರುವಾಗ, ಹತೀಮನು ಅರ್ಧರಾತ್ರಿಯಲ್ಲಿ ಅವನನ್ನು ಬಿಡಿಸುತೇನೆಂದು, ಆ ವೂರಜನರ ಪದ್ಧತಿಯ ಪ್ರಕಾರ ಅವನು ನಡೆದುಕೊಳ್ಳಬಹುದೆಂದು ನಂಬಿಕೆ ಹೇಳಿದನು. ಆ ಜನರು ಸಮಾಧಿಯನ್ನು ಮುಚ್ಚಿಬಿಟ್ಟು ಅದರ ಮೇಲೆ ದೊಡ್ಡ ಬಂಡೆಯನ್ನು ಹೇರಿ ಅದರ ಮೇಲೆ ಬಗೆಬಗೆ ಹೂವನ್ನು ಎರೆಚಿ ತುಂಬಿಬಿಟ್ಟರು. ಕಾವಲುಗಾರ ಹೊರತು ಉಳಿದವರೆಲ್ಲಾ ವೂರಿಗೆ ಹೊರಟು ಸಂಗಡ ಹತೀಮನನ್ನೂ ಕರೆದುಕೊಂಡು ಹೋದರು. ಅಲ್ಲಿ ಅವನಿಗೆ ಅತ್ಯಂತ ಆದರದಿಂದ ಔತನ ಮಾಡಿದರು. ಅವನಿರುವುದಕ್ಕೆ ಒಳ್ಳೇ ಉಪ್ಪರಿಗೆಯನ್ನು ಕೊಟ್ಟರು. ಹತೀಮನು ಕ್ಷುತ್ಪಿಪಾಸಗಳನ್ನು ಆರಿಸಿಕೊಂಡು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿ, ಸಮಾಧಿಯಲ್ಲಿರತಕ್ಕ ಮಿತ್ರನನ್ನು ಬಿಡಿಸಿಕೊಳ್ಳಲು ಸಮಯವನ್ನು ಕಾಯುತಿದ್ದನು.

(ಮುಂದುವರೆಯುವುದು)

ಕೆ. ಎಚ್. ಶ್ರೀನಿವಾಸ

ಯಾರಿಗೂ ತಿಳಿಯದು ಇಲ್ಲಿ

ಯಾರಿಗೂ ತಿಳಿಯದು ಇಲ್ಲಿ ಲೈಟು ಹೊತ್ತಿಕೊಂಡಿದೆಯೆಂದು
ಕಂಡೂ ಕಾಣದಂತಿಹರು. ಈಗ ಈ ಲೈಟು ಹೊತ್ತಿಕೊಂಡರೂ ವ್ಯರ್ಥ
ಈ ನಡುಹಗಲ ದಂದುಗದಲ್ಲಿ. ಆದರೇನು? ತಾರಾ—
ನಿಸ್ಸೀಮತೆಯ ಅಡಿಯಲ್ಲೂ ಕೂಡ ಬೆಳಕಾಗಿ ಹರಡಿರಲಿಲ್ಲವೇ ಇದರ ಕಣ್ಣ ಮಿಂಚು?

ಹಾದಿಯಿದು ಬೀದಿಯಿದು ಕಲ್ಲು ಇದು ಕೊರಕಲಿದು ಎಂದು
ಬೆಳಕು ಸನ್ನೆ ಮಾಡಿ ತೋರುತಿರಲಿಲ್ಲವೇ ಇದು? ಇತ್ತು. ಆದರೇನು?—
ಮುಂಜಾನೆ ಮಿಂಚಿನುಂಡೆಯೊಂದು ಬಾನಿಗೆ ಬಿತ್ತು.
ಆಗಿಂದ ಇದಕಿಲ್ಲ ಸ್ಕ್ರೂಪು. ಸ್ವಿಚ್ಚಿದೆ. ಆರಿಸುವುದನ್ನೆ ಮರೆತಿದ್ದಾರೆ,
ಇದು ಹೊತ್ತಿಲ್ಲವೇನೊ ಎಂಬ ಭ್ರಮೆಯಲ್ಲಿ! ಬುದ್ಧ ಕ್ರಿಸ್ತ ಮಹಮದ ಶಂಕರ

ಬಂದರು ಕತ್ತಲಲಿ ಬೆಳಕಾಗಿ ಜಗಕೆ. ಭಗವಂತನೇ—
ಉದಿಸಿ ಬಂದಿರಲಿಂದು ಬಾನನ್ನೆ ಬೆಳಗುತಿದೆ ದೀವಿಗೆ.
ಆದರೂ ನೆನೆಯುತಿಹರಿಂದೂ ಅವರ; ತಿಳಿಯದವರಿಗೆ ಸೂರ್ಯ ಹುಟ್ಟಿಹ ಪ್ರವರ.

ಕಣ್‌ಕಟ್ಟುವುದು ಆ ಬೆಳಕು; ಎದೆತಟ್ಟುವುದು ಈ ಬೆಳಕು.
ಗೊಬ್ಬರದಂತಾದ ಈ ಜಗದ ಕೆಸರಿನಿಂದಲೆ ಮೂಡುವುದು ಕಸುವಿನ ತೇಜ.
ಹಳತೇ ಹೊಸತಾಗುವುದು ಮಾಗುವುದು; ಮತ್ತೆ ಮತ್ತೆ
ಜೀವನ ವೈವಿಧ್ಯತೆಯಾಗಿ ಸಾಗುವುದು. ಪುನರ್ನವೀಕರಣ
ಪರಿವರ್ತನಾ ಚಕ್ರ ಅನಾದಿ. ಆಗ್ಗೂ ಈಗ್ಗೂ ಯಾವಾಗ್ಗೂ
ನಾವೇ ಸಾಗುವವರು ಹಾದಿ. ಕಾಲಚಕ್ರ ಕೇವಲ ಉಪಮೆ.

ಡಾ. ಜಿ. ಎಂ. ನಾಗಯ್ಯ

"ಮೂವರ್ ರಾಯರ್"*

'ಮೂವರ್ ರಾಯರ್' ಎಂಬ ನುಡಿಗಟ್ಟು ಕನ್ನಡ ವಿದ್ವತ್‌ಪ್ರಪಂಚಕ್ಕೆ ತುಂಬ ಪರಿಚಿತವಾಗಿದೆ. ಹರಿಹರನ[1] ಗಿರಿಜಾ ಕಲ್ಯಾಣದಲ್ಲಿ ಒಂದು ಪದ್ಯ ಹೀಗೆ ಬರುತ್ತದೆ:

'ಶೀವಿಪರ್ಶ್ವಾಳಿಯಗ
ಜಾವಳಿಯ ನರಾವಳಿಗಳ ವಿಕ್ರಯದಿಂದಂ
ಭಾವಿಸೆ ದೂಸಿಗ ವಸರಂ
ಮೂವರ್ ರಾಯರನೆ ಮಾರಂವಂತೆಸೆದಿರ್ಕುಂ'

ಕೇಶಿರಾಜನು[2] ಎರಡು ರೇಫೆಗಳನ್ನು ಕೂಡಿದ ಸಂಧಿಯನ್ನು ಮಾಡಿದರೆ ಅದು ಕರಡೆಯ ಗಿರ್ಗಟದ ದನಿಯಂತೆ ಕರ್ಣಕರ್ಕಶವಾಗುತ್ತದೆ. ಹಾಗೆ ಮಾಡಬಾರದು ಎನ್ನುತ್ತ ಮೂವರ್ + ರಾಯರ್ = ಮೂವರ್ರಾಯರ್ ಎಂಬ ಉದಾಹರಣೆಯನ್ನು ಕೊಟ್ಟು ಮೇಲಿನ ಹರಿಹರನ ಪದ್ಯದ ವಾಕ್ಯವನ್ನು ಉದ್ಧರಿಸುತ್ತಾನೆ. ಈ 'ಮೂವರ್‌ರಾಯರ್' ಯಾರು ? ಎಂಬುದು ಇಲ್ಲಿಯ ಪ್ರಶ್ನೆ.

'ಕರ್ನಾಟಕದ ಅರಸುಮನೆತನಗಳು' ಗ್ರಂಥದ ಕರ್ತೃಗಳಾದ ಲಕ್ಷ್ಮೀನಾರಾಯಣರಾಯರು ಮತ್ತು ಆರ್. ಎಸ್. ಪಂಚಮುಖಿ[3] ಯವರು ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯನ ಶಾಸನದಲ್ಲಿ ಬರುವ 'ಅವನಿಪತಿ ತ್ರಿತಯಾಂತರಿತ'ಎಂಬ ನುಡಿಗಟ್ಟನ್ನು ಕುರಿತು ವಿವಿಧ ವಿದ್ವಾಂಸರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕ್ರೋಢೀಕರಿಸಿದ್ದಾರೆ. ಹುಲ್ಸ ಮತ್ತು ಪಾಠಕರ ಪ್ರಕಾರ ಇವರು ಚೋಳ,

---

* ಈ ಲೇಖನಕ್ಕೆ ಮಾರ್ಗದರ್ಶಕರಾದ ನನ್ನ ವಿದ್ಯಾಗುರು ಡಾ. ಎಂ. ಎಂ. ಕಲಬುರ್ಗಿ ಯವರಿಗೆ ಕೃತಜ್ಞತೆಗಳು.

1. ಹರಿಹರ : ಗಿರಿಜಾ ಕಲ್ಯಾಣ ಮಹಾಪ್ರಬಂಧಂ. ಅನು. ಎಂ. ಜಿ. ನಂಜುಂಡಾರಾಧ್ಯ ಬೆಂಗಳೂರು : ಕ. ಸಾ. ಪ. ೧೯೭೬. (ದ್ವಿತೀಯ ಆಶ್ವಾಸ. ಪ—೯೪) ಪು—೮೭.
2. ಕೇಶಿರಾಜ : ಶಬ್ದಮಣಿದರ್ಪಣ ಸಂಗ್ರಹ. ಸಂ. ಪ್ರೊ. ಬಿ. ಡಿ. ಸಾಸನೂರ ಮತ್ತು ಡಾ. ಎಂ. ಎಂ. ಕಲಬುರ್ಗಿ. ಧಾರವಾಡ : ರವಿಚಂದ್ರ, ೧೯೭೫. ಪು—೨೯.
3. ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿ ಆರ್. ಎಸ್. : ಕರ್ನಾಟಕದ ಅರಸುಮನೆತನಗಳು. ಧಾರವಾಡ : ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೧೯೪೬. ಪರಿಪುಟ–೧. ಪುಟ. ೬೬–೭೧.

ಕೇರಳ, ಪಾಂಡ್ಯ ಅರಸರು. ಡುಬ್ರ್ಯುಯಿಲರ ಪ್ರಕಾರ ಇವರು ಪಲ್ಲವ, ಸಿಂಹಲ, ಪಾಂಡ್ಯ ಅರಸರು. ಆದರೆ ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿ ಅವರು ಮೊದಲನೆಯ ಅಭಿಪ್ರಾಯವಾದ ಚೋಳ, ಕೇರಳ, ಪಾಂಡ್ಯ ಎಂಬ ವಾದವನ್ನು ಒಪ್ಪುತ್ತಾರೆ. ಅಲ್ಲದೆ ಇವರು ಜಿನಸೇನನ ಆದಿಪುರಾಣದ ವ್ಯಾಖ್ಯಾನಕಾರರು 'ತ್ರೈರಾಜ್ಯ' ಎಂಬುದಕ್ಕೆ ಚೋಳ, ಕೇರಳ, ಪಾಂಡ್ಯರೆಂದು ಹೇಳಿದುದನ್ನು ಆಧಾರವಾಗಿಟ್ಟುಕೊಳ್ಳುತ್ತಾರೆ. ಹರಿಹರ, ಕೇಶಿರಾಜರು ಹೇಳುವ ಈ 'ಮೂವರ್ ರಾಯರ್' ಚೋಳ, ಕೇರಳ, ಪಾಂಡ್ಯರೆಂದು ಕನ್ನಡ ಸಾಹಿತ್ಯಾಭ್ಯಾಸಿಗಳೂ ಭಾವಿಸಿದಂತಿದೆ.

ಆದರೆ ಈ ಮೂರು ರಾಜ್ಯಗಳಿಗೂ ಮೂವರು ರಾಯರಿಗೂ ಯಾವುದೇ ಸಂಬಂಧವಿಲ್ಲ. ಮೂರು ರಾಜ್ಯಗಳು ಬೇರೆ ಮೂವರು ರಾಯರು ಬೇರೆ. ಮೂವರು ರಾಯರನ್ನು ಕುರಿತು ತಿಳಿಯುವ ಮೊದಲು ಚಕ್ರವರ್ತಿ, ಮಂಡಳೇಶ್ವರ, ಸಾಮಂತ ಈ ಮೂರು ಶಬ್ದಗಳ ಅರ್ಥ ಮತ್ತು ಬಳಕೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಚಕ್ರವರ್ತಿ

ಸಾಮ್ರಾಜ್ಯಕ್ಕೆ ಒಡೆಯನಾಗಿದ್ದವನಿಗೆ 'ಚಕ್ರವರ್ತಿ' ಎಂದು ಕರೆಯುಲಾಗುತ್ತಿತ್ತು. ಇವನು ಅಧಿಕಾರದಲ್ಲಿ ಎಲ್ಲರಿಗಿಂತ ದೊಡ್ಡವನು. ಅನೇಕ ಮಂಡಳೇಶ್ವರ ಮತ್ತು ಸಾಮಂತರ ಮೇಲೆ ಇಂಥ ಒಬ್ಬ ಚಕ್ರಿಯು ಇರುತ್ತಿದ್ದನು. ಈತನನ್ನು 'ಮಹಾರಾಜಾಧಿರಾಜ' ಎಂದೂ ಕರೆಯುಲಾಗುತ್ತಿತ್ತು.

ಮಂಡಳೇಶ್ವರ

ಅರಸು-ರಾಜನೆಂಬ ಶಬ್ದ ಮಂಡಳೇಶ್ವರರಿಗೆ ಮಾತ್ರ ಅನ್ವಯಿಸುತ್ತದೆ. ಶಾಸನಗಳಲ್ಲಿಯೂ ಮಂಡಳೇಶ್ವರರನ್ನು 'ಅರಸು' ಎಂದೇ ಕರೆಯಲಾಗಿದೆ. ಇವರೆಲ್ಲರೂ ಚಕ್ರವರ್ತಿಯ ಪಾದಪದ್ಮೋಪಜೀವಿಗಳಾಗಿದ್ದಾರೆ.

ಸಾಮಂತ

ಸಾಮಂತರಿಗೆ 'ಮನ್ನೆಯ'ರೆಂದು ಕರೆಯಲಾಗುತ್ತಿತ್ತು. ಈ ಮನ್ನೆಯರು ಮಂಡಲೇಶ್ವರರಿಗಿಂತ ಕೆಳಗಿನವರಾಗಿದ್ದು ಅವರಿಗೆ ಅಧೀನರಾಗಿ ಆಡಳಿತ ನಡೆಸುವವರಾಗಿದ್ದಾರೆ.

ಹೀಗೆ ಅನುಕ್ರಮವಾಗಿ ಚಕ್ರವರ್ತಿ, ಮಂಡಲೇಶ್ವರ, ಸಾಮಂತರು ಆಡಳಿತ ನಡೆಸುವವರಾಗಿದ್ದಾರೆ. ಅಂದರೆ ಸಾಮ್ರಾಜ್ಯಕ್ಕೆ ಚಕ್ರವರ್ತಿ, ಕೆಲವು ದೊಡ್ಡ ವಿಭಾಗಗಳಿಗೆ ಮಂಡಲೇಶ್ವರ, ಕೆಲವು ಚಿಕ್ಕ ವಿಭಾಗಗಳಿಗೆ ಸಾಮಂತರು ಅಧಿಕಾರಿಗಳಾಗಿರುತ್ತಿದ್ದರು.

ಕೆಲವು ಶಾಸನಗಳಲ್ಲಿ ಅಧಿಕಾರದ ಅನುಕ್ರಮದ ಪ್ರಕಾರ ಆಡಳಿತಾಧಿಕಾರಿಗಳ ಹೆಸರುಗಳನ್ನು ಕೊಡಲಾಗಿದೆ. ಉದಾ : ಅಗಡಿ[1] ಶಾಸನದಲ್ಲಿ, ಬಿರುದರದೇವನು ಬಿಟ್ಟದಾನವನ್ನು 'ಪ್ರಭುಗಾವುಂಡ' 'ನಾಡಮನ್ನೆಯ' 'ಮೇಲಾಳ್ಕೆಯರಸು' ಇವರು ಕಾಪಾಡಬೇಕೆಂದು ಕ್ರಮವಾಗಿ ಕೆಳಗಿನ ಅಧಿಕಾರಿಯಿಂದ ಮೇಲಿನ ಅಧಿಕಾರಿಯ ವರೆಗೆ ಹೇಳಲಾಗಿದೆ. ದಾನಬಿಟ್ಟವಸ್ತು ಕೆಲವು ಗ್ರಾಮಗಳಿಗೆ ಮುಖ್ಯಸ್ಥನಾದ ಪ್ರಭುಗಾವುಂಡನಿಗೆ ತೀರ ಸಮೀಪವಾಗಿರುತ್ತದೆ. ಈ ಪ್ರಭುಗಾವುಂಡ ಆ ದಾನದ ವಸ್ತುವನ್ನು ಸರಿಯಾಗಿ ರಕ್ಷಿಸದಿದ್ದರೆ ಅಥವಾ ಈತನೇನಾದರೂ ಅದಕ್ಕೆ ಅನ್ಯಾಯ ಮಾಡಿದರೆ ಈತನಿಗಿಂತ ಮೇಲಿನ ಅಧಿಕಾರಿಯಾದ 'ಮನ್ನೆಯ' (ಸಾಮಂತ) ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಮನ್ನೆಯನೂ ಭ್ರಷ್ಟನಾದರೆ 'ಅರಸ' (ಮಂಡಳೇಶ್ವರ)ನು ಆ ದಾನ ಹಾಳಾಗದಂತೆ ನೋಡಿಕೊಳ್ಳಬೇಕು. ಆದರೆ ಮಂಡಲೇಶ್ವರನೂ ಕಿವಿಗೊಡದಿದ್ದರೆ ಕೊನೆಯದಾಗಿ ಚಕ್ರವರ್ತಿ ಇರುತ್ತಾನೆ.

ಇನ್ನು ಮೂವರ್ ರಾಯರ್ ಎಂದರೆ ಮೂರು ಪ್ರಕಾರದ ರಾಜರು ಅಥವಾ ಒಡೆಯರು ಎಂದು ಅರ್ಥೈಸುವುದು ಸೂಕ್ತ. ಈ ಮೂವರು ಒಡೆಯರನ್ನು ಸಾಮ್ರಾಜ್ಯ ಬಿಟ್ಟು ಹೊರಗಡೆಗೆ ಹುಡುಕಬಾರದು. 'ಮೂವರ್ ರಾಯರ್' ಎಂದರೆ ಈ ಚಕ್ರವರ್ತಿ—ಮಂಡಲೇಶ್ವರ—ಸಾಮಂತರೇ ಆಗಿದ್ದಾರೆ.

ಶಾಸನಗಳಲ್ಲಿಯೂ ಈ ಮೂವರು ರಾಯರು ಎಂಬ ನುಡಿಗಟ್ಟು ಬಳಸಿದ್ದುದು ತಿಳಿದುಬರುತ್ತದೆ. ಹೊಯ್ಸಳ ಬಲ್ಲಾಳ ದೇವನ ಮರಿಯಾನೆ ದಂಡನಾಯಕನ ಮೂವರು ಪುತ್ರಿಯರನ್ನು ಒಂದೇ ಹಸೆಮಣೆಯ ಮೇಲೆ ಮದುವೆಯಾದ ಉಲ್ಲೇಖ ಸಿಂಧಗಿರಿ[2] ಶಾಸನದಲ್ಲಿ ಬರುತ್ತದೆ. ಇವರು ಶಾಸ್ತ್ರ, ಗೀತ, ನೃತ್ಯದಲ್ಲಿ ಪ್ರವೀಣೆಯರಾಗಿ 'ಮೂರು ರಾಯಕಟಕ ಪಾತ್ರಜನಳೆ' ಯೆನಿಸಿ ಬೆಳೆದರೆಂದು ವರ್ಣಿಸಲಾಗಿದೆ. ಇಲ್ಲಿ ಚೋಳ, ಕೇರಳ, ಪಾಂಡ್ಯರೇ ಈ ಮೂವರು ರಾಯರೆಂದು ಹೇಳಿದರೆ ತಪ್ಪಾಗುತ್ತದೆ. ಹೊಯ್ಸಳರಿಗೆ ಚೋಳ, ಕೇರಳ, ಪಾಂಡ್ಯರು ಶತ್ರುಗಳಾಗಿದ್ದರು. ಈ ಶತ್ರುಗಳ ಆಸ್ಥಾನದಲ್ಲಿ ನೃತ್ಯ ಪ್ರದರ್ಶಿಸಿದರೆಂದು ಅರ್ಥ ಹೇಳಿದರೆ ತೀರ ವಿರೋಧವೆನಿಸುತ್ತದೆ. ಯಾರೇ ವಿದ್ವಾಂಸರಾಗಲಿ, ಗಾಯಕರಾಗಲಿ, ಕವಿಗಳಾಗಲಿ, ನೇರವಾಗಿ ಚಕ್ರವರ್ತಿಗೆ, ಮಂಡಲೇಶ್ವರರಿಗೆ ಪರಿಚಯವಾಗುವುದಿಲ್ಲ. ಇವರ ಪ್ರತಿಭೆಯನ್ನು ಮೊದಲು ಗುರುತಿಸುವವನು ತೀರ ಸಮೀಪದಲ್ಲಿರುವ ಸಾಮಂತನಾಗಿದ್ದಾನೆ. ಹೀಗೆ ಮೊದಲು ಸಾಮಂತನ ಆಸ್ಥಾನದಲ್ಲಿ ಪ್ರಸಿದ್ಧಿ ಪಡೆದ ಮೇಲೆ ಆ ವ್ಯಕ್ತಿ ಮಹಾಮಂಡಳೇಶ್ವರನಿಗೆ ಪರಿಚಿತನಾಗುತ್ತಾನೆ. ಮಹಾಮಂಡಲೇಶ್ವರನ ಆಸ್ಥಾನ

---

1. ಎಸ್‌ಐಐ ೧೮ ; ನಂ. ೧೨೩. ೧೧೧೬ ಜನವರಿ ೧೬, ಅಗಡಿ, ಹಾವೇರಿ (ತಾ) ಧಾರವಾಡ.

2. EC–VI ಚಿಕ್ಕಮಗಳೂರು ೧೬೦, ಸಿ–೧೧೨೦. ಸಿಂಧಗಿರಿ, ಚಿಕ್ಕಮಗಳೂರು (ತಾ) ಕಡೂರು (ಜಿ).

ವನ್ನು ಬೆಳಗಿದ ಮೇಲೆ ಈ ವಿಷಯವು ಚಕ್ರಿಗೆ ಗೊತ್ತಾಗಿ ಆತನನ್ನು ತನ್ನ ಆಸ್ಥಾನಕ್ಕೆ ಕರೆಯಿಸಿಕೊಳ್ಳುತ್ತಾನೆ. ಹೀಗೆ ಕೊನೆಯಲ್ಲಿ ಚಕ್ರವರ್ತಿಯ ಆಸ್ಥಾನದಲ್ಲಿ ಆತನು ಮಿನುಗುತ್ತಾನೆ. ಆದುದರಿಂದ 'ಮೂವರ್ ರಾಯರ್'ಎಂದರೆ ಚಕ್ರವರ್ತಿ—ಮಂಡಲೇಶ್ವರ—ಸಾಮಂತ ಎಂದು ಹೇಳುವುದು ಸರಿಯಾದ ಅರ್ಥವೆನಿಸುತ್ತದೆ.

ಕಲ್ಯಾಣದ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಪುತ್ರನಾದ ಯುವರಾಜ ಮಲ್ಲಿಕಾರ್ಜುನನನ್ನು 'ಮೂರು ರಾಯ ಕುವರ'ನೆಂದು ಅಗರಖೇಡ[1] ಶಾಸನದಲ್ಲಿ ಕರೆಯಲಾಗಿದೆ. ಇದೇ ರೀತಿ ಇನ್ನೊಬ್ಬ ಪುತ್ರನಾದ ಸೋಮೇಶ್ವರನನ್ನು 'ಮೂರುರಾಯ ಕಲಿಕುವರ' ನೆಂದು ಗೂಡೂರು[2] ಶಾಸನದಲ್ಲಿ ಕರೆಯಲಾಗಿದೆ. ಇಲ್ಲಿ ಮೂರುರಾಯರ ಕುವರರೆಂದರೆ ಸಾಮಂತ, ಮಂಡಲೇಶ್ವರ, ಚಕ್ರವರ್ತಿಗಳ ಪ್ರೀತಿಯನ್ನು ಗಳಿಸಿದವನೆಂದು ಅರ್ಥವಾಗುತ್ತದೆ. ಹೊಳಗುಂದಿ[3] ಶಾಸನದಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿದ್ದ ತೆರಿಗೆ ಸಂಗ್ರಹಿಸುವ ಮಹಾಸಾಮಂತ ಚಾಮುಂಡರಸನ ಪ್ರಶಸ್ತಿಯಲ್ಲಿ 'ಮೂರುರಾಯ ಸ್ಥಾನ ಕಲಿಬಿರುದ ಸುರಿಗೆಕಾರ' ಎಂದು ಬರುತ್ತದೆ. ಇಲ್ಲಿ ಮೂರು ರಾಯರ ಆಸ್ಥಾನಗಳೆಂದರೆ—ಮಹಾಸಾಮಂತ ಬಹುಶಃ ಕೋಗಳಿ ೫೦೦ ಆಳುತ್ತಿರುವ ಕದಂಬ ವಂಶದ ಮಹಾಸಾಮಂತ ಘಟ್ಟಿಯರಸನ ಆಸ್ಥಾನ, ನಂತರ ನೊಳಂಬವಾಡಿ ೩೨೦೦೦ ಆಳುತ್ತಿದ್ದ ಮಹಾಮಂಡಲೇಶ್ವರ ಪಾಂಡ್ಯನ ಆಸ್ಥಾನ ಮತ್ತು ಚಕ್ರವರ್ತಿ ವಿಕ್ರಮಾದಿತ್ಯನ ಆಸ್ಥಾನಗಳಾಗಿವೆ. ಈ ಮೂರು ಆಸ್ಥಾನಗಳಲ್ಲಿ 'ಕಲಿ'ಎಂಬ ಬಿರುದನ್ನು ಪಡೆದವನಾಗಿದ್ದಾನೆ ವಿಜಯನಗರದ ಅರಸು ಕೃಷ್ಣದೇವರಾಯನಿಗೆ 'ಮೂರುರಾಯರ ಗಂಡ' ನೆಂಬ ಬಿರುದಿದ್ದಿತು. ಇದರರ್ಥ ಮೇಲೆ ಸೂಚಿಸಿದ ಮೂರು ಬಗೆಯ ರಾಯರಿಗೆ ಗಂಡ ಎಂದಾಗುತ್ತದೆ. ಬಹುಶಃ ಕೃಷ್ಣದೇವರಾಯನ ಕಾಲಕ್ಕೆ ಆಡಳಿತ ಪದ್ಧತಿ ಬೇರೆಯಾಗಿದ್ದು ಈ ಮೂರು ಬಗೆಯ ರಾಯರ ವ್ಯವಸ್ಥೆ ಆಗ ಅಸ್ತಿತ್ವದಲ್ಲಿರಕ್ಕಿಲ್ಲವೆನಿಸುತ್ತದೆ. ಹೀಗಿದ್ದು ಆತನು ಈ ರೀತಿ ಬಳಸಿದ್ದರೆ ಅದು ಗತಾನುಗತಿಕ ಹೇಳಿಕೆಯಂತೆ ಈತನ ಕಾಲದಲ್ಲಿ ಮುಂದುವರಿದಿರುವ ಸಾಧ್ಯತೆಯಿದೆ

ಗದಾಯುದ್ಧದಲ್ಲಿ[4] ಕವಿರನ್ನ ತನ್ನ ಪ್ರಗತಿಯ ಮೆಟ್ಟಿಲುಗಳನ್ನು ವಿವರಿಸುತ್ತ—

---

1. SII xx ೭೧, ೧೧೨೫ ನವೆಂಬರ್ ೮ ಅಗರಖೇಡ, ಇಂಡಿ (ತಾ) ಬಿಜಾಪುರ (ಜಿ).

2. A P G A S- 3 Kannada Inscriptions from A. P. Ng 42. 1124 ಡಿಸೆಂಬರ್ ೨೪, ಗೂಡೂರು, ನಾಲ್ಗೊಂಡ (ಜಿ).

3. SII Dx (i) ೧೧೦೯ ಸೆಪ್ಟೆಂಬರ್ ೨೩, ಹೊಳಗುಂದಿ, ಹಡಗಲಿ (ತಾ) ಬಳ್ಳಾರಿ (ಜಿ).

4. ರನ್ನ : ಗದಾಯುದ್ಧ ಸಂಗ್ರಹ ಸಂ. ತೀ.ನಂ.ಶ್ರೀ. ಆಶ್ವಾಸ–೧, ಪ. ೧೦ ಪು–೨,

ಮೊದಲೊಳ್ ಸಾಮಂತರಿನಿನಿ
ಸುದಿತೋದಿತನಾಗಿ ಮಂಡಲೇಶ್ವರನಿಂದ
ಭ್ಯುದಯ ಪರನೆನಿಸಿ ಚಕ್ರಿಯಿ
ನುದಯ ಪರಂಪರೆಯನೆಯ್ದಿದಂ ಕವಿರನ್ನಂ

ಎಂಬ ಪದ್ಯವೂ ನಮ್ಮ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಈ ಮೇಲಿನ ಆಧಾರಗಳಿಂದ 'ಮೂವರ್ ರಾಯರ್' ಎಂಬುದು ಸಾಮಂತ, ಮಂಡಲೇಶ್ವರ ಮತ್ತು ಚಕ್ರವರ್ತಿಗೆ ಸಂಬಂಧಿಸಿದುದೆಂದು ಸ್ಪಷ್ಟವಾಗುತ್ತದೆ.

ಪುಸ್ತಕ ವಿಮರ್ಶೆ

ದಿಗಂಬರ ಕಾವ್ಯ : ಅನು : ಗುರುಮೂರ್ತಿ ಪೆಂಡಕೂರು ಪ್ರಕಾಶಕರು : ಯುಗಾಕರ ಸಂಘ (ರಿ.) ರಾಮನಗರ, ಹಗರಿಬೊಮ್ಮನಹಳ್ಳಿ ತಾ. ೧೯೮೮, ಪುಟ ೪೨+೧೨೪=೧೬೬, ಬೆಲೆ ರೂ. ೨೦

"ದಿಗಂಬರ ಕಾವ್ಯ" ದಿಗಂಬರ ಕವಿಗಳೆಂದು ಹೆಸರಾದ ತೆಲುಗಿನ ಆರು ಜನ ಕವಿಗಳ ನಲವತ್ತಾರು ಕವನಗಳ ಸಂಕಲನ. ಇದನ್ನು ಗುರುಮೂರ್ತಿ ಪೆಂಡಕೂರರು ಕನ್ನಡಕ್ಕೆ ಅನುವಾದಿಸಿದ್ದಾರೆ. 'ನಮ್ಮ ಸ್ವರೂಪವನ್ನು ಕಂಡುಕೊಂಡು ನಮ್ಮ ಸುತ್ತಲಿನ ಜನರನ್ನು ಪ್ರೀತಿಸುತ್ತಾ ಎಲ್ಲರನ್ನೂ ಅದರಂತೆ ಬದುಕಲು ಪ್ರೇರೇಪಿಸುವುದು' ಈ ಕವಿಗಳ ಉದ್ದೇಶ.

ಈ ಸಂಕಲನದ ಹೆಚ್ಚಿನ ಕವನಗಳು ರಾಜಕೀಯ ಅಪಾಯಭೂತಿತನವನ್ನು ಧಾರ್ಮಿಕ ಡಾಂಬಿಕತೆಯನ್ನು, ಶ್ರೀಮಂತಿಕೆಯ ಅಟ್ಟಹಾಸವನ್ನು ವಿಡಂಬಿಸುತ್ತವೆ. ಜೊತೆಗೆ, ಬಡವರ ಅಸಹಾಯಕತೆಯನ್ನು, ನೋವನ್ನು ಚಿತ್ರಿಸುತ್ತವೆ. 'ನಿಜವಾಗಿ ಬದುಕಿನ ಕಡೆಗೆ ಒಲಿಸುತ್ತದೆ ನಡೆಯಲು ಕಲಿತ ನನ್ನ ಕವಿತೆಗಳು' (೭) ಎನ್ನುವ ಚೆರಬಂಡರಾಜು, 'ದಿಗಂಬರ ಕೂಸಿಗೆ ನಾನೊಬ್ಬನೇ ತೊಟ್ಟಿಲು ತೂಗುತ್ತಾ ಮರಣಕ್ಕೆ ಕಿಚ್ಚನ್ನಿಡುತ್ತಾ ಲಾಲಿ ಹಾಡುತ್ತಿದ್ದೇನೆ' (೩೨) ಎನ್ನುವ ನಗ್ನಮುನಿ, 'ಹೊಟ್ಟೆ ಬಿರಿದು ಗರ್ಭಸಿಡಿದು ಜನಿಸುವೆ ನವಪ್ರಪಂಚದಲ್ಲಿ ದಿಗಂಬರನಾಗಿ ನಡೆವೆ' (೬೩) ಎನ್ನುವ ಮಹಾಸ್ವಪ್ನ ಇವರೆಲ್ಲ ದಿಗಂಬರ ಕಾವ್ಯದಿಂದ ಮಾತ್ರ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯ ಎಂದು ದೃಢವಾಗಿ ನಂಬಿದವರು ಹಾಗೂ ಭರವಸೆಯನ್ನಿಟ್ಟುಕೊಂಡವರು. ಭೈರವಯ್ಯನವರ 'ದಿಗಂಬರಿ', ಜ್ವಾಲಾಮುಖಿಯವರ 'ಸೂರ್ಯಸ್ನಾನ', ನಿಖಿಲೇಶ್ವರ ಅವರ 'ಆತ್ಮಯೋನಿ' ಕವನಗಳು ಬೇರೆ ಬಗೆಯ ಕಾವ್ಯಗಳನ್ನು ಹೀಯಾಳಿಸಿ, ದಿಗಂಬರ ಕಾವ್ಯ ಮಾತ್ರ ಸಾಮಾಜಿಕ ಕ್ರಾಂತಿಯನ್ನುಂಟು ಮಾಡುತ್ತದೆಂದು ಘೋಷಿಸುತ್ತವೆ.

ಈ ಸಂಕಲನದ ಕೆಲವು ಕವನಗಳು ದೇಶದ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಯನ್ನು ವಿಡಂಬಿಸುತ್ತವೆ. ಚೆರಬಂಡರಾಜು ಅವರ ನಾ ಹತ್ತುವೆನು ನ್ಯಾಯಾಲಯವ, ವಂದೇ ಮಾತರಂ, ಎಲ್ಲವೂ, ಸಾವುಗಳೇ, ನಗ್ನಮುನಿ ಅವರ ಬುದ್ಧಕ್ಷಮಾ, ಹಳ್ಳಿಗಾಡು, ಸಮುದ್ರ ಬಂಧನ, ಸುಖರೋಗಿ, ಭೈರವಯ್ಯ ಅವರ ನಾನು ದೇವರನ್ನು ನಂಬುತ್ತೇನೆ, ತಿಳಿತುಕಣೋ ಹಾಗೂ ಜ್ವಾಲಾಮುಖಿಯವರ ಅವಲೋಕನ ಕವನಗಳು ಅಸ್ತವ್ಯಸ್ತವಾದ ಸಮಾಜದ ಚಿತ್ರವನ್ನು ಕೊಟ್ಟು, ಯಾಕೆ ಹೀಗಾಗುತ್ತಿದೆ ಎಂಬ ಆಲೋಚನೆ ಓದುಗನಲ್ಲಿ ಉಂಟಾಗುವಂತೆ ಮಾಡುತ್ತವೆ. ಇಲ್ಲಿ ಕವಿಗೆ ಆ ಬಗ್ಗೆ ರೋಷ ಮಾತ್ರ ಇಲ್ಲ ನೋವೂ ಇವೆ. ಆದರೆ ಇನ್ನು ಕೆಲವು ಕವನಗಳಲ್ಲಿ ರೋಷವೇ ಮುಖ್ಯವಾಗುತ್ತದೆ. ಜ್ವಾಲಾಮುಖಿಯವರ ಬಿದ್ದುಹೋದ ಎದ್ದಾಗ, ಮಹಾಸ್ವಪ್ನ ಅವರ ನಾವು ಯಾರು, ನಟಸಾಮ್ರಾಟ್, ನಿಖಿಲೇಶ್ವರ ಅವರ

ಆಹ್ವಾನ, ಸಮಾಧಿಯ ಸುತ್ತುಗಟ್ಟಿದ ಬೆಂಕಿ, ನಗ್ನಮುನಿ ಅವರ ಜವಾಬ್ದಾರಿ–ಇಂತಹ ಕವನಗಳಲ್ಲಿ ರೋಗಗ್ರಸ್ತ ಸಮಾಜವನ್ನು ಚಿತ್ರಿಸುವ ಮನಸ್ಸು, ಅದನ್ನು ಪ್ರತಿಭಟಿಸುವಷ್ಟಕ್ಕೇ ನಿಲ್ಲುವುದಿಲ್ಲ, ಮುಯ್ಯಿ ತೀರಿಸಿಕೊಳ್ಳಬೇಕೆನ್ನುವ ಛಲ ಓದುಗನಲ್ಲಿ ಉಂಟಾಗುವಂತೆ ಆತನನ್ನು ಪ್ರೇರೇಪಿಸುತ್ತದೆ.

> "ಹೊಡೆ ಬಡಿ ಕಡಿ ಧ್ವಂಸ ಮಾಡು......ನಾಗರಿಕತೆಯ ಒಡಲೆಲ್ಲಾ ಕಚ್ಚಿ
> ಮಾಡಿ ಮನುಕುಲದ ಚಿಕಿತ್ಸೆ ಮಾಡು"(೩೭)
> "ಬಾಯಿ ಮುಚ್ಚಿಕೋ ತಲೆ ಬೋಳಿಸಿಕೋ, ಸಾಧ್ಯವಾದರೆ ನಾಲಿಗೆ ಕತ್ತರಿಸಿಕೋ" (೬೭)
> "ಸೋಲು ಪ್ರತಿ ಘಾತಕ್ಕೆ ಚೇತನವಾಗಲಿ, ಆತ್ಮಹತ್ಯೆ ಸಿಡಿದೆದ್ದು ದಾಳಿ ಮಾಡಲಿ"(೧೨೦)
> "ಪಾಶವಿ ಮದದಿಂದ ವಿಜೃಂಭಿಸುವ ಈ ಕಲ್ಲೆದೆಗಳನು ನಿನ್ನ ವಜ್ರ
> ಹಸ್ತಗಳಿಂದ ಕರಗಿಸಲು ಬಾರಾ'....ಜಗದ್ಗುರುಗಳ ಕುತರ್ಕಗಳ ಪ್ರಹರಿಸಲು ಬಾರ"
> (೧೨೫)

ಇವು ಮೇಲೆ ಹೇಳಿರುವ ಕವನಗಳಲ್ಲಿ ಕಾಣಬರುವ ಕೆಲವು ಸಾಲುಗಳು. ಈ ಎಲ್ಲಾ ಕವನಗಳನ್ನು ಓದಿದಾಗ ಇವು ಪ್ರತಿಕ್ರಿಯೆಗಾಗಿ ಹುಟ್ಟಿಕೊಂಡಂತಹ ಕವನಗಳಾಗಿ ತೋರುತ್ತವೆಯೇ ವಿನಾ ಸಮಾಜದ ಬದಲಾವಣೆಯನ್ನು ಮಾಡಲು ಸಾಮಾನ್ಯ ಜನತೆಯನ್ನು ರಚನಾತ್ಮಕವಾಗಿ ಪ್ರೇರೇಪಿಸುವಂತಹ ಕವನಗಳು ಎನ್ನಿಸುವುದಿಲ್ಲ. ಅನುವಾದ ಸಾಧಾರಣವಾಗಿದೆ. 'ಚಾಕಚಾಕ್ಯತೆ', 'ಹತ್ತಿಯಹಣ್ಣು' 'ದುಭಾ೯ರ' 'ಅಭ್ಯುದಯವೆಡೆಗೆ', 'ಆಧ್ಯಾತ್ಮ', 'ನಾಗರೀಕತೆ', 'ಚಿಂತನೆ' ಇಂತಹವು ಸಂಕಲನದ ಪುಟಪುಟಗಳಲ್ಲಿಯೂ ಇವೆ. ಇವು ಅಚ್ಚಿನ ದೋಷಗಳೋ ಅನುವಾದಕರ ದೋಷಗಳೋ ತಿಳಿಯದು.

—ಚಂದ್ರಮತಿ ಸೋಂದಾ

ಕೆ.ಸಂ. ೩೧೭೩೭—ಎಂ.ಯು.ಪಿ.ಎಂ.—೮೨೫ ಪ್ರತಿಗಳು—೩—೫—೯೧

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬